Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 181
ಬುಧವಾರ,1 ಜುಲೈ 2026 | ಪುಟಗಳು: 20 | ಬೆಲೆ: ₹ 5.00
c
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಮಾಜಿ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ HDFC ಬ್ಯಾಂಕ್ ಅಧ್ಯಕ್ಷರಾಗಿ ನೇಮಕ

ಬೆಂಗಳೂರು ದರ

₹13,020 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	₹14,204 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	₹2,35,000 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

31ನೇ ಭೂಸೇನಾ ಮುಖ್ಯಸ್ಥರಾಗಿ ಜನರಲ್ ಧೀರಜ್ ಸೇಠ್ ಅಧಿಕಾರ ಸ್ವೀಕಾರ

Hero
VIDA

ಪ್ರತಿ ಕಲ್ಲಿನಲ್ಲೂ ಪರಂಪರೆ ನೆಲೆನಿಂತಿದೆ.
ಪ್ರತಿ ಮೈಲುಗಲ್ಲಿನಲ್ಲೂ ಭವಿಷ್ಯ ಮೆರೆಯುತ್ತಿದೆ.

ನಾವಿರಿಸುತ್ತಿರುವ ಪ್ರತಿಯೊಂದು ಅಡಿಗಲ್ಲು ಅವರ ದೂರದೃಷ್ಟಿಯ ಸಾಮರ್ಥ್ಯದ ಮೇಲೆ ನಿಲ್ಲುತ್ತದೆ.

ನಮ್ಮ ನೆಚ್ಚಿನ ಸಂಸ್ಥಾಪಕ ಹಾಗೂ ಚೇರ್‌ಮ್ಯಾನ್ ಆಗಿರುವ ಎಮಿರಿಟಸ್, **ಡಾ. ಬ್ರಿಜ್‌ಮೋಹನ್ ಲಾಲ್ ಮಂಜಲ್**, ಇವರ 103ನೇ ಜನ್ಮ ವಾರ್ಷಿಕೋತ್ಸವದಂದು, ಅವರ ನೆನಪನ್ನು ಪದಗಳ ಮೂಲಕ ಗೌರವಿಸುವ ಬದಲು ನಾವು ಪ್ರಗತಿಯ ಮೂಲಕ ನಮಿಸುತ್ತಿದ್ದೇವೆ. ಇಂದು **ಆಂಧ್ರ ಪ್ರದೇಶದ ತಿರುಪತಿಯಲ್ಲಿ** ನಮ್ಮ ಎರಡನೇ **ಗ್ಲೋಬಲ್ ಪಾರ್ಟ್ಸ್ ಸೆಂಟರ್‌ಗಾಗಿ** ನಾವು ಹೆಮ್ಮೆಯಿಂದ ತಳಪಾಯ ಹಾಕುತ್ತಿದ್ದೇವೆ.

ಈ ಹೊಸ ಉತ್ಪಾದನಾ ಸೌಲಭ್ಯವು ನಮ್ಮ ಸಂಸ್ಥಾಪಕರ ಕನಸುಗಳಿಗೆ ರೆಕ್ಕೆ ಹಚ್ಚಿರುವ ದೇಶಕ್ಕಾಗಿ ನಾವು ಮುಡಿಪಾಗಿಸುತ್ತೇವೆ. ನಮ್ಮ ಗ್ಲೋಬಲ್ ಪಾರ್ಟ್ಸ್ ಸೆಂಟರ್ ಮೂಲಕ, ನಾವು ಭಾರತದ ಉತ್ಪಾದನಾ ಕುಶಲತೆಯನ್ನು ಇಡೀ ಜಗತ್ತಿಗೆ ತಲುಪಿಸುತ್ತಿದ್ದೇವೆ – ಆ ಮೂಲಕ ಸಮುದಾಯಗಳ ಸಶಕ್ತೀಕರಣ ಮತ್ತು ದೇಶದ ಮುನ್ನಡೆಯ ಬಗ್ಗೆ ಅವರು ಜೀವನವಿಡೀ ಹೊಂದಿದ್ದ ದೂರದೃಷ್ಟಿಯನ್ನು ಗೌರವಿಸುತ್ತಿದ್ದೇವೆ.



ಭಾರತದ ಭವಿಷ್ಯಕ್ಕಾಗಿ ಹಂಚಿಕೆಯ ವಚನಬದ್ಧತೆಯಲ್ಲಿ, **ಜುಲೈ 1, 2026**ರಂದು
ಶ್ರೀ ಎನ್. ಚಂದ್ರಬಾಬು ನಾಯ್ಡು, ಮಾನನೀಯ ಮುಖ್ಯ ಮಂತ್ರಿ, ಆಂಧ್ರ ಪ್ರದೇಶ
ಮತ್ತು **ಡಾ. ಪವನ್ ಮಂಜಲ್**, ಎಕ್ಸೆಕ್ಯೂಟೀವ್ ಚೇರ್‌ಮ್ಯಾನ್, ಹೀರೊ ಮೊಟೊಕಾರ್ಪ್, ಇವರು ಅಡಿಗಲ್ಲನ್ನು ಇರಿಸುತ್ತಿದ್ದಾರೆ.

Hero
103RD BIRTH ANNIVERSARY OF
DR. BRIJMOHAN LALL MUNJAL
1ST JULY, 1923
HERO FOREVER

SAATCHI & SAATCHI

Bennett & Coleman
THE TIMES OF INDIA

ಸಂಪಾದಕೀಯ EDITORIAL

ಇದು ಎಲ್ಲರ ಬೆಂಗಳೂರು

ಅನುದಾನ ಹಂಚಿಕೆಯಲ್ಲೇಕೆ ರಾಜಕೀಯ?

ಬೆಂಗಳೂರಿನ ಹದಗೆಟ್ಟ ರಸ್ತೆಗಳು ಮತ್ತು ಮೂಲಸೌಕರ್ಯಗಳ ಸುಧಾರಣೆಗೆ ರಾಜ್ಯ ಸರಕಾರವು 2,000 ಕೋಟಿ ರೂ.ಗಳ ವಿಶೇಷ ಪ್ಯಾಕೇಜ್ ಘೋಷಿಸಿರುವುದು ಸ್ವಾಗತಾರ್ಹ. ವರ್ಷಗಟ್ಟಲೆ ಗುಂಡಿ ಬಿದ್ದ ರಸ್ತೆಗಳಲ್ಲಿ ಸಂಚರಿಸಿ ರೋಸಿ ಹೋಗಿರುವ ಬೆಂಗಳೂರಿಗರಿಗೆ, ಈ ಅನುದಾನವು ತುಸು ಸಮಾಧಾನ ತಂದಿದೆ ಎಂಬುದಂತೂ ಸತ್ಯ. ಆದರೆ, ಈ ಅಭಿವೃದ್ಧಿಯ ಹಂಚಿಕೆಯಲ್ಲಿ ಎದ್ದು ಕಾಣುತ್ತಿರುವ 'ರಾಜಕೀಯ ತಾರತಮ್ಯ'ದ ವಾಸನೆ, ಈ ಒಳ್ಳೆಯ ನಿರ್ಧಾರದ ಉದ್ದೇಶವನ್ನೇ ಮಸುಕಾಗಿಸಿದೆ ಎಂಬುದೂ ಅಷ್ಟೇ ಸ್ಪಷ್ಟ.

ರಾಜಧಾನಿಯ ಅಭಿವೃದ್ಧಿ ಎಂದರೆ ಕೇವಲ ಆಡಳಿತ ಪಕ್ಷದ ಶಾಸಕರ ಕ್ಷೇತ್ರಗಳಿಗೆ ಸೀಮಿತವಾಗುವ ವಿಷಯವಲ್ಲ. ಬೆಂಗಳೂರು ಯಾವುದೇ ಒಂದು ರಾಜಕೀಯ ಪಕ್ಷದ ಸ್ವತ್ತಲ್ಲ; ಅದು ಕೋಟ್ಯಂತರ ಜನರ ಜೀವನಾಡಿ, ಕರ್ಮಭೂಮಿ. ಇಲ್ಲಿನ ಪ್ರತಿ

ಬಡಾವಣೆಯ ನಿವಾಸಿಗಳು ತಮ್ಮ ಬೆವರಿನ ಹಣವನ್ನು ತೆರಿಗೆ ರೂಪದಲ್ಲಿ ರಾಜ್ಯ ಸರಕಾರ ಹಾಗೂ ಪಾಲಿಕೆಗಳಿಗೆ ಪಾವತಿಸುತ್ತಿದ್ದಾರೆ. ಹೀಗಿರುವಾಗ, ತೆರಿಗೆ ಹಣದ ಹಂಚಿಕೆಯಲ್ಲಿ 'ಇವರು ನಮ್ಮವರು- ಅವರು ನಿಮ್ಮವರು' ಎನ್ನುವ ಭೇದ-ಭಾವವೇಕೆ? ಜಗದ್ಗುರು ಬಸವಣ್ಣರನ್ನು ಸ್ಮರಿಸುವಾಗಲೆಲ್ಲ ಮಂತ್ರಿಮಹೋದಯರು ಉದ್ಘರಿಸುವ 'ಇವ ನಮ್ಮವ ಇವ ನಮ್ಮವ' ಎಂಬ ಬಸವ ವಾಕ್ಯಕ್ಕೆ ಇದು ತದ್ವಿರುದ್ಧವಲ್ಲವೇ?

ಹಾಗೆ ನೋಡಿದರೆ, ನಾಡಿಗೆ ಇಂಥ ತಾರತಮ್ಯ ಹೊಸದೇನಲ್ಲ. ಈ ಹಿಂದೆ ಬಿಜೆಪಿ ಸರಕಾರವಿದ್ದಾಗ ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಮಾಡಿದ್ದ ಅನ್ಯಾಯವನ್ನೇ, ಇಂದು ಕಾಂಗ್ರೆಸ್ ಸರಕಾರವು ಪ್ರತಿಪಕ್ಷದ ಕ್ಷೇತ್ರಗಳಿಗೆ ಎಸಗಿದೆ. ಎಲ್ಲ ರಾಜಕಾರಣಿಗಳದ್ದೂ ಒಂದೇ ಮುಖವಾಡ ಎನ್ನುವುದು ಮತ್ತೆ ಸಾಬೀತಾಗಿದೆ. ಅಭಿವೃದ್ಧಿಯ ವಿಷಯದಲ್ಲಿ ಹಿಂದಿನ ತಪ್ಪುಗಳನ್ನು ತಿದ್ದಿಕೊಂಡು, ರಾಜಕೀಯ ಪ್ರಬುದ್ಧತೆ ತೋರಿದ್ದಿದ್ದರೆ ರಾಜ್ಯ ಸರಕಾರದ ಬಗ್ಗೆ ಗೌರವ ಹೆಚ್ಚುತ್ತಿತ್ತಲ್ಲವೇ?

ಪ್ರಸ್ತುತ ಬೆಂಗಳೂರು ಮಹಾನಗರ ಪಾಲಿಕೆಗೆ ಜನಪ್ರತಿನಿಧಿಗಳಿಲ್ಲದೆ, ದೀರ್ಘಕಾಲದಿಂದ ಚುನಾವಣೆ ಕಾಣದೆ ನಲುಗುತ್ತಿದೆ. ಕಾರ್ಪೊರೇಟರ್‌ಗಳಿಲ್ಲದ ಈ ಹೊತ್ತಿನಲ್ಲಿ ಅಧಿಕಾರಿಗಳು ಆಡಿದ್ದೇ ಆಟ ಎನ್ನುವಂತಾಗಿದ್ದು, ಜನರ ಕಷ್ಟಗಳಿಗೆ ಸ್ಪಂದನೆ ತ್ವರಿತವಾಗಿ ಸಿಗುತ್ತಿಲ್ಲ. ಇಂಥ ತ್ರಿಶಂಕು ಪರಿಸ್ಥಿತಿಯಲ್ಲಿ, ರಸ್ತೆಗಳು ಗುಂಡಿಮುಕ್ತವಾಗಿಲ್ಲ, ಸ್ವಚ್ಛತೆ ಮರೀಚಿಕೆಯಾಗಿದೆ, ಅಪೂರ್ಣಗೊಂಡ ಕಾಮಗಾರಿಗಳು ಸಂಚಾರಕ್ಕೆ ಅಡ್ಡಿಯಾಗಿವೆ. ಸರಕಾರವು ರಾಜಕೀಯ ಪಕ್ಷಭೇದ ಮರೆತು, ನಗರದ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡಿದ್ದಿದ್ದರೆ, ಮಹಾನಗರ ನಿಟ್ಟುಸಿರುಬಿಡುತ್ತಿತ್ತು.

ಮಹಾನಗರವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡದಿದ್ದ ಮೇಲೆ 'ಬ್ರ್ಯಾಂಡ್ ಬೆಂಗಳೂರು' ಎಂಬ ಹೊಸ ಲೇಪನವೇಕೆ? ಕೆಲವು ಕ್ಷೇತ್ರಗಳಿಗೆ ಸೀಮಿತವಾದ ಅಭಿವೃದ್ಧಿ ನಗರದ ಮೂಲಭೂತ ಸಮಸ್ಯೆಗಳನ್ನು ಪರಿಹರಿಸುವುದಿಲ್ಲ. ಸಮಾನತೆ ಇಲ್ಲದ ಅಭಿವೃದ್ಧಿಯು ಕೇವಲ ತೋರಿಕೆ ಎನ್ನಿಸಿಕೊಳ್ಳುತ್ತದಷ್ಟೇ. ರಾಜ್ಯ ಸರಕಾರವು ಕೂಡಲೇ ಈ ಅನುದಾನ ಹಂಚಿಕೆಯ ತಾರತಮ್ಯವನ್ನು ಸರಿಪಡಿಸಬೇಕು. ಬೆಂಗಳೂರಿನ ಪ್ರತಿ ಬಡಾವಣೆಯನ್ನೂ ತನ್ನದೆಂದು ಪರಿಗಣಿಸಿ, ಪಾರದರ್ಶಕವಾಗಿ ಅನುದಾನವನ್ನು ಬಳಸಬೇಕು. ನಗರದ ಸುಧಾರಣೆಯು ರಾಜಕೀಯ ಲಾಭ- ನಷ್ಟದ ಲೆಕ್ಕಾಚಾರದಿಂದ ಹೊರಬಂದು, ನಿಜವಾದ ಜನಪರ ಆಡಳಿತದ ಸಂಕೇತವಾಗಲಿ. ಜನತೆ ತೆರಿಗೆ ಕಟ್ಟುತ್ತಿರುವುದು ಅಭಿವೃದ್ಧಿಗಾಗಿ, ರಾಜಕೀಯ ತಾರತಮ್ಯ ಎಸಗುವುದಕ್ಕಲ್ಲ ಎಂಬುದನ್ನು ಸರಕಾರ ಮನಗಾಣಲಿ.

ಬೋಧಿ ವೃಕ್ಷ

ಸತ್ಯ ಮತ್ತು ಭ್ರಮೆ ಪರಮಾತ್ಮನ ರಹಸ್ಯ

ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳುವಂತೆ, ಈ ಸೃಷ್ಟಿಯಲ್ಲಿ ಇರುವ ಪ್ರತಿಯೊಂದು ಜೀವಿಗೂ, ಪ್ರತಿಯೊಂದು ರೂಪಕ್ಕೂ ದೈವತ್ವವೇ ಮೂಲವಾಗಿದೆ. ಒಂದು ಬೀಜದಲ್ಲಿ ವೃಕ್ಷದ ಶಕ್ತಿಯೇ ಅಡಗಿರುವಂತೆ, ಪರಮಾತ್ಮನಲ್ಲಿ ಈ ಜಗತ್ತಿನ ಎಲ್ಲಾ ರೂಪಗಳು, ಗುಣಗಳು ಮತ್ತು ವೈವಿಧ್ಯಗಳಿವೆ. ಆದರೂ, ಪರಮಾತ್ಮನು ತನ್ನ



ಸೃಷ್ಟಿಗೆ ಅಂಟಿಕೊಳ್ಳದೇ, ಅದರ ಪರಿಣಾಮಗಳಿಂದ ದೂರವಾಗಿಯೇ ಇರುತ್ತಾನೆ.

ನಾವು ಕಾಣುವ ಈ ವಿಶ್ವದಲ್ಲಿನ ಪ್ರತಿಯೊಂದು ಚಲನವಲನಕ್ಕೂ ದೈವಶಕ್ತಿಯೇ ಆಧಾರ. ಆದರೂ, ಆ ದೈವಶಕ್ತಿ ತನ್ನಿಂದಲೇ ಉಂಟಾದ ಈ ಜಗತ್ತಿನೊಂದಿಗೆ ಬಂಧಿತವಾಗಿಲ್ಲ, ಸರಳವಾಗಿ ಹೇಳುವುದಾದರೆ ದೇವರಿಲ್ಲದೆ ಏನೂ ಇಲ್ಲ; ಆದರೆ, ದೇವರು ಯಾವುದಕ್ಕೂ ಸೀಮಿತನಲ್ಲ.

ಹಾಗಾದರೆ, ದೇವರು ಎಲ್ಲೆಲ್ಲೂ ಇದ್ದಾನೆ ಎಂದು ನಂಬಿದರೂ, ಆತನ ಸಾನ್ನಿಧ್ಯವನ್ನು ನಾವು ಸ್ಪಷ್ಟವಾಗಿ ಏಕೆ ಅನುಭವಿಸಲಾಗುತ್ತಿಲ್ಲ? ಇದಕ್ಕೆ ಕಾರಣ ಭಗವಂತನ ಮಾಯಾಶಕ್ತಿ. ಈ ಮಾಯೆಯ ಮೂಲಕ ದೇವರು ತನ್ನ ನಿಜಸ್ವರೂಪವನ್ನು ನಮ್ಮ ಸಾಮಾನ್ಯ ದೃಷ್ಟಿಯಿಂದ ಮರೆಮಾಡುತ್ತಾನೆ.

ಕಣ್ಣಿನ ಮುಂದಿನ ಪರದೆ ತೆಗೆದಾಗ ಮುಂದಿನ ವಸ್ತು ಕಾಣಿಸುವಂತೆ, ಪ್ರಕೃತಿ ಮತ್ತು ಅದರ ಗುಣಗಳ ರೂಪದಲ್ಲಿರುವ ಮಾಯೆ, ನಮ್ಮ ಒಳಗಿನ ದೃಷ್ಟಿಯನ್ನು ಮುಸುಕು ಮಾಡುತ್ತದೆ. ಆ ಮುಸುಕನ್ನು ತೆಗೆಯಲು ಪ್ರಯತ್ನ ಬೇಕಾಗುತ್ತದೆ.

ಆತ್ಮಾನುಭವ ಎಲ್ಲರಿಗೂ ಸಿಗುವುದಿಲ್ಲ, ಇತರ ಎಲ್ಲ ಆಸೆಗಳನ್ನು ಮತ್ತು ಆಕರ್ಷಣೆಗಳನ್ನು ಬದಿಗಿಟ್ಟು, ಪರಮಾತ್ಮನನ್ನೇ ಆರಿಸಿಕೊಂಡವನು ಮಾತ್ರ ಅದನ್ನು ಅನುಭವಿಸಬಹುದು. ಆದ್ದರಿಂದ, ''ನಾನು ದೇವರನ್ನು ಕಾಣಬೇಕು, ಅವನನ್ನು ನೇರವಾಗಿ ಅನುಭವಿಸಬೇಕು,'' ಎಂದು ನಾವು ಹೇಳುವಾಗ, ನಮ್ಮೊಳಗೆ ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ''ನಾನು ಎಲ್ಲವನ್ನೂ ಬದಿಗಿಟ್ಟು, ಪರಮಾತ್ಮನನ್ನೇ ಮಾತ್ರ ಆಯ್ದುಕೊಳ್ಳಲು ಸಿದ್ಧನಿದ್ದೇನೆಯೇ?''

ಸದ್ಗುರು ಶ್ರೀ ಮಧುಸೂದನ ಸಾಯಿ, ಸತ್ಯಸಾಯಿ ಗ್ರಾಮ, ಮುದ್ದೇನಹಳ್ಳಿ, ಚಿಕ್ಕಬಳ್ಳಾಪುರ

ವಿಕ ತಗೋ ಕನ್ನಡ

ಅಬ್ಬಾ

• ಅಬ್ಬಬ್ಬಾ, • ಅಬಾ, • ಅಬಬ, • ಅಬಬಾ

ಇದು ಆಶ್ಚರ್ಯದ ಭಾವವನ್ನು ಸೂಚಿಸುವ ಒಂದು ಅವ್ಯಯ; ಮೆಚ್ಚುಗೆಯನ್ನು ವ್ಯಕ್ತಪಡಿಸಲೂ ಇದನ್ನು ಬಳಸುತ್ತೇವೆ. ಅಬ್ಬ, ಅಬ್ಬಾ, ಅಬ್ಬಬ್ಬಾ ಇವುಗಳ ಬಳಕೆ ಹೆಚ್ಚು. ಅಬಾ, ಅಬ್ಬಾ ದ್ವಿರುಕ್ತಿಯಾಗಿ ಅಬಬಾ, ಅಬ್ಬಬ್ಬಾ ಎಂದಾಗಿವೆ. ಇವು ಹೆಚ್ಚಿನ ಆಶ್ಚರ್ಯವನ್ನೂ ಮೆಚ್ಚುಗೆಯನ್ನೂ ಧ್ವನಿಸುತ್ತವೆ. ''ಅಬ್ಬಬ್ಬಾ! ಸೂರ್ಯವಂಶಿ ಹನ್ನೊಂದು ಎಸೆತಗಳಲ್ಲಿ ಅರ್ಧಶತಕ ಬಾರಿಸಿದ!,'' ಎಂದಾಗ ಆಶ್ಚರ್ಯ ಸುವ್ಯಕ್ತ. ಕವಿ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ ಶಿಶುಗೀತದಲ್ಲಿ ಮೆಚ್ಚುಗೆಯನ್ನು ವ್ಯಕ್ತಪಡಿಸುವ ಸಾಲುಗಳನ್ನು ಪರಿಶೀಲಿಸಿ: ''ನೋಡುತ ಅದ್ಭುತ ದೃಶ್ಯವ ಗಿರಿಜೆ/ ಅಬ್ಬಾ! ಎಂದಳು ಮನದೊಳಗೆ/ ಇಂಥ ವಯಸಿಗೆ ಎಂಥ ಶೌರ್ಯ! ಎಷ್ಟಾದರು ರುದ್ರನ ಮಗ ತಾನೇ?'' ('ಕಿನ್ನರ ಲೋಕ' ಪುಟ: 148) 'ಅಬ್ಬಬ್ಬಾ ಹಬ್ಬ ಬಂತು, ಸಿಹಿಕಹಿ ಎರಡೂ ತಂತು'. ಇದೊಂದು ಒಗಟು. ಉತ್ತರ ಏನ್ ಹೇಳಿ ನೋಡಣ?

– ಜಿ.ವಿ. ಅರುಣ

– ಪದ ಸೂಚಿಸಿದವರು: ವಿಂಧ್ಯ ನಾಗರಾಜ ಬೆಂಗಳೂರು

ಬತ್ತಳಿಕೆ

ವಿಕ ಜೋಕ್ FALLS

ರೋಗಿ: ನಾನು ಮಲಗಿದಾಗ ಕೋತಿಗಳು ಫುಟ್ಬಾಲ್ ಆಡುವ ಕನಸು ಬಿತ್ತು.
ಡಾ. ಸಂಗ್ಯಾ: ಹಾಗಾದ್ರೆ, ಈ ಮಾತ್ರೆನ ಬೆಳಗ್ಗೆ- ರಾತ್ರಿ ತಗೊಳ್ಳಿ.
ರೋಗಿ: ನಾಳೆಯಿಂದ ತಗೊಂಡ್ಲಾ ಡಾಕ್ಟರ್? ಇವತ್ತು ಫೈನಲ್ ಮ್ಯಾಚ್ ಇದೆ.

ಹರಿ ಎಲ್ಲೆಲ್ಲೂ ಇರುವ ನಂಬಿಕೆಯಂತೆ ಇಂದಿನ ಆನ್‌ಲೈನ್ ಜಗತ್ತಿನಲ್ಲಿ ಮೊಬೈಲ್ ನೆರವಿನಿಂದ ವೈದ್ಯರೂ ಎಲ್ಲೆಲ್ಲೂ ಇದ್ದಾರೆ. ನಕಲಿ ಹೆಲ್ತ್ ಟಿಪ್ಸ್ ನೀಡುವವರೂ ಇದ್ದಾರೆ. ಅವರ ಕುರಿತು ಎಚ್ಚರ ಅಗತ್ಯ. ಇಂದು ವೈದ್ಯರು ಕೇವಲ ಆಸ್ಪತ್ರೆಗಳಿಗೆ ಸೀಮಿತವಾಗಿಲ್ಲ. ಸೋಷಿಯಲ್ ಮೀಡಿಯಾ ವೇದಿಕೆಯನ್ನು ಬಳಸಿಕೊಂಡು ಉತ್ತಮ ಆರೋಗ್ಯ ಕುರಿತ ವಿಚಾರಗಳನ್ನು ಮನೆ ಮನಗಳಿಗೆ ಹಂಚುತ್ತಿದ್ದಾರೆ. ಈ ಸತ್ಕಾರ್ಯದಲ್ಲಿ ತೊಡಗಿರುವ ನಾಡಿನ ಜನಪ್ರಿಯ ವೈದ್ಯರ ಕತೆಯಿದು.

ಮನೆ ಮನ DOCTOR

ಆನ್‌ಲೈನ್‌ನಲ್ಲಿ ಆರೋಗ್ಯ ಭಾಗ್ಯ ಕರುಣಿಸುತ್ತಿರುವ ವೈದ್ಯರು

ಮಹಿಳೆಯರಲ್ಲಿ ಸೆಲ್ಫ್‌ಕೇರ್ ಬಹಳ ಮುಖ್ಯ

ಡಾ. ದಿವ್ಯಾ ತೆಕ್ಕಟ್ಟೆ ಜನರಲ್ ಫಿಸಿಷಿಯನ್
ಸ್ಟಾರ್ ಆಫ್ ಇನ್‌ಸ್ಟಾಗ್ರಾಂ
ಫಾಲೋವರ್ಸ್: 8,55,000

ಚಿಕ್ಕಂದಿನಲ್ಲಿ ಡಾಕ್ಟರ್ ಬಳಿ ಹೋದಾಗಲೆಲ್ಲ ಅವರು ಸಂಕೀರ್ಣ ವಿಷಯಗಳನ್ನು ಇನ್ನಷ್ಟು ಜಟಿಲವಾಗಿಸಿ ಹೇಳುತ್ತಿದ್ದರು. ಅದನ್ನು ನೋಡಿದಾಗ ಇದೆಲ್ಲಾ ಹೇಳುವ ಅಗತ್ಯವಿಲ್ಲ, ಪೇಷೆಂಟ್‌ಗಳು ಏನನ್ನು ಅಪೇಕ್ಷಿಸುತ್ತಿದ್ದಾರೋ ಅದನ್ನು ಸರಳವಾಗಿ ಹೇಳಬಹುದು ಎಂದೆನಿಸುತ್ತಿತ್ತು. ಆ ಕನಸಿಗೆ ಸಾಮಾಜಿಕ ಜಾಲತಾಣ ವೇದಿಕೆ ಒದಗಿಸಿದೆ. ನನ್ನ ವಿಡಿಯೋಗಳನ್ನು ನೋಡಿ ಕ್ಲಿನಿಕ್‌ಗೆ ಬರುವ ರೋಗಿಗಳು ಮನಬಿಚ್ಚಿ ತಮ್ಮ ಆರೋಗ್ಯ ಸಮಸ್ಯೆಯ ಕುರಿತು ಮುಕ್ತವಾಗಿ ಮಾತಾಡುವುದನ್ನೂ ನಾನು ಗಮನಿಸಿದ್ದೇನೆ. ಮುಖ್ಯವಾಗಿ ಮಹಿಳೆಯರಲ್ಲಿ ಸೆಲ್ಫ್ ಕೇರ್ (ಸ್ವಯಂ ಆರೈಕೆ), ಮಾನಸಿಕ ಆರೋಗ್ಯ ಕುರಿತು ಅರಿವು ಮೂಡಿಸುವುದು ನನ್ನ ಉದ್ದೇಶ. ಮುಟ್ಟು, ಗುಪ್ತಾಂಗಗಳ ಆರೋಗ್ಯದ ಕುರಿತ ನನ್ನ ವಿಡಿಯೊಗಳನ್ನು ನೋಡಿದ ಅನೇಕ ಹೆಣ್ಣುಮಕ್ಕಳು ಅವುಗಳ ಬಗ್ಗೆ ನಿಸ್ಸಂಕೋಚವಾಗಿ ಮಾತಾಡಲು ಸಾಧ್ಯವಾಗಿದೆ ಎಂದು ಸಂದೇಶ ಕಳಿಸುತ್ತಾರೆ. ಇದನ್ನು ಕಂಡಾಗ ಸಾರ್ಥಕ ಅನ್ನಿಸುತ್ತೆ. ನನಗೆ ನೃತ್ಯದಲ್ಲಿ ಆಸಕ್ತಿ. ಟಿಕ್‌ಟಾಕ್‌ನಲ್ಲಿ ನನಗೆ ಅದಕ್ಕೊಂದು ವೇದಿಕೆ ಸಿಕ್ಕಿತು. ಅಲ್ಲಿ ನನಗೆ ಸಾಮಾಜಿಕ ಜಾಲತಾಣದ ಶಕ್ತಿ ಅರಿವಿಗೆ ಬಂದಿತು. ಹಾಗೆಯೇ ನನ್ನ ವೈದ್ಯಲೋಕದ ಪಯಣ ಸಾಮಾಜಿಕ ಜಾಲತಾಣಕ್ಕೆ ವಿಸ್ತರಣೆಗೊಂಡಿತು. ನನ್ನ ಇನ್ನೊಂದು ಪಾಲಿಸಿಯೆಂದರೆ ವೈದ್ಯರಾದವರು ಆರೋಗ್ಯ ವಿಚಾರವಾಗಿ ಜನರಲ್ಲಿ ತಿಳಿವಳಿಕೆ ಮತ್ತು ಧೈರ್ಯ ಮೂಡಿಸಬೇಕೇ ಹೊರತು ಭಯ ಹುಟ್ಟಿಸಬಾರದು.

ಚಿಕಿತ್ಸೆ ಮಾತ್ರವಲ್ಲ, ಅರಿವು ಮೂಡಿಸುವುದೂ ವೈದ್ಯರ ಕರ್ತವ್ಯ

ಡಾ. ಭಾನುಪ್ರಕಾಶ್ ಹೃದ್ರೋಗ ತಜ್ಞ
ಸ್ಟಾರ್ ಆಫ್ ಇನ್‌ಸ್ಟಾಗ್ರಾಂ
ಫಾಲೋವರ್ಸ್: 3,67,000

ವೈದ್ಯ ಎಂದರೆ ಬರೀ ಚಿಕಿತ್ಸೆ ಕೊಡುವುದು, ಮೆಡಿಕಲ್ ಕಾಲೇಜುಗಳಲ್ಲಿ ತರಬೇತಿ ಕೊಡುವುದಷ್ಟೇ ಜವಾಬ್ದಾರಿಯಲ್ಲ, ಸಾರ್ವಜನಿಕ ವಲಯದಲ್ಲಿ ಆರೋಗ್ಯ ಕುರಿತು ಅರಿವು ಮೂಡಿಸುವ ಜವಾಬ್ದಾರಿಯೂ ಇರುತ್ತದೆ. ಹಿಂದಿನಿಂದಲೂ ಸಾರ್ವಜನಿಕರ ಜತೆ ಸಂವಹನ ನಡೆಸುವುದು, ಸಮಾಜದ ಸುಧಾರಣೆಗೆ ಮಾಹಿತಿ ನೀಡುವುದು ಎಂದರೆ ನನಗೆ ತುಂಬಾ ಆಸಕ್ತಿ. ಸಾಮಾಜಿಕ ಜಾಲತಾಣಕ್ಕೆ ಎಂಟ್ರಿ ಕೊಡಲೂ ಈ ಆಸಕ್ತಿಗಳೇ ಕಾರಣ. ಬಾಲ್ಯದಿಂದಲೂ ರೇಡಿಯೊದಲ್ಲಿ ಕನ್ನಡ ಸಿನಿಮಾ ಹಾಡುಗಳು, ನಾಟಕಗಳನ್ನು ಕೇಳಿ ಬೆಳೆದೆ. ತಂದೆ-ತಾಯಿ ಶಿಕ್ಷಕರಾಗಿದ್ದರು. ಇದರಿಂದಾಗಿ ಸಂಕೀರ್ಣ ವಿಚಾರವನ್ನು ಸರಳವಾಗಿ, ಉದಾಹರಣೆ ಸಹಿತ ಜನರ ಮನ ತಟ್ಟುವಂತೆ ಹೇಳುವ ಕಲೆ ಒಲಿಯಿತು. ಈಗ ಸೋಷಿಯಲ್ ಮೀಡಿಯಾ ವೇದಿಕೆಯ ನೆರವಿನಿಂದ ಆರೋಗ್ಯ ಕ್ಷೇತ್ರದಲ್ಲಿ ಈ ಸಂವಹನ ಕಲೆಯ ಸದ್ಬಳಕೆಯಾಗುತ್ತಿದೆ. ಅನೇಕರು ಸಕ್ಕರೆ ಕಾಯಿಲೆ, ಅಧಿಕ ರಕ್ತದೊತ್ತಡ ಮುಂತಾದ ಸಮಸ್ಯೆಗಳನ್ನು ನಿವಾರಿಸಿಕೊಂಡಿದ್ದೇನೆ, ಆತ್ಮಸ್ಥೈರ್ಯ ಬಂದಿದೆ ಎಂದು ಮೆಸೇಜು ಮಾಡುತ್ತಾರೆ. ಇದು ಖುಷಿ ಕೊಡುತ್ತೆ.

ಸಾಮಾಜಿಕ ಜಾಲತಾಣಗಳಲ್ಲಿ ಹೃದಯದ ಬಗ್ಗೆ ಸಾಕಷ್ಟು ಮಾಹಿತಿಗಳು ಹರಿದಾಡುತ್ತಿವೆ. ಯಾವ ಮಾಹಿತಿ ಒಳ್ಳೆಯದು, ಕೆಟ್ಟದ್ದು ಎಂಬುದನ್ನು ಜನರು ಪರಿಶೀಲಿಸಿ ಮುಂದುವರಿಯುವುದು ಬಹಳ ಮುಖ್ಯ. ಆನ್‌ಲೈನ್‌ನಲ್ಲಿ ಬರೋದನ್ನೆಲ್ಲಾ ಸರಿ ಎಂದುಕೊಳ್ಳಬಾರದು. ಇಂದು ಮಾಹಿತಿಯೇ ಚಿಕಿತ್ಸೆ, ಯಾವುದು ತಪ್ಪು, ಯಾವುದು ಸರಿ ಎಂಬುದನ್ನು ವಿಶ್ಲೇಷಿಸುವ ಆಸಕ್ತಿ ಬೇಕು. ಅದರಲ್ಲಿಯೂ ಎಐ ತಂತ್ರಜ್ಞಾನ ನಮ್ಮ ಬದುಕನ್ನು ಆವರಿಸಿಕೊಳ್ಳುತ್ತಿರುವ ಸಮಯದಲ್ಲಿ ಆರೋಗ್ಯ ಮಾಹಿತಿಗಾಗಿ ಎಐ ಅವಲಂಬಿಸುವಾಗ ಎಚ್ಚರ ವಹಿಸಬೇಕಾಗುತ್ತದೆ. ಜೀವನಶೈಲಿಯಂಥ ವಿಚಾರಗಳಿಗೆ ಅದರ ಮೊರೆ ಹೋಗಬಹುದು ಆದರೆ ಚಿಕಿತ್ಸೆ ಪಡೆಯುವ ವಿಷಯ ಬಂದಾಗ ವೈದ್ಯರ ಸಲಹೆ ಪಡೆದುಕೊಳ್ಳಬೇಕು.



ಸಕ್ಕರೆ ಕಾಯಿಲೆಗೂ ರಿವರ್ಸ್ ಗೇರ್ ಉಂಟು!

ಡಾ. ಪ್ರೀತಂ ಬಿ. ಡಯಾಬಿಟಿಸ್ ಸ್ಪೆಷಲಿಸ್ಟ್
ಸ್ಟಾರ್ ಆಫ್ ಫೇಸ್‌ಬುಕ್, ಇನ್‌ಸ್ಟಾಗ್ರಾಂ
ಫಾಲೋವರ್ಸ್: 60,000+

ಕೊರೊನಾ ಸಂದರ್ಭದಲ್ಲಿ ರೋಗಿಗಳಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊಗಳನ್ನು ಮಾಡಿ ಹಾಕಲಾರಂಭಿಸಿದೆ. ಈಗ ಅದರಿಂದ ಸಾವಿರಾರು ಜನರಿಗೆ ಪ್ರಯೋಜನವಾಗುತ್ತಿದೆ. ನಿರಂತರ ಸಂಶೋಧನೆ ಮತ್ತು ಅಧ್ಯಯನದ ಬಳಿಕ ರಿವರ್ಸಲ್ ಡಯಾಬಿಟಿಸ್ ಕುರಿತು ಮಾಡಿದ ವಿಡಿಯೋಗಳಿಗೆ ವ್ಯಾಪಕ ಸ್ಪಂದನೆ ಸಿಕ್ಕಿತು. ಸಾಮಾನ್ಯ ಜನರಿಗೂ, ರೋಗಿಗಳಿಗೂ ರಿವರ್ಸಲ್ ಡಯಾಬಿಟಿಸ್ ಬಗ್ಗೆ ಸ್ಪಷ್ಟತೆ ಸಿಗಲಿ ಅನ್ನೋದು ನನ್ನ ಉದ್ದೇಶವಾಗಿತ್ತು. ಈಗ ತುಂಬಾ ಜನರು ಆ ವಿಡಿಯೋಗಳಿಂದ ಆದ ಪ್ರಯೋಜನ ಹೇಳಿ ಧನ್ಯವಾದ ಅರ್ಪಿಸಿದಾಗ ನನ್ನ ಶ್ರಮ ಸಾರ್ಥಕ ಎಂಬ ಧನ್ಯತಾ ಭಾವ ಮೂಡುತ್ತದೆ.

ಆರೋಗ್ಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಲ್ಲಿ ಸಣ್ಣಪುಟ್ಟ ವಿಚಾರಗಳ ಬಗ್ಗೆಯೂ ಸಾಕಷ್ಟು ಅನುಮಾನಗಳಿರುತ್ತವೆ. ಅದರಲ್ಲಿಯೂ ಇಂದು ಸರ್ವೇಸಾಮಾನ್ಯ ಎಂಬಂತಿರುವ ಸಕ್ಕರೆ ಕಾಯಿಲೆಗೆ ತುತ್ತಾದವರಿಗೆ ಯಾವ ಬಗೆಯ ಆಹಾರ ಸೇವಿಸಬೇಕು, ಜೀವನಶೈಲಿ ಹೇಗಿರಬೇಕು ಎಂಬಿತ್ಯಾದಿ ಪ್ರಶ್ನೆಗಳಿರುತ್ತವೆ. ಉತ್ತರಕ್ಕಾಗಿ ಗೂಗಲ್ ಮಾಡಿ ನೋಡುವವರ ಸಂಖ್ಯೆ ಸಾಕಷ್ಟಿದೆ. ಆದರೆ ಅಧಿಕೃತವಾಗಿ ವೈದ್ಯರಿಂದ ಸಲಹೆಗಳು ಬಂದಾಗಲೇ ಹಲವರಿಗೆ ಸಮಾಧಾನ. ವೈದ್ಯರು ಹೇಳಿದ್ದನ್ನು ಚಾಚೂ ತಪ್ಪದೆ ತಮ್ಮ ಬದುಕಿನಲ್ಲಿ ರೂಢಿಸಿಕೊಳ್ಳುವವರೂ ಇದ್ದಾರೆ. ಅವರಿಗೆ ಪರಿಚಯವಿರುವ ವೈದ್ಯರ ಬಳಿ ಹೇಳಿಕೊಳ್ಳಲಾಗದ ಪ್ರಶ್ನೆಗಳು, ಗೊಂದಲಗಳಿಗೆ ಆನ್‌ಲೈನ್ ವಿಡಿಯೊಗಳಲ್ಲಿ ಅವರು ಪರಿಹಾರ ಅಥವಾ ಉತ್ತರಕಂಡುಕೊಳ್ಳುತ್ತಿದ್ದಾರೆ. ಆನ್‌ಲೈನ್‌ನಲ್ಲಿ ನನ್ನ ಕಂಟೆಂಟ್ ಜನಪ್ರಿಯವಾಗುವುದನ್ನು ಕಂಡು ಅನೇಕರು ಕಂಟೆಂಟ್ ಮಾನಿಟೈಸ್ (ಹಣ ಬರುವಂತೆ) ಮಾಡ್ಕೊಳ್ಳಿ ಎಂಬ ಸಲಹೆಗಳನ್ನು ನೀಡಿದ್ದೂ ಉಂಟು. ಆದರೆ, ಅದರಿಂದ ನನಗೆ ಹಣ ಮಾಡಬೇಕಿಲ್ಲ, ಸಮಾಜದಲ್ಲಿ ಒಂದಿಷ್ಟು ಜನರಿಗೆ ಪ್ರಯೋಜನವಾದರೆ ಸಾಕು. ಅದೇ ಧ್ಯೇಯದೊಂದಿಗೆ ಕೆಲಸ ಮಾಡುತ್ತಿದ್ದೇನೆ. ಜನರಿಗೆ ಆರೋಗ್ಯ ಶಿಕ್ಷಣ ನೀಡುವುದಕ್ಕಾಗಿ ಸಾಮಾಜಿಕ ಜಾಲತಾಣವನ್ನು ನನಗೆ ಲಭ್ಯವಿರುವ ಸಮಯದಲ್ಲಿ ಬಳಸುತಿದ್ದೇನೆ.

ಆರೋಗ್ಯ ವಿಚಾರದಲ್ಲಿ ಮುಜುಗರಕ್ಕೆ ಜಾಗವೇಕೆ?

ಡಾ. ಆಂಜನಪ್ಪ ಟಿ.ಎಚ್. ಗ್ಯಾಸ್ಟ್ರೋಎಂಟರಾಲಜಿಸ್ಟ್
ಸ್ಟಾರ್ ಆಫ್ ಫೇಸ್‌ಬುಕ್
ಫಾಲೋವರ್ಸ್: 6,19,000

ವೈದ್ಯಕೀಯ ವಿಚಾರಗಳನ್ನು, ಅದರಲ್ಲಿಯೂ ಮುಕ್ತವಾಗಿ ಮಾತಾಡಲು ಹಿಂಜರಿಯುವ ಆರೋಗ್ಯ ವಿಚಾರಗಳನ್ನು ಸರಳವಾಗಿ ಹಾಗೂ ಮುಜುಗರವಿಲ್ಲದೆ ಜನರಿಗೆ ತಿಳಿಸಬೇಕು ಎನ್ನುವುದು ನನ್ನ ಮನದಿಂಗಿತ. ಆರೋಗ್ಯದ ವಿಚಾರ ಬಂದಾಗ ಅಲ್ಲಿ ಮುಜುಗರಕ್ಕೆ ಜಾಗವಿರಬಾರದು. ವೈದ್ಯಕೀಯ ಕಾಲೇಜಿನಲ್ಲಿ ನನ್ನ ಉಪನ್ಯಾಸ ಶೈಲಿಯಿಂದಾಗಿ ವಿದ್ಯಾರ್ಥಿಗಳ ವಲಯದಲ್ಲಿ ಜನಪ್ರಿಯತೆ ಗಳಿಸಿದ್ದೆ. ಅಲ್ಲದೆ ನನ್ನ ಗ್ರಾಮೀಣ ಹಿನ್ನೆಲೆ ಹಾಗೂ ಮಣ್ಣಿನ ಸೊಗಡಿನ ಭಾಷಾ ಶೈಲಿಯೂ ಸಂಕೀರ್ಣ ಸಂಗತಿಗಳನ್ನು ತಿಳಿಯಾಗಿ ಹೇಳಲು ನನಗೆ ಸಹಕಾರಿಯಾಗಿದೆ.

ಕೋವಿಡ್ ಅಂತ್ಯದ ವೇಳೆಗೆ ಒಮ್ಮೆ ಸಿಗಂದೂರು ಅಮ್ಮನ ದರ್ಶನಕ್ಕೆ ಹೋಗಿದ್ದೆ. ಬಾರ್ಜ್‌ನಲ್ಲಿ ಹೋಗಿ ದೇವಸ್ಥಾನದ ಬಳಿ ಇಳಿದಾಗ ಆಲಯದ ಬಾಗಿಲು ಮುಚ್ಚುವ ಸಮಯವಾಗಿತ್ತು. ಅಲ್ಲೇ ಇದ್ದ ವೃದ್ಧ ದಂಪತಿ, ''ಕೋವಿಡ್‌ನಲ್ಲಿ ನೀವು ಕೊಡುತ್ತಿದ್ದ ಸಲಹೆಗಳಿಂದಲೇ ಇಂದು ಗಂಡನ ಜತೆ ದೇವಿ ದರ್ಶನಕ್ಕೆ ಬರಲು ಕಾರಣ,'' ಅಂದರು. ಇದೇ ನನಗೆ ಪರಮ ಬಹುಮಾನ. ಅರ್ಚಕರು ನನ್ನನ್ನು ನೋಡಿ ಬಾಗಿಲು ಮುಚ್ಚದೆ ದೇವಿ ದರ್ಶನಕ್ಕೆ, ಪೂಜೆಗೆ ಅವಕಾಶ ಕೊಟ್ಟರು. ಇದು ಅತ್ಯಂತ ಖುಷಿ ಕೊಟ್ಟ ವಿಚಾರ. ಫೇಸ್‌ಬುಕ್, ವಾಟ್ಸ್‌ಆ್ಯಪ್ ಯೂನಿವರ್ಸಿಟಿಗಳಿಗೆ ಚಾನ್ಸಲರ್ ಇರಲ್ಲ, ಪ್ರೊಫೆಸರ್ ಇರಲ್ಲ, ಅಲ್ಲಿ ಹರಿದಾಡುವ ವೈದ್ಯಕೀಯ ಸಲಹೆಯ ವಿಚಾರಗಳನ್ನು ಜನರು ಕಣ್ಮುಚ್ಚಿ ನಂಬಬಾರದು. ಸಲಹೆ ಕೊಡುವವರ ಕ್ವಾಲಿಫಿಕೇಶನ್ ನೋಡಿ, ತಿಳಿವಳಿಕೆ ಅರಿಯಬೇಕು.



ಹಳೆ ಬೇರಿಗೆ ಆಧುನಿಕ ಸ್ಪರ್ಶ

ಡಾ. ಕೆ.ಎಸ್. ಪದ್ಮಾವತಿ ಪ್ರಮೋದ್
ಆಯುರ್ವೇದ, ಯೋಗ ತಜ್ಞೆ
ಸ್ಟಾರ್ ಆಫ್ ಇನ್‌ಸ್ಟಾಗ್ರಾಂ
ಫಾಲೋವರ್ಸ್: 3,06,000

ಯಾವುದೇ ವಿದ್ಯೆಯಾದರೂ ಟ್ರೆಂಡ್‌ನೊಂದಿಗೆ ಹೆಜ್ಜೆ ಹಾಕಿದಾಗಲೇ ಅದಕ್ಕೆ ಹೆಚ್ಚಿನ ಮಹತ್ವ ದೊರೆಯುವುದು. ಆಯುರ್ವೇದ ಮತ್ತು ಯೋಗದಂಥ ದೇಶದ ಪಾರಂಪರಿಕ ವೈದ್ಯಜ್ಞಾನವನ್ನು ಆಧುನಿಕ ತಂತ್ರಜ್ಞಾನ ಬಳಸಿ ಪ್ರಸ್ತುತ ಪಡಿಸುವುದು ಎಂದರೆ ಪ್ರಾಚೀನ ಭಾರತವನ್ನು ಹೊಸ ಶೈಲಿಯಲ್ಲಿ ಸಾದರಪಡಿಸಿದಂತೆ. ರೋಗಿಗಳ ಭೇಟಿ ಸಂದರ್ಭ ಒಮ್ಮೆಗೆ ಒಬ್ಬರಿಗೆ ಸಾಂತ್ವನ ತುಂಬಬಹುದು. ಆದರೆ, ಪಾಡ್‌ಕಾಸ್ಟ್, ರೀಲ್ಸ್ ಮುಖಾಂತರ ಏಕಕಾಲಕ್ಕೆ ಲಕ್ಷಾಂತರ ಮಂದಿಯನ್ನು ತಲುಪಬಹುದು. ಅಲ್ಲದೆ ನನ್ನನ್ನು ಮುಖತಃ ಭೇಟಿಯಾಗಲು ಸಾಧ್ಯವಿಲ್ಲದ ದೂರದ ಊರಿನ ರೋಗಿಗಳನ್ನೂ ಆನ್‌ಲೈನ್ ವಿಡಿಯೋಗಳ ಮೂಲಕ ಕ್ಷಣಮಾತ್ರದಲ್ಲಿ ತಲುಪಬಹುದು.

ನಾನು ಪ್ರತ್ಯಾಹಾರ ಎನ್ನುವ ವಿಷಯದ ಕುರಿತು ಮಾಡಿದ್ದ ವಿಡಿಯೊಗೆ ವಿದೇಶಿ ಫಾಲೋವರ್ ಒಬ್ಬರು ಮೆಚ್ಚುಗೆ ಸೂಚಿಸಿ ಸಂದೇಶ ಕಳಿಸಿದ್ದು ನನಗೆ ಸ್ಮರಣೀಯ ಅನುಭವ. ವಿದೇಶದಲ್ಲಿಯೂ ನನ್ನ ಕೆಲಸಕ್ಕೆ ಮನ್ನಣೆ ದೊರೆಯುತ್ತಿದೆ ಎನ್ನುವ ಹೆಮ್ಮೆಯೂ ಉಂಟಾಯಿತು. ತಂತ್ರಜ್ಞಾನ ತುಂಬಾ ವೇಗವಾಗಿ ಮುನ್ನುಗ್ಗುತ್ತಿದೆ. ಎಐನಲ್ಲಿ ಆರೋಗ್ಯದ ಮಾಹಿತಿ ಕ್ಷಣಮಾತ್ರದಲ್ಲಿ ಸಿಗುತ್ತಿದೆ. ಆದರೆ ಅದರಿಂದ ಮಾನವ ಸಂವೇದನೆ ಕೊಡಲು ಸಾಧ್ಯವಿಲ್ಲ. ವೈದ್ಯ ಕೇವಲ ದೇಹಕ್ಕೆ ಚಿಕಿತ್ಸೆ ನೀಡುವವನಲ್ಲ, ಆತ್ಮಕ್ಕೂ ಚಿಕಿತ್ಸೆ ನೀಡುತ್ತಾನೆ. ರೋಗಿಯ ಜ್ಞಾನವನ್ನು ವರ್ಧಿಸುತ್ತಾನೆ.

ಮಾಹಿತಿ: ಆತೀಶ್ ಬಿ. ಕನ್ನಾಳೆ, ಶಶಿಧರ್ ದೋಣಿಹಕ್ಲು, ಹರ್ಷವರ್ಧನ್ ಸುಳ್ಯ, ಮಯೂರ್ ಹೆಗಡೆ

ಬದುಕಲ್ಲಿ ನಮ್ಮಿಷ್ಟದ ಕೆಲಸವನ್ನು, ನಿರ್ಧಾರಗಳನ್ನು ಬೇರೆಯವರ ಮಾತುಗಳಿಗೆ ಹೆಚ್ಚು ಕಿವಿಗೊಡದೆ ಮಾಡುತ್ತಿರಬೇಕು. ಯಾಕಂದ್ರೆ ಆ ನಾಲ್ಕು ಜನ ನೀವು ಗೆದ್ರೂ ಮಾತಾಡ್ತಾರೆ, ಸೋತ್ರೂ ಮಾತಾಡ್ತಾರೆ, ಸತ್ರೂ ಮಾತಾಡ್ತಾರೆ!

ಆ ನಾಲಕ್ಕು ಜನ, ಅದೇ ನಾಲ್ಕು ಜನ

ಫಿಲ್ಟರ್ ಇಲ್ಲದ ಲೈಫು
ಅದಿತಿ ಪ್ರಭುದೇವ

ಈ ಬ್ಯೂಟಿಫುಲ್ ಬದುಕಲ್ಲಿ ಬರೋವಾಗ್ಲೂ ಒಬ್ಬರೇ, ಹೋಗುವಾಗಲೂ ಒಬ್ಬರೇ, ಇದಂತೂ ಫಿಕ್ಸ್. ಆದ್ರೆ ಇದರ ಮಧ್ಯದ ಜೀವನದಲ್ಲಿ ಆ ನಾಲ್ಕು ಜನ ಭಯಂಕರವಾಗಿ ಮುಖ್ಯವಾಗ್ತಾರೆ; ಯಾವಾಗ್ ಆಗ್ತಾರೆ? ಯಾಕ್ ಆಗ್ತಾರೆ? ಹೇಗಾಗ್ತಾರೆ? ಗೊತ್ತಿಲ್ಲ!! ಅದೆಲ್ಲ ಬಿಡಿ, ಕನಿಷ್ಠಪಕ್ಷ ಆ ನಾಲ್ವರು ಯಾರು? ಅದೂ ಗೊತ್ತಿಲ್ಲ!! ಆದರೂ ಆ ನಾಲ್ಕು ಜನ ನಮ್ಮ ಬದುಕಿನ ಶೇ.99 ನಿರ್ಧಾರಗಳಿಗೆ ಕಾರಣರಾಗಿರ್ತಾರೆ. ಮಿಕ್ಕ ಶೇ.1 ನಾವ್ ಮಾಡೋ ಊಟ, ನಿದ್ದೆ ಅದೂಇದು ಹಾಳುಮೂಳು ನಿರ್ಧಾರಗಳಷ್ಟೇ. ತಮಾಷೆ ಅನ್ನಿಸಬಹುದು, ಆದ್ರೆ ಇದು ಪಕ್ಕಾ ಸತ್ಯ.

ನಾಲ್ಕು ಜನ ಏನ್ ಅನ್ಕೋತಾರೆ? ಜನರ ಮುಂದೆ ನಾಳೆ ನಾನ್ ಹೇಗ್ ತಲೆ ಎತ್ಕೊಂಡು ಓಡಾಡ್ಲಿ? ಈ ವಿಚಿತ್ರ ಹಾಗೂ ವಿಪರೀತವಾದ ಹೃದಯಕ್ಕೆ ಸೂಜಿ ಚುಚ್ಚುವ ಡೈಲಾಗನ್ನು ಬಹುಶಃ ನಾವೆಲ್ರೂ ನಮ್ ಬದುಕಲ್ಲಿ ಮುಲಾಜಿಲ್ದೆ ಕೇಳಿರ್ತೀವಿ ಅಥವಾ ಬಳಸಿರ್ತೀವಿ ಅಥವಾ ನಮಗೆ ನಾವೇ ಹೇಳಿಕೊಂಡಿರ್ತೀವಿ.

ಮೊನ್ನೆ ನನ್ನ ಸ್ನೇಹಿತೆ ಬಹಳ ತಿಂಗಳ ಮೇಲೆ ಕರೆ ಮಾಡಿದ್ಲು, ನಾನು ಕಾಲ್ ಪಿಕ್ ಮಾಡಿದ್ ಕೂಡ್ಲೆ ಆ ಕಡೆಯಿಂದ ಬಿಕ್ಕಿಬಿಕ್ಕಿ ಅಳುವ ಸದ್ದು. ನಾನು ತಕ್ಷಣಕ್ಕೆ ಕಂಗಾಲಾಗಿ, ''ಏನಾಯ್ತು?,'' ಅಂತ ಕೇಳಿದೆ. ಅದಕ್ಕೆ ಅವಳು ''ನನ್ನ ಬದುಕು, ಭಾವನೆಗಳಿಗಿಂತ ನಾಲಕ್ ಜನ ಏನ್ ಅನ್ಕೋತಾರೆ ಅನ್ನೋದೇ ಮುಖ್ಯ ಆಗೋಯ್ತು,'' ಅಂತ ಮತ್ತೆ ಕಣ್ಣೀರಾದಳು. ಮುಂದುವರಿದು ವಿಷಯ ಕೇಳಿದಾಗ ಆಕೆಯ ದಾಂಪತ್ಯದಲ್ಲಿ ಸಹಿಸಲಾರದಷ್ಟು ನೋವುಗಳನ್ನುಂಡು ಅತಿರೇಕವೆನಿಸಿ ಈಗ ವಿಚ್ಛೇದನಕ್ಕೆ ಮುಂದಾಗಿದ್ದಾಳೆ. ಸ್ವಾಭಿಮಾನಿ, ಸ್ವಾವಲಂಬಿ ಹೆಣ್ಣಿಗೆ ಮಾನಸಿಕ ಭದ್ರತೆ, ಪ್ರೀತಿ ಅಷ್ಟೇ ಮುಖ್ಯ. ಅವಳನ್ನು ಪ್ರೀತಿಯಿಂದ ಸಾಕಿ ಸಲಹಿದವರಿಗಾದರೂ ಅವಳ ನೋವು ಅರ್ಥವಾಗಬಹುದೇನೋ ಅಂತ ಅಪ್ಪ- ಅಮ್ಮನ ಮುಂದೆ ವಿಚ್ಛೇದನದ ವಿಷಯ ಪ್ರಸ್ತಾಪಿಸಿದಾಗ, 'ಏನಾಯ್ತು? ಹೇಗಾಯ್ತು? ಯಾಕೆ? ನಿನ್ನ ಮಾನಸಿಕ ಆರೋಗ್ಯವೇನಾಗಿದೆ?' ಎಂಬ ಪ್ರಶ್ನೆಗಳನ್ನು ನಿರೀಕ್ಷಿಸಿದ್ದ ನನ್ನ ಗೆಳತಿಗೆ ಸಿಡಿಲಾಗಿ ಬಡಿದಿದ್ದು- ''ಗಂಡನನ್ನು ಬಿಟ್ಟು ಬಂದ್ರೆ ನಾಲ್ಕು ಜನ ಏನ್ ಅನ್ಕೋತಾರೆ? ನಿನ್ನ ಬಗ್ಗೆ ಕೇಳಿದ್ರೆ ನಾನು ಏನಂತ ಹೇಳ್ಲಿ?,'' ಅನ್ನೋ ಮಾತು. ಈ ಮಾತು ಕೇಳಿದ ಮೇಲೆ ನನಗೆ ಸಾಧ್ಯವಾದಷ್ಟು ಅವಳಿಗೆ ಧೈರ್ಯ ತುಂಬಿ ಅವಳ ಭಾವನೆಗಳಿಗೆ ಕಿವಿಯಾದೆ. ಇಲ್ಲಿ ನಾನು ಯಾರನ್ನೂ ಬ್ಲೇಮ್ ಮಾಡ್ತಿಲ್ಲ, ಯಾಕಂದ್ರೆ, ನಾವೆಲ್ಲರೂ ಬದುಕುತ್ತಿರುವ ಪರಿಸರ ಅಥವಾ ವಾತಾವರಣವೇ ಅಂಥದ್ದು. ನಮ್ಮ ಸಂಬಂಧ, ಭಾವನೆ, ಕುಟುಂಬ ಎಲ್ಲದಕ್ಕಿಂತ ಮಿಗಿಲಾಗಿ ಸಮಾಜ ಏನು ಏನೆಂದುಕೊಳ್ಳುತ್ತೋ ಎಂಬುದಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡ್ತೀವಿ. ಇದೇ ಕಾರಣಕ್ಕೆ ಅದೆಷ್ಟೋ ಜನ ತಮ್ಮಿಷ್ಟದ ವಿದ್ಯಾಭ್ಯಾಸವನ್ನು ತೊರೆದಿದ್ದಾರೆ, ಅವರ ಕಲೆಯನ್ನು ಮೂಲೆಗುಂಪನ್ನಾಗಿ ಮಾಡಿದ್ದಾರೆ, ಕೆಲಸ ಬಿಟ್ಟಿದ್ದಾರೆ ಅಥವಾ ಮಾಡುತ್ತಿದ್ದಾರೆ, ಬದುಕಿನ ನಿರ್ಧಾರಗಳನ್ನು ಭದ್ರವಾಗಿ ತೆಗೆದುಕೊಳ್ಳದೆ ಪರದಾಡ್ತಿದ್ದಾರೆ. ಇದೇ ನಾಲ್ಕು ಜನರ ಟೀಕೆಗಳು ಅದೆಷ್ಟೋ ಕನಸುಗಳನ್ನು ಕುಡಿಯಲ್ಲೇ ಚಿವುಟಿವೆ. ಎಷ್ಟೋ ಸಂಬಂಧಗಳು ಒಡೆದು ಛಿದ್ರವಾಗಿವೆ, ಹಲವರ ಬದುಕನ್ನು ಬಟ್ಟು ಬರಡಾಗಿಸಿವೆ.

ಆಡುವ ಬಾಯಿಗೆ ಬೀಗ ಜಡಿಯಲು ಪರಮ ಅಸಾಧ್ಯ. ಅದು ನಮಗೂ ಗೊತ್ತು, ನಿಮಗೂ ಗೊತ್ತು. ಆದರೂ ನಾವು ಬದಲಾಗೋದಿಲ್ಲ, ನಿಮಗೆ ಗೊತ್ತು ಅನ್ಸುತ್ತೆ 'ಕತ್ತೆ ಮತ್ತು ದಂಪತಿ'ಯ ಕಥೆ. ಅದೇ... ಗಂಡ ಹೆಂಡತಿ ಮತ್ತು ಅವರ ಸಾಕು ಕತ್ತೆ... ಗೊತ್ತಾಗ್ತಿಲ್ವಾ?? ನೆನಪಾಗ್ತಾ ಇಲ್ವಾ??? ಸರಿ, ಇಲ್ಲಿ ಕೇಳಿ...

ಹೊಸ ಅಂಕಣ

ಒಮ್ಮೆ ಗಂಡ- ಹೆಂಡತಿ ಜೋಡಿ ಹಾಗೂ ಅವರ ಸಾಕು ಕತ್ತೆ ರಸ್ತೆಯಲ್ಲಿ ಪ್ರಯಾಣಿಸುತ್ತಿರುತ್ತಾರೆ. ಅವರು ಹೆಜ್ಜೆ ಹಾಕ್ತಾ ಹೋದಂತೆ, ನಾಲಕ್ಕು ಜನ ಅವರನ್ನು ಟೀಕಿಸುತ್ತಾರೆ: ''ಇದೇನಿದು? ಆರಾಮಾಗಿ ಕತ್ತೆ ಮೇಲೆ ಕುತ್ಕೊಂಡು ಹೋಗೋದು ಬಿಟ್ಟು ಕತ್ತೆ ಜತೆ ಇವರೂ ಕತ್ತೆ ಥರಾ ನಡ್ಕೊಂಡ್ ಹೋಗ್ತಾ ಇದ್ದಾರಲ್ಲ''. ಇದನ್ನು ಕೇಳಿದ ಗಂಡ ತಕ್ಷಣ ಹೆಂಡತಿಯನ್ನು ಕತ್ತೆ ಮೇಲೆ ಕೂರಿಸಿ ಮತ್ತೆ ಪ್ರಯಾಣ ಮುಂದುವರಿದ. ಸ್ವಲ್ಪ ಸಮಯದ ಬಳಿಕ ಮತ್ತೆ ಬೇರೆ ನಾಲ್ಕು ಜನ ಎದುರಾದ್ರು: ''ಅಯ್ಯಯ್ಯೋ, ಇವನ್ಯಾವ ಸೀಮೆ ಗಂಡ್ಸು? ಹೆಂಡತಿಯನ್ನು ಕತ್ತೆ ಮೇಲೆ ಕೂರಿಸಿ ತಾನು ದಾಸನಂತೆ ನಡಿತಿದ್ದಾನಲ್ಲಾ... ಹೋಗ್ಲಿ, ಹೆಂಡ್ತಿಗಾದ್ರೂ ಬುದ್ಧಿ ಬೇಡ್ವಾ? ರಾಣಿ ಥರಾ ಪೋಸ್ ಕೊಟ್ಕೊಂಡ್ ಕೂತಿದ್ದಾಳೆ,'' ಅಂದ್ರು. ಇದನ್ನೆಲ್ಲ ಕೇಳಿದ ಹೆಂಡತಿ ಬಹಳ ನೋವಿನಿಂದ, ಮುಜುಗರದಿಂದ ಗಂಡನನ್ನು ನೋಡಿದಳು. ಆಗ ಗಂಡ ತಾನು ಅವಳೊಂದಿಗೆ ಕತ್ತೆಯ ಮೇಲೆ ಕೂರುವ ನಿರ್ಧಾರ ಮಾಡಿ ಮತ್ತೆ ಪ್ರಯಾಣ ಮುಂದುವರಿಸಿದ. ಮತ್ತೆ ಅದೇ ನಾಲಕ್ ಜನ: ''ಛೀ ಛೀ ಛೀ, ಎಂಥ ಕ್ರೂರಿಗಳಪ್ಪಾ ಜಗತ್ತಲ್ಲಿ... ಪಾಪದ ಕತ್ತೆ ಈ ಇಬ್ಬರ ಭಾರವನ್ನು ಹೇಗಾದರೂ ತಾಳುತ್ತಿದೆಯೋ?'' ಅನ್ನೋಕೆ ಶುರುಮಾಡಿದ್ರು. ಈ ಮಾತುಗಳನ್ನು ಕೇಳಿ ಆ ದಂಪತಿಗೆ ದಿಕ್ಕೇ ತೋಚದಂತಾಗಿ, ಇಬ್ಬರೂ ಸೇರಿ ಕತ್ತೆಯನ್ನು ಹೊತ್ತುಕೊಂಡು ನಡೆಯಲು ಶುರುಮಾಡಿದ್ರು. ಆಗ ಮತ್ತೆ ಜನ ಕೇಕೆ ಹಾಕುತ್ತಾ, ''ಅರೆರೇ... ಕತ್ತೆಯನ್ನು ನಡೆಸಿಕೊಂಡು ಹೋಗಬಹುದಲ್ವಾ? ಆದರೆ, ಇವರೇ ಕತ್ತೆಯನ್ನು ಕತ್ತೆಯಂತೆ ಹೊತ್ಕೊಂಡ್ ಹೋಗ್ತಿದ್ದಾರೆ,'' ಅಂತ ನಗಲು ಶುರುಮಾಡಿದ್ರು. ಈ ಕಥೆನಾ ಯಾಕ್ ಹೇಳ್ದೆ ಅಂತ ಗೊತ್ತಾಯ್ತು ಅನಿಸುತ್ತೆ... yes criticism is the natural behaviour of society.

Let me give u an another silly example. ಮದುವೆ ಮನೆಯಲ್ಲಿ ಗಡದ್ದಾಗಿ ಉಂಡು, ಮನೆಗೆ ಬಂದು ''ಅದೆಂಥಾ ಊಟ?,'' ಅಂತ ತೇಗೋರು ಕೆಲವರು. ನಮ್ಮ ಹುಡುಗಿಗೆ ಇಂಥ ಹುಡುಗ ಸಿಗ್ಲಿಲ್ವಲ್ಲಾ ಅಂತ ''ಹುಡುಗನ ಸಂಬಳ ಎಷ್ಟಿದ್ದರೇನು? ಹುಡುಗ ತುಂಬಾ ಸುಮಾರಾಗಿದ್ದಾನೆ. ಜೋಡಿ, ಊಹ್ಲೂಂ ಚೆನ್ನಾಗಿಲ್ಲ,'' ಎಂದು ಮೂಗು ಮುರಿಯುವವರು ಇನ್ನಷ್ಟು ಮಂದಿ.

ನಿತ್ಯದ ಪ್ರತಿಕ್ಷಣದಲ್ಲೂ ಸುತ್ತಮುತ್ತ ನೋಡಿದಾಗ ನಮಗೆ ಅರ್ಥವಾಗೋದು, ಸಮಾಜವನ್ನು ಬದಲಾಯಿಸುವುದಕ್ಕೆ ಖಂಡಿತಾ ಸಾಧ್ಯವಿಲ್ಲ, ಆದ್ರೆ, ನಾವು ಖಚಿತವಾಗಿಯೂ ಬದಲಾಗಬಹುದಷ್ಟೇ. ನಮ್ಮ ಬದುಕಲ್ಲಿ ಪರರ ಅಭಿಪ್ರಾಯಗಳಿಗೆ ಪ್ರಾಮುಖ್ಯತೆ ಕೊಡದೆ ನಮ್ಮ ಮಾರ್ಗವನ್ನು ನಮ್ಮದೇ ಆದ ನಂಬಿಕೆಯಿಂದ ಮುಂದುವರಿಯಬೇಕು. ಬದುಕಲ್ಲಿ ನಮ್ಮಿಷ್ಟದ ಕೆಲಸವನ್ನು, ನಿರ್ಧಾರಗಳನ್ನು ಬೇರೆಯವರ ಮಾತುಗಳಿಗೆ ಹೆಚ್ಚು ಕಿವಿಗೊಡದೆ ಮಾಡುತ್ತಿರಬೇಕು. ನಮ್ಮ ಸಮಯ, ಶಕ್ತಿ, ಸಕಾರಾತ್ಮಕತೆಯನ್ನು ವ್ಯರ್ಥ ಮಾಡಿಕೊಳ್ಳದೆ, ಸದುದ್ದೇಶ, ಸಂತೋಷದೊಂದಿಗೆ ನಮ್ಮ ಬದುಕನ್ನು ರೂಪಿಸಿಕೊಳ್ಳಲು ಮುಂದಾಗಬೇಕು. ಯಾಕಂದ್ರೆ ಆ ನಾಲ್ಕು ಜನ ನೀವು ಗೆದ್ರೂ ಮಾತಾಡ್ತಾರೆ, ಸೋತ್ರೂ ಮಾತಾಡ್ತಾರೆ, ಸತ್ರೂ ಮಾತಾಡ್ತಾರೆ!

ಇದೆಲ್ಲದರ ಮಧ್ಯೆ, ಕೊನೆಯದಾಗಿ ನನಗನಿಸಿದ್ದು ನಾವಾದರೂ ಬೇರೆಯವರು ಭಯಪಡುವಂಥ ಆ ನಾಲ್ಕು ಜನ ಆಗೋದು ಬೇಡ. ನೂರಾರು ಜೀವಗಳ ಕನಸು ಕೊಂದಂಥ ಆ ನಾಲ್ಕು ಜನ ಆಗೋದು ಖಂಡಿತಾ ಬೇಡ. ಎಷ್ಟೋ ಮನಸುಗಳನ್ನ- ಮನೆಗಳನ್ನ ಮುರಿಯುವಂಥ ಆ ನಾಲ್ಕು ಜನ ಆಗೋದು ಬೇಡವೇ ಬೇಡ. ಯಾಕಂದ್ರೆ ಈಗಾಗಲೇ ನಮ್ಮ ಬದುಕಲ್ಲೇ ಆ ನಾಲ್ಕು ಜನ ವಿಲನ್ ಆಗಿ ಕಾಡ್ತಿರ್ತಾರೆ, ಇನ್ನು ನಾವು ಕೂಡ ಬೇರೆಯವರ ಬದುಕಿನ ವಿಲನ್ ಆಗೋದ್ ಯಾಕಪ್ಪಾ? ಅಲ್ವಾ ಮತ್ತೆ..?

Let's mind our own business!!

(ಲೇಖಕರು: ಖ್ಯಾತ ನಟಿ)

ವಾಚಕರ ವಿಜಯ

ಪರಿಶಿಷ್ಟ ಜಾತಿಯ ಪ್ರತಿಭಾವಂತರ ವ್ಯಥೆ

ರಾಜ್ಯ ಸರಕಾರವು ಪರಿಶಿಷ್ಟ ಜಾತಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಐಎಎಸ್, ಕೆಎಎಸ್, ಬ್ಯಾಂಕಿಂಗ್, ರೈಲ್ವೆ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ನೀಡುವ ಉತ್ತಮ ಕಾರ್ಯಕ್ರಮವನ್ನು ರೂಪಿಸಿದೆ. ಆದರೆ, ಕಳೆದ 2-3 ವರ್ಷಗಳಿಂದ ಈ ತರಬೇತಿಗೆ ಅರ್ಜಿಯನ್ನೇ ಆಹ್ವಾನಿಸಿಲ್ಲ. ಈಗಾಗಲೇ 2025-26ನೇ ಸಾಲು ಮುಗಿದು ಹೋಗಿದೆ. ಈವರೆಗೂ ಯುಪಿಎಸ್ಸಿ ಪರೀಕ್ಷೆಗೆ ನೀಡುವ ತರಬೇತಿಗೂ ಅರ್ಜಿ ಕರೆದಿಲ್ಲ. ಇದಕ್ಕೆ ನೈಜ ಕಾರಣವೇನು? ಗಮನಿಸಬೇಕಾದ ಪ್ರಮುಖ ಅಂಶವೆಂದರೆ, ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಣ್ಣ ಹುದ್ದೆಯಿಂದ ಹಿಡಿದು ಉನ್ನತ ಅಧಿಕಾರಿಗಳವರೆಗೂ ಬಹುತೇಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರೇ ಇದ್ದಾರೆ. ನಿರ್ಧಾರ ತೆಗೆದುಕೊಳ್ಳುವ ಹಂತದಲ್ಲಿ ಹಾಗೂ ಕಾನೂನು- ಕಟ್ಟಳೆಗಳನ್ನು ಹೊರಡಿಸುವ ಸಮಾಜ ಕಲ್ಯಾಣ ಇಲಾಖೆಯ ಸಚಿವರೂ ಪರಿಶಿಷ್ಟ ಜಾತಿಯವರೇ ಆಗಿದ್ದಾರೆ. ಹೀಗಿದ್ದರೂ, ಇಂಥ ನಿರ್ಲಕ್ಷ್ಯವೇಕೆ? ಮಾನ್ಯ ಮುಖ್ಯಮಂತ್ರಿಗಳು ಈ ವಿಷಯದತ್ತ ತಕ್ಷಣ ಗಮನಹರಿಸಿ, ಸಮಸ್ಯೆ ಬಗೆಹರಿಸಲು ಕೋರಿಕೆ.

– ಅನಿಲ್ ಕುಮಾರ್ ನಂಜನಗೂಡು

ತೂತು ಬಿದ್ದಿರುವ ಹಡಗು

ಪ್ರಯಾಣಿಸುತ್ತಿರವ ಹಡಗಿನಲ್ಲಿ ಒಂದು ತೂತು ಕಂಡು ನೀರು ನುಗ್ಗುತ್ತಿದ್ದರೆ ಕ್ಯಾಪ್ಟನ್ ಆದವ ತಕ್ಷಣ ಅದನ್ನು ಮುಚ್ಚಲು ಕ್ರಮಕೈಗೊಳ್ಳುತ್ತಾರೆ. ಇತ್ತೀಚೆಗಿನ 'ಅಡ್ಡಮತದಾನ' ಎಲ್ಲಿ ತೂತು ಎನ್ನುವುದನ್ನು ಸ್ಪಷ್ಟವಾಗಿ ತೋರಿಸಿದೆ. ವೈರಲ್ ಅಗಿರುವ ಆಡಿಯೊ ಕೂಡ ಒಂದು ಎಚ್ಚರಿಕೆಯ ಸೈರನ್ ಆಗಿದೆ. ಆದಾಗ್ಯೂ, ಯಜಮಾನರು ಮಾತ್ರ ತಮಗೂ ಇದಕ್ಕೂ ಸಂಬಂಧವೇ ಇಲ್ಲ ಎನ್ನುವಂತೆ ಇದ್ದಾರೆ. ಗಿಡ ನೆಟ್ಟು ಮರಮಾಡಿದವರೇ ಬುಡಕ್ಕೆ ಕೊಡಲಿ ಹಾಕಿದರೆ ಏನು ಮಾಡುವುದು ಎಂದು ನಿರ್ಲಿಪ್ತತೆ ತಾಳಿದ್ದಾರೆ. 60 ಜನರನ್ನು ಹೊರಲಾರದೆ ಮುಳುಗುತ್ತರುವ ಹಡಗು ಇನ್ನು 125 ಜನರನ್ನು ಹೊರಬಲ್ಲದೇ? ಎಂದು ಜನರು ಇನ್ನೊಂದು ಸರಿ ಇರುವಂತೆ ತೋರುತ್ತಿರುವ ಹಡಗಿನತ್ತ ಮುಖ ಮಾಡಿದರೆ ಜೋಕೆ!

– ಸತ್ಯಬೋಧ ಬೆಂಗಳೂರು

ಕೃಷಿ ಹೊಂಡ ಮೃತ್ಯುಕೂಪವಾಗದಿರಲಿ

ಇತ್ತೀಚೆಗೆ 'ಕೃಷಿ ಹೊಂಡಕ್ಕೆ ಬಿದ್ದು ಸಾವು' ಎಂಬ ಸುದ್ದಿ ಆಗಾಗ್ಗೆ ಕಣ್ಣಿಗೆ ಅಪ್ಪಳಿಸಿತು. ಚಿಕ್ಕಮಕ್ಕಳು, ಹುಡುಗರು ಕೃಷಿ ಹೊಂಡದಲ್ಲಿ ಬಿದ್ದು ಸಾವನ್ನಪ್ಪುತ್ತಿರುವ ಘಟನೆಗಳು ಮೇಲಿಂದ ಮೇಲೆ ನಡೆಯುತ್ತಲೇ ಇವೆ. ಆದ್ದರಿಂದ, ಕೃಷಿಹೊಂಡದ ಮಾಲಿಕರು ಹೊಂಡದ ಸುತ್ತ ಬೇಲಿ ನಿರ್ಮಿಸಿದರೆ ಮಕ್ಕಳು ಅತ್ತ ಮುಖ ಮಾಡುವುದನ್ನು ತಪ್ಪಿಸಬಹುದು. ಸ್ಥಳೀಯ ಸಂಸ್ಥೆಗಳೂ ಈ ಬಗ್ಗೆ ನಿಗಾ ಇಡುವುದು ಅವಶ್ಯ.

– ಸೀತಾರಾಮ ವಿ. ಬೆಂಗಳೂರು

ಈ 'ಮಾಮಾ' ಬಲು ಅಪಾಯಕಾರಿ

ಗುಟ್ಕಾ ಮತ್ತು ಪಾನ್ ಮಸಾಲಗಳಲ್ಲಿ ಅಮಲು ಬರುವ ಪದಾರ್ಥಗಳ ಮಿಶ್ರಣ ಕಂಡುಬಂದರೆ ಅವುಗಳನ್ನು ನಿಷೇಧಿಸಲಾಗುವುದು ಎಂದು ಸಿಎಂ ಡಿ.ಕೆ. ಶಿವಕುಮಾರ್ ನೀಡಿರುವ ಎಚ್ಚರಿಕೆ ಶ್ಲಾಘನೀಯ. ಆದರೆ, ಉತ್ತರ ಕರ್ನಾಟಕದ ಹಲವು ಭಾಗಗಳಲ್ಲಿ 'ಮಾಮಾ'ದಂಥ ನಿಷೇಧಿತ ಪದಾರ್ಥಗಳು ಯಥೇಚ್ಛ ಮಾರಾಟವಾಗುತ್ತಿವೆ. ಇವುಗಳಿಗೆ ಈಗಾಗಲೇ ನಿಷೇಧವಿದ್ದರೂ, ಹಲವೆಡೆಗಳಲ್ಲಿ ಅಕ್ರಮವಾಗಿ ಮಾರಾಟ ಮಾಡಲಾಗುತ್ತಿದೆ. ಯಾವುದೇ ಅಮಲು ಪದಾರ್ಥ ಅಥವಾ ನಿಷೇಧಿತ ವಸ್ತುಗಳನ್ನು ನಿಷೇಧಿಸಿದರೂ, ಅವು ಅಕ್ರಮವಾಗಿ ಹಾಗೂ ದುಪ್ಪಟ್ಟು ದರದಲ್ಲಿ ಮಾರಾಟವಾಗುತ್ತಿರುವುದೇಕೆ? ಸಂಬಂಧಪಟ್ಟ ಅಧಿಕಾರಿಗಳು ಏನು ಮಾಡುತ್ತಿದ್ದಾರೆ?

– ಹುಸೇನ್ ಡಾಂಗೆ ದೇವರ ನಿಂಬರಗಿ

ವಾಚಕರ ವಿಜಯಕ್ಕೆ ಚಿಂತನಾರ್ಹ, ವಿಚಾರ ಪ್ರಚೋದಕ, ರಾಜ್ಯ ವ್ಯಾಪ್ತಿಯ ವಿಷಯಗಳ ಪತ್ರಗಳಿಗೆ ಸ್ವಾಗತ. ನಿಮ್ಮ ಪತ್ರ 50 ಪದ ಮೀರದಿರಲಿ. Whatsapp: 63664 22240 E-mail: editor@vijaykarnataka.com, ಇ-ಮೇಲ್‌ನಲ್ಲಿ ನಿಮ್ಮ ವಿಳಾಸವನ್ನು ಕಡ್ಡಾಯವಾಗಿ ನಮೂದಿಸಿ. ಕಚೇರಿ ವಿಳಾಸ:- ವಾಚಕರ ವಿಜಯ, ನಂ. 74/2, ಸಂಜನಾ ಪ್ಲಾಜಾ, 4ನೇ ಮಹಡಿ, ಆನೆಬಂಡೆ ರಸ್ತೆ, ಜಯನಗರ 3ನೇ ಬ್ಲಾಕ್, ಬೆಂಗಳೂರು-560011.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 181
ಬುಧವಾರ,1 ಜುಲೈ 2026 | ಪುಟಗಳು: 20 | ಬೆಲೆ: ₹ 5.00
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ



ಮನೆ ಧ್ವಂಸ: ಮೂವರ ಬಂಧನ

ಬೆಳಗಾವಿಯಲ್ಲಿ ವಿವಾಹಿತೆಯೊಂದಿಗೆ ಪರಾರಿ | ಯುವಕನ ಪಾಲಕರ ಮೇಲೆ ಹಲ್ಲೆ

■ **ವಿಕ ಸುದ್ದಿಲೋಕ** ಬೆಳಗಾವಿ

ಪ್ರೀತಿಸುತ್ತಿದ್ದ ವಿವಾಹಿತ ಮಹಿಳೆಯೊಂದಿಗೆ ಪರಾರಿಯಾದ ಯುವಕನ ಮನೆ ಧ್ವಂಸಗೊಳಿಸಿ, ಕುಟುಂಬಸ್ಥರ ಮೇಲೆ ಹಲ್ಲೆ ನಡೆಸಲಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಆರೋಪಿಗಳನ್ನು ಮಾರಿಹಾಳ ಠಾಣೆ ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ನಗರದ ನಾಗರಾಜ ನಾಯಕ (33), ರವಿ ಬಿಜಗತ್ತಿ (40) ಮತ್ತು ಈಶ್ವರ ಮುಕ್ಕಂಡಿ (22) ಬಂಧಿತ ಆರೋಪಿಗಳು.

ಪ್ರಕರಣವೇನು?: ತಾಲೂಕಿನ ಭರಮ್ಯಾನಟ್ಟಿ ಗ್ರಾಮದ ಯಲ್ಲಪ್ಪ ನಾಯಕ ಕಂಪೆನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಇದೇ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆ ನಾಗವ್ವ ಬಸಪ್ಪ ನಾಯಕ ಮತ್ತು ಯಲ್ಲಪ್ಪ ಎರಡು ದಿನಗಳ ಹಿಂದೆ ಪರಾರಿಯಾಗಿದ್ದರು. ಇದರಿಂದ ಆಕ್ರೋಶಗೊಂಡ ನಾಗವ್ವನ ಸಂಬಂಧಿಕರು, ಸೋಮವಾರ ಭರಮ್ಯಾನಟ್ಟಿಯ ಯಲ್ಲಪ್ಪ ನಾಯಕ ಮನೆ ಮೇಲೆ ದಾಳಿ ಮಾಡಿದ್ದಾರೆ. ಈ ವೇಳೆ ಮನೆಯ ಹಂಚುಗಳನ್ನು ಒಡೆದು, ಟಿವಿ, ಸೋಫಾ ಸೇರಿದಂತೆ ಇತರ ಸಾಮಗ್ರಿಗಳನ್ನು ಒಡೆದು ಹಾಕಿ ಹಾನಿಗೊಳಿಸಿದ್ದಾರೆ. ಅಲ್ಲದೇ ಯಲ್ಲಪ್ಪನ ತಂದೆ ಭೀಮಪ್ಪ ನಾಯಕ ಮತ್ತು ತಾಯಿ ಮೇಲೆ ಹಲ್ಲೆ ಮಾಡಿದ್ದಾರೆ. ಹಾಗಾಗಿ ಯಲ್ಲಪ್ಪನ ಕುಟುಂಬಸ್ಥರು ಬೀದಿಪಾಲಾಗಿದ್ದಾರೆ. ಈ ಕುರಿತು ದೂರು ಮಾರಿಹಾಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳಗಾವಿ ತಾಲೂಕಿನ ಭರಮ್ಯಾನಟ್ಟಿ ಗ್ರಾಮದ ಯಲ್ಲಪ್ಪ ನಾಯಕ ಅವರ ಮನೆ ಧ್ವಂಸಗೊಳಿಸಿರುವುದು.

ಸ್ನೇಹಿತನ ಪತ್ನಿ ಮೇಲೆ ಕಣ್ಣು!

ಭರಮ್ಯಾನಟ್ಟಿ ಗ್ರಾಮದ ಯಲ್ಲಪ್ಪ ನಾಯಕ ಹಾಗೂ ಬಸಪ್ಪ ನಾಯಕ ಆತ್ಮೀಯ ಸ್ನೇಹಿತರು. ಕಳೆದ ವರ್ಷವಷ್ಟೇ ಬಸಪ್ಪ ನಾಯಕ ಮತ್ತು ನಾಗವ್ವ ಅವರ ವಿವಾಹ ಆಗಿತ್ತು. ಬಸಪ್ಪ, ನಾಗವ್ವ ಹಾಗೂ ಸ್ನೇಹಿತ ಯಲ್ಲಪ್ಪ ನಾಯಕ ಮೂವರೂ ಬೆಳಗಾವಿಯ ಉದ್ಯಮಬಾಗದ ಅಶೋಕ್ ಐರನ್ ಕಂಪನಿಯಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು.

ಮಹಿಳೆ ಅಪಹರಣ: ಮೂವರ ಬಂಧನ

ಮೈಸೂರು: ಪರಿಚಿತರಿಂದಲೇ ಅಪಹರಣಕ್ಕೆ ಒಳಗಾಗಿದ್ದ ವಿವಾಹಿತ ಮಹಿಳೆಯನ್ನು ರಕ್ಷಿಸಿದ ಪೊಲೀಸರು ಮೂವರನ್ನು ಬಂಧಿಸಿದ್ದಾರೆ. ಆಲನಹಳ್ಳಿಯ ಶಿವಕುಮಾರ್ ಅವರ ಪತ್ನಿ ಭವ್ಯ (19) ಅವರನ್ನು ಅವರಿಗೆ ಪರಿಚಿತರಾದ ಸುಮ, ಕಿರಣ್ ರಾಮನಗರಕ್ಕೆ ಕರೆದುಕೊಂಡು ಹೋಗಿ ಮನೆಯೊಂದರಲ್ಲಿ ಕೂಡಿ ಹಾಕಿದ್ದರು. ಈ ಬಗ್ಗೆ ಪತ್ನಿ ನೀಡಿದ ಮಾಹಿತಿ ಮೇರೆಗೆ ಶಿವಕುಮಾರ್ ಪೊಲೀಸ್ ಸಹಾಯವಾಣಿ-112ಗೆ ಕರೆ ಮಾಡಿ ದೂರು ನೀಡಿದ್ದರು. ಕಾರ್ಯ ಪ್ರವೃತ್ತರಾದ ರಾಮನಗರ ಪೊಲೀಸರು ಭವ್ಯ ಅವರು ಬಂಧಿಯಾಗಿದ್ದ ಮನೆಯನ್ನು ಪತ್ತೆ ಹಚ್ಚಿ ರಕ್ಷಣೆ ಮಾಡಿದರು.

ಕಬ್ಬಿನ ತೂಕದಲ್ಲಿ ಮೋಸ, 8 ಮಂದಿ ಸೆರೆ

₹11.23 ಕೋಟಿ ಜಪ್ತಿ | ಸಕ್ಕರೆ ಕಾರ್ಖಾನೆ ಸಿಬ್ಬಂದಿಯಿಂದ ವಂಚನೆ

■ **ವಿಕ ಸುದ್ದಿಲೋಕ** ವಿಜಯಪುರ

ನಂದಿ ಸಹಕಾರ ಸಕ್ಕರೆ ಕಾರ್ಖಾನೆಗೆ ಬಂದ ಕಬ್ಬಿನ ತೂಕದಲ್ಲಿ ಮೋಸ ಮಾಡಿ ಉಳಿಸಿಕೊಂಡ ಕಬ್ಬನ್ನು ನುರಿಸಿ, ಬೋಗಸ್ ರಸೀದಿ ಮೂಲಕ ವಂಚನೆ ಮಾಡುತ್ತಿದ್ದ ಪ್ರಕರಣವನ್ನು ಪೊಲೀಸರು ಭೇದಿಸಿದ್ದಾರೆ.

ಕೃಷ್ಣಾ ನಗರದ ನಂದಿ ಸಹಕಾರ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ಕಾರ್ಖಾನೆಯಲ್ಲಿ ಕೆಲವರಿಂದ ಮೋಸವಾಗುತ್ತಿರುವ ಬಗ್ಗೆ ಜೂನ್ 12ರಂದು ದೂರು ನೀಡಿದ್ದರು. ಪ್ರಕಣದ ತನಿಖೆ ಕೈಗೊಂಡ ಪೊಲೀಸರು 8 ಆರೋಪಿಗಳನ್ನು ಬಂಧಿಸಿ, 11.23 ಕೋಟಿ ರೂ. ಜಪ್ತಿ ಮಾಡಿದ್ದಾರೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಬಿದರಿ ಗ್ರಾಮದ ಧರೆಪ್ಪ ದುಂಡಪ್ಪ ನಾವಿ, ಬೆಳಗಾವಿ ಜಿಲ್ಲೆಯ ಯರಗಟ್ಟಿ ಗ್ರಾಮದ ಭೀರಪ್ಪ ಗಡದಾರ, ಯಲ್ಲಪ್ಪ ಗಡದಾರ, ರಾಯಬಾಗದ ಪ್ರಕಾಶ ಸಿದ್ದಲಿಂಗ ಗಡ್ಡಿ, ಪರಮಾನಂದ ಗಡ್ಡಿ, ಮಹಾದೇವ ಸಿದ್ದಲಿಂಗ ಕಾಂಬಳೆ, ಬಾಳಪ್ಪ ಚೋಪಡೆ, ಪ್ರಭಾಕರ ಸಿಂಗೆ ಬಂಧಿತರು.

ವಿಜಯಪುರ ಜಿಲ್ಲೆಯ ನಂದಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ವಂಚನೆ ಮಾಡಿದ ಪ್ರಕರಣದಲ್ಲಿ ವಶಪಡಿಸಿಕೊಂಡ ಹಣ.

''ಕಾರ್ಖಾನೆಯ ಕಬ್ಬು ತೂಕ ವಿಭಾಗದಲ್ಲಿ ಕೆಲಸ ಮಾಡುತ್ತದ್ದ ಧರೆಪ್ಪ ದುಂಡಪ್ಪ ನಾವಿ ಹಾಗೂ ಉಳಿದ ಆರೋಪಿಗಳು ಸೇರಿ 2020-21ನೇ ಸಾಲಿನಿಂದ 2025-26ವರೆಗಿನ ಕಬ್ಬು ಹಂಗಾಮಿನಲ್ಲಿ ರೈತರು ಕಾರ್ಖಾನೆಗೆ ತಂದ ಕಬ್ಬಿನ ತೂಕದಲ್ಲಿ ಮೋಸ ಮಾಡಿ ಬೋಗಸ್ ರಸೀದಿ ತಯಾರಿಸಿ ಬಳಿಕ ತಮಗೆ ಬೇಕಾದವರ ಹೆಸರಿನ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾಯಿಸಿ ದುರುಪಯೋಗ ಮಾಡಿಕೊಂಡಿದ್ದು ತನಿಖೆಯಿಂದ ಬಯಲಾಗಿದೆ,'' ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

''ಕಾರ್ಖಾನೆಯ ತೂಕ ಮಾಪನ ಕೇಂದ್ರದ ದಾಖಲೆ ಪರಿಶೀಲಿಸಿ, ಅವುಗಳ ಆಧಾರದ ಮೇಲೆ ಪ್ರಮುಖ ಆರೋಪಿ ಧರೆಪ್ಪ ದುಂಡಪ್ಪ ನಾವಿಯನ್ನು ವಿಚಾರಣೆಗೆ ಒಳಪಡಿಸಲಾಗಿತ್ತು. ನಾವಿ ಹಾಗೂ ಇತರ 7 ಆರೋಪಿಗಳು ಈ ಮೊದಲು ಬೆಳಗಾವಿ ಹಾಗೂ ಬಾಗಲಕೋಟೆ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳಲ್ಲಿ ವಂಚನೆ ಮಾಡಿದ ಬಗ್ಗೆ ಪ್ರಕರಣಗಳು ದಾಖಲಾಗಿದ್ದವು. ಅದರಂತೆ ಇಲ್ಲಿಯೂ ದುರುಪಯೋಗ ಮಾಡಿದ್ದಾರೆ,'' ಎಂದು ಎಸ್ಪಿ ವಿವರಿಸಿದರು.

ಕಾಮರ್ಸ್ ವಿದ್ಯಾರ್ಥಿಗಳೇ, ಜಾಬ್‌ಗೆ ಡಿಗ್ರಿ ಸಾಕಾಗದು!

ನಮ್ಮ ಕೈತಪ್ಪುತ್ತಾ ಬೆಸ್ಕಾಂ? ಖಾಸಗೀಕರಣದ ಭೀತಿ ಏಕೆ?

ಈ ವಾರದ ಸಂಚಿಕೆಯಲ್ಲಿ ತಪ್ಪದೆ ಓದಿ!

ವಿಕ ಮನಿ

ಅಲ್ಪಾವಧಿಯಲ್ಲಿಯೇ ಜನಮೆಚ್ಚಿದ ಕನ್ನಡದ ಮೊದಲ ಹಣಕಾಸು ವಾರಪತ್ರಿಕೆ

ಪತ್ರಿಕೆಗಾಗಿ ಸಂಪರ್ಕಿಸಿ

72594 58080

ಮತಾಂತರ ವಿರೋಧಿಸಿ ಕುಶಾಲನಗರ ಬಂದ್

ಕುಶಾಲನಗರದಲ್ಲಿ ಹಿಂದೂ ಸುರಕ್ಷಾ ಸಮಿತಿ ವತಿಯಿಂದ ಮಂಗಳವಾರ ಬೃಹತ್ ಜನಾಂದೋಲನ ಜಾಗೃತಿ ಜಾಥಾ ನಡೆಯಿತು.

■ **ವಿಕ ಸುದ್ದಿಲೋಕ** ಕುಶಾಲನಗರ (ಕೊಡಗು)

ಹಿಂದೂ ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಬಲವಂತದ ಮತಾಂತರ ಖಂಡಿಸಿ ಕುಶಾಲನಗರದಲ್ಲಿ ಹಿಂದೂ ಸುರಕ್ಷಾ ಸಮಿತಿ ವತಿಯಿಂದ ಬೃಹತ್ ಜನಾಂದೋಲನ ಜಾಗೃತಿ ಜಾಥಾ ನಡೆಯಿತು. ಕೊಡಗಿನ ನಾನಾ ಭಾಗಗಳಿಂದ ಆಗಮಿಸಿದ್ದ ಸಾವಿರಾರು ಜನರು ಮಾಜಿ ಶಾಸಕರಾದ ಅಪ್ಪಚ್ಚುರಂಜನ್, ಕೆ.ಜಿ.ಬೋಪಯ್ಯ ಜಾಥಾದಲ್ಲಿ ಭಾಗವಹಿಸಿದ್ದರು. ಪಟ್ಟಣದ ವರ್ತಕರು ಸ್ವಯಂ ಪ್ರೇರಣೆಯಿಂದ ಮಧ್ಯಾಹ್ನದವರೆಗೆ ಅಂಗಡಿಗಳನ್ನು ಸಂಪೂರ್ಣ ಬಂದ್ ಮಾಡಿ ಬೆಂಬಲ ಸೂಚಿಸಿದ್ದರು.

ಹಿಂದೂ ಜಾಗರಣ ವೇದಿಕೆ ದಕ್ಷಿಣ ಕರ್ನಾಟಕ ಪ್ರಾಂತ ಸಹ ಸಂಚಾಲಕ ಸತೀಶ್ ದಾವಣಗೆರೆ, ಹಿಂದೂ ಸುರಕ್ಷಾ ಸಮಿತಿ ಸಂಚಾಲಕ ಬಿ.ಅಮೃತ ರಾಜ್ ಮಾತನಾಡಿ, ''ಮತಾಂತರ ಪ್ರಕರಣ ಕೊಡಗಿಗೂ ಕಾಲಿಟ್ಟಿದೆ. ಕುಶಾಲನಗರದ ಕಾಲೇಜುಗಳಲ್ಲೂ ಇದು ಸದ್ದಿಲ್ಲದೆ ನಡೆಯುತ್ತಿದೆ. ಇದರ ವಿರುದ್ಧ ಹೋರಾಟ ಮುಂದುವರಿಸಿ ಸಮಾಜದಲ್ಲಿ ಜಾಗೃತಿ ಮೂಡಿಸಲಾಗುತ್ತದೆ,'' ಎಂದರು.

ಕೃಷಿಕ ಸಮಾಜದ ಅಧ್ಯಕ್ಷ ಬಸನಗೌಡ ಆತ್ಮಹತ್ಯೆ

ಶಹಾಪುರ(ಯಾದಗಿರಿ): ಪಟ್ಟಣದ ಮಾತೋಶ್ರೀ ಹೇಮರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರ ಬ್ಯಾಂಕ್ ಅಧ್ಯಕ್ಷ ಹಾಗೂ ರಾಜ್ಯ ಕೃಷಿಕ ಸಮಾಜದ ಅಧ್ಯಕ್ಷ ಬಸನಗೌಡ ವೆಂಕಟರೆಡ್ಡಿ ಮಾಲಿಪಾಟೀಲ್ ಮರಕಲ್ (64) ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸಹಕಾರ ಬ್ಯಾಂಕ್‌ನಲ್ಲಿ ನಡೆದ ಹಣ ದುರ್ಬಳಕೆ ಪ್ರಕರಣದಿಂದ ನೊಂದು ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.

ಹಣ ದುರ್ಬಳಕೆ ಪ್ರಕರಣದ ಆರೋಪ

ಮಾತೋಶ್ರೀ ಹೇಮ ರೆಡ್ಡಿ ಮಲ್ಲಮ್ಮ ಸೌಹಾರ್ದ ಸಹಕಾರ ಬ್ಯಾಂಕ್‌ನಲ್ಲಿ ನಡೆದಿರುವ ಹಣ ದುರ್ಬಳಕೆ ಪ್ರಕರಣದಲ್ಲಿ ಬಸನಗೌಡ ವಿರುದ್ಧ ಆರೋಪ ಕೇಳಿ ಬಂದಿದ್ದರಿಂದ ಅವರು ಗಿ ಕೆಲ ದಿನಗಳಿಂದ ತಲೆಮರೆಸಿಕೊಂಡಿದ್ದರು. ನಗರದ ಗಣೇಶ ನಗರದಲ್ಲಿನ ತಮ್ಮ ಸ್ವಂತ ನಿವಾಸದಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸಹಕಾರ ಬ್ಯಾಂಕ್‌ನಲ್ಲಿ ಠೇವಣಿ ಇರಿಸಿದ್ದವರು 10 ಕೋಟಿ ರೂ. ವಾಪಸ್ ಮಾಡುವಂತೆ ಅನಿರ್ದಿಷ್ಟಾವಧಿ ಧರಣಿ ನಡೆಸಿದ್ದರು. ಈ ಸಂಬಂಧ ನಗರದ ಪ್ರಭಾಪಿ ನಾಯಕರ ಸಮ್ಮುಖದಲ್ಲಿ ನ್ಯಾಯ ಪಂಚಾಯಿತಿ ನಡೆದಿತ್ತು. ತಮ್ಮನ್ನು ಹೊಣೆ ಮಾಡಲಾಗಿದೆ ಎಂದು ಬಸನಗೌಡ ಅವರು ಕೆಲ ದಿನಗಳ ಹಿಂದೆ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಪೋಸ್ಟ್ ಮಾಡಿದ್ದರು.

ಬಂಟ್ವಾಳದಲ್ಲಿ ಕಾರು ಪತ್ತೆ

ಕೇರಳದ ಚಿನ್ನದ ವ್ಯಾಪಾರಿ ದರೋಡೆ ಪ್ರಕರಣ

■ **ವಿಕ ಸುದ್ದಿಲೋಕ** ಮಂಗಳೂರು

ಮಹಾರಾಷ್ಟ್ರದ ಸಾಂಗ್ಲಿಯಿಂದ ಕುಟುಂಬದ ಜತೆ ಕಾರಿನಲ್ಲಿ ಕೇರಳದ ಪಯ್ಯನ್ನೂರಿಗೆ ತೆರಳುತ್ತಿದ್ದ ಚಿನ್ನದ ವ್ಯಾಪಾರಿ ವಿಕಾಸ್ ಅವರನ್ನು ದರೋಡೆ ಮಾಡಿ, ಅಪಹರಿಸಿದ್ದ ಕಾರು ಬಂಟ್ವಾಳದಲ್ಲಿ ಪತ್ತೆಯಾಗಿದೆ. ಚಿನ್ನಾಭರಣಕ್ಕಾಗಿ ದರೋಡೆಕೋರರು ಇಡೀ ಕಾರನ್ನು ಜಾಲಾಡಿದ್ದಾರೆ. ಆದರೆ ಏನೂ ಸಿಕ್ಕಿಲ್ಲ.

ಮಂಗಳೂರು ಬಳಿಯ ಬೈಕಂಪಾಡಿಯಲ್ಲಿ ಭಾನುವಾರ ತಡರಾತ್ರಿ ಮೂರು ಕಾರುಗಳಲ್ಲಿ ಬಂದ 7 ಜನರಿದ್ದ ದರೋಡೆಕೋರರ ತಂಡ ವಿಕಾಸ್ ಕಾರನ್ನು ಅಡ್ಡಗಟ್ಟಿ, ಅವರ ಮೇಲೆ ಹಲ್ಲೆ ನಡೆಸಿತು. ಅವರ ಪತ್ನಿ ಮತ್ತು ಮಗ ಕಾರಿನಲ್ಲಿದ್ದಾಗಲೇ ಕಾರನ್ನು ಅಪಹರಿಸಿ, ಕೂಳೂರಿನತ್ತ ಕೊಂಡೊಯ್ದು ಸುಮಾರು 150 ಗ್ರಾಂ ಚಿನ್ನಾಭರಣ ಮತ್ತು ನಗದನ್ನು ಲೂಟಿ ಮಾಡಿತ್ತು. ಬಳಿಕ ಮಹಿಳೆ ಮತ್ತು ಮಗನನ್ನು ಕೂಳೂರಿನಲ್ಲಿ ಇಳಿಸಿ ಕಾರು ಸಮೇತ ಪರಾರಿಯಾಗಿತ್ತು.

ಅಪಹರಿಸಿದ ಕಾರಿನಲ್ಲಿ ವಿಕಾಸ್ ಎರಡು ಮೊಬೈಲ್ ಮತ್ತು ಅವರ ಪತ್ನಿಯ ಒಂದು ಮೊಬೈಲ್ ಇತ್ತು. ಮೊಬೈಲ್ ಲೊಕೇಷನ್ ಮರೋಳಿ ಕಡೆ ಪತ್ತೆಯಾಗಿದ್ದು, ಇದರಿಂದ ಆರೋಪಿಗಳು ಬಂಟ್ವಾಳ ಕಡೆಗೆ ತೆರಳಿರುವ ಅನುಮಾನ ವ್ಯಕ್ತವಾಗಿತ್ತು. ಈ ಜಾಡು ಹಿಡಿದ ಪೊಲೀಸರಿಗೆ ದರೋಡೆಕೋರರು ಬಿಕರ್ನಕಟ್ಟೆ, ಮರೋಳಿ ಮೂಲಕ ಬಂಟ್ವಾಳ ಕಡೆಗೆ ತೆರಳಿದ್ದು ಗೊತ್ತಾಯಿತು.

ಅನುಮಾನಾಸ್ಪದ ಕಾರು

ಮುಕ್ಕ ಹೆದ್ದಾರಿಯಲ್ಲಿ ಭಾನುವಾರ ರಾತ್ರಿ ನಿಂತಿದ್ದ ಕಾರಿನಲ್ಲಿ ನಾಲ್ವರು ಬೌನ್ಸರ್ ರೀತಿಯ ದಢೂತಿಗಳು ಇದ್ದದನ್ನು ಬೀಟ್ ಪೊಲೀಸರು ಗಮನಿಸಿ ವಿಚಾರಿಸಿದಾಗ, ಮಂಗಳೂರಿಗೆ ಹೋಗಬೇಕು ಎಂದು ಅವರು ಹೇಳಿದ್ದರು. ಒಬ್ಬಾತನ ಪ್ಯಾನ್‌ಕಾರ್ಡ್ ಫೋಟೊ ಮತ್ತು ಆ ವಾಹನದ ಫೋಟೊವನ್ನು ಪೊಲೀಸರು ತೆಗೆದುಕೊಂಡಿದ್ದಾರೆ. ಈ ಬಗ್ಗೆಯೂ ತನಿಖೆ ಮುಂದುವರಿದಿದೆ. ಎರಡು ತಂಡಗಳು ಹೊರ ರಾಜ್ಯಕ್ಕೆ ತೆರಳಿ ತನಿಖೆ ನಡೆಸುತ್ತಿವೆ ಎಂದು ಹಿರಿಯ ಅಧಿಕಾರಿಗಳು ಹೇಳಿದ್ದಾರೆ.

ಬೀದಿಗೆ ಬಂದ ನೀರುನಾಯಿಗಳು

ಹೊಸಪೇಟೆ (ವಿಜಯನಗರ): ತುಂಗಭದ್ರಾ ಜಲಾಶಯದಲ್ಲಿ ನೀರಿನ ಮಟ್ಟ ಗಣನೀಯ ಕುಸಿದಿರುವುದರಿಂದ ನೀರುನಾಯಿಗಳ ನೆಲೆಗೂ ಗಂಡಾಂತರ ಎದುರಾಗಿದೆ.

ಸಂರಕ್ಷಿತ ಪ್ರದೇಶದಲ್ಲೇ ನೀರಿನ ನೆಲೆ ಸಿಗದೇ ಆಹಾರ ಮತ್ತು ನೀರಿನ ಹುಡುಕಾಟದಲ್ಲಿ ಈ ಅಪರೂಪದ ಪ್ರಾಣಿಗಳು ವಲಸೆ ಹೋಗುತ್ತಿವೆ, ಜನನಿಬಿಡ ಪ್ರದೇಶಗಳತ್ತ ಮುಖಮಾಡಿವೆ.

ಇತ್ತೀಚೆಗೆ ನಗರದ ದೋಬಿ ಘಾಟ್ ಕಾಲುವೆ ಬಳಿ ಮೂರು ನೀರುನಾಯಿಗಳು ಪ್ರತ್ಯಕ್ಷವಾಗಿದ್ದವು. ಕಾಲುವೆಯ ನೀರಿನ ಜಾಡನ್ನು ಹಿಡಿದು ಇವುಗಳು ಬಂದಿದ್ದವು.

ನೇಹಾ ಕೊಲೆ ಆರೋಪಿಗೆ ಜಾಮೀನು ನಿರಾಕರಣೆ

ಧಾರವಾಡ: ಹುಬ್ಬಳ್ಳಿಯ ನೇಹಾ ಹಿರೇಮಠ ಕೊಲೆ ಪ್ರಕರಣದ ಆರೋಪಿ ಫಯಾಜ್ ಜಾಮೀನು ಅರ್ಜಿಯನ್ನು ಹೈಕೋರ್ಟ್‌ನ ಧಾರವಾಡ ಪೀಠ ಮಂಗಳವಾರ ತಿರಸ್ಕರಿಸಿದೆ.

ಹುಬ್ಬಳ್ಳಿ ಸಿವಿಲ್ ನ್ಯಾಯಾಲಯದಲ್ಲಿ ಎರಡು ಬಾರಿ ಜಾಮೀನು ಅರ್ಜಿ ತಿರಸ್ಕೃತಗೊಂಡಿತ್ತು. ಹೀಗಾಗಿ ಆರೋಪಿ ಫಯಾಜ್ ಹೈಕೋರ್ಟ್ ಮೆಟ್ಟಿಲೇರಿದ್ದ. ಎರಡು ಬಾರಿ ಉಚ್ಚನ್ಯಾಯಾಲಯದಲ್ಲಿ ಅರ್ಜಿ ಹಿಂಪಡೆದಿದ್ದರೂ ಮೂರನೇ ಬಾರಿ ಸಲ್ಲಿಕೆಯಾದ ಅರ್ಜಿ ಸಲ್ಲಿಸಿದ್ದ. ಇದರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅನಂತರಾಮನಾಥ ಹೆಗಡೆ ಅವರಿದ್ದ ಪೀಠ, ಜಾಮೀನು ನೀಡಲು ನಿರಾಕರಿಸಿದೆ. ಹೀಗಾಗಿ ಆರೋಪಿ ಸುಪ್ರೀಂಕೋರ್ಟ್ ಮೆಟ್ಟಿಲೇರುವ ಸಾಧ್ಯತೆಗಳಿವೆ. 2024 ಏಪ್ರಿಲ್ 18ರಂದು ಕಾಲೇಜು ಕ್ಯಾಂಪಸ್‌ನಲ್ಲಿ ನೇಹಾ ಹಿರೇಮಠರನ್ನು ಆರೋಪಿ ಫಯಾಜ್ ಚಾಕುವಿನಿಂದ ಇರಿದು ಹತ್ಯೆ ಮಾಡಿದ್ದ. ಈ ಕುರಿತು ವಿದ್ಯಾನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾಸ್ಪತ್ರೆಯಲ್ಲಿ ಬೆಂಕಿ

ದಾವಣಗೆರೆ: ನಗರದ ಚಿಗಟೇರಿ ಜಿಲ್ಲಾಸ್ಪತ್ರೆಯ ಎರಡನೇ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಮಂಗಳವಾರ ಬೆಳಗ್ಗೆ ಶಾರ್ಟ್ ಸರ್ಕಿಟ್ ನಿಂದ ಅಗ್ನಿ ಅವಘಡ ಸಂಭವಿಸಿ ಸುಮಾರು 80 ಲಕ್ಷ ರೂ. ಮೌಲ್ಯದ ವೈದ್ಯಕೀಯ ಉಪಕರಣಗಳು ಬೆಂಕಿಗಾಹುತಿಯಾಗಿವೆ. ಈ ವೇಳೆ ಸ್ಥಳದಲ್ಲಿದ್ದ ಆಮ್ಲಜನಕ ಮತ್ತು ನೈಟ್ರೋಜನ್ ಸಿಲಿಂಡರ್‌ಗಳಿಂದ ಅನಿಲ ಸೋರಿಕೆಯಾಗಿ ದಟ್ಟ ಹೊಗೆ ಆವರಿಸಿದ್ದರಿಂದ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಜಿಲ್ಲಾಸ್ಪತ್ರೆಯ ಎರಡನೇ ಮಹಡಿಯಲ್ಲಿರುವ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಮಂಗಳವಾರ ಐವರಿಗೆ ಶಸ್ತ್ರಚಿಕಿತ್ಸೆ ಮಾಡಬೇಕಿತ್ತು. ಮೊದಲನೆಯ ಶಸ್ತ್ರಚಿಕಿತ್ಸೆಗಾಗಿ 6ನೇ ಶಸ್ತ್ರಚಿಕಿತ್ಸೆ ಕೊಠಡಿ ಸಿದ್ಧಪಡಿಸಿಕೊಳ್ಳುವಾಗ ಅನಸ್ತೇಷಿಯಾ ವರ್ಕ್ ಸ್ಟೇಷನ್‌ನಲ್ಲಿ ಶಾರ್ಟ್ ಸರ್ಕಿಟ್ ಆಗಿ ಬೆಂಕಿ ಹೊತ್ತಿಕೊಂಡಿತು. ಈ ವೇಳೆ ಆಮ್ಲಜನಕದ ಸಿಲಿಂಡರ್ ಹಾಗೂ ನೈಟ್ರೋಜನ್ ಸಿಲಿಂಡರ್‌ಗಳ ಮುಚ್ಚುಳಗಳು ಕರಗಿ ರಾಸಾಯನಿಕಗಳು ಸೋರಿಕೆಯಾಗಿ ಬೆಂಕಿಯೊಂದಿಗೆ ಬೆರೆತು ದಟ್ಟ ಹೊಗೆ ಆವರಿಸಿತು. 5ನೇ ಶಸ್ತ್ರಚಿಕಿತ್ಸೆ ಕೊಠಡಿಗೂ ಬೆಂಕಿ ವ್ಯಾಪಿಸಿತು. ಇನ್ನೂ ಶಸ್ತ್ರಚಿಕಿತ್ಸೆ ಕಾರ್ಯ ಆರಂಭವಾಗಿರದ ಕಾರಣ ಯಾರಿಗೂ ಅಪಾಯ ಉಂಟಾಗಿಲ್ಲ, ಗಾಯಗಳಾಗಿಲ್ಲ. ಅಗ್ನಿಶಾಮಕ ದಳ ಬೆಂಕಿ ನಂದಿಸಿತು.

ತನಿಖೆಗೆ ಆದೇಶ: ಚಿಗಟೇರಿ ಜಿಲ್ಲಾ ಆಸ್ಪತ್ರೆಯ ಆಕ್ಸಿಜನ್ ಸಿಲಿಂಡರ್ ಸ್ಫೋಟ ಘಟನೆ ಕುರಿತು ತನಿಖೆಗೆ ಆದೇಶಿಸಲಾಗಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ಹೇಳಿದ್ದಾರೆ. ತನಿಖೆಗೆ ಉನ್ನತ ಅಧಿಕಾರಿಗಳ ತಂಡ ರಚಿಸಲಾಗಿದೆ. ಸ್ಥಳೀಯ ಮಟ್ಟದಲ್ಲೂ ಜಿಲ್ಲಾಧಿಕಾರಿ ನೇತೃತ್ವದಲ್ಲಿ ಪ್ರತ್ಯೇಕ ತನಿಖೆ ನಡೆಯಲಿದ್ದು, ಈ ಎರಡೂ ವರದಿಗಳನ್ನು ಪರಿಶೀಲಿಸಿ ಕ್ರಮ ವಹಿಸಲಾಗುವುದು ಎಂದು ತಿಳಿಸಿದ್ದಾರೆ.

ಟಿವಿಎಸ್‌ನಿಂದ ಹೊಸ ಎನ್‌ಟಾರ್ಕ್ ಸರಣಿ ಬಿಡುಗಡೆ

ಬೆಂಗಳೂರು: ಟಿವಿಎಸ್ ವೇಣು ಸಮೂಹದ ಪ್ರಮುಖ ಅಂಗಸಂಸ್ಥೆಯಾಗಿರುವ ಟಿವಿಎಸ್ ಮೋಟಾರ್ ಕಂಪನಿ ಜಾಗತಿಕ ಮಟ್ಟದಲ್ಲಿ ದ್ವಿಚಕ್ರ ಮತ್ತು ತ್ರಿಚಕ್ರ ವಾಹನ ತಯಾರಿಕೆಯಲ್ಲಿ ಮುಂಚೂಣಿಯಲ್ಲಿದೆ. ಈಗ ಈ ಕಂಪನಿಯು 'ಟಿವಿಎಸ್ ಎನ್‌ಟಾರ್ಕ್ 125' ಡಿಸ್ಕ್ ಮತ್ತು ರೇಸ್ ಎಡಿಷನ್ ಆವೃತ್ತಿಗಳಲ್ಲಿ ಹೊಚ್ಚ ಹೊಸ ಬಣ್ಣ ಹಾಗೂ ಗ್ರಾಫಿಕ್ಸ್ ವಿನ್ಯಾಸಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ.

ಇದು ಡ್ರಿಫ್ಟ್ ಬ್ಲೂ, ಇನ್ಫೆರ್ನೊ ರೆಡ್, ಮತ್ತು ರಶ್ ಗ್ರೀನ್ ಬಣ್ಣಗಳಲ್ಲಿ ಲಭ್ಯ. ಇದರ ಸ್ಪೋರ್ಟಿ ಲುಕ್ ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯುತ್ತದೆ. ಇದೇ ವೇಳೆ, ಟಿವಿಎಸ್ ಎನ್‌ಟಾರ್ಕ್ 125 ಡಿಸ್ಕ್ ಆವೃತ್ತಿಯ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಲು ಮಿಡ್‌ನೈಟ್ ಬ್ಲ್ಯಾಕ್ ಮತ್ತು ಸ್ಟಿಟಿ ವೈಟ್ ಎಂಬ ಎರಡು ಹೊಸ ಬಣ್ಣಗಳನ್ನು ಪರಿಚಯಿಸಲಾಗಿದೆ. ದೇಶದ ನಂ.1 ಸ್ಪೋರ್ಟಿ ಸ್ಕೂಟರ್ ಎಂದೇ ಖ್ಯಾತಿ ಪಡೆದಿರುವ ಟಿವಿಎಸ್ ಎನ್‌ಟಾರ್ಕ್, ಬಿಡುಗಡೆಯಾದ ದಿನದಿಂದಲೂ ತನ್ನ ಆಕರ್ಷಕ ವಿನ್ಯಾಸ ಮತ್ತು ಬಲದಿಂದ ಗ್ರಾಹಕರನ್ನು ಸೆಳೆಯುತ್ತಿದೆ. ಟಿವಿಎಸ್ ಎನ್‌ಟಾರ್ಕ್ 125 ಡಿಸ್ಕ್ ಆವೃತ್ತಿಯ ಆರಂಭಿಕ ಬೆಲೆ 82,500 ರೂ. ಹಾಗೂ ರೇಸ್ ಎಡಿಷನ್ ಆವೃತ್ತಿಯ ಬೆಲೆ 87,950 ರೂ. (ದಿಲ್ಲಿ ಎಕ್ಸ್ ಶೋ ರೂಂ) ಇರಲಿದೆ. ಇದು ದೇಶಾದ್ಯಂತ ಲಭ್ಯವಿದೆ ಎಂದು ಟಿವಿಎಸ್ ಮೋಟಾರ್ಸ್ ಕಂಪನಿ ಪ್ರಕಟಣೆ ತಿಳಿಸಿದೆ.

ಹೈಕೋರ್ಟ್ ಮೆಟ್ಟಿಲೇರಿದ ಬಿಡದಿ ಟೌನ್‌ಶಿಪ್ ವಿವಾದ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ನಗರದ ಹೊರವಲಯದ ಬಿಡದಿಯಲ್ಲಿ 'ಗ್ರೇಟರ್ ಬೆಂಗಳೂರು ಇಂಟಿಗ್ರೇಟೆಡ್ ಟೌನ್‌ಶಿಪ್' ಯೋಜನೆಗಾಗಿ ಸುಮಾರು 516 ಎಕರೆ ಫಲವತ್ತಾದ ಕೃಷಿ ಭೂಮಿ ವಶಪಡಿಸಿಕೊಳ್ಳುವುದಕ್ಕೆ ಮುಂದಾಗಿರುವ ಸರಕಾರದ ಕ್ರಮವನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.

ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಕಂಪ್ಲಾಪುರ ಗ್ರಾಮದ ಸಾಮಾಜಿಕ ಕಾರ್ಯಕರ್ತ ರಾಜೇಶ್ ಕಂಪ್ಲಾಪುರ ಬಸವಣ್ಣ ಸಲ್ಲಿಸಿದ್ದ ಅರ್ಜಿಯು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ಪೀಠದ ಮುಂದೆ ಇನ್ನೂ ವಿಚಾರಣೆಗೆ ನಿಗದಿಯಾಗಬೇಕಾಗಿದೆ.

''ಕೇಂದ್ರ ಸರಕಾರದ 2013ರ ಭೂಸ್ವಾಧೀನ ಕಾಯಿದೆಯ ಪ್ರಕಾರ ಯಾವುದೇ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಮುನ್ನ ಸಾಮಾಜಿಕ ಪರಿಣಾಮಗಳ ಮೌಲ್ಯಮಾಪನ ಮಾಡುವುದು ಕಡ್ಡಾಯ. ಆದರೆ, ರಾಜ್ಯ ಸರಕಾರವು ಕೇವಲ 26 ಕೋಟಿ ರೂ. ವೆಚ್ಚದ ಮಾಸ್ಟರ್ ಪ್ಲಾನ್ ಕನ್ಸಲ್ಟೆಂಟ್ ನೇಮಕಾತಿ ಟೆಂಡರ್ ಪ್ರಕ್ರಿಯೆ ಅತಿವೇಗವಾಗಿ ಮುಗಿಸಲು ಮುಂದಾಗಿದ್ದು, ಯಾವುದೇ ಕಡ್ಡಾಯ ನಿಯಮಗಳನ್ನು ಪಾಲಿಸಿಲ್ಲ'' ಎಂದು ಅರ್ಜಿಯಲ್ಲಿ ದೂರಲಾಗಿದೆ.

''ಅಲ್ಲದೆ, ರಾಜ್ಯ ಸಚಿವ ಸಂಪುಟ 2026ರ ಫೆಬ್ರವರಿಯಲ್ಲಿ ರಾಜ್ಯದಲ್ಲಿನ ಪ್ರಾದೇಶಿಕ ಅಸಮತೋಲನ ನಿವಾರಿಸಲು ರಚಿಸಲಾಗಿದ್ದ ಪ್ರೊ.ಎಂ.ಗೋವಿಂದರಾವ್ ಸಮಿತಿಯ ವರದಿ ಅಂಗೀಕರಿಸಿತ್ತು. ಈ ವರದಿಯ ಪ್ರಕಾರ, ಮುಂದಿನ ಎಲ್ಲಾ ಪ್ರಮುಖ ಅಭಿವೃದ್ಧಿ ಯೋಜನೆಗಳನ್ನು ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ ಹಿಂದುಳಿದ ಜಿಲ್ಲೆಗಳಿಗೆ ಕೊಂಡೊಯ್ಯಬೇಕಿದೆ. ಆದರೆ, ಆ ವರದಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವ ಸರಕಾರ, ಬೆಂಗಳೂರಿನ ಸುತ್ತಮುತ್ತಲೇ 12,500 ಕೋಟಿಗೂ ಅಧಿಕ ಹಣವನ್ನು ಸುರಿಯಲು ಮುಂದಾಗಿದ್ದು, ವರದಿಯ ಶಿಫಾರಸುಗಳನ್ನು ಉಲ್ಲಂಘಿಸಿದೆ,'' ಎಂದು ದೂರಲಾಗಿದೆ.

''ಬೆಂಗಳೂರು ಮಹಾನಗರ ಈಗಾಗಲೇ ಸಾಕಷ್ಟು ಬೆಳೆದಿದೆ. ಇಂತಹ ಸಂದರ್ಭದಲ್ಲಿ ನೀರಿನ ಬಿಕ್ಕಟ್ಟು ಮತ್ತು ಪರಿಸರ ಮಾಲಿನ್ಯ ಎದುರಿಸುವಂತಾಗಿದೆ. ಈಗ ನಗರಕ್ಕೆ ಹೊರ ವಲಯದಲ್ಲಿ ಮತ್ತೊಂದು ಬೃಹತ್ ಕಾಂಕ್ರೀಟ್ ನಗರ ನಿರ್ಮಿಸಿದರೆ ಪರಿಸರ ಮತ್ತು ಅಂತರ್ಜಲ ವ್ಯವಸ್ಥೆ ಸಂಪೂರ್ಣ ನಾಶವಾಗಲಿದೆ. ಆದ್ದರಿಂದ ಬಿಡದಿ ಬಳಿ 516 ಎಕರೆ ಜಮೀನು ಭೂ ಸ್ವಾಧೀನಪಡಿಸಿಕೊಳ್ಳುವ ಸಂಬಂಧ 2026ರ ಜೂ.13ರಂದು ಹೊರಡಿಸಿರುವ ಅಂತಿಮ ಅಧಿಸೂಚನೆ ರದ್ದುಪಡಿಸಬೇಕು. ಕೃಷಿ ಭೂಮಿ ನಾಶಪಡಿಸುವ ಬದಲು, ಉತ್ತರ ಕರ್ನಾಟಕದ ಬರಪೀಡಿತ ಅಥವಾ ಕೈಗಾರಿಕಾ ಭೂ ಬ್ಯಾಂಕ್ ಗಳಿರುವ ಹಿಂದುಳಿದ ಪ್ರದೇಶಗಳಿಗೆ ಆ ಯೋಜನೆಯನ್ನು ಸ್ಥಳಾಂತರಿಸಲು ತಜ್ಞರ ಸಮಿತಿ ರಚಿಸಬೇಕು. ಅಲ್ಲಿಯವರೆಗೆ ಈ ಯೋಜನೆಗೆ ಸಂಬಂಧಿಸಿದ ಎಲ್ಲಾ ಭೂಸ್ವಾಧೀನ ಮತ್ತು ಟೆಂಡರ್ ಪ್ರಕ್ರಿಯೆಗಳಿಗೆ ತಕ್ಷಣ ತಡೆಯಾಜ್ಞೆ ನೀಡಬೇಕು,'' ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಶಂಕಿತ ನಕ್ಸಲ್ ಕೃಷ್ಣಮೂರ್ತಿ, ಲತಾ ನಿರ್ದೋಷಿ

ಕುಂದಾಪುರ (ಉಡುಪಿ): ತಾಲೂಕಿನ ಹಳ್ಳಿಹೊಳೆ ಗ್ರಾಮದ ಕೋಟುಗುಳಿ ಎಂಬಲ್ಲಿ 21 ವರ್ಷ ಹಿಂದೆ ಕೃಷಿಕರೊಬ್ಬರಿಗೆ ಜೀವ ಬೆದರಿಕೆಯೊಡ್ಡಿದ ಪ್ರಕರಣದ ಆರೋಪಿಗಳಾಗಿದ್ದ ಶರಣಾಗತರಾದ ಶಂಕಿತ ನಕ್ಸಲ್ ಬಿ.ಜಿ.ಕೃಷ್ಣಮೂರ್ತಿ ಮತ್ತು ಮುಂಡಗಾರು ಲತಾ ಅವರನ್ನು ಕುಂದಾಪುರ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ನಿರ್ದೋಷಿ ಎಂದು ಘೋಷಿಸಿದೆ.

2005ರಲ್ಲಿ ಮಹಿಳೆ ಮತ್ತು 7 ಪುರುಷರಿದ್ದ ತಂಡ ಆಗಮಿಸಿ ಕೆಲಸಗಾರರಿಗೆ ನೀಡುವ ಸಂಬಳದ ವಿಚಾರದಲ್ಲಿ ತಗಾದೆ ತೆಗೆದು ಬಂದೂಕು ತೋರಿಸಿ ಜೀವ ಬೆದರಿಕೆಯೊಡ್ಡಿದ್ದರು ಎಂದು ಕೃಷಿಕ ಗುರುದತ್ತ ಚಾತ್ರ ದೂರಿನ ಅನ್ವಯ ಶಂಕರನಾರಾಯಣ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಆರೋಪ ಸಾಬೀತು ಪಡಿಸುವಲ್ಲಿ ಸಾಕ್ಷ್ಯಾಧಾರಗಳು ವಿಫಲವಾಗಿದೆ ಎಂದು ಅಭಿಪ್ರಾಯಪಟ್ಟು ಆಪಾದಿತರನ್ನು ದೋಷಮುಕ್ತಿಗೊಳಿಸಿದೆ.

ನಾಡಬಾಂಬ್ ಸ್ಫೋಟ ಕೇಸ್: ಅಂಕೋಲಾದಲ್ಲಿ ಮೂವರು ವಶಕ್ಕೆ

■ **ವಿಕ ಸುದ್ದಿಲೋಕ** ಕಾರವಾರ

ಪ್ರೇಯಸಿಯನ್ನು ಕರೆತರುವ ವೇಳೆ ತುಮಕೂರು ಸಮೀಪ ಕಾರಿನಲ್ಲಿ ನಾಡಬಾಂಬ್ ಸ್ಫೋಟಿಸಿಕೊಂಡು ಯುವಕ ಮೃತಪಟ್ಟ ಪ್ರಕರಣಕ್ಕೆ ಸಂಬಧಿಸಿದಂತೆ ನಾಡಬಾಂಬ್ ನೀಡಿದ ಆರೋಪದ ಮೇಲೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಹೊನ್ನಳ್ಳಿಯ ನಾರಾಯಣ ಗೌಡ, ನಾಗರಾಜ ಗೌಡ ಹಾಗೂ ಸಿರಗುಂಜಿಯ ಸಂದೀಪ ಗೌಡ ಬಂಧಿತ ಆರೋಪಿಗಳು. ನಾರಾಯಣ ಮತ್ತು ನಾಗರಾಜ ಮೃತ ನಾಗೇಂದ್ರ ಗೌಡ ಅವರ ಸಂಬಂಧಿ ಆಗಿದ್ದಾರೆ. ನಾಗೇಂದ್ರ ಕಾರಿನೊಂದಿಗೆ ಸ್ಫೋಟ ಮಾಡಿಕೊಂಡ ಘಟನೆ ನಂತರ ಆರೋಪಿಗಳು ಮೂರು ನಾಡ ಬಾಂಬ್ ಅನ್ನು ಅರಣ್ಯದಲ್ಲಿ ಅಡಗಿಸಿಟ್ಟಿದ್ದರು. ಪೊಲೀಸರು ಅದನ್ನು ವಶಪಡಿಸಿಕೊಂಡಿದ್ದಾರೆ. ಸಂದೀಪ ಗೌಡ ತಮಗೆ ನಾಡಬಾಂಬ್ ಪೂರೈಸಿದ್ದಾಗಿ ಆರೋಪಿಗಳು ಹೇಳಿದ್ದಾರೆ. ಅಂಕೋಲಾ ತಾಲೂಕಿನ ಹೆಬ್ಬುಳ ಗ್ರಾಮದ ನಾಗೇಂದ್ರ ಗೌಡ ಜೂನ್ 27ರಂದು ಪ್ರೇಯಸಿಯನ್ನು ತನ್ನ ಊರಿಗೆ ಬಲವಂತವಾಗಿ ಕರೆದೊಯ್ಯುತ್ತಿದ್ದ. ಈ ವೇಳೆ ಆಕೆಯೊಂದಿಗೆ ವಾಗ್ವಾದ ನಡೆದು ನಾಡಬಾಂಬ್ ಸ್ಫೋಟಿಸಿ ಕಾರು ಸಮೇತ ಸಜೀವ ದಹನವಾಗಿದ್ದ. ಕ್ಯಾಬ್ ಚಾಲಕ, ಯುವತಿಯನ್ನು ರಕ್ಷಿಸಿ ತಾನೂ ಬಚಾವಾಗಿದ್ದ.

200 ರೂ.ಗೆ ಒಂದು ಬಾಂಬ್: ವಿಶೇಷ ತನಿಖಾ ತಂಡಗಳು ನಡೆಸಿದ ತನಿಖೆಯಿಂದ ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಡಬಾಂಬ್ ವ್ಯಾಪಾರ ನಿರಾಯಾಸವಾಗಿ ನಡೆಯುತ್ತಿರುವುದು ಬೆಳಕಿಗೆ ಬಂದಿದೆ. 200 ರೂ.ಗೆ ಒಂದು ನಾಡಬಾಂಬ್ ಮಾರಾಟವಾಗುತ್ತಿದೆ. ಉತ್ತರ ಕನ್ನಡ ಜಿಲ್ಲೆಯ ಎಲ್ಲ ನದಿ ಪ್ರದೇಶಗಳಲ್ಲಿ ಈ ನಾಡಬಾಂಬ್ ಬಳಸಿ ಮೀನು ಬೇಟೆ ನಡೆಯುತ್ತಿದೆ. ನದಿ ಅಳಿವೆಯ ಕಲ್ಲು ಪ್ರದೇಶದಲ್ಲಿ ದೊಡ್ಡ ಮೀನುಗಳು ಆಹಾರಕ್ಕಾಗಿ ಆಗಾಗ ಸೇರುತ್ತವೆ. ಅಂಥ ಕಡೆ ಗ್ರೆನಲ್ ರೀತಿಯಲ್ಲಿ ಬೆಂಕಿ ತಾಗಿಸಿ ನಾಡಬಾಂಬ್ ಎಸೆಯಲಾಗುತ್ತದೆ. ಆದರ ಸಿಡಿತಕ್ಕೆ ಮೀನುಗಳೆಲ್ಲ ಸತ್ತು ಹೋಗುತ್ತವೆ. ದೊಡ್ಡ ಮೀನುಗಳ ಜತೆಗೆ ಸಣ್ಣ ಮೀನುಗಳು, ಮರಿ, ಮೊಟ್ಟೆಗಳೆಲ್ಲ ನಾಶವಾಗುತ್ತವೆ. ನದಿ ತಳಕ್ಕೂ ಹಾನಿಯಾಗುತ್ತದೆ.

ಮಾಣಿಯಲ್ಲಿ 144 ಮಿ.ಮೀ ಮಳೆ

ಶಿವಮೊಗ್ಗ ಜಿಲ್ಲೆ ಜೋಗ ಸಮೀಪದ ಬಿಳಿಗಾರಿನ ದೇವೇಂದ್ರ ಅವರ ಮನೆ ಚಾವಣಿ ಭಾರಿ ಗಾಳಿಮಳೆಗೆ ಕುಸಿದಿದೆ.

ಶಿವಮೊಗ್ಗ/ಕಾರವಾರ: ಮಲೆನಾಡು ಮತ್ತು ಕರಾವಳಿ ಭಾಗದಲ್ಲಿ ಭರ್ಜರಿ ಮಳೆ ಸುರಿದಿದೆ. ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಹೊಸನಗರ ಮತ್ತು ಸಾಗರ ತಾಲೂಕಿನಲ್ಲಿ ಉತ್ತಮ ಮಳೆಯಾದರೆ, ಅರೆಮಲೆನಾಡಿನ ಶಿವಮೊಗ್ಗ, ಶಿಕಾರಿಪುರ, ಸೊರಬ ಮತ್ತು ಭದ್ರಾವತಿಯಲ್ಲಿ ಸಾಧಾರಣವಾಗಿತ್ತು. ಹೊಸನಗರ ತಾಲೂಕು ಮಾಣಿಯಲ್ಲಿ ಅತಿಹೆಚ್ಚು 144, ಮಳೆಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಗೋಕರ್ಣದಲ್ಲಿ ಮಂಗಳವಾತ ಮಳೆಯ ಅಬ್ಬರ ಹೆಚ್ಚಾಗಿ ಜನಜೀವನ ಅಸ್ತವ್ಯಸ್ತವಾಗಿದೆ.

ಶರಾವತಿ ಜಲಾನಯನ ಪ್ರದೇಶದಲ್ಲಿ ಮಳೆ ಚುರುಕುಗೊಂಡಿರುವುದರಿಂದ ಲಿಂಗನಮಕ್ಕಿ ಜಲಾಶಯದಲ್ಲಿ ಮಂಗಳವಾರ ಬೆಳಗ್ಗೆ 8ಗಂಟೆಯ ಹೊತ್ತಿಗೆ 9,568 ಕ್ಯುಸೆಕ್ ಒಳಹರಿವು ಇತ್ತು. ಪ್ರಸ್ತುತ ಜಲಾಶಯದಲ್ಲಿ 1745. 50 ಅಡಿ ನೀರಿದೆ.

ಗಾಳಿ ಮಳೆಗೆ ಮನೆ ಕುಸಿದು ಮೂವರಿಗೆ ಗಾಯ: ಜೋಗ ಸಮೀಪದ ಬಾರಂಗಿ ಹೋಬಳಿ ಬಿಳಿಗಾರಿನಲ್ಲಿ ಭಾರಿ ಮಳೆ ಮತ್ತು ಗಾಳಿಗೆ ದೇವೇಂದ್ರ ಎಂಬುವರ ಮನೆ ಚಾವಣಿಗೆ ಹಾನಿಯಾಗಿತ್ತು. ದುರಸ್ತಿ ಮಾಡುತ್ತಿದ್ದಾಗ ಒದ್ದೆಯಾಗಿದ್ದ ಗೋಡೆ ಕುಸಿದಿದ್ದು, ಮೂರು ಕಾರ್ಮಿಕರಿಗೆ ಗಾಯವಾಗಿದೆ. ಒಬ್ಬರ ಸ್ಥಿತಿ ಗಂಭೀರವಾಗಿದ್ದು, ಸಾಗರದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಪರೀಕ್ಷೆ ಮುಗಿದ 5 ನಿಮಿಷದಲ್ಲಿ ಫಲಿತಾಂಶ!

ಬೆಂಗಳೂರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು) 6ನೇ ಸೆಮಿಸ್ಟರ್ ಎಂಜಿನಿಯರಿಂಗ್ ಪರೀಕ್ಷೆ ಮುಗಿದ ಕೇವಲ 5 ನಿಮಿಷದೊಳಗೆ ಫಲಿತಾಂಶ ಪ್ರಕಟಿಸುವ ಮೂಲಕ ಹೊಸ ಇತಿಹಾಸ ನಿರ್ಮಿಸಿದೆ.

ಬಿಇ ಮತ್ತು ಬಿ.ಟೆಕ್ 6ನೇ ಸೆಮಿಸ್ಟರ್ ಪರೀಕ್ಷೆಗೆ 60,856 ವಿದ್ಯಾರ್ಥಿಗಳು ಹಾಜರಾಗಿದ್ದರು. ಮಂಗಳವಾರ ಸಂಜೆ 5.30ಕ್ಕೆ ಪರೀಕ್ಷೆ ಅಂತ್ಯವಾಗಿದ್ದು, 5.35ಕ್ಕೆ ಫಲಿತಾಂಶ ಬಿಡುಗಡೆ ಮಾಡಿದೆ. ಹಿಂದಿನ ವರ್ಷಗಳಿಗೆ ಹೋಲಿಕೆ ಮಾಡಿದರೆ, ಸಂಪೂರ್ಣ ಮೌಲ್ಯಮಾಪನ ಪ್ರಕ್ರಿಯೆಯನ್ನು 21 ದಿನಗಳ ಮುಂಚಿತವಾಗಿಯೇ ಮುಗಿಸಿದ್ದು ಒಟ್ಟು ಶೇ 76.84ರಷ್ಟು ಫಲಿತಾಂಶ ದಾಖಲಾಗಿದೆ. 2026ರಲ್ಲಿ ಅಂತಿಮ ವರ್ಷದ 56 ಸಾವಿರ ವಿದ್ಯಾರ್ಥಿಗಳ ಫಲಿತಾಂಶವನ್ನು ವಿಟಿಯು ಪರೀಕ್ಷೆ ಮುಗಿದ ಕೇವಲ 10 ನಿಮಿಷಗಳಲ್ಲಿ ಬಿಡುಗಡೆ ಮಾಡಿತ್ತು. 2025ರಲ್ಲಿ 50,321 ವಿದ್ಯಾರ್ಥಿಗಳ ಫಲಿತಾಂಶ 1 ಗಂಟೆ ಅವಧಿಯಲ್ಲಿ, 2024-25ರಲ್ಲಿ 58,232 ವಿದ್ಯಾರ್ಥಿಗಳ ಫಲಿತಾಂಶವನ್ನು ಪರೀಕ್ಷೆ ಮುಗಿದ 10 ದಿನಗಳಲ್ಲಿ ಪ್ರಕಟಿಸಿತ್ತು.

ವೈದ್ಯ ದಂಪತಿ ಕುಡಿ, ಜಲ ಜಾಗೃತಿಗೆ ರೆಡಿ!

■ **ಎಸ್.ಜಿ.ಕುರ್ಯ ಉಡುಪಿ**

Subramanya.bhat@timesofindia.com

ಕುಂಜಿಬೆಟ್ಟಿನಲ್ಲಿ ಪುಟ್ಟ ಆಸ್ಪತ್ರೆ ನಡೆಸುತ್ತಿರುವ ವೈದ್ಯ ದಂಪತಿಯ ಮಕ್ಕಳಿಬ್ಬರು ತಮ್ಮ ತೋಟದಲ್ಲಿ ಆರಂಭಿಸಿದ ಮಳೆಕೊಯ್ಲನ್ನು ಸಮಾಜದಲ್ಲಿ ಜಲ ಜಾಗೃತಿಯ ಬೀಜವಾಗಿ ಬಿತ್ತತೊಡಗಿದ್ದಾರೆ!

ಬ್ರಹ್ಮಾವರ ಲಿಟ್ಲ್‌ರಾಕ್ ಸ್ಕೂಲಿನ 9ನೇ ತರಗತಿಯ ಸುನವ್ಯಾ (14), 8ನೇ ತರಗತಿಯ ಸಂಹಿತಾ (13) ಮಳೆಕೊಯ್ಲು ತಜ್ಞ ಜೋಸೆಫ್ ಜಿ.ಎಂ.ರೆಬೆಲ್ಲೊ ಅವರಿಂದ ಆಸ್ಪತ್ರೆಯಲ್ಲೇ ಜಲ ಪಾಠ ಕೇಳಿ, ಅನುಸರಿಸುತ್ತಿದ್ದಾರೆ. ಡಾ.ನರೇಂದ್ರ, ಡಾ.ವೀಣಾ ದಂಪತಿ ಪುತ್ರಿಯರು ಜಲ ಭವಿಷ್ಯದ ನೆಲೆಯಲ್ಲಿ ಮಳೆ ಕೊಯ್ಲು ಅಧ್ಯಯನ ನಿರತರಾಗಿದ್ದಾರೆ.

ಡಾ.ನರೇಂದ್ರ ಅವರು ಪೆರ್ಡೂರು ಬುಕ್ಕಿಗುಡ್ಡೆಯ ಒಂದು ಎಕರೆಯಲ್ಲಿ ತೆಂಗು, ಅಡಕೆ, 56 ವಿಧದ ಹಣ್ಣು ಹಂಪಲನ್ನು ನಾಲ್ಕು ವರ್ಷದಿಂದ ಬೆಳೆಯುತ್ತಿದ್ದಾರೆ. ದಾಲ್ಚಿನಿ, ಧೂಪದ ಗಿಡಗಳನ್ನೂ ಹಾಕಿದ್ದಾರೆ. ಸ್ವರ್ಣಾ ನದಿ ಪಕ್ಕವೇ ಇದ್ದರೂ ತೋಟಕ್ಕೆ ಫೆಬ್ರವರಿ ಬಳಿಕ ನೀರ ಕೊರತೆ ಕಾಡತೊಡಗಿತು. ಬಾವಿಯಲ್ಲಿ ನೀರು ಬತ್ತಿದರೆ ಕೊಳವೆ ಬಾವಿಯಲ್ಲಿ ಅಂತರ್ಜಲ ಮಟ್ಟ ಪಾತಾಳಕ್ಕೆ ಇಳಿಯುತ್ತಿತ್ತು. ಈ ಹಿನ್ನೆಲೆಯಲ್ಲಿ ತೋಟದಲ್ಲಿ ಬಿದ್ದ ಮಳೆ ನೀರ ಸದ್ಬಳಕೆಗೆ ಮುಂದಾದರು. ಕೊಳವೆ

ತೋಟದಲ್ಲಿ ಕೊಳವೆಬಾವಿಗೆ ಮಳೆ ಜಲ ಮರುಪೂರಣಕ್ಕಾಗಿ ಸುನವ್ಯಾ, ಸಂಹಿತಾ ಅಳಿಲ ಸೇವೆ.

ಮಳೆ ನೀರು ವ್ಯರ್ಥವಾಗದಂತೆ ಇಂದು ಮಾಡಿದ ಪ್ರತಿ ಹನಿಯ ಉಳಿತಾಯ ನಾಳಿನ ಬದುಕು, ಭವಿಷ್ಯಕ್ಕೆ ಪೂರಕ. ನಮ್ಮ ಭವಿಷ್ಯ ನಮ್ಮ ಕೈಯಲ್ಲಿದೆ. ಮನೆ, ಸರಕಾರಿ ಕಚೇರಿ, ಖಾಸಗಿ ಕಟ್ಟಡಗಳಲ್ಲಿ ಮಳೆ ನೀರ ಕೊಯ್ಲು, ಮಳೆ ನೀರ ಸಂಗ್ರಹದಿಂದ ಜಲ ಸ್ವಾವಲಂಬನೆ ಸಾಧ್ಯ.

- ಸುನವ್ಯಾ , ಸಂಹಿತಾ,
ಬ್ರಹ್ಮಾವರ ಲಿಟ್ಲ್ ರಾಕ್ ಇಂಡಿಯನ್ ಸ್ಕೂಲ್, ಉಡುಪಿ.

ನನ್ನ ಭೂಮಿ ಹೆಜ್ಜೆ
ವಿಕ ಅಭಿಯಾನ

ಬಾವಿ ಸುತ್ತ 10 ಅಡಿ ಹೊಂಡ, ರಿಂಗ್ ಅಳವಡಿಸಿದ್ದು ಮಳೆ ನೀರ ಮರುಪೂರಣಕ್ಕೆ ನೆರವಾಯಿತು. ಇದರಲ್ಲಿ ಸುನವ್ಯಾ, ಸಂಹಿತಾ ಮುತುವರ್ಜಿ ವಹಿಸಿದ್ದು ವಿಶೇಷ. ಇವರ ಕೆಲಸದಿಂದ ಇವತ್ತು ಮಳೆಯ ಹಂಗಿರದೇ ತೋಟ ನಳನಳಿಸುತ್ತಿದೆ.

ಮಳೆ ನೀರನ್ನು ವ್ಯರ್ಥವಾಗಿ ಹರಿದುಹೋಗಲು ಬಿಡದೆ, ಭೂಮಿಯಲ್ಲಿ ಇಂಗುವಂತೆ ಮಾಡುವುದು ಪ್ರತಿಯೊಬ್ಬರ ಜವಾಬ್ದಾರಿ. ಸಣ್ಣ ಮಟ್ಟದಲ್ಲಿ ಆರಂಭವಾಗುವ ಇಂತಹ ಪ್ರಯತ್ನ ದೊಡ್ಡ ಬದಲಾವಣೆಗೆ ನಾಂದಿಯಾಗುತ್ತದೆ. ಜಲಸಂರಕ್ಷಣೆ ಮತ್ತು ಪರಿಸರ ಸಂರಕ್ಷಣೆಗಿದು ಮಹತ್ವದ ಕೊಡುಗೆ ನೀಡಬಲ್ಲವು ಎನ್ನುವುದು ಈ ತೋಟದಿಂದ ಸಾಬೀತಾಗುತ್ತದೆ. ಮಳೆಗಾಲದಲ್ಲಿ ನೆಲದೊಳಗೆ ಸೇರುವ ನೀರು, ಬೇಸಿಗೆಯಲ್ಲಿ ಅಮೃತ ಜಲದ ರೂಪದಲ್ಲಿ ನಮ್ಮನ್ನು ಕಾಪಾಡಬಲ್ಲದು. ಒಬ್ಬ ವ್ಯಕ್ತಿ, ಒಂದು ಕುಟುಂಬ ಮಾತ್ರ ಈ ಕೆಲಸ ಮಾಡಿದರೆ ಸಾಲದು. ಸಮಾಜದ ಪ್ರತಿಯೊಬ್ಬರೂ ಮಳೆ ಕೊಯ್ಲು, ನೀರಿನ ಸಂಗ್ರಹಣೆ, ಜಲ ಮರುಪೂರಣದ ಕಾಯಕವನ್ನು ಅಳವಡಿಸಿಕೊಳ್ಳಬೇಕು.

ವ್ಯರ್ಥವಾಗದಿರಲಿ ಮಳೆ ನೀರು

- ಮಳೆ ಕೊರತೆ ಕಾರಣಕ್ಕೆ ಕೊರಗುವ ಬದಲು ಬೀಳುವ ಅಲ್ಪ ಪ್ರಮಾಣದ ಮಳೆಯನ್ನೇ ಸಮರ್ಪಕವಾಗಿ ಸಂಗ್ರಹಿಸುವುದು ನಮ್ಮ ಕರ್ತವ್ಯ.
- ಮಳೆ ನೀರನ್ನು ಕಶ್ಮಲ ನೀರಿನೊಂದಿಗೆ ಬೆರೆಸಿ ವ್ಯರ್ಥಗೊಳಿಸಬಾರದು.
- ಹವಾಮಾನ ಬದಲಾವಣೆ, ಅರಣ್ಯ ನಾಶ, ಪರಿಸರದ ಮೇಲಿನ ಒತ್ತಡ ಮುಂದಿನ ದಿನಗಳಲ್ಲಿ ಇನ್ನಷ್ಟು ಸವಾಲು ಸೃಷ್ಟಿಸಬಹುದು.
- ನೀರನ್ನು ಉಳಿಸಿದರೆ ಜೀವ- ಜೀವನ ಉಳಿಸಿದಂತೆ.

ನಿಮ್ಮ ಸುತ್ತಲೂ ಇಂತಹ ಪರಿಸರ ಸಂರಕ್ಷಣೆಯ ಕುತೂಹಲಕಾರಿ ಯಶೋಗಾಥೆಗಳು ಗಮನಕ್ಕೆ ಬಂದರೆ ಬರೆದು ಈ ನಂಬರ್‌ಗೆ ವಾಟ್ಸ್‌ಆ್ಯಪ್ ಮಾಡಿ.
63664 22240

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 181
ಬುಧವಾರ,1 ಜುಲೈ 2026 | ಪುಟಗಳು: 20 | ಬೆಲೆ: ₹ 5.00
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಇಂದು ರಾಷ್ಟ್ರೀಯ ವೈದ್ಯರ ದಿನ

11ನೇ ದಿನಕ್ಕೆ ಕಾಲಿಟ್ಟ ಸಿಜೆಪಿ ಪ್ರತಿಭಟನೆ, ಹದಗೆಟ್ಟ ಸೋನಮ್ ವಾಂಗ್ಚುಕ್ ಆರೋಗ್ಯ

'ಆಪರೇಷನ್ ಸಿಂದೂರ' ವೇಳೆ ಹುತಾತ್ಮ ಯೋಧರ ಕುರಿತು ಸಂಸತ್ತಿಗೆ ತಪ್ಪು ಮಾಹಿತಿ: ರಕ್ಷಣಾ ಸಚಿವ ರಾಜನಾಥ್ ವಿರುದ್ಧ ಕಾಂಗ್ರೆಸ್ ಹಕ್ಕುಚ್ಯುತಿ ನೋಟಿಸ್

ಇಂದಿನಿಂದ ಜಪಾನ್ ಪ್ರಧಾನಿ ಸನಾಯೆ ತಕ್ಕೈಚಿ ಭಾರತ ಪ್ರವಾಸ, ಮೋದಿ ಜತೆ ದ್ವಿಪಕ್ಷೀಯ ಸಭೆ

ವಿಕ ಹೊಂಗಿರಣ

ಪರಸ್ಪರ ಅರ್ಥ ಮಾಡಿಕೊಳ್ಳುವುದಕ್ಕೆ ಇಬ್ಬರು ಒಂದೇ ಭಾಷೆಯಲ್ಲಿ ಮಾತನಾಡಿಕೊಳ್ಳಬೇಕು ಎಂದೇನಿಲ್ಲ, ಒಂದೇ ಬಗೆಯ ಭಾವನೆ ಹಂಚಿಕೊಂಡರೆ ಸಾಕು.

- ರೂಮಿ

SBI
The banker to every Indian
ಎಸ್‌ಬಿಐ ಚಿನ್ನದ ಸಾಲಗಳೊಂದಿಗೆ ಸಂತೋಷಕ್ಕೆ ಹತ್ತಿರವಾಗಿ
• ಕಡಿಮೆ ಬಡ್ಡಿದರಗಳು
• ಹೊಂದಿಕೊಳ್ಳುವ ಮರುಪಾವತಿ ಆಯ್ಕೆಗಳು
• ಬುಲೆಟ್ ಮರುಪಾವತಿ:
• 3/6/12 ತಿಂಗಳುಗಳು, 36 ತಿಂಗಳವರೆಗೆ ಕಂತುಗಳು
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ ₹137/-
ಕೋಲಾರ 137/- ತುಮಕೂರು 135/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹177/-
ಕೋಲಾರ 177/- ತುಮಕೂರು 175/-
ವಿಥ್ ಸ್ಕಿನ್ ₹250/- ಕೋಲಾರ 250/- ತುಮಕೂರು 247/-
ವಿಥೌಟ್ ಸ್ಕಿನ್ ₹285/- ಕೋಲಾರ 285/- ತುಮಕೂರು 282/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ನಿಮ್ಮ ಪ್ರಶ್ನೆಗೆ ವೈದ್ಯರ ಉತ್ತರ
ವಿಕ ಲವಲವಿಕೆಯಲ್ಲಿ ಹೊಸ ಅಂಕಣ. ನಾಳೆಯಿಂದ....

ಒಂದೇ ತಿಂಗಳಿನಲ್ಲಿ 10 ಗ್ರಾಂಗೆ 18,000 ರೂ. ಇಳಿಕೆ | 18 ವರ್ಷಗಳಲ್ಲೇ ದಾಖಲೆಯ ಮಾಸಿಕ ಕುಸಿತ

ಭೂಮಿಗಿಳಿದ ಬಂಗಾರ

ಹೊಸದಿಲ್ಲಿ: ಜೂನ್ ತಿಂಗಳಿನಲ್ಲಿ ಅಪರಂಜಿ ಚಿನ್ನದ ಬೆಲೆ ಹತ್ತು ಗ್ರಾಂಗೆ ಬರೋಬ್ಬರಿ 18,000 ರೂ. ಇಳಿಕೆಯಾಗಿದೆ. ಒಂದೇ ತಿಂಗಳಿನಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಚಿನ್ನದ ದರ ಕುಸಿತವಾಗಿರುವುದು 2008ರ ಬಳಿಕ ಇದೇ ಮೊದಲು. ಇನ್ನೊಂದೆಡೆ, ಬೆಳ್ಳಿ ದರವೂ ಏರಿಳಿತ ಕಾಣುತ್ತಿದೆ. ಇಡೀ ತಿಂಗಳ ವಹಿವಾಟು ಗಮನಿಸಿದರೆ ಇಳಿಕೆ ಹಾದಿಯಲ್ಲಿಯೇ ಇದೆ.

ಜಾಗತಿಕ ಮಾರುಕಟ್ಟೆಯ ಏರಿಳಿತಗಳ ಹಿನ್ನೆಲೆಯಲ್ಲಿ ದೇಶೀಯ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ತೀವ್ರ ಕುಸಿದಿದೆ. ಹೊಸದಿಲ್ಲಿಯಲ್ಲಿ 24 ಕ್ಯಾರಟ್‌ನ ಪರಿಶುದ್ಧ ಚಿನ್ನದ ಬೆಲೆ 30 ದಿನಗಳಲ್ಲಿ ಶೇ.12.5ರಷ್ಟು ಕುಸಿದಿದೆ. ಅಂದರೆ ಜೂನ್ 1ರಂದು 10 ಗ್ರಾಂ ಅಪರಂಜಿ ಚಿನ್ನಕ್ಕೆ 1.60 ಲಕ್ಷ ರೂ. ಇದ್ದದ್ದು, ಜೂನ್ 30ರಂದು 1.42 ಲಕ್ಷ ರೂ. ಆಸುಪಾಸಿಗೆ ತಲುಪಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟು ಸಂಪೂರ್ಣ ಶಮನವಾಗದೇ ಇದ್ದರೂ ಶಾಂತಿ ಮಾತುಕತೆ ಒಪ್ಪಂದವಾಗಿದೆ. ಕೆಲವು ಅಡೆತಡೆಗಳ ನಡುವೆಯೂ ಶಾಂತಿ ನೆಲೆಸುವ ಕುರಿತು ಖಾತ್ರಿ ಇದೆ. ಕಚ್ಚಾ ತೈಲದ ಬೆಲೆ ಗಮನಾರ್ಹ ಪ್ರಮಾಣ ಇಳಿದು ಅಮೆರಿಕ-ಇರಾನ್ ಕದನ ಪೂರ್ವ ಸ್ಥಿತಿಗೆ ಮುಟ್ಟಿದೆ. ಷೇರುಪೇಟೆಗಳು ಚೇತರಿಸಿಕೊಳ್ಳುತ್ತಿವೆ. ಹೀಗಾಗಿ, ಚಿನ್ನ-ಬೆಳ್ಳಿ ಮೇಲಿನ ಹೂಡಿಕೆಯ ಅವಲಂಬನೆ ತಗ್ಗಿದೆ. ಚಿನ್ನದ ಬೆಲೆ ಇಳಿಕೆಗೆ ಇದು ಕೂಡ ಕಾರಣ ಎನ್ನುವುದು ಮಾರುಕಟ್ಟೆ ತಜ್ಞರ ವಿಶ್ಲೇಷಣೆ.

ಚಿನ್ನದ ಬೆಲೆ ಕುಸಿತಕ್ಕೆ 5 ಕಾರಣ

1. ಜಾಗತಿಕ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯದಲ್ಲಿ ಶೇ.2.9ರಷ್ಟು ಏರಿಕೆ
2. ಅಮೆರಿಕದ ಫೆಡರಲ್ ರಿಸರ್ವ್ ಬ್ಯಾಂಕ್ ಈ ವರ್ಷ ಬಡ್ಡಿ ದರ ಹೆಚ್ಚಿಸಬಹುದು ಎಂಬ ನಿರೀಕ್ಷೆ
3. ಮಧ್ಯಪ್ರಾಚ್ಯ ಬಿಕ್ಕಟ್ಟು ಬಗೆಹರಿಯುವ ಸೂಚನೆ ಹಿನ್ನೆಲೆಯಲ್ಲಿ ಚಿನ್ನ, ಬೆಳ್ಳಿ ಮೇಲೆ ಹೂಡಿಕೆ ಕುಸಿತ
4. ಕಚ್ಚಾ ತೈಲ ಬೆಲೆ ಕೆಲವು ದಿನಗಳಿಂದ ಸತತವಾಗಿ ಇಳಿಕೆ ಹಾದಿಯಲ್ಲಿರುವುದು
5. ಹೂಡಿಕೆದಾರರು ಸುರಕ್ಷಿತ ಹೂಡಿಕೆಗಿಂತ ತ್ವರಿತವಾಗಿ ರಿಸ್ಕ್ ಇದ್ದರೂ, ತ್ವರಿತ ಲಾಭ ನೀಡುವ ಹೂಡಿಕೆಗಳತ್ತ ಆಕರ್ಷಿತರಾಗಿರುವುದು

ಅಪರಂಜಿ ಚಿನ್ನ 10 ಗ್ರಾಂ

ಹೊಸದಿಲ್ಲಿ	ಜೂನ್ 1	ರೂ. 1,59,590
	ಜೂನ್ 30	ರೂ. 1,42,420
ಬೆಂಗಳೂರು	ಜೂನ್ 1	ರೂ.1,55,580
	ಜೂನ್ 30	ರೂ.1,42,040

ದಿಲ್ಲಿಯಲ್ಲಿ ಏರಿಕೆ, ಬೆಂಗಳೂರಿನಲ್ಲಿ ಇಳಿಕೆ

ಹೊಸದಿಲ್ಲಿಯಲ್ಲಿ ಮಂಗಳವಾರ ಚಿನ್ನದ ದರ ಇಳಿಕೆಯಾಗಿ, ಬೆಳ್ಳಿ ದರ ಏರಿಕೆಯಾಗಿದೆ. ಆದರೆ ಬೆಂಗಳೂರಿನಲ್ಲಿ ಅದಕ್ಕೆ ತದ್ವಿರುದ್ಧವಾಗಿ ಚಿನ್ನ ಏರಿಕೆಯಾದರೆ ಬೆಳ್ಳಿ ದರ ಕುಸಿದಿದೆ. ಉದ್ಯಾನ ನಗರಿಯಲ್ಲಿ 10 ಗ್ರಾಂ ಅಪರಂಜಿ ಚಿನ್ನದ ದರ 110 ರೂ. ಏರಿ 1,42,040 ರೂ. ಆಗಿದೆ. ಆಭರಣ ಚಿನ್ನ 100 ರೂ. ಏರಿ 1,30,200 ರೂ. ಆಗಿದೆ. ಬೆಳ್ಳಿ ಬೆಲೆ ಕೆ.ಜಿಗೆ 5,000 ರೂ. ಇಳಿದು 2,35,000 ರೂ.ಆಗಿದೆ.

ಮುಂದಿನ ತಿಂಗಳು ಮತ್ತೆ ಏರಬಹುದು!

ಆಗಸ್ಟ್‌ನಲ್ಲಿ ಹಬ್ಬದ ಋತು ಶುರುವಾಗಲಿದೆ. ಆಗ ಭಾರತದಲ್ಲಿ ಚಿನ್ನಕ್ಕೆ ಬೇಡಿಕೆ ಹೆಚ್ಚಲಿದೆ. ಈಗ ಇರುವ ಮಾರಾಟದ ಒಲವು, ಮುಂದಿನ ತಿಂಗಳುಗಳಲ್ಲಿ ಖರೀದಿ ಪ್ರವೃತ್ತಿಯಾಗಿ ಬದಲಾಗುತ್ತದೆ. ಹೀಗಾಗಿ ಚಿನ್ನದ ಧಾರಣೆ ಏರಬಹುದು ಎನ್ನುವುದು ತಜ್ಞರ ಅಭಿಪ್ರಾಯ.

ಇಂದಿನಿಂದ ವಿಬಿ-ಜಿ ರಾಮ್‌ಜಿ

ಹೊಸದಿಲ್ಲಿ: ಕಳೆದ ಎರಡು ದಶಕಗಳಿಂದ ದೇಶದ ಗ್ರಾಮೀಣ ಆರ್ಥಿಕ ಶಕ್ತಿಯಾಗಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ ಅಧಿಕೃತವಾಗಿ ರದ್ದಾಗಲಿದೆ. ಬದಲಿಗೆ ಕೇಂದ್ರ ಸರಕಾರವು ರೂಪಿಸಿರುವ ನೂತನ 'ವಿಕಸಿತ ಭಾರತ್- ರೋಜ್‌ಗಾರ್ ಮತ್ತು ಅಜೀವಿಕಾ ಮಿಷನ್ (ಗ್ರಾಮೀಣ)' / ವಿಬಿ-ಜಿ ರಾಮ್‌ಜಿ ಕಾಯಿದೆ ಜುಲೈ 1ರಿಂದ ದೇಶಾದ್ಯಂತ ಜಾರಿಗೆ ಬರಲಿದೆ.

ವಿಕಸಿತ ಭಾರತ 2047ರ ಮಹತ್ವಾಕಾಂಕ್ಷಿ ಗುರಿಯತ್ತ ಸಾಗಲು ಈ ಹೊಸ ಕಾಯಿದೆ ಮೈಲುಗಲ್ಲಾಗಲಿದೆ ಎಂದು ಕೇಂದ್ರ ಸರಕಾರ ಸಮರ್ಥಿಸಿಕೊಂಡಿದೆ. ಹೊಸ ಕಾಯಿದೆ ಅಡಿಯಲ್ಲಿ ಪ್ರತಿ ಗ್ರಾಮೀಣ ಕುಟುಂಬದ ವಯಸ್ಕ ಸದಸ್ಯರಿಗೆ ವರ್ಷಕ್ಕೆ 125 ದಿನಗಳ ಕೂಲಿ ಉದ್ಯೋಗವನ್ನು ಕಡ್ಡಾಯಗೊಳಿಸಲಾಗಿದೆ. ಮಸ್ಟರ್‌ರೋಲ್ ಮುಕ್ತಾಯಗೊಂಡ 15 ದಿನಗಳ ಒಳಗೆ ನೇರ ಲಾಭ ವರ್ಗಾವಣೆ ಮೂಲಕವೇ ವೇತನ ಪಾವತಿಸುವುದು ಕಡ್ಡಾಯಗೊಳಿಸಲಾಗಿದೆ. ವಿಳಂಬವಾದಲ್ಲಿ ಕಾರ್ಮಿಕರಿಗೆ ಪರಿಹಾರ ಪಡೆಯುವ ಹಕ್ಕಿರುತ್ತದೆ. ಒಂದು ವೇಳೆ ನಿಗದಿತ ಸಮಯದಲ್ಲಿ ಉದ್ಯೋಗ ನೀಡಲು ಸರಕಾರ ವಿಫಲವಾದರೆ ನಿರುದ್ಯೋಗ ಭತ್ಯೆ ನೀಡುವುದು ಕಡ್ಡಾಯವಾಗಿದೆ.

Comed-K ಸೀಟ್ ಮ್ಯಾಟ್ರಿಕ್ಸ್

ಬೆಂಗಳೂರು: 2026ನೇ ಸಾಲಿನ ಮೊದಲ ಸುತ್ತಿನ ಕೌನ್ಸೆಲಿಂಗ್‌ಗೆ ಕರ್ನಾಟಕ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ಕಾಲೇಜುಗಳ ಒಕ್ಕೂಟ (ಕಾಮೆಡ್-ಕೆ) ಎಂಜಿನಿಯರಿಂಗ್ ಸೀಟುಗಳ ಸೀಟ್ ಮ್ಯಾಟ್ರಿಕ್ ಬಿಡುಗಡೆಗೊಳಿಸಿದ್ದು, 170 ಕಾಲೇಜುಗಳಲ್ಲಿ 24,626 ಸೀಟುಗಳು ಲಭ್ಯವಿವೆ. ಈ ಪೈಕಿ ಜನರಲ್ ಮೆರಿಟ್‌ಗೆ 20,814, ಕಲ್ಯಾಣ ಕರ್ನಾಟಕ ಕೋಟಾದಡಿ 3,812 ಸೀಟುಗಳನ್ನು ಮೀಸಲಿಡಲಾಗಿದೆ.

ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ರ್‍ಯಾಂಕ್ ಆಧಾರದಲ್ಲಿ ಸೀಟು ಹಂಚಿಕೆ ಪ್ರಕ್ರಿಯೆ ನಡೆಯಲಿದ್ದು, ಶೀಘ್ರದಲ್ಲೇ ಮೊದಲ ಸುತ್ತಿನ ಕೌನ್ಸೆಲಿಂಗ್ ದಿನಾಂಕ ಘೋಷಿಸುವ ನಿರೀಕ್ಷೆಯಿದೆ. ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಇಚ್ಛೆ/ ಆಯ್ಕೆ ದಾಖಲಿಸಲು ನಿಗದಿಪಡಿಸಲಾಗಿದ್ದ ಜೂ.30ರ ಕೊನೆ ದಿನಾಂಕ ಮುಗಿದಿದ್ದು, ಇದುವರೆಗೂ ಆಯ್ಕೆ ದಾಖಲಿಸದ ವಿದ್ಯಾರ್ಥಿಗಳಿಗೆ ಅಣಕು ಸೀಟು ಹಂಚಿಕೆ ಫಲಿತಾಂಶದ ನಂತರ ಆಯ್ಕೆ ದಾಖಲಿಸಲು ಮತ್ತೊಮ್ಮೆ ಅವಕಾಶ ನೀಡಲಾಗುತ್ತದೆ ಎಂದು ಕೆಇಎ ತಿಳಿಸಿದೆ. ಕ್ರೀಡಾ ಕೋಟಾದಡಿ ಅರ್ಜಿ ಸಲ್ಲಿಸಿರುವ ಒಟ್ಟು 70 ಅಭ್ಯರ್ಥಿಗಳು ದಾಖಲೆ ಪರಿಶೀಲನೆಗೆ ಜು.3ರಂದು ಮೂಲ ದಾಖಲೆಗಳ ಸಮೇತ ಬರಲು ಸೂಚಿಸಲಾಗಿದೆ. ವಿವರ»04



ಅಧಿಕಾರಿಗಳಿಗೆ ಪ್ರಶ್ನೆಗಳ ಸುರಿಮಳೆ । ಆ್ಯಪ್ ಬಳಕೆಯಲ್ಲಿ ವೀಕು ಎಂದ ಡಿಕೆಶಿ

ಎಸ್ಐಆರ್ ಪ್ರಕ್ರಿಯೆಗೆ ಚಾಲನೆ ನೀಡಿದ ಸಿಎಂ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ನಾಯಕರಲ್ಲಿ ಆತಂಕದ ಜತೆಗೆ ನಾನಾ ರೀತಿಯ ಸಂಶಯ ಹುಟ್ಟು ಹಾಕಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಕಾರ್ಯ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿವಾಸದಿಂದಲೇ ಶುರುವಾಯಿತು.

ತಮ್ಮ ಎನ್ಯೂಮರೇಶನ್ ಫಾರಂ (ಗಣತಿ ನಮೂನೆ) ಅನ್ನು ಖುದ್ದು ತಾವೇ ಭರ್ತಿ ಮಾಡುವ ಮೂಲಕ ಸಿಎಂ ರಾಜ್ಯದಲ್ಲಿ ಎಸ್ಐಆರ್ ಪ್ರಕ್ರಿಯೆಗೆ ಚಾಲನೆ ನೀಡಿದರು.

ಸ್ವಂತ ಊರು ದೊಡ್ಡಾಲಹಳ್ಳಿಯ ಮತಪಟ್ಟಿಯೊಂದಿಗೆ ಮುಖ್ಯಮಂತ್ರಿಯವರ ಸದಾಶಿವನಗರ ನಿವಾಸಕ್ಕೆ ಬೆಂಗಳೂರು ದಕ್ಷಿಣ (ರಾಮನಗರ) ಜಿಲ್ಲಾಧಿಕಾರಿ ಯಶವಂತ್ ಗುರುಕರ್, ಕನಕಪುರ ತಹಶೀಲ್ದಾರ್ ಹಾಗೂ ಬಿಎಲ್ಒಗಳು ಆಗಮಿಸಿದ್ದರು. ಪತ್ನಿ ಉಷಾ ಅವರೊಂದಿಗೆ ಪ್ರಕ್ರಿಯೆಯಲ್ಲಿ ಭಾಗಿಯಾದ ಡಿ.ಕೆ. ಶಿವಕುಮಾರ್ ಅವರು, ಅಧಿಕಾರಿಗಳಿಗೆ ಪ್ರಶ್ನೆಗಳ ಮೂಲಕ ಇಡೀ ಪ್ರಕ್ರಿಯೆ ಬಗ್ಗೆ ಎಳೆಎಳೆಯಾಗಿ ಮಾಹಿತಿ ಬಯಸಿ ವಿವರಣೆ ಪಡೆದುಕೊಂಡರು.

ಡಿ.ಕೆ.ಶಿವಕುಮಾರ್ ತಮ್ಮ ಮೊಬೈಲ್‌ನಿಂದಲೇ ಆ್ಯಪ್ ಡೌನ್‌ಲೋಡ್ ಮಾಡಿಕೊಂಡು ವಿವರಗಳನ್ನು ಚೆಕ್ ಮಾಡಿದರು. ಮತದಾರರ ಪಟ್ಟಿ ವೀಕ್ಷಿಸಿ ನನ್ನದು, ನನ್ನ ಪತ್ನಿಯದ್ದು ಲಿಸ್ಟ್‌ನಲ್ಲಿದೆ ಎಂದರು. ''ಆ್ಯಪ್ ಬಳಕೆ ಮಾಡುವುದರಲ್ಲಿ ನಾನು ವೀಕು. ಹೇಗೆ ಲಾಗಿನ್ ಮಾಡಬೇಕು? ಆ್ಯಪ್ ಡೌನ್‌ಲೋಡ್ ಮಾಡೋದು ಹೇಗೆ?,'' ಎಂದು ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ''ಹೇಗೆ ಮಾಡಬೇಕು ಎಂಬುದನ್ನು ನನ್ನ ಫೋನ್‌ನಲ್ಲೇ ಹೇಳಿಕೊಡಿ,'' ಎಂದು ಅಧಿಕಾರಿಗಳಿಗೆ ಸೂಚಿಸಿದರು. ಮುಖ್ಯಮಂತ್ರಿಯವರ ಕೋರಿಕೆಯಂತೆ ಅವರ ಫೋನ್‌ನಲ್ಲೇ ಆ್ಯಪ್ ಡೌನ್‌ಲೋಡ್ ಮಾಡಿದರು. ''ರೀ.., ಸ್ವಲ್ಪ ಕನ್ಫ್ಯೂಸ್ ಆಗುತ್ತಿದೆ..!,'' ಎಂದರು ಸಿಎಂ.

''ನನ್ನ ಯಾವ ಫೋನ್ ನಂಬರ್ ಲಿಂಕ್ ಇದೆ ಅದೇ ನಂಬರ್‌ಗೆ ಲಿಂಕ್ ಮಾಡಿ,'' ಎಂದು ಅಧಿಕಾರಿಗಳನ್ನು ಪ್ರಶ್ನಿಸಿ ಮಾಹಿತಿ ಪಡೆದುಕೊಂಡರು. ಬಳಿಕ ಪತ್ನಿ ಉಷಾ ಅವರಿಗೂ ''ನೀನೇ ಆ್ಯಪ್‌ನಲ್ಲಿ ಮಾಹಿತಿ ಭರ್ತಿ ಮಾಡು...,'' ಎಂದು ಡಿಕೆಶಿ ಸೂಚಿಸಿದರು. ಫಾರ್ಮ್-8 ಪಡೆದು ವಯಸ್ಸು, ಫೋನ್ ನಂಬರ್, ಫೋಟೊ ಹೇಗೆ ಬದಲಾವಣೆ ಮಾಡಬಹುದು ಎಂದು ವಿವರ ಪಡೆದರು. ಫಾರ್ಮ್ ಭರ್ತಿ ಮಾಡುವುದು ಕಷ್ಟವಿದೆ. ಮಾಧ್ಯಮಗಳಲ್ಲಿ ಇದೆಲ್ಲವೂ ಹೋಗಬೇಕು ಎಂದು ಸೂಚಿಸಿದರು.

ಜನರಿಗೆ ಸಲಹೆ ನೀಡಿದ ಸಿಎಂ: ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಿಎಂ, ''ರಾಜ್ಯದಲ್ಲಿ ಎಸ್ಐಆರ್ ಪ್ರಕ್ರಿಯೆ ನನ್ನ ಮನೆಯಿಂದಲೇ ಪ್ರಾರಂಭವಾಗಿದೆ. ನಾನು ಅರ್ಜಿ ತುಂಬಿ ಕೊಟ್ಟಿದ್ದೇನೆ. ವೋಟರ್ ಐಡಿಗೆ ಕೊಟ್ಟ ಫೋನ್ ನಂಬರ್ ಇಟ್ಟುಕೊಳ್ಳಿ. ಇಲ್ಲದಿದ್ದಲ್ಲಿ ಹೊಸ ನಂಬರ್ ಅನ್ನು ಸೇರಿಸಿಕೊಳ್ಳಬಹುದು. ಫೋಟೊ ಕೂಡ ಬದಲಾವಣೆ ಮಾಡಿಕೊಳ್ಳಬಹುದು. ಏಳು ದಿನದಲ್ಲೇ ಎಲ್ಲರಿಗೂ ಫಾರ್ಮ್‌ಗಳು ತಲುಪುತ್ತವೆ. ಎಲ್ಲರೂ ಭರ್ತಿ ಮಾಡಿ ಮತದಾನದ ಹಕ್ಕು ಉಳಿಸಿಕೊಳ್ಳಬೇಕು. ಆಧಾರ್ ಕಾರ್ಡ್ ಅನ್ನು ಮಾಹಿತಿಗಾಗಿ ಕೊಡಬೇಕು,'' ಎಂದು ಸಾರ್ವಜನಿಕರಿಗೆ ಮನವಿ ಮಾಡಿದರು.

''ಬಿಎಲ್ಎ, ಬಿಎಲ್ಒ ಹಾಗೂ ಮೇಲ್ವಿಚಾರಕರು ಈಗಾಗಲೇ ವಾಟ್ಸ್ಆ್ಯಪ್ ಗ್ರೂಪ್ ಮಾಡಿಕೊಂಡಿದ್ದಾರೆ. ಕುಟುಂಬದ ಸದಸ್ಯರ ಪೈಕಿ ಒಬ್ಬರು ಸಹಿ ಮಾಡಿದರೂ ಸಾಕು. ಕುಟುಂಬದವರ ಪರವಾಗಿ ಒಬ್ಬರೇ ಎಲ್ಲರ ಅರ್ಜಿಗಳನ್ನು ತುಂಬಬಹುದು. ಅದನ್ನು ಸ್ವೀಕಾರ ಮಾಡಿಕೊಳ್ಳಲಾಗುವುದು. ಫೋಟೊ ಬದಲಾಯಿಸಿಕೊಳ್ಳಬೇಕಾದರೆ ಅರ್ಜಿಯಲ್ಲಿ ಹೊಸ ಫೋಟೊ ನೀಡಬಹುದು. ಹೊಸ ಮತದಾರರು ನಿವಾಸ ದೃಢೀಕರಣ ಪತ್ರ ನೀಡಬೇಕು. ಅದಕ್ಕಾಗಿ ರಾಜ್ಯ ಸರಕಾರ ಜನರಿಗೆ ಅಗತ್ಯ ಪ್ರಮಾಣಪತ್ರ ನೀಡಲು ಮುಂದಾಗಿದೆ. ಎಲ್ಲರೂ ತಮ್ಮ ಮತದಾನದ ಹಕ್ಕು ಉಳಿಸಿಕೊಳ್ಳಬೇಕು,'' ಎಂದು ಸಲಹೆ ಮಾಡಿದರು.

ಗ್ಯಾರಂಟಿ ಕೊಡಲ್ಲ

ಎಸ್ಐಆರ್ ಪ್ರಕ್ರಿಯೆಯಲ್ಲಿ ಕಡ್ಡಾಯವಾಗಿ ಭಾಗಿಯಾಗುವಂತೆ ಜನರಿಗೆ ಸಿಎಂ ಮನವಿ ಮಾಡಿದರು. ''ಮತದಾರರು ಅಲ್ಲದವರಿಗೆ 'ಗ್ಯಾರಂಟಿ'ಗಳು ಇಲ್ಲ, ಮತದಾರರ ಪಟ್ಟಿಯಲ್ಲಿ ಹೆಸರಿಲ್ಲದವರಿಗೆ ಸರಕಾರದ ಸೌಲಭ್ಯಗಳನ್ನು ಕಡಿತ ಮಾಡಲಾಗುವುದು. ರಾಜ್ಯದ ಜನರಿಗೆ ಮಾತ್ರ ಸರಕಾರ ಸವಲತ್ತುಗಳನ್ನು ನೀಡುತ್ತಿದ್ದು, ಬೇರೆ ರಾಜ್ಯದವರಿಗೆ ನಾವು ಏಕೆ ಕೊಡಬೇಕು,'' ಎಂದು ಪ್ರಶ್ನಿಸಿದರು.

''ಬಿಹಾರ, ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದಿದ್ದಲ್ಲಿ ಅಂತಹವರಿಗೆ ಸೌಲಭ್ಯಗಳನ್ನು ನಿಲ್ಲಿಸಲಾಗುತ್ತಿದೆ. ಅದೇ ವ್ಯವಸ್ಥೆಯನ್ನು ರಾಜ್ಯದಲ್ಲೂ ಅನುಸರಿಸಬೇಕಾಗುತ್ತದೆ. ಅದಕ್ಕಾಗಿ ಪ್ರತಿಯೊಬ್ಬರೂ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಉಳಿಸಿಕೊಳ್ಳಬೇಕು,'' ಎಂದು ಮನವಿ ಮಾಡಿದರು.

ಮೊದಲ ದಿನ 12.48 ಲಕ್ಷ ಜನರಿಗೆ ಗಣತಿ ನಮೂನೆ ವಿತರಣೆ

■ **ವಿಕ ಸುದ್ದಿಲೋಕ** ಬೆಂಗಳೂರು

- ಕೆಲವೆಡೆ ಪಕ್ಷಗಳ ಮುಖಂಡರು, ಕಾರ್ಯಕರ್ತರ ಜಟಾಪಟಿ
- ಎಸ್ಐಆರ್ ಆ್ಯಪ್‌ನಲ್ಲಿ ಕಾಣಿಸಿಕೊಂಡಿತು ತಾಂತ್ರಿಕ ದೋಷ
- ಮನೆಗಳಿಗೆ ಗಣತಿ ನಮೂನೆಗಳು ದ್ವಿಪತ್ರಿಯಲ್ಲಿ ವಿತರಣೆ
- ಮೊದಲ ದಿನ ಹಲವು ಸ್ಥಳಾಂತರ, ಮೃತರು, ಒಂದಕ್ಕಿಂತ ಹೆಚ್ಚು ಕಡೆ ಇರುವವರು ಪತ್ತೆ

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಕುರಿತು ಪರ ವಿರೋಧದ ಚರ್ಚೆಯ ನಡುವೆ ರಾಜ್ಯದಲ್ಲಿ ಎಸ್ಐಆರ್ ಪ್ರಕ್ರಿಯೆಗೆ ಮಂಗಳವಾರ ಅಧಿಕೃತ ಚಾಲನೆ ಸಿಕ್ಕಿದ್ದು, ಮೊದಲ ದಿನವೇ ಕೆಲವೆಡೆ ರಾಜಕೀಯ ಪಕ್ಷಗಳ ಮುಖಂಡರು ಹಾಗೂ ಕಾರ್ಯಕರ್ತರ ನಡುವೆ ಜಟಾಪಟಿಯಾಗಿದೆ.

ಕೆಲ ಜಿಲ್ಲೆಗಳಲ್ಲಿ ಎಸ್ಐಆರ್ ವಿರುದ್ಧ ಸಂಘಟನೆಗಳು ಪ್ರತಿಭಟನೆ ಮಾಡಿದ್ದು, ಇದರ ನಡುವೆಯೂ ಮತಗಟ್ಟೆ ಮಟ್ಟದ ಅಧಿಕಾರಿಗಳು (ಬಿಎಲ್ಒ) ಖುದ್ದು ಮನೆ ಮನೆಗೆ ತೆರಳಿ ಗಣತಿ ನಮೂನೆಗಳನ್ನು (ಎನ್ಯೂಮರೇಷನ್ ಫಾರಂ) ದ್ವಿಪತ್ರಿಯಲ್ಲಿ ವಿತರಿಸಿದ್ದಾರೆ. ಮತದಾರರು, ಗಣತಿ ನಮೂನೆ ಭರ್ತಿ ಮಾಡಲು ಸಾಧ್ಯವಾಗದೆ ಪರದಾಡಿದ ಪ್ರಸಂಗಗಳು ನಡೆದಿವೆ. ಮತ್ತೊಂದೆಡೆ ಎಸ್ಐಆರ್ ಆ್ಯಪ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡು ಬಿಎಲ್ಒಗಳು ತೊಂದರೆ ಅನುಭವಿಸಿದ್ದಾರೆ.

ರಾಜ್ಯದಲ್ಲಿ ಸುಮಾರು 5.55 ಕೋಟಿ ಮತದಾರರಿದ್ದು, ಈ ಪೈಕಿ 12.48 ಲಕ್ಷ ಮಂದಿಗೆ (ಶೇ.2.25) ಬಿಎಲ್ಒಗಳು ಮಂಗಳವಾರ ಗಣತಿ ನಮೂನೆ ವಿತರಿಸಿದ್ದಾರೆ. ಮತದಾರರು ಸಂಪೂರ್ಣ ವಿವರ ಭರ್ತಿ ಮಾಡಿ ಹಿಂದಿರುಗಿಸಿದ ಗಣತಿ ನಮೂನೆಗಳ ಪೈಕಿ 47,817 ನಮೂನೆಗಳನ್ನು ಬಿಎಲ್ಒಗಳು ಡಿಜಿಟಲೀಕರಣಗೊಳಿಸಿದ್ದಾರೆ. ಇನ್ನು 6,840 ಮತದಾರರು ಆನ್‌ಲೈನ್ ಮೂಲಕ ಗಣತಿ ನಮೂನೆಗಳನ್ನು ಭರ್ತಿ ಮಾಡಿ ಸಲ್ಲಿಸಿದ್ದಾರೆ.

ಮೊದಲ ದಿನದ ಎಸ್ಐಆರ್ ಪ್ರಕ್ರಿಯೆಯಲ್ಲಿ ಸಂಬಂಧಪಟ್ಟ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಿಂದ ಬೇರೆಡೆಗೆ ಸ್ಥಳಾಂತರಗೊಂಡಿರುವ 116 ಮಂದಿ ಮತದಾರರನ್ನು ಗುರುತಿಸಲಾಗಿದೆ. ಅದೇ ರೀತಿ 291 ಮಂದಿ ಮೃತರು, ಒಂದಕ್ಕೂ ಹೆಚ್ಚು ಕಡೆ ಮತದಾರರ ಪಟ್ಟಿಯಲ್ಲಿರುವ 77 ಮಂದಿಯನ್ನು ಪತ್ತೆ ಮಾಡಲಾಗಿದೆ.

ರಾಜಧಾನಿಯಲ್ಲಿ ಜಟಾಪಟಿ: ಬೆಂಗಳೂರಿನ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಎಸ್ಐಆರ್ ಕಾರ್ಯದ ವೇಳೆ ಕಾಂಗ್ರೆಸ್ ಮತ್ತು ಬಿಜೆಪಿಯ ಬೂತ್ ಮಟ್ಟದ ಏಜೆಂಟರ (ಬಿಎಲ್ಎ) ನಡುವೆ ವಾಗ್ವಾದ ನಡೆದಿದೆ. ಬಿಎಲ್ಒ ಎಸ್ಐಆರ್ ಪ್ರಕ್ರಿಯೆ ಆರಂಭಿಸುತ್ತಿದ್ದಂತೆ ಕಾಂಗ್ರೆಸ್‌ನ ಬಿಎಲ್ಎಗಳು ಅಡ್ಡಿಪಡಿಸಿದರು. ಬಿಎಲ್ಒಗಳು ಕಾಂಗ್ರೆಸ್ ಪಕ್ಷವನ್ನು ನಿರ್ಲಕ್ಷಿಸಿ ಬಿಜೆಪಿ ಪ್ರತಿನಿಧಿಗಳೊಂದಿಗೆ ಮಾತ್ರ ಸಭೆ ನಡೆಸಿದ್ದಾರೆ ಎಂದು ಕಾಂಗ್ರೆಸ್‌ನ ಬಿಎಲ್ಎಗಳು ಆಕ್ಷೇಪ ವ್ಯಕ್ತಪಡಿಸಿದರು.

''ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಎಸ್ಐಆರ್ ಪ್ರಕ್ರಿಯೆಗೆ 31 ಬಿಎಲ್ಒಗಳು ಹಾಜರಿರಬೇಕು. ಆದರೆ, 14 ಮಂದಿ ಬಂದಿದ್ದಾರೆ. ಉಳಿದ ಸಿಬ್ಬಂದಿ ಬರುವವರೆಗೂ ಎಸ್ಐಆರ್ ಪ್ರಕ್ರಿಯೆ ನಡೆಸಲು ಬಿಡುವುದಿಲ್ಲ,'' ಎಂದು ಕಾಂಗ್ರೆಸ್‌ನ ಬಿಎಲ್ಎಗಳು ಪಟ್ಟು ಹಿಡಿದರು.

ಇದಕ್ಕೆ ಪ್ರತಿಯಾಗಿ ಬಿಜೆಪಿ ಬಿಎಲ್ಎಗಳು, ''ಲಭ್ಯ ಸಿಬ್ಬಂದಿಯೊಂದಿಗೆ ಎಸ್ಐಆರ್ ಆರಂಭಿಸಬೇಕು,'' ಎಂದು ಆಗ್ರಹಿಸಿದರು. ಪರಿಣಾಮ ಎರಡೂ ಪಕ್ಷಗಳ ಬಿಎಲ್ಎಗಳ ಮಾತಿನ ಚಕಮಕಿ ನಡೆದು ಸ್ಥಳದಲ್ಲಿ ಕೆಲ ಕಾಲ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು. ಇದರಿಂದ ನಿಗದಿತ ಸಮಯಕ್ಕೆ ಎಸ್ಐಆರ್ ಪ್ರಕ್ರಿಯೆ ಆರಂಭವಾಗಲಿಲ್ಲ, ನಂತರ ಹಿರಿಯ ಅಧಿಕಾರಿಗಳು ಎರಡೂ ಪಕ್ಷಗಳ ಬಿಎಲ್ಎಗಳನ್ನು ಸಮಾಧಾನಪಡಿಸಿ, ಎಸ್ಐಆರ್ ಪ್ರಕ್ರಿಯೆ ಮುಂದುವರಿಸಿದರು.



ರಾಜ್ಯ ಸರಕಾರ ಎಸ್ಐಆರ್ ಫಾರ್ಮ್ ವಿತರಣೆಯಲ್ಲಿ ತಾರತಮ್ಯ ಮಾಡಿ ಬಿಜೆಪಿ ಬೆಂಬಲಿಗರಿಗೆ ವಿತರಣೆಯಾಗದಂತೆ ನೋಡಿಕೊಳ್ಳುವ ಸಾಧ್ಯತೆಗಳಿವೆ. ಈ ಬಗ್ಗೆ ಬಿಜೆಪಿ ಬಿಎಲ್ಎಗಳು ಅತ್ಯಂತ ಜಾಗೃತವಾಗಿ ಕರ್ತವ್ಯ ನಿರ್ವಹಿಸಬೇಕು.

- ಬಸವರಾಜ ಬೊಮ್ಮಾಯಿ
ಮಾಜಿ ಸಿಎಂ, ಸಂಸದ

ಬಿಎಲ್ಒಗಳ ಸ್ಥಾನಕ್ಕೆ ಕಾಂಗ್ರೆಸ್ಸಿಗರು: ಅಶೋಕ್ ಕಿಡಿ

ಬೆಂಗಳೂರು: ಎಸ್ಐಆರ್ ಪ್ರಕ್ರಿಯೆಗೆ ಅಗತ್ಯ ಪ್ರಮಾಣದಲ್ಲಿ ಬಿಎಲ್ಒಗಳನ್ನು ನೇಮಿಸದ ಕಾರಣ ಸಮಸ್ಯೆ ಉಂಟಾಗಿದ್ದು, ರಾಜ್ಯ ಸರಕಾರ ಆರಂಭದಲ್ಲೇ ಎಸ್ಐಆರ್‌ಗೆ ಖ್ಯಾತೆ ತೆಗೆಯುತ್ತಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಬಿಜೆಪಿ ಕಚೇರಿಯಲ್ಲಿ ಮಂಗಳವಾರ ಮಾತನಾಡಿ, ''ಎಸ್ಐಆರ್ ಕಾರ್ಯಕ್ಕೆ ಸರಕಾರ ಸರಿಯಾದ ಅಧಿಕಾರಿಗಳನ್ನೇ ನೇಮಕ ಮಾಡಿಲ್ಲ. 25 ರಿಂದ 30 ಮಂದಿ ಬಿಎಲ್ಒಗಳು ಇರಬೇಕಾದ ಕಡೆ ಕೇವಲ 10-11 ಅಧಿಕಾರಿಗಳನ್ನು ನೇಮಿಸಿದೆ,'' ಎಂದು ದೂರಿದರು.

''ಮತದಾರರ ಪಟ್ಟಿಯಲ್ಲಿ ಮೃತಪಟ್ಟವರು, ಬಾಂಗ್ಲಾದೇಶಿಗರ ಹೆಸರು ತೆಗೆಯುವುದು ಕಾಂಗ್ರೆಸ್‌ಗೆ ಇಷ್ಟವಿಲ್ಲ. ನೈಜ ಮತದಾರರಷ್ಟೇ ಇರಬೇಕು ಎಂಬುದು ಎಸ್ಐಆರ್ ಉದ್ದೇಶ. ಮತದಾರನ ಹೆಸರು ಒಂದಕ್ಕಿಂತ ಹೆಚ್ಚು ಕಡೆ ಇದ್ದರೆ ಅದನ್ನು ತೆಗೆಯಲಾಗುತ್ತದೆ,'' ಎಂದು ತಿಳಿಸಿದರು.

''ಬಿಎಲ್ಒಗಳಾಗಿ ಅಧಿಕಾರಿಗಳನ್ನು ನೇಮಿಸಬೇಕಾದ ಕಾಂಗ್ರೆಸ್ ಸರಕಾರ ಪಕ್ಷದ ಮುಖಂಡರನ್ನು ನೇಮಿಸಿದೆ. ಜಯನಗರದಲ್ಲಿ 20 ಕಡೆ ಇದೇ ರೀತಿ ನೇಮಕ ಮಾಡಲಾಗಿದೆ. ಬಿಎಲ್ಒಗಳು ಪಕ್ಷ ಚಿಹ್ನೆ ಇಟ್ಟುಕೊಂಡು ಪ್ರಚಾರ ಮಾಡುತ್ತಿದ್ದು, ಇದು ಸರಿಯಲ್ಲ. ಕೇಂದ್ರ ಚುನಾವಣಾ ಆಯೋಗ ಕೂಡಲೇ ಇದರ ವಿರುದ್ಧ ಕ್ರಮ ಕೈಗೊಳ್ಳಬೇಕು,'' ಎಂದು ಆಗ್ರಹಿಸಿದರು.

ಬೆಳ್ತಂಗಡಿಯಲ್ಲಿ ಎಸ್ಐಆರ್ ಪ್ರಕ್ರಿಯೆ ಆರಂಭವಾಗಿದ್ದು, ಧರ್ಮಸ್ಥಳ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರಿಗೆ ನೋಂದಣಾಧಿಕಾರಿ ಹೊನ್ನಪ್ಪಗೌಡ ಗಣತಿ ಫಾರಂ ನೀಡಿದರು.

ಮೀಸಲು ಹೋರಾಟ ಅನಿವಾರ್ಯ: ಉಗ್ರಪ್ಪ

ಬೆಂಗಳೂರು: ಎಸ್ಸಿ-ಎಸ್‌ಟಿಗಳಿಗೆ ಶೇ.56 ರಷ್ಟು ಮೀಸಲು ನೀಡುವ ಹೋರಾಟದಲ್ಲಿ ಸರಕಾರ ವಿಫಲವಾಗಿದೆ. ಇದರಿಂದ ಈ ಸಮುದಾಯಗಳಿಗೆ ಅನ್ಯಾಯವಾಗುತ್ತಿದೆ. ಸರಕಾರ ಈ ಬಗ್ಗೆ ಗಮನಹರಿಸದಿದ್ದರೆ ಹೋರಾಟ ಅನಿವಾರ್ಯ ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಎಚ್ಚರಿಸಿದರು.

ಶಾಸಕರ ಭವನದ ಆವರಣದಲ್ಲಿ ಮಂಗಳವಾರ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ''ಸರಕಾರ 72,180 ಹುದ್ದೆಗಳ ನೇಮಕಾತಿಗೆ ಮುಂದಾಗಿದೆ. ಎಸ್‌ಟಿಗಳಿಗೆ ಶೇ.3ರಷ್ಟು ಮೀಸಲು ಸಿಕ್ಕರೆ 2,888 ಹುದ್ದೆಗಳು ಕಡಿಮೆಯಾಗಲಿವೆ. ಪರಿಶಿಷ್ಟ ಜಾತಿಗೆ ಶೇ.17ರ ಬದಲು ಶೇ.15 ರಷ್ಟು ಮೀಸಲು ಸಿಕ್ಕರೆ 1400 ಹುದ್ದೆ ಕಡಿಮೆಯಾಗಲಿವೆ. ಅಲ್ಲದೆ, ವೈದ್ಯಕೀಯ, ಎಂಜಿನಿಯರಿಂಗ್, ಆಯುಷ್, ದಂತ ವೈದ್ಯಕೀಯ ಕೋರ್ಸ್‌ಗಳಲ್ಲೂ ಪರಿಶಿಷ್ಟರಿಗೆ ಕಡಿಮೆ ಸೀಟುಗಳು ಲಭ್ಯವಾಗಲಿವೆ,'' ಎಂದರು.

''ಜನಸಂಖ್ಯೆಗೆ ಅನುಗುಣವಾಗಿ ಮೀಸಲು ಹೆಚ್ಚಳ ಮಾಡಲು ಅವಕಾಶವಿದೆ ಎಂದು ಇಂದಿರಾ ಸಹಾನಿ ಪ್ರಕರಣದಲ್ಲೇ ಹೇಳಲಾಗಿದೆ. ಸರಕಾರ ಹೈಕೋರ್ಟ್‌ನಲ್ಲಿ ವಾದ ಮಂಡಿಸಲು ಪ್ರೊ.ರವಿವರ್ಮಕುಮಾರ್ ಅವರನ್ನು ನೇಮಿಸಿರುವುದು ಸ್ವಾಗತಾರ್ಹ. ಆದರೆ, ಸರಕಾರ ಮೀಸಲಾತಿ ಹೆಚ್ಚಳದ ಬಗ್ಗೆ ತಾತ್ಕಾಲಿಕ ಪರಿಹಾರ ರೂಪಿಸದಿದ್ದರೆ ಹೋರಾಟ ಅನಿವಾರ್ಯ,'' ಎಂದು ಎಚ್ಚರಿಕೆ ನೀಡಿದರು.

ನಾಲ್ವರು ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ನಾಲ್ವರು ಐಎಎಸ್ ಅಧಿಕಾರಿಗಳನ್ನು ರಾಜ್ಯ ಸರಕಾರ ಮಂಗಳವಾರ ವರ್ಗಾವಣೆ ಮಾಡಿದೆ.

- **ಅಭಿರಾಮ್ ಜಿ.ಶಂಕರ್** -ಎಂಡಿ, ಗಣಿಗಾರಿಕೆ ಪರಿಸರ ಪುನಃಶ್ಚೇತನ ನಿಗಮ
- **ಡಾ.ಅವಿನಾಶ್ ಮೆನನ್** -ನಿರ್ದೇಶಕ , ಐಟಿಬಿಟಿ ಇಲಾಖೆ. ಜತೆಗೆ, ಕಿಯೋನಿಕ್ಸ್ ಎಂಡಿ ಹುದ್ದೆ ಹೆಚ್ಚುವರಿ
- **ಎ.ಎಂ.ಯೋಗೇಶ್** -ನಿರ್ದೇಶಕ, ಕೃಷಿ ಮಾರುಕಟ್ಟೆ ಇಲಾಖೆ
- **ಜಿ.ಆರ್.ಜೆ.ದಿವ್ಯಾ ಪ್ರಭು** -ಆಯುಕ್ತರು, ಗ್ರಾಮೀಣಾಭಿವೃದ್ಧಿ ಇಲಾಖೆ

ಅನುದಾನದಲ್ಲಿ ತಾರತಮ್ಯ, ಬಿಜೆಪಿ ನಾಯಕರ ಆಕ್ಷೇಪ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಶಾಸಕರ ನಿಧಿ

ಬೆಂಗಳೂರಿನ ಹದಗೆಟ್ಟಿರುವ ರಸ್ತೆಗಳ ಅಭಿವೃದ್ಧಿ ಹಾಗೂ ಇತರ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಯನ್ನು 2000 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲು ಮುಂದಾಗಿರುವ ಸರಕಾರ ಕ್ಷೇತ್ರವಾರು ಅನುದಾನ ಹಂಚಿಕೆಯಲ್ಲಿ ತಾರತಮ್ಯ ತೋರಿದೆ ಎಂದು ಬಿಜೆಪಿ ನಾಯಕರು ಆಕ್ಷೇಪಿಸಿದ್ದಾರೆ.

ಪಕ್ಷದ ರಾಜ್ಯ ಕಚೇರಿಯಲ್ಲಿ ಮಂಗಳವಾರ ಮಾತನಾಡಿದ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್, ''ಕಾಂಗ್ರೆಸ್ ಸರಕಾರ ಬೆಂಗಳೂರನ್ನು ಬ್ರ್ಯಾಂಡ್ ಬೆಂಗಳೂರು ಆಗಿ ಅಭಿವೃದ್ಧಿಪಡಿಸುವುದಾಗಿ ಹೇಳಿದರೂ ಏನೂ ಮಾಡಲಿಲ್ಲ. ವಿಸ್ತೀರ್ಣದಲ್ಲಿ ಕಿರಿದಾಗಿರುವ ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಕೋಟಿಗಟ್ಟಲೇ ಅನುದಾನ ನೀಡಿರುವ ಸರಕಾರ ಹೆಚ್ಚು ವಿಸ್ತಾರವಾಗಿರುವ ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ಕಡಿಮೆ ಅನುದಾನ ನೀಡಿದೆ,'' ಎಂದು ದೂರಿದರು.

''ಅನುದಾನ ಹಂಚಿಕೆಯಲ್ಲಿ ತಾರತಮ್ಯ ತೋರಿ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗುವಂತೆ ಮಾಡುತ್ತಿದ್ದಾರೆ. ಬಿಜೆಪಿ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋದರೆ ಮಾತ್ರ ಸಮಗ್ರವಾಗಿ ಅಭಿವೃದ್ಧಿಯಾಗಲಿದೆ. ಕಳೆದ 15 ವರ್ಷದಲ್ಲಿ ಯಾವ ಕ್ಷೇತ್ರಗಳಿಗೆ ಎಷ್ಟು ಅನುದಾನ ನೀಡಲಾಗಿದೆ ಎಂಬ ಮಾಹಿತಿ ನೀಡಿದರೆ ತಾರತಮ್ಯ ಎಲ್ಲಿ ಆಗಿದೆ ಎಂಬುದು ಬಯಲಾಗಲಿದೆ. ಹಿಂದೆ ನಮ್ಮ ಸರಕಾರವಿದ್ದಾಗ ನಾನೇ ಕಾಂಗ್ರೆಸ್ ಶಾಸಕರಿದ್ದ ಶಿವಾಜಿನಗರ, ಹೆಬ್ಬಾಳ ಕ್ಷೇತ್ರಗಳಿಗೆ ತಲಾ 100 ಕೋಟಿ ರೂ. ಅನುದಾನ ನೀಡಿದ್ದೆ. ಆದರೆ ಕಾಂಗ್ರೆಸ್ ಸರಕಾರ ತಾರತಮ್ಯ ತೋರುತ್ತಿರುವುದು ಖಂಡನೀಯ,'' ಎಂದು ತಿಳಿಸಿದರು.

ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥನಾರಾಯಣ, ''ಬೆಂಗಳೂರಿನ ಅಭಿವೃದ್ಧಿಗೆ ಅಗತ್ಯವಿರುವಷ್ಟು ಅನುದಾನವನ್ನು ಸರಕಾರ ನೀಡಿಲ್ಲ, ನೀಡಿರುವ ಅಲ್ಪ ಅನುದಾನದಲ್ಲೂ ಬಿಜೆಪಿ ಶಾಸಕರ ಕ್ಷೇತ್ರಗಳಿಗೆ ಅನ್ಯಾಯ ಮಾಡಿರುವುದು ಸರಿಯಲ್ಲ,'' ಎಂದು ಹೇಳಿದರು.

ಬಿಜೆಪಿ ಶಾಸಕ ಎಸ್.ರಘು, ''ಜಿಬಿಎ ವ್ಯಾಪ್ತಿಯಲ್ಲಿ ಕ್ಷೇತ್ರವಾರು ಅನುದಾನ ಹಂಚಿಕೆಯಲ್ಲಿ ತಾರತಮ್ಯ ನಡೆದಿದೆ. ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ತಲಾ 100 ಕೋಟಿ ರೂ. ನೀಡಿದ್ದರೆ, ಬಿಜೆಪಿ ಶಾಸಕರಿರುವ 16 ಕ್ಷೇತ್ರಕ್ಕೆ ಸರಾಸರಿ 40 ಕೋಟಿ ನೀಡಿರುವುದು ಖಂಡನೀಯ. 700 ಕೋಟಿ ರೂ. ತೆರಿಗೆ ಆದಾಯ ಸಂಗ್ರಹವಾಗುತ್ತಿರುವ ಸರ್ ಸಿ.ವಿ.ರಾಮನ್ ನಗರ ಕ್ಷೇತ್ರಕ್ಕೆ ಸರಕಾರ ಕೇವಲ 65 ಕೋಟಿ ರೂ. ಅನುದಾನ ನೀಡಿದೆ. ಅಂದರೆ ತೆರಿಗೆ ಆದಾಯದ ಶೇ.10ರಷ್ಟು ಹಣವನ್ನಷ್ಟೇ ಕ್ಷೇತ್ರಕ್ಕೆ ನೀಡಿದಂತಾಗಿದೆ,'' ಎಂದು ಅಸಮಾಧಾನ ವ್ಯಕ್ತಪಡಿಸಿದರು.

TIMES interact
Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

ಉದ್ಯೋಗ RECRUITMENT

SITUATION VACANT

ACADEMIC

TEACHER

SRI AUROBINDO MEMORIAL SCHOOL
13-A Main, 22nd Cross, Banashankari II Stage, Bangalore - 560 070
Phone: 2671 6666
Email: teachatsams@gmail.com
ACADEMIC YEAR 2026-2027
Qualified and Trained Lady Teachers with excellent English communication skills are required for the following positions.
1. TGT - Geography
2. PRT - English
3. Art Teachers
4. Yoga Trainer
5. Dance Teacher
6. Nurse
7. Librarian
8. Accountant - with Computer knowledge
APPLY IMMEDIATELY

II Om Sai Ram II
Aadya Academy
ICSE Syllabus
#309, Near Dinne Anjaneya Swamy Temple, BUDIGERE, Bangalore - 562 165.
Requires
HINDI TEACHER
ACCOUNTANT
aadyaacademybudigere@gmail.com
Contact: 9945814909 9535868383

ADMINISTRATION

EXECUTIVES

REQUIRED Sales Executive with 1 year Experience. Two wheeler required. Qualification: 2nd PUC. Age : 30 - 50 years ,Must be fluent in English. Package: Rs 25000 to Rs 30000. Office Location : Near R V Eng College, Mysore Road, Contact: 78299 44556

OFFICE ASSISTANTS

REQUIRED Female Office Assistant in near Magadi Road Metro Station. Contact: 9886019833/9035860026

RECEPTIONISTS & TEL OPERATORS

Required Fresher & Experienced Tele-Caller (F) FOR CAR-&-HEALTH Insurance @ Hulimavu B.G. Road. Salary 16K to 25K. Contact: Amit: 9243452444

STENOGRAPHERS & TYPISTS

REQUIRED Lady Typist (Fresher), 10th Standard / IInd PUC with Kannada Reading, English Typing, Computer Skills, Seshadripuram, B'lore-560020. Contact: 080-23561811 / 9844034104

OTHER VACANCIES

GENERAL

ಜಾಬ್! ಜಾಬ್!! ಜಾಬ್!!! ಹೌಸ್‌ಕೀಪಿಂಗ್ ಸಿಬ್ಬಂದಿಗಳು ಮತ್ತು ಸೂಪರ್ವೈಸರ್ ಪ್ರಸಿದ್ಧ ಆಸ್ಪತ್ರೆಯಲ್ಲಿ ತುರ್ತಾಗಿ ಅಗತ್ಯವಿದೆ. ಬೆಂಗಳೂರು ಕಲ್ಯಾಣ ನಗರದಲ್ಲಿ, ಸಂಬಳ: ಸಿಬ್ಬಂದಿ ರೂ. 19,300/-, ಸೂಪರ್ವೈಸರ್ ರೂ. 23,000/-, ವಯಸ್ಸು: 18 ರಿಂದ 39 ವರ್ಷಗಳು ಕರೆ ಮಾಡಿ: 9250073007 / 9945779607

ನೇರ ಸಂದರ್ಶನ: ಸ್ವಚ್ಛತಾ ಕೆಲಸಕ್ಕೆ ದಿನದ ಸಂಬಳ ರೂ. 750 ಇರುತ್ತದೆ. (25 ರಿಂದ 55) ವರ್ಷ, ಮೆಜೆಸ್ಟಿಕ್ ಸುತ್ತ ಮುತ್ತ ಅಭ್ಯತೆ ಸಂಪರ್ಕಿಸಿ: 8197256406/ 9164993307

WANTED legal/revenue coordinators for a real estate company, Attractive salary and incentives. Interested Candidates Pls send resume @ Karnasree.95@gmail.com

ಮಹಿಳಾ ಅಡುಗೆ ಕೆಲಸ ಮಾಡುವವರು ಬೇಕಾಗಿದ್ದಾರೆ. ರಾಕುಮ್ ಶಾಲೆ, 421/ಐ, ಶ್ರೀ ಕೃಷ್ಣ ದೇವಸ್ಥಾನ ರಸ್ತೆ, ಇಂದಿರಾನಗರ, ಬೆಂಗಳೂರು. ವೇತನ ರೂ. 20,000. ಊಟ ವಸತಿ ಸೌಲಭ್ಯ. ಸಂಪರ್ಕ: 98453 01354.

PART TIME JOBS

Work From Home: ಡೇಟಾ ಎಂಟ್ರಿ, ಡಾಕ್ಯುಮೆಂಟ್ ವೆರಿಫಿಕೇಷನ್, ಟೆಲಿ ಕಾಲಿಂಗ್, ಪಾರ್ಕಿಂಗ್ ಪಿಕಿಂಗ್, ಕೆಲಸಕ್ಕೆ ಬೇಕಾಗಿದ್ದಾರೆ Call : 63611 67510, 80505 67478

RETIRED PERSONS

PART Time / Full Time Career Opportunity Retired & Housewives Age 30 - 65, SSLC & Above Earn Good Income, Allowances Foreign Trips, Free Training Call: 8073947989, 9448957455

WANTED Men, Women - Office work, Full /Part Time, Age 25 to 65, SSLC, PUC, Degree. Earn Monthly Rs. 1 Lakh +, Free Europe Trip. Ct:9980670027

WORK FROM HOME

ಪ್ಯಾಕಿಂಗ್ ಪಿಕ್ಕಿಂಗ್, ಡೇಟಾ ಎಂಟ್ರಿ, ಟೆಲಿ ಕಾಲಿಂಗ್, ಕೆಲಸಕ್ಕೆ ಮನೆಯಿಂದಲೇ ಮಾಡುವವರು ಬೇಕಾಗಿದ್ದಾರೆ, ಆಸಕ್ತಿಯುಳ್ಳವರು ಸಂಪರ್ಕಿಸಿ: 89518 35051, 89518 74031

ಉದ್ಯೋಗಅವಕಾಶ ಯಾವುದೇ ಹೂಡಿಕೆ ಇಲ್ಲದೇ ಹೆಚ್ಚಿನ ಆದಾಯ ಗಳಿಸಲು ಬನ್ನಿಸೇರಿ ವ್ಯಾಪರಸ್ಥರು, ಗೃಹಿಣಿಯರು,ನಿವೃತ್ತರು,ವೈದ್ಯರು ಶಿಕ್ಷಕರು ತೆರಿಗೆ ಸಲಹೆಗಾರರು ಸಂ:9845952019

TECHNICAL

LABOUR CONTRACTORS

REQUIRED Plumbing contractors (for labour works) with experienced plumbers of 10-12 personnels to carryout 10 floor commercial building at Bangalore .Contact 8147017071

JOB WANTED

HIRING NOW Cashier (Basic Computer Knowledge) Sales Man/Girl Age 22 years - 40 years. Jayanagar Chickpete Contact: 9448121073

TIMES TRIBUTE PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ಇರ್ಫಾನ್ ಶೇಖ್ 8088815336
irfan.shekh@timesofindia.com

WANTED General Manager, Branch Manager & Project Manager with Real Estate Exp. Any qualif salary upto Rs.60k, Age 30+ yrs, Male or Female. Kannada,English,Hindi speak knowledge. Corporate ofc at Jayanagar, Branch ofc Sahakarnagar,Call: 7676302393

ಸೇವೆಗಳು SERVICES

REPAIRS/ WATERPROOFING

WATER PROOFING HERE IS THE SOLUTION FOR LEAKAGE ... LEAKAGE ...
OLD/NEW BUILDING, Sump, Bathroom, Terrace Wallcrack Skylight, Water proofing done by New Technology. Ph: 9880916988

ಪ್ರವಾಸ TRAVEL

TOURS & TRAVELS

15-07-26 5 ದಿನ ಹೊರನಾಡು, ಕೊಲ್ಲೂರು, ಗೋಕರ್ಣ,ಧರ್ಮಸ್ಥಳ 22-07-26 5 ದಿನ ಅಹೋಬಿಲ, ಶ್ರೀಶೈಲ, ಮಂತ್ರಾಲಯ, ಯಾಗಂಟಿ ಶ್ರೀವಿನಾಯಕ ಟ್ರಾವಲ್ಸ್9972500645

personal

CHANGE OF NAME

I, B S RADHIKA, aged about 42 yrs, currently R/at Premier Inspira Elite ,203 ,2nd floor,4th main ,5th cross ,Nrupathunga Nagar ,JP nagar 7th phase Bengaluru-560078 do hereby declare that I have changed my minor daughter's name from VAISHNAVI KARTHIK to VAISHNAVI R BEEGAMUDRE, henceforth she shall be known and called as VAISHNAVI R BEEGAMUDRE for all purposes, vide affidavit dated 17th April 2025 , sworn before advocate and notary B.CHITRA at Bangalore

I, Gnanavel Thiayagarajan, have changed my name to GNANAVELRAJAN T vide affidavit dated 24/06/2026. Sworn before notary Deepa M Bengaluru.

I, Chinmay Manjunath Kumbar, S/o Manjunath Kumbar, residing at No. 40, Kasturi Nilaya, 2nd Flr., P&T Layout, 5th H Cross, Near Mehra Education Society, Horamavu, Bengaluru-560043, declare that I have changed my name from Chinmay Kumbar to Chinmay Manjunath Kumbar. Chinmay M Kumbar in my records refers to me, where M stands for Manjunath. Henceforth, I shall be known as Chinmay Manjunath Kumbar for all future purposes vide Affidavit dated 29/06/2026 sworn before Notary B.Seshagiri at Bengaluru.

I, Sachin Smithan T, son of M. Thomas (also known as Thomas M and Thomas Moses) and Rekha (also known as Rekha Thomas), residing at No. 15, DLF 80 Ft Main Road, 3rd Cross, Nyanappanahalli, Off Bannerghatta Road, Akshayanagar, Bengaluru - 560068, hereby declare that my name appears as "Sachin Smithan" in my earlier Passport and Birth Certificate and as "Sachin Smithan T" in my educational records. The initial "T" denotes my family name, and both names refer to one and the same person.I further declare that the names M. Thomas, Thomas M, and Thomas Moses refer to one and the same person, namely my father, and the names Rekha and Rekha Thomas refer to one and the same person, namely my mother.This declaration is made for the purpose of obtaining a Passport and for all concerned.

I, MOHAMMED NASRULLAH (New Name) Aadhaar No. 586549444046, S/o Ameer Jaan, R/a No. 30, 1st Main, Noor Nagar, Chokkanahalli, Opp: R.R.Signature Apartments, Dr. Shivram Karanth Nagar Post, Bengaluru - 560077, have changed my name from Mohammed Nasrulla to MOHAMMED NASRULLAH vide Affidavit sworn before S.R. Ravikumar, Advocate and Notary, Dated : 30-06-2026.

I, Prakash S/o Vinayaka, R/o #178, Near Muneshwar Temple, Bandepalya, Bengaluru-560068, do hereby declare the my name is recorded as Prakash in my Aadhaar Card and as Velangani Anthony Prakash in my Church Certificate. I hereby declare that both names refer to one and the same person. Henceforth, I shall be known and called as Prakash for all Purposes. Notary K.C Shashikala Bengaluru.

I, MOHAMMED AZAM KHYOOM, S/o Abdul Khayoom, Age 63 Yrs, R/o #8/1, 2nd Floor, South Cross Street, Neelasandra, Viveknagar Post, Bengaluru-560047, have changed my name to MOHAMMED AZAM vide Affidavit No. IN-KA00310468931398Y dated 24/06/2026 before Notary L. Gopalakrishna, Bangalore

I, Amit Kishore Prasad S/o Binay Kishore Prasad, Resident of B-06, Chaithanya Smaran, Whitefield Hoskote Main Road, Kannamangala, Bengaluru, Karnataka- 560067, do hereby declare, that I have changed the name of my son Aashman Arye Prasad DoB June 08, 2008. He shall thereafter be know as Aashman Arye.

I, Paridhi (D/o Neeraj Bansal), resident of B204, Kots Une, #1, 2nd Cross Rd, Sathya Sai Layout, Whitefield, Bengaluru, Karnataka do hereby declare that I have changed my name to Paridhi Bansal and henceforth, I shall be known as Paridhi Bansal in all purpose, vide affidavit no. IN-KA05577766805519Y

I, PANASURIYA KHUSHBU CHANDUBHAI ,W/ O; HARDIK CHIMANBHAI VAGHASIYA, R/O: G3,GROUND FLOOR,CJN SAI RESIDENCY,1ST CROSS, SRI SATHYA SAI LAYOUT,WHITEFIELD, BLR-560016. Have changed my name as KHUSHBU HARDIK VAGHASIYA.

I, Kamal Kumar Keshavdas S/O Keshavdas, residing at No.433, 2A Cross,4th main, BCMC Layout, Raghuvanahalli, Bangalore-560109 have changed my name to Kamal Kumar for all future purposes vide affidavit dt 30th june 2026 sworn before notary: K N Ramadevi B'lore

I, S. Surendar, S/o. Natrayan Sakthivel, aged about 36 years, R/at No. 56, 2nd Main, Thalakaverinagar layout, Bangalore - 560 037 have changed my name to N.S. SURIYAA vide affidavit dated 23.06.2011. Sworn before notary Vijayakumar, Bangalore.

I, Riyaz S/o Khuddus Sab R/o #52/1, GF, Pawan Nebula Apts, 4th Cross, 8th Main Rd, SBM Colony, Brindavan Nagar Mathikere B'lore 560054 have changed my name to Riyaz Ahamad for all purposes

I, Jareena Taj W/o Abdul Athif R/o Mahalakshmi, Badavane, Chiknayakanahalli, Tumkur, Karnataka- 572214 have changed my name to Zareen Taj

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು

I, Megana H B W/O, Sachin S M R/o 5th Cross Durgigudi Honnali, Davangere 577217 have changed my name to Meghana H B for all purposes.

I Pavan Kalyanrao Residing at No 236/17 K.NO 3656/236/17/623F changing my name from Pavan Kalyanarao to Pavan(Passport No J2364312)

I Nehan Madan W/O, Ashish Seelwani R/o B-205, Shriram Symphony Apartment have changed my name to Neha Seelwani.

I, Bhanupriya S.C., S/o S.G. Chudanna Gowda, Aged about 30 years, C/o G.S. Manjunath, No. 91, "Indira", 2nd Cross, Munisanjeevappa Layout, Kanakapura Road, J.P. Nagar, Bangalore - 560 078. Have changed my name from BHANUPRIYA S.C. to BHANUPRAKASH S.C. Vide affidavit dt. 29.03.2010. Sworn before Advocate and Notary P. Anuradha, Bangalore.

I, Tabrez Mohammed Saifulla S/o Mohammed Saifulla R/o No 19/1,C No 2nd Street, Chandini Chowk Road, Near Green Mosque Shivaji Nagar, Bengaluru-560051.Have Changed my name to Tabreez Mohammed Saifulla for All Purposes

I, Saksham A. Jain, S/o Ashish Jain, residing at Golden Grand Apartments, MC 2203, Maple Block, Yeshwanthpur, Bangalore, Karnataka, PIN: 560022, have changed my name from Saksham Jain to Saksham A. Jain, Henceforth, I'll be known as Saksham A. Jain.

I Basira Banu alias Rahamunnisa W/o Riyaz Ahamad R/o 52/1, Pawan Nebula Appt, 4th Cross, 8th Main Rd, SBM Colony Brindavan Nagar Mathikere B'lore 560054. have changed my name to Bashira Banu for all purposes

I, Surekha Kuruvada W/O, Srinivasan Sridhar R/o No D 303 3rd Flr Chartered Coronet 17/3 Omkar Nagar Arekere Bannerghatta Road, Bengaluru 560076 have changed my name to K Surekha Sridhar for all purposes

I, Palak Singh Thakur R/o C2-002, Ahad excellencia, Green cascade lane, Chikkanayakanahalli, Off sarjapur road, Bengaluru 560035 have changed my name to Palak Singh. I shall be called by this name for all purposes

I, Aditya Gachinmani, Aged 18 yrs, R/o. Bon Viveur Heights Apts, 307, 8th B Main, 1st Cross, Vijaya Bank L/o., Blr-560076, have changed my name to ADITYA GACHINMANI P. vide affidavit Dt: 30/06/26 before Notary M. Rajendra, Blr.

I, Mohammed Farook Ahmed S/o Majeed Abdul Wajid R/o No 19/1, C No 2nd Street,Near Green Mosque, Shivaji Nagar, Bengaluru-560051.Have Changed my name to Mohammed Farooq for All Purposes

I, SANDEEP KESWANI, R/o RF-311, PURVA RIVIERA, VARTHUR ROAD, MARATHAHALLI, BENGALURU-560037, have changed my daughter's name (minor) from KAASHVI to KAASHVI KESWANI.

I, GULTAJ, Residing at No 204B, 1st Floor, 9th Main, 2nd Cross, BTM 1st Stage, Bangalore-560029, Have changed my name to GULTAJ ABDUL vide affidavit dated 29/6/2026 sworn before Notary Aravind Patil G.G Bangalore

I, Kavitha, r/at No.17/3, 7th Cross, 6th Main, Narasimha Raja Colony, Bengaluru - 560004, have changed my name to Savitha A for all purposes vide affidavit dt. 30.06.2026 sworn before Notary S N Madhu, Bangalore.

I, Sanjay Panjabi, s/o Muralidhar Taeomal Panjabi R/o, 39/1, Raj Mandir North Park Road, Kumara Park East, Bengaluru-560001 have changed my name to Sanjay Muralidhar Panjabi for all Purposes

I, Tulasirama Chinnappa S/o Chinnappa R/o No 383, Hulimavu Main Road, Kempamma Layout, Hulimavu B G Road, Bengaluru- 560076 have changed my name to Tulasiram Chinnappa for all purposes

I, Sapna Bhujanga Shetty, w/o Pramod Shetty, R/o S-9, No-54 Perody Palace, 2nd Cross Vijayasri Layout Kodichikkanahalli B'luru-560076 have changed my name to Sapna Pramod Shetty for all purposes

I, Sageera Khanum, w/o Nazeer Ahmed Sheik, R/o No 52, Kumbarpet Main Road, Channaraya Temple Street, Bengaluru- 560002. Have Changed my name to Sageera Khanum for all Purposes.

I, Pramoda Kumar s/o Chandra Shekhar Shetty R/o S-9, No-54 Perody Palace, 2nd Cross Vijayasri Layout Kodichi-kkanahalli B'luru-560076 have changed my name to Pramod Shetty for all Purposes.

I, H J Yashvanthkumar S/o Jayakumar R/o 11&30 Janani natarajalayout JP Nagar Bangalore have changed my name to YASHWANTHA KUMARA vide affidavit dated 29th June 2026.

I, Karthik Shanmuga Kumaravel, R/o : D-125, Sound of water by Puravankara, Begur, hobli, Chikka kammanahalli, Bangalore :83 have changed my name to Karthik .Affidavit date : 30/06/2026

I Imam Khan Amanulla Khan S/O, Amanulla Khan R/o Old #28, New #0027, 1st Main, 1st Cross, New Gurrapana Palya Bangalore - 560029 have changed my name to Imam Khan.

I, Reena Mukesh, R/o No 3/1, Bhikshu Sadhan, 4th Cross, H Siddaiah Road, Wilson Garden B'luru- 560027. Have Changed my name to Reena Mukesh Kumar for all Purposes

I, Asha Dhyaneshwar Bidave, W/o, 14861839Y–Civ/Barber–Sudhir Vilas Kokate, R/o, Chas, Akole, Ahmednagar, MH, changed name to Asha Sudhir Kokate, for all purpose.

I Fathima Khanum D/o Kaleem Ulla Khan R/o No 43, 1st Cross Anepalya, Neelasandra, Bangalore-560047 have changed my name to Fathima Khanum Kaleem for all purposes.

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 181
ಬುಧವಾರ,1 ಜುಲೈ 2026 | ಪುಟಗಳು: 20 | ಬೆಲೆ: ₹ 5.00
VK
ವಿಜಯ ಕರ್ನಾಟಕ
ಬೆಂಗಳೂರು | ಮೈಸೂರು | ಶಿವಮೊಗ್ಗ | ಮಂಗಳೂರು | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

ಇಂದು ರಾಷ್ಟ್ರೀಯ ವೈದ್ಯರ ದಿನ



ವೋಲ್ಟಾಸ್ ಅಧ್ಯಕ್ಷ ಸ್ಥಾನದಿಂದ ನಿಯೋಲ್ ಟಾಟಾ ಶೀಘ್ರ ನಿರ್ಗಮನ, ಕಂಪನಿ ವಾರ್ಷಿಕ ಸಭೆಯಲ್ಲಿ ಘೋಷಣೆ

40 ಪ್ರಮುಖ ಪೆಟ್ರೋಕೆಮಿಕಲ್ ಉತ್ಪನ್ನಗಳ ಆಮದಿನ ಮೇಲಿನ ಪೂರ್ಣ ಸುಂಕ ವಿನಾಯಿತಿಯನ್ನು ಜುಲೈ 15ರವರೆಗೆ ವಿಸ್ತರಿಸಿದ ಕೇಂದ್ರ ಸರಕಾರ

ಮಣ್ಣಿನ ಆರೋಗ್ಯ ಪರೀಕ್ಷೆಗೆ ಮೊಬೈಲ್ ಆ್ಯಪ್: ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್

ಯಂಗ್ ಟೀಮ್ ಪಟ್ಟಿಯೊಂದಿಗೆ ಸಿಎಂ ನಾಳೆ ದಿಲ್ಲಿಗೆ | ಜುಲೈ 8 ರಂದು ಸಂಪುಟ ವಿಸ್ತರಣೆ ನಿರೀಕ್ಷೆ

ಅಧಿವೇಶನಕ್ಕೆ ಪೂರ್ಣ ಸಂಪುಟ

■ **ವಿಕ ಸುದ್ದಿಲೋಕ** ಬೆಂಗಳೂರು

ಬಹುನಿರೀಕ್ಷಿತ ಸಚಿವ ಸಂಪುಟ ವಿಸ್ತರಣೆಗೆ ಇದೇ ವಾರದಲ್ಲಿ ಮುಹೂರ್ತ ನಿಗದಿಯಾಗಲಿದ್ದು, ಎಐಸಿಸಿ ನಾಯಕ ರಾಹುಲ್ ಗಾಂಧಿ ಅವರ ಅನುಮೋದನೆಗಾಗಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂಭಾವ್ಯ ಸಚಿವರ ಪಟ್ಟಿಯೊಂದಿಗೆ ಗುರುವಾರ ದಿಲ್ಲಿಗೆ ತೆರಳಲಿದ್ದಾರೆ.

50ರ ಆಸುಪಾಸಿನ ಕ್ರಿಯಾಶೀಲ ಮತ್ತು ಉತ್ಸಾಹಿ ಟೀಂಗೆ ರಾಹುಲ್ ಗಾಂಧಿ ನೀಡಿರುವ ಸೂಚನೆಯಂತೆ ಮುಖ್ಯಮಂತ್ರಿಯವರು ತಮ್ಮ ತಂಡದಲ್ಲಿ ಯಾರೆಲ್ಲಾ ಇರಬೇಕು ಎಂಬ ಪಟ್ಟಿ ಸಿದ್ಧಪಡಿಸಿದ್ದು, ಗುರುವಾರದ ಸಚಿವ ಸಂಪುಟ ಸಭೆ ಮುಗಿಸಿಕೊಂಡು ಅಂದು ರಾತ್ರಿಯೇ ದಿಲ್ಲಿ ವಿಮಾನ ಏರಲಿದ್ದಾರೆ.

ಜುಲೈ 20ರಿಂದ ವಿಧಾನ ಮಂಡಲ ಅಧಿವೇಶನ ಆರಂಭವಾಗುವ ನಿರೀಕ್ಷೆಯಿದ್ದು, ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನವಾಗಲಿದೆ. ಅಧಿವೇಶನಕ್ಕೆ ಮುನ್ನ ಸಂಪುಟ ವಿಸ್ತರಣೆಯಾಗುವುದು ಬಹುತೇಕ ನಿಶ್ಚಿತವಾಗಿದೆ. ಮುಖ್ಯಮಂತ್ರಿಯವರ ಆಪ್ತ ಮೂಲಗಳ ಪ್ರಕಾರ, ಜುಲೈ 8ರಂದು ಸಚಿವ ಸಂಪುಟ ವಿಸ್ತರಣೆ ನಡೆಯುವ ಸಾಧ್ಯತೆಗಳು ಹೆಚ್ಚಿವೆ.

ರಾಹುಲ್ ಗಾಂಧಿ ಜುಲೈ 2 ರಂದು ವಿದೇಶ ಪ್ರವಾಸದಿಂದ ಮರಳಲಿದ್ದು, ಆದೇ ದಿನ ತೆರಳಲಿರುವ ಸಿಎಂ ದಿಲ್ಲಿಯಲ್ಲೇ ವಾಸ್ತವ್ಯ ಮಾಡಲಿದ್ದಾರೆ. ಸಂಭಾವ್ಯ ಸಚಿವ ಪಟ್ಟಿಗೆ ರಾಹುಲ್ ಗಾಂಧಿ ಅನುಮೋದನೆ ಪಡೆದು ವಾಪಸಾಗಲಿದ್ದಾರೆ. ಅಧಿವೇಶನಕ್ಕೆ ಮುನ್ನ ಪೂರ್ಣ ಪ್ರಮಾಣದ ಸಂಪುಟ ರಚನೆಗೆ ಸಿಎಂ ಬಯಸಿದ್ದಾರೆ. ಸಂಪುಟದಲ್ಲಿ 20 ಸ್ಥಾನಗಳು ಖಾಲಿ ಉಳಿದಿದ್ದು, ಎರಡು ಸ್ಥಾನಗಳನ್ನು ಉಳಿಸಿಕೊಂಡು 18 ಸಚಿವರನ್ನು ಸೇರ್ಪಡೆ ಮಾಡಿಕೊಳ್ಳುವ ನಿರೀಕ್ಷೆಯಿದೆ.

ಕ್ರಿಯಾಶೀಲವಾದ ಕಾವೇರಿ

ಸಚಿವ ಸಂಪುಟ ವಿಸ್ತರಣೆ ನಿರೀಕ್ಷೆಯಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಅವರ ಕಾವೇರಿ ನಿವಾಸದಲ್ಲಿ ಚಟುವಟಿಕೆಗಳು ಜೋರಾಗಿವೆ. ಮಂಗಳವಾರ ಹಲವು ಮಾಜಿ ಸಚಿವರು, ಸಚಿವ ಸ್ಥಾನ ಆಕಾಂಕ್ಷಿಗಳು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿದ್ದಾರೆ. ಡಿಸಿಎಂ ಪರಮೇಶ್ವರ್ ಅವರೂ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು. ಮಾಜಿ ಸಚಿವರಾದ ಚಲುವರಾಯಸ್ವಾಮಿ, ಮಧು ಬಂಗಾರಪ್ಪ, ಎನ್.ಎಸ್.ಬೋಸರಾಜು, ಸಂತೋಷ್ ಲಾಡ್ ಮತ್ತಿತರರು ಸಿದ್ದರಾಮಯ್ಯ ಅವರನ್ನು ಭೇಟಿಯಾದರು. ಸಚಿವ ಸ್ಥಾನದ ನಿರೀಕ್ಷೆಯಲ್ಲಿರುವ ಶಿವಲಿಂಗೇಗೌಡ, ಶ್ರೀನಿವಾಸ ಮಾನೆ, ಪಾವಗಡ ವೆಂಕಟೇಶ್ ಮತ್ತಿತರರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ತಮ್ಮ ಕೋರಿಕೆ ಹೇಳಿಕೊಂಡಿದ್ದಾರೆ.

ಗಣತಿ ನಮೂನೆಯನ್ನು ಖುದ್ದು ತಾವೇ ಭರ್ತಿ ಮಾಡುವ ಮೂಲಕ ಸಿಎಂ ಡಿ.ಕೆ. ಶಿವಕುಮಾರ್ ರಾಜ್ಯದಲ್ಲಿ ಎಸ್ಐಆರ್ ಪ್ರಕ್ರಿಯೆಗೆ ಮಂಗಳವಾರ ಚಾಲನೆ ನೀಡಿದರು.

ಉತ್ಸಾಹಿ ಟೀಂ ಬಯಕೆ

ಸರಕಾರದಲ್ಲಿ ಹೊಸತನ, ಕ್ರಿಯಾಶೀಲತೆಗಾಗಿ ಸಮರ್ಥರನ್ನು ಒಳಗೊಂಡ ಸಂಪುಟಕ್ಕೆ ಸಿಎಂ ಡಿ.ಕೆ. ಶಿವಕುಮಾರ್ ಒಲವು ಹೊಂದಿದ್ದಾರೆ. ಪಕ್ಷದ ಭವಿಷ್ಯದ ಹಾದಿ ಹಾಗೂ ಮುಂದಿನ 2 ವರ್ಷದ ಬಳಿಕವೂ ರಾಜ್ಯದಲ್ಲಿ ಪಕ್ಷದ ಸರಕಾರ ಮುಂದುವರಿಯಲು ಸಾಧ್ಯವಾಗುವಂತೆ ಉತ್ತಮ ಆಡಳಿತಕ್ಕಾಗಿ 'ಬೆಸ್ಟ್ ಟೀಂ' ಹೊಂದುವುದು ಅವರ ಆಶಯವಾಗಿದೆ. ಅದಕ್ಕಾಗಿ ಅನುಭವಿ ಸಚಿವರೊಂದಿಗೆ ಸದ್ಯದ ಸಂಪುಟ ವಿಸ್ತರಣೆಯಲ್ಲಿ 'ಉತ್ಸಾಹಿ ಕಿರಿಯರ' ಸೇರ್ಪಡೆಗೆ ಸಿದ್ಧತೆ ಮಾಡಿಕೊಂಡಿದ್ದಾರೆ. ತಮ್ಮ ಈ ಆಶಯ ಮತ್ತು ಪ್ರಯತ್ನದಲ್ಲಿ ಡಿ.ಕೆ. ಶಿವಕುಮಾರ್ ಯಶಸ್ವಿಯಾಗುತ್ತಾರಾ? ಎಂಬ ಕುತೂಹಲವಂತೂ ಇದೆ.

ಆಕಾಂಕ್ಷಿಗಳ ಪಟ್ಟಿ ರೆಡಿ

ಕ್ರಿಯಾಶೀಲ ಸಂಪುಟ ರಚಿಸುವಂತೆ ರಾಹುಲ್ ಗಾಂಧಿ ನೀಡಿರುವ ಸೂಚನೆ ಆಧರಿಸಿ ಸಿಎಂ ತಮ್ಮ ತಂಡದಲ್ಲಿರಬೇಕಾದವರ ಪಟ್ಟಿ ಸಿದ್ಧಪಡಿಸಿದ್ದಾರೆ. ಜಿಲ್ಲೆ, ಪ್ರದೇಶ ಹಾಗೂ ಜಾತಿವಾರು ಪಟ್ಟಿ ಸಿದ್ಧವಾಗಿದೆ. ಈಗಾಗಲೇ ಸಂಪುಟದಲ್ಲಿ ಹಿರಿಯ ಸಚಿವರು ಇರುವ ಹಿನ್ನೆಲೆಯಲ್ಲಿ ಹೊಸ ಮುಖಗಳಿಗೆ ಅವಕಾಶ ಸಿಗುವ ಸಾಧ್ಯತೆಗಳು ಹೆಚ್ಚಿವೆ. ಸಚಿವರ ಪಟ್ಟಿ ಅಂತಿಮಗೊಳಿಸುವಲ್ಲಿ ಮಾಜಿ ಸಿಎಂ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಿದೆ. ಸಿದ್ದರಾಮಯ್ಯ ಯಾವ ಹೆಸರುಗಳನ್ನು ಪ್ರಸ್ತಾಪಿಸಲಿದ್ದಾರೆ ಎಂಬುದೂ ಮುಖ್ಯವಾಗಲಿದೆ. ಹಾಗಾಗಿ ಡಿ.ಕೆ.ಶಿವಕುಮಾರ್ ನೇತೃತ್ವದ ಸಚಿವ ಸಂಪುಟದ ವಿಸ್ತರಣೆಗೆ ದಿಲ್ಲಿಯಲ್ಲಿ ಮತ್ತೊಂದು ಸುತ್ತಿನ ಕಸರತ್ತು ನಿರೀಕ್ಷಿತವಾಗಿದೆ. ಮೊದಲ ಸುತ್ತಿನಲ್ಲಿ ಅವಕಾಶ ಮಿಸ್ ಮಾಡಿಕೊಂಡಿರುವ ಎಚ್.ಕೆ.ಪಾಟೀಲ್, ಜಮೀರ್ ಅಹ್ಮದ್ ಖಾನ್, ದಿನೇಶ್ ಗುಂಡೂರಾವ್, ಚಲುವರಾಯಸ್ವಾಮಿ, ಎನ್.ಎಸ್.ಬೋಸರಾಜು, ಮಧು ಬಂಗಾರಪ್ಪ, ಸಂತೋಷ್ ಲಾಡ್ ಸೇರಿದಂತೆ ಹಲವು ಹಿರಿಯರು ಮತ್ತೆ ಸಂಪುಟ ಸೇರಲು ಗಂಭೀರ ಪ್ರಯತ್ನ ನಡೆಸಿದ್ದಾರೆ.

ಮೋದಿ ಮೌನಕ್ಕೆ ಕೈ ವ್ಯಂಗ್ಯ

ರಾಮಮಂದಿರ ದೇಣಿಗೆ ಲೂಟಿ ಪ್ರಕರಣ | ಎಸ್ಐಟಿ ವರದಿ ಬಹಿರಂಗಕ್ಕೆ ಪಟ್ಟು

ಹೊಸದಿಲ್ಲಿ/ಅಯೋಧ್ಯೆ: ಅಯೋಧ್ಯೆ ರಾಮ ಮಂದಿರ ದೇಣಿಗೆ ಲೂಟಿ ಪ್ರಕರಣದ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರ ಮೌನವನ್ನು ಟೀಕಿಸಿರುವ ಕಾಂಗ್ರೆಸ್, ಮಂದಿರ ನಿರ್ಮಾಣದ ಕೀರ್ತಿಯನ್ನು ಹೇಗೆ ಪಡೆದುಕೊಂಡರೋ, ಅದೇ ರೀತಿ ಈ ಕಳ್ಳತನದ ಹೊಣೆಯನ್ನೂ ಪ್ರಧಾನಿ ಮೋದಿ ಅವರೇ ಹೊರಬೇಕು ಎಂದು ಆಗ್ರಹಿಸಿದೆ.



''ದೇಣಿಗೆ ಲೂಟಿ ಕೋಟ್ಯಂತರ ಹಿಂದೂಗಳ ಧಾರ್ಮಿಕ ನಂಬಿಕೆ ಮೇಲಿನ ದಾಳಿಯಾಗಿದೆ. ಹಗರಣದಲ್ಲಿ ಭಾಗಿಯಾದವರನ್ನು ಪ್ರಧಾನಿ ನರೇಂದ್ರ ಮೋದಿ, ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಮತ್ತು ಬಿಜೆಪಿ-ಆರ್ಎಸ್ಎಸ್ ವ್ಯವಸ್ಥೆಯು ರಕ್ಷಿಸುತ್ತಿದೆ,'' ಎಂದು ಆರೋಪಿಸಿದೆ.

ಸಾಮಾಜಿಕ ಜಾಲತಾಣ 'ಎಕ್ಸ್'ನಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ''ಸಾರ್ವಜನಿಕವಾಗಿ ಚರ್ಚಿಸದೇ, ಪಾರದರ್ಶಕ ಮಾನದಂಡಗಳನ್ನು ಅಳವಡಿಸಿಕೊಳ್ಳದೇ ಮೋದಿ ಸರಕಾರವು ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ರಚಿಸಿತ್ತು. ಟ್ರಸ್ಟನ್ನು ಆರ್‌ಟಿಐ ಕಾಯಿದೆ ವ್ಯಾಪ್ತಿಯಿಂದ ಹೊರಗಿಟ್ಟಿತ್ತು,'' ಎಂದೂ ಹೇಳಿದ್ದಾರೆ. ''ನಾಗರಿಕರ ಒತ್ತಡದಿಂದಾಗಿ ಉತ್ತರ ಪ್ರದೇಶ ಸರಕಾರ ರಚಿಸಿದ ಎಸ್ಐಟಿ ವರದಿಯ ನಂತರ ಎಫ್ಐಆರ್ ದಾಖಲಿಸಲಾಗಿದೆ. ಆದರೆ ಇಷ್ಟು ದಿನವಾದರೂ ಆರ್ಎಸ್ಎಸ್-ಬಿಜೆಪಿ ಜತೆಗಿನ ಸಖ್ಯದಿಂದಾಗಿ ಮುಖ್ಯ ಆರೋಪಿಗಳು ಬಂಧನ ಭೀತಿಯಿಲ್ಲದೇ ತಿರುಗಾಡುತ್ತಿದ್ದಾರೆ,'' ಎಂದು ಕಿಡಿಕಾರಿದ್ದಾರೆ. ದೇಣಿಗೆ ಲೂಟಿಯನ್ನು 'ಮಹಾಪಾಪ' ಎಂದು ಕರೆದಿರುವ ಕಾಂಗ್ರೆಸ್ ನಾಯಕಿ ಸುಪ್ರಿಯಾ ಶ್ರೀನೇಟ್, ''ಇತಿಹಾಸದಲ್ಲಿ ಹಿಂದೂಗಳ ನಂಬಿಕೆ ಮೇಲೆ ಈ ರೀತಿ ಹಿಂದೆಂದೂ ದಾಳಿ ನಡೆದಿರಲಿಲ್ಲ,'' ಎಂದಿದ್ದಾರೆ.

ದಿನದ ಬೆಳವಣಿಗೆ

- ಮಂದಿರಕ್ಕೆ ಭೇಟಿ ನೀಡಲು ಮುಂದಾಗಿದ್ದ ಉತ್ತರ ಪ್ರದೇಶ ಕಾಂಗ್ರೆಸ್ ಮುಖ್ಯಸ್ಥ ಅಜಯ್ ರಾಯ್ ನೇತೃತ್ವದ ನಿಯೋಗಕ್ಕೆ ಅಡ್ಡಿ
- ಅಜಯ್ ರಾಯ್ ಸಹಿತ ಹಲವು ನಾಯಕರನ್ನು ಗೃಹಬಂಧನದಲ್ಲಿ ಇರಿಸಿದ ಪೊಲೀಸರು, ಬಿಜೆಪಿ-ಕಾಂಗ್ರೆಸ್ ಕಾರ್ಯಕರ್ತರ ಜಟಾಪಟಿ
- 400 ಖಾಸಗಿ ಭದ್ರತಾ ಸಿಬ್ಬಂದಿಯೂ ತನಿಖೆ ವ್ಯಾಪ್ತಿಗೆ. ಅವರ ಕರ್ತವ್ಯ ದಾಖಲೆ, ಕೆಲಸ ವಿಧಾನಗಳನ್ನು ಜಾಲಾಡುತ್ತಿರುವ ಎಸ್ಐಟಿ
- ಜುಲೈ 6 ರಂದು ಟ್ರಸ್ಟ್‌ನಿಂದ ಮಹತ್ವದ ಸಭೆ. ಚಂಪತ್ ರಾಯ್, ಟ್ರಸ್ಟ್ ಮಾಜಿ ಸದಸ್ಯ ಅನಿಲ್ ಮಿಶ್ರಾ ಭವಿಷ್ಯದ ಕುರಿತು ನಿರ್ಧಾರ ಸಾಧ್ಯತೆ

ಚಂಪತ್ ರಾಯ್ ವಿಚಾರಣೆ

ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್‌ನ ಮಾಜಿ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಅವರನ್ನು ಎಸ್ಐಟಿ ಮಂಗಳವಾರ ಮೂರು ಗಂಟೆಗೂ ಹೆಚ್ಚು ಕಾಲ ವಿಚಾರಣೆಗೊಳಪಡಿಸಿದೆ. ಅವರಿಂದ ಸಾಕಷ್ಟು ಮಾಹಿತಿಯನ್ನು ಕಲೆಹಾಕಿದೆ ಎಂದು ಮೂಲಗಳು ಹೇಳಿವೆ. ದೇಣಿಗೆ ಕಳವು ಪ್ರಕರಣದಲ್ಲಿ ತಮ್ಮ ಪಾತ್ರವಿಲ್ಲ ಎಂದು ಚಂಪತ್ ರಾಯ್ ಸಮಜಾಯಿಷಿ ನೀಡಿದ್ದಾರೆ. ವಿಶೇಷ ತನಿಖಾ ತಂಡವು ಟ್ರಸ್ಟ್ ಸದಸ್ಯರು, ಅರ್ಚಕರು ಹಾಗೂ ದೇಣಿಗೆ ಎಣಿಕೆ ಕಾರ್ಯಕ್ಕೆ ಎಸ್‌ಬಿಐ ಬ್ಯಾಂಕ್‌ನಿಂದ ಹೊರಗುತ್ತಿಗೆ ನೌಕರರಾಗಿ ನೇಮಕಗೊಂಡಿದ್ದ ಸಿಬ್ಬಂದಿಯನ್ನೂ ವಿಚಾರಣೆಗೊಳಪಡಿಸಿದೆ.

ಖ್ಯಾತ ನಟಿ
ಅದಿತಿ ಪ್ರಭುದೇವ
ಹೊಸ ಪಾಕ್ಷಿಕ ಅಂಕಣ
ಫಿಲ್ಟರ್ ಇಲ್ಲದ ಲೈಫು
ಇಂದಿನಿಂದ...

ಗೃಹ ಜ್ಯೋತಿ ಫಲಾನುಭವಿಗಳ ಪರಿಶೀಲನೆ

ಬೆಂಗಳೂರು: ರಾಜ್ಯ ಸರಕಾರದ ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳ ಪರಿಶೀಲನಾ ಕಾರ್ಯ ಬುಧವಾರದಿಂದ (ಜು.1) ಆರಂಭವಾಗಲಿದ್ದು, ವಿದ್ಯುತ್ ವಿತರಣಾ ಕಂಪನಿಗಳ (ಎಸ್ಕಾಂ) ಸಿಬ್ಬಂದಿಯು ಮನೆ ಮನೆಗೆ ಖುದ್ದು ಭೇಟಿ ಕೊಟ್ಟು ವಿದ್ಯುತ್ ಸಂಪರ್ಕದ ದಾಖಲೆಗಳನ್ನು ಪರಿಶೀಲಿಸಲಿದ್ದಾರೆ.

2023ರ ಜುಲೈನಲ್ಲಿ ಜಾರಿಯಾದ ಗೃಹ ಜ್ಯೋತಿ ಯೋಜನೆಯ ಪುನರ್ ಪರಿಶೀಲನಾ ಕಾರ್ಯ ನಡೆಯಲಿದ್ದು, ಎಲ್ಲಾ ಎಸ್ಕಾಂಗಳ ಮೀಟರ್ ರೀಡರ್‌ಗಳು ಹಾಗೂ ಸಿಬ್ಬಂದಿಯು ಗ್ರಾಹಕರ ಮನೆಗಳಿಗೆ ತೆರಳಿ, ಫಲಾನುಭವಿಗಳ ಮಾಹಿತಿ ಸಂಗ್ರಹಿಸಲಿದ್ದಾರೆ. ಜತೆಗೆ, ಮೊಬೈಲ್ ಆ್ಯಪ್ ಹಾಗೂ ಘೋಷಣಾ ಪತ್ರದ ಮೂಲಕ ಅರ್ಜಿ ಭರ್ತಿ ಪ್ರಕ್ರಿಯೆ ಪೂರ್ಣಗೊಳಿಸಲಿದ್ದಾರೆ.

ರಾಜ್ಯದ ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಜೆಸ್ಕಾಂ ಹಾಗೂ ಸೆಸ್ಕ್ ವ್ಯಾಪ್ತಿಯಲ್ಲಿ ಪರಿಶೀಲನಾ ಕಾರ್ಯ ನಡೆಯಲಿದೆ.

ಕಲಾವಿದ ಶಿವಪ್ರಸಾದ್ ಇನ್ನಿಲ್ಲ

ಬೆಂಗಳೂರು: ಅಂತಾರಾಷ್ಟ್ರೀಯ ಖ್ಯಾತಿಯ ಹಿರಿಯ ಚಿತ್ರಕಲಾವಿದ ಕೆ.ಟಿ. ಶಿವಪ್ರಸಾದ್ (79) ಮಂಗಳವಾರ ನಿಧನರಾಗಿದ್ದಾರೆ. ಅನಾರೋಗ್ಯದ ಹಿನ್ನೆಲೆಯಲ್ಲಿ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ರೈತ ಹಾಗೂ ದಲಿತ ಚಳವಳಿಯಲ್ಲಿ ಗುರುತಿಸಿಕೊಂಡಿದ್ದ ಕೆ.ಟಿ. ಶಿವಪ್ರಸಾದ್, ಹಾಸನ ಜಿಲ್ಲೆಯ ಕಾರ್ಲೆಯ ಖ್ಯಾತ ಉದ್ಯಮಿ ಎಲ್. ಟಿ. ಕಾರ್ಲೆ ಅವರ ಪುತ್ರರಾಗಿದ್ದಾರೆ. ಶಿವಪ್ರಸಾದ್ ಅವರ ಅಂತ್ಯಕ್ರಿಯೆಯನ್ನು ಬುಧವಾರ ಮಧ್ಯಾಹ್ನ 2 ಗಂಟೆಗೆ ಹಾಸನ ಜಿಲ್ಲೆಯ ಬಿಟ್ಟಗೌಡನಹಳ್ಳಿ ಶಾಂತಿಧಾಮದಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿವರ»05

ಪಿಒಕೆ ಜನರ ಘೋಷಣೆ | ಸ್ಥಳೀಯ ಆಡಳಿತ ವಿರುದ್ಧ ಹೋರಾಟ ತೀವ್ರ

ನಾವು ಪಾಕಿಸ್ತಾನದ ಭಾಗವಲ್ಲ

ಹೊಸದಿಲ್ಲಿ: ಪಾಕ್ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಪಾಕಿಸ್ತಾನ ಸರಕಾರದ ವಿರುದ್ಧದ ಬಂಡಾಯ ಮಂಗಳವಾರ ಮತ್ತಷ್ಟು ತೀವ್ರಗೊಂಡಿದ್ದು, ತಾವು ಪಾಕಿಸ್ತಾನದ ಭಾಗವಲ್ಲ ಎಂದು ಅಲ್ಲಿನ ಜನ ಘೋಷಿಸಿಕೊಂಡಿದ್ದಾರೆ.

ರಾವಲ್‌ಕೋಟ್, ಮೀರ್‌ಪುರ ನಿವಾಸಿಗಳು ಕಾಶ್ಮೀರಿಗಳೇ ಅಲ್ಲ ಎಂಬ ಪಾಕಿಸ್ತಾನ ರಕ್ಷಣಾ ಸಚಿವ ಖ್ವಾಜಾ ಆಸಿಫ್ ವಿವಾದಾತ್ಮಕ ಹೇಳಿಕೆ ಬಳಿಕ ಸರಕಾರದ ವಿರುದ್ಧದ ಹೋರಾಟ ಬಿರುಸುಗೊಂಡಿದೆ. ಜಮ್ಮು-ಕಾಶ್ಮೀರ ಅವಾಮಿ ಕ್ರಿಯಾ ಸಮಿತಿಯನ್ನು (ಜೆಎಸಿ) ಉಗ್ರ ಸಂಘಟನೆ ಪಟ್ಟಿಗೆ ಸೇರಿಸಿದ ಸರಕಾರದ ನೀತಿ ವಿರುದ್ಧ ಸ್ಥಳೀಯ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾವಲ್‌ಕೋಟ್ ಈದ್ಗಾ ಮೈದಾನದಲ್ಲಿ ನೆರೆದಿದ್ದ ಸಾವಿರಾರು ಜನರು 'ಇನ್ನುಮುಂದೆ ನಾವು ಪಾಕಿಸ್ತಾನದ ಭಾಗವಲ್ಲ' ಎಂದು ಘೋಷಿಸಿಕೊಂಡರಲ್ಲದೆ, ''ನಾವಿರುವ ಪ್ರದೇಶ ಪಾಕಿಸ್ತಾನದ ಭಾಗವೇ ಅಲ್ಲ, ಇಲ್ಲಿರುವ ಜನರಿಗೆ ಆಹಾರ, ನೀರು ಸೇರಿದಂತೆ ಅಗತ್ಯ ವಸ್ತುಗಳ ಸರಬರಾಜಿಗೆ ಇಸ್ಲಾಮಾಬಾದ್ ಅಡ್ಡಿಪಡಿಸಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ನಾವು ಪರ್ಯಾಯ ದಾರಿ ಹುಡುಕಿಕೊಳ್ಳಬೇಕಾಗುತ್ತದೆ,'' ಎಂದು ಎಚ್ಚರಿಕೆ ನೀಡಿದ್ದಾರೆ.

''ನಮಗೆ ನಿಮ್ಮ ಪಡಿತರದ ಅಗತ್ಯವಿಲ್ಲ, ನಿಮಗೇ ನಮ್ಮ ಅವಶ್ಯಕತೆ ಇದೆ ಎಂಬುದನ್ನು ಮರೆಯಬೇಡಿ. ನಮ್ಮ ಪ್ರದೇಶಕ್ಕೆ ಅಗತ್ಯ ವಸ್ತುಗಳ ಸರಬರಾಜು ನಿರ್ಬಂಧ ಮುಂದುವರಿದರೆ ನಮ್ಮ ಮುಂದಿನ ಭವಿಷ್ಯ ರೂಪಿಸಿಕೊಳ್ಳಲು ಹೊಸ ದಾರಿ ಅನ್ವೇಷಣೆ ಮಾಡಿಕೊಳ್ಳಬೇಕಾಗುತ್ತದೆ,'' ಎಂದು ಪಾಕ್ ಆಕ್ರಮಿತ ಕಾಶ್ಮೀರ ಪ್ರದೇಶದ ನಾಯಕ ಸರ್ದಾರ್ ಅಮನ್ ಖಾನ್ ಗುಡುಗಿದ್ದಾರೆ.

ಜೆಎಸಿಗೆ ಉಗ್ರರ ಹಣೆಪಟ್ಟಿ

ಜಮ್ಮು-ಕಾಶ್ಮೀರ ಅವಾಮಿ ಕ್ರಿಯಾ ಸಮಿತಿ (ಜೆಎಸಿ) ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆ ಹತ್ತಿಕ್ಕಲು ಪಾಕ್ ಸರಕಾರ ಈಗಾಗಲೇ ಸೇನಾ ಬಲ ಪ್ರಯೋಗಿಸಿದೆ. ಈ ಹಿಂದೆ ನಡೆದ ಪ್ರತಿಭಟನಾಕಾರರು ಹಾಗೂ ಭದ್ರತಾ ಪಡೆಗಳ ನಡುವಿನ ಸಂಘರ್ಷದಲ್ಲಿ 60ಕ್ಕೂ ಹೆಚ್ಚು ಜನರು ಸಾವಿಗೀಡಾಗಿದ್ದಾರೆ. ಬೆಲೆ ಏರಿಕೆ ನಿಯಂತ್ರಣ, ಉತ್ತಮ ಆಡಳಿತ ಹಾಗೂ ಅಗತ್ಯ ವಸ್ತುಗಳ ಸರಾಗ ಪೂರೈಕೆಗಾಗಿ ಜನರು ನಡೆಸುತ್ತಿರುವ ಹೋರಾಟವು ದೇಶದ ಭದ್ರತೆಗೆ ಅಪಾಯ ಎಂದು ಬಿಂಬಿಸಲು ಇಸ್ಲಾಮಾಬಾದ್ ಕುತಂತ್ರ ರೂಪಿಸಿದೆ. ಭಯೋತ್ಪಾದನೆ ನಿಗ್ರಹ ಕಾಯಿದೆಯಡಿ ಸಮಿತಿಯನ್ನು ಪಾಕ್ ಸರಕಾರ ನಿಷೇಧಿಸಿದೆ.

ಹರ್ಮುಜ್ ದಾಟಿದ 40 ಹಡಗುಗಳು

ಟೆಹರಾನ್: ಅಮೆರಿಕ-ಇರಾನ್ ಪಡೆಗಳ ಇತ್ತೀಚಿನ ಪರಸ್ಪರ ದಾಳಿಯಿಂದ ಸ್ಥಗಿತಗೊಂಡಿದ್ದ ಹರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸಂಚಾರ ಪುನರಾರಂಭವಾಗಿದೆ.

ಕಳೆದ 24 ಗಂಟೆಗಳಲ್ಲಿ ವಿವಿಧ ದೇಶಗಳಿಗೆ ಸೇರಿದ 40ಕ್ಕೂ ಹೆಚ್ಚು ತೈಲ, ಅನಿಲ ಸಾಗಣೆ ಹಡಗುಗಳು ಸರಾಗವಾಗಿ ಸಂಚರಿಸಿವೆ ಎಂದು ನಿಗಾ ಸಂಸ್ಥೆ ಕೆಪ್ಲರ್ ಹೇಳಿಕೆ ಉಲ್ಲೇಖಿಸಿ ಮಾಧ್ಯಮಗಳು ವರದಿ ಮಾಡಿವೆ. ತೈಲ ಮತ್ತು ಅನಿಲ ಸಾಗಣೆಗೆ ಅತ್ಯಂತ ಪ್ರಮುಖ ಜಲಮಾರ್ಗವಾದ ಈ ಜಲಸಂಧಿ ಮೂಲಕ ಕಳೆದ ಬುಧವಾರ 76 ಹಡಗುಗಳು ಸಂಚರಿಸಿದ್ದು, ಇದು ಮಾರ್ಚ್ 1ರ ನಂತರ ದಾಖಲಾದ ಗರಿಷ್ಠ ಸಂಖ್ಯೆಯಾಗಿತ್ತು.

ಈ ಮಧ್ಯೆ, ಕಚ್ಚಾ ತೈಲ ದರ ಬ್ಯಾರೆಲ್‌ಗೆ 68 ಡಾಲರ್ ತಲುಪಿದ್ದು, ಕೂಡಲೇ ರಿಟೇಲ್ ಕಂಪನಿಗಳು ಪೆಟ್ರೋಲ್ ಬೆಲೆಯನ್ನು ತಗ್ಗಿಸಬೇಕು ಎಂದು ಟ್ರುಥ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಮ್ಮ ದೇಶದ ಕಂಪನಿಗಳಿಗೆ ಆಗ್ರಹಿಸಿದ್ದಾರೆ. ಒಂದೊಮ್ಮೆ ಈ ಸೂಚನೆ ಪಾಲಿಸದಿದ್ದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಇತ್ತ, ಅಮೆರಿಕ-ಇರಾನ್ ಶಾಂತಿ ಒಪ್ಪಂದ ಮಾತುಕತೆ ಸಂಬಂಧ ಅಮೆರಿಕದ ವಿಶೇಷ ರಾಯಭಾರಿ ಸ್ಟೀವ್ ವಿಟ್ಕಾಫ್ ಹಾಗೂ ಟ್ರಂಪ್ ಅಳಿಯ ಜೇರಡ್ ಕುಶ್ನೆರ್ ಮಂಗಳವಾರ ಕತಾರ್‌ನ ದೋಹಾ ತಲುಪಿದ್ದಾರೆ. ಆದರೆ ಉಭಯ ದೇಶಗಳ ಸಂಧಾನಕಾರರ ಮಧ್ಯೆ ನೇರ ಮಾತುಕತೆ ನಡೆಯುವ ಸಾಧ್ಯತೆ ವಿರಳ ಎನ್ನಲಾಗಿದೆ.

ಇನ್‌ಸೈಟ್

ಅಡ್ಡ ಮತದಾರರ ರಾಜಕೀಯ ಅಂತ್ಯ ಸನ್ನಿಹಿತ »02
ಟ್ರಾವೆಲ್ ಏಜೆಂಟ್‌ಗೆ ಉಗ್ರ ನೆರವಿನ ಕಂಟಕ »05
ಪ್ರಯೋಗ ಹಂತದಲ್ಲಿ ಎಥೆನಾಲ್ ಮಿಶ್ರಣ: ಕೇಂದ್ರ ಸ್ಪಷ್ಟನೆ »06



ದಾವಣಗೆರೆ ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಶಿವಗಂಗೋತ್ರಿ, ದಾವಣಗೆರೆ–577007
ದೂರವಾಣಿ ಸಂಖ್ಯೆ:08192–208029, ಫ್ಯಾಕ್ಸ್:08192–208008

ಸಂಖ್ಯೆ:ದಾವಿ:ಶೈಕ್ಷಣಿಕ ವಿಭಾಗ/167/2026–27/1501 ದಿನಾಂಕ:30.06.2026

ಪ್ರವೇಶ ಪ್ರಕಟಣೆ

ವಿಷಯ: ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಪದವಿ ಶೈಕ್ಷಣಿಕ ಕಾರ್ಯಕ್ರಮಗಳು, ಪಿ.ಜಿ.ಡಿಪ್ಲೋಮಾ/ಡಿಪ್ಲೋಮಾ/ಸರ್ಟಿಫಿಕೆಟ್ ಶೈಕ್ಷಣಿಕ ಕಾರ್ಯಕ್ರಮಗಳಿಗೆ 2026–27ನೇ ಶೈಕ್ಷಣಿಕ ಸಾಲಿಗೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: (1) ಎಲ್ಲಾ ನಿಕಾಯದ ಡೀನರು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗದ ಅಧ್ಯಕ್ಷರು/ಸಂಯೋಜನಾಧಿಕಾರಿಗಳ ಸಭೆಯ ನಿರ್ಣಯ, ದಿನಾಂಕ:08.06.2026 ಮತ್ತು 15.06.2026 (2) ಎಲ್ಲಾ ನಿಕಾಯದ ಡೀನರ ಸಭೆಯ ನಿರ್ಣಯ ದಿನಾಂಕ: 20.06.2026 (3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:29.06.2026

ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ ಶಿವಗಂಗೋತ್ರಿ, ದಾವಣಗೆರೆ, ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ, ಜಿ.ಆರ್. ಹಳ್ಳಿ, ಚಿತ್ರದುರ್ಗ, ಘಟಕ ಕಾಲೇಜು, ಸ್ವಾಯತ್ತ ಕಾಲೇಜುಗಳು, ಮತ್ತು ಸಂಲಗ್ನಗೊಂಡ ಕಾಲೇಜುಗಳಲ್ಲಿನ ವಿವಿಧ ಸ್ನಾತಕೋತ್ತರ ಪದವಿ ಶೈಕ್ಷಣಿಕ ಕಾರ್ಯಕ್ರಮಗಳು, ಪಿ.ಜಿ., ಡಿಪ್ಲೋಮೊ, ಡಿಪ್ಲೋಮೊ ಮತ್ತು ಸರ್ಟಿಫಿಕೆಟ್ ಶೈಕ್ಷಣಿಕ ಕಾರ್ಯಕ್ರಮಗಳಿಗೆ 2026–27ನೇ ಶೈಕ್ಷಣಿಕ ಸಾಲಿನ ಪ್ರವೇಶಾತಿಗಳಿಗೆ "ಆಫ್‌ಲೈನ್" ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

I. ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ, ಶಿವಗಂಗೋತ್ರಿ, ದಾವಣಗೆರೆ – ಇಲ್ಲಿರುವ ಸ್ನಾತಕೋತ್ತರ ಶೈಕ್ಷಣಿಕ ಕಾರ್ಯಕ್ರಮಗಳ ವಿವರ.

ಕ್ರ.ಸಂ.	ನಿಕಾಯ	ವ್ಯಾಸಂಗ ವಿಷಯಗಳು
1	ಕಲಾ	ಎಂ.ಎ: ಕನ್ನಡ, ಇಂಗ್ಲೀಷ್, ಮತ್ತು ಉರ್ದು ಎಂ.ಎ: ಅರ್ಥಶಾಸ್ತ್ರ, ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ರಾಜ್ಯಶಾಸ್ತ್ರ, ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯು), ಮತ್ತು ಸಮಾಜಶಾಸ್ತ್ರ. **ಮಾಸ್ಟರ್ ಆಫ್ ವಿಜುವಲ್ ಆರ್ಟ್ಸ್:** ಅಪ್ಲೈಡ್ ಆರ್ಟ್, ಮತ್ತು ಪೇಂಟಿಂಗ್
2	ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ	ಎಂ.ಕಾಂ. ಎಂ.ಬಿ.ಎ.: ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ (ಪ್ರವೇಶಾತಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರ–ಪಿ.ಜಿ.ಸಿ.ಇ.ಟಿ. ಮುಖಾಂತರ)
3	ಶಿಕ್ಷಣ	ಎಂ.ಇಡಿ. ಮತ್ತು ಎಂ.ಪಿ.ಇಡಿ.
4	ವಿಜ್ಞಾನ ಮತ್ತು ತಂತ್ರಜ್ಞಾನ	ಎಂ.ಎಸ್ಸಿ: ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ, ಜೀವರಸಾಯನಶಾಸ್ತ್ರ, ಜೈವಿಕ ತಂತ್ರಜ್ಞಾನ, ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಕಯಂತ್ರ ವಿಜ್ಞಾನ, ಪರಿಸರ ವಿಜ್ಞಾನ, ಆಹಾರ ತಂತ್ರಜ್ಞಾನ, ಗಣಿತಶಾಸ್ತ್ರ, ಸೂಕ್ಷ್ಮಜೀವಿಶಾಸ್ತ್ರ, ಭೌತಶಾಸ್ತ್ರ, ಯೋಗ ವಿಜ್ಞಾನ, ಮತ್ತು ಪ್ರಾಣಿಶಾಸ್ತ್ರ. ಎಂ.ಸಿ.ಎ.: ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್ (ಪ್ರವೇಶಾತಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರ–ಪಿ.ಜಿ.ಸಿ.ಇ.ಟಿ. ಮುಖಾಂತರ)
5	ಪಿ.ಜಿ. ಡಿಪ್ಲೋಮಾ/ ಡಿಪ್ಲೋಮಾ/ ಸರ್ಟಿಫಿಕೆಟ್ ಕಾರ್ಯಕ್ರಮಗಳು	1. ಪಿ.ಜಿ. ಡಿಪ್ಲೋಮಾ ಇನ್ ಸೈಬರ್ ಸೆಕ್ಯೂರಿಟಿ (ಅಪರಾಧಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ಅಧ್ಯಯನ ವಿಭಾಗ) 2. ಪಿ.ಜಿ. ಡಿಪ್ಲೋಮಾ ಇನ್ ಫೈನಾನ್ಷಿಯಲ್ ಸರ್ವಿಸ್ (ವಾಣಿಜ್ಯಶಾಸ್ತ್ರ ಅಧ್ಯಯನ ವಿಭಾಗ) 3. ಪಿ.ಜಿ. ಡಿಪ್ಲೋಮ ಇನ್ ಡಾಟಾ ಅನಾಲಿಸಿಸ್ (ಅರ್ಥಶಾಸ್ತ್ರ ಅಧ್ಯಯನ ವಿಭಾಗ) 4. ಪಿ.ಜಿ. ಡಿಪ್ಲೋಮಾ ಇನ್ ಫುಡ್ ಪ್ರೊಸೆಸಿಂಗ್, ಸೇಫ್ಟಿ ಅಂಡ್ ಕ್ವಾಲಿಟಿ ಮ್ಯಾನೇಜ್‌ಮೆಂಟ್ (ಆಹಾರ ತಂತ್ರಜ್ಞಾನ ಅಧ್ಯಯನ ವಿಭಾಗ) 5. ಡಿಪ್ಲೋಮ ಇನ್ ಯೋಗ ವಿಜ್ಞಾನ (ಯೋಗ ವಿಜ್ಞಾನ ಅಧ್ಯಯನ ವಿಭಾಗ) 6. ಮೂರು ತಿಂಗಳ ಸರ್ಟಿಫಿಕೆಟ್ ಕಾರ್ಯಕ್ರಮ (ಯೋಗ ವಿಜ್ಞಾನ ಅಧ್ಯಯನ ವಿಭಾಗ)

II ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರ, ಜ್ಞಾನ ಗಂಗೋತ್ರಿ, ಜಿ.ಆರ್. ಹಳ್ಳಿ, ಚಿತ್ರದುರ್ಗ–ಇಲ್ಲಿರುವ ಸ್ನಾತಕೋತ್ತರ ಶೈಕ್ಷಣಿಕ ಕಾರ್ಯಕ್ರಮಗಳ ವಿವರ.

ಕ್ರ.ಸಂ.	ನಿಕಾಯ	ವ್ಯಾಸಂಗ ವಿಷಯಗಳು
1	ಕಲಾ	ಎಂ.ಎ: ಕನ್ನಡ, ಇಂಗ್ಲೀಷ್, ಅರ್ಥಶಾಸ್ತ್ರ, ಮತ್ತು ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯು)
2	ವಾಣಿಜ್ಯ ಮತ್ತು ನಿರ್ವಹಣಾಶಾಸ್ತ್ರ	ಎಂ.ಕಾಂ.
3	ವಿಜ್ಞಾನ ಮತ್ತು ತಂತ್ರಜ್ಞಾನ	ಎಂ.ಎಸ್ಸಿ: ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಭೌತಶಾಸ್ತ್ರ, ಮತ್ತು ಪ್ರಾಣಿಶಾಸ್ತ್ರ.

III ಸ್ವಾಯತ್ತ ಮತ್ತು ಸಂಯೋಜಿತ ಕಾಲೇಜುಗಳಲ್ಲಿ ನಡೆಸುತ್ತಿರುವ ಸ್ನಾತಕೋತ್ತರ ಶೈಕ್ಷಣಿಕ ಕಾರ್ಯಕ್ರಮಗಳ ವಿವರ.

ಕ್ರ.ಸಂ.	ಕಾಲೇಜಿನ ಹೆಸರು	ವ್ಯಾಸಂಗ ವಿಷಯಗಳು
	ದಾವಣಗೆರೆ ಜಿಲ್ಲೆ	
1	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.	ಎಂ.ಎ: ಕನ್ನಡ, ಮತ್ತು ಇಂಗ್ಲೀಷ್. ಎಂ.ಕಾಂ. ಎಂ.ಬಿ.ಎ. (ಪ್ರವೇಶಾತಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರ–ಪಿ.ಜಿ.ಸಿ.ಇ.ಟಿ. ಮುಖಾಂತರ)
2	ಶ್ರೀ ಶ್ರೀ ಶಿವಲಿಂಗೇಶ್ವರಸ್ವಾಮಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನಗಿರಿ.	ಎಂ.ಎ: ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಮತ್ತು ಸಮಾಜಶಾಸ್ತ್ರ. ಎಂ.ಕಾಂ.
3	ಎ.ಆರ್.ಎಂ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.	ಎಂ.ಕಾಂ.
4	ಎ.ಆರ್.ಜಿ. ಪ್ರಥಮ ದರ್ಜೆ ಕಾಲೇಜು, ದಾವಣಗೆರೆ.	ಎಂ.ಕಾಂ.
5	ಎಸ್.ಬಿ.ಸಿ. ಮಹಿಳಾ ಪ್ರಥಮ ದರ್ಜೆ ಕಾಲೇಜು, ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರ, ದಾವಣಗೆರೆ.	ಎಂ.ಎ: ಇಂಗ್ಲೀಷ್, ಮತ್ತು ಅರ್ಥಶಾಸ್ತ್ರ. ಎಂ.ಕಾಂ.
6	ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ, ದಾವಣಗೆರೆ	ಎಂ.ಬಿ.ಎ. (ಪ್ರವೇಶಾತಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರ–ಪಿ.ಜಿ.ಸಿ.ಇ.ಟಿ. ಮುಖಾಂತರ)
7	ಭದ್ರಾ ಇನ್ಸಿಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಇನ್‌ಫಾರ್ಮೇಷನ್ ಸ್ಟಡೀಸ್, ದಾವಣಗೆರೆ.	ಎಂ.ಕಾಂ.
8	ಎಸ್.ಜೆ.ವಿ.ಪಿ. ಕಾಲೇಜು, ಹರಿಹರ.	ಎಂ.ಕಾಂ.
9	ಆರ್. ಜಿ. ಇನ್ಸಿಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್, ದಾವಣಗೆರೆ.	ಎಂ.ಬಿ.ಎ. (ಪ್ರವೇಶಾತಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರ–ಪಿ.ಜಿ.ಸಿ.ಇ.ಟಿ. ಮುಖಾಂತರ)
10	ಕೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ	ಎಂ.ಇಡಿ.
	ಚಿತ್ರದುರ್ಗ ಜಿಲ್ಲೆ	
11	ಸರ್ಕಾರಿ ಕಲಾ ಕಾಲೇಜು, (ಸ್ವಾಯತ್ತ) ಚಿತ್ರದುರ್ಗ.	ಎಂ.ಎ: ಕನ್ನಡ, ಇಂಗ್ಲೀಷ್. ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮತ್ತು ಸಮಾಜಶಾಸ್ತ್ರ. ಎಂ.ಕಾಂ.
12	ಸರ್ಕಾರಿ ವಿಜ್ಞಾನ ಕಾಲೇಜು, ಚಿತ್ರದುರ್ಗ.	ಎಂ.ಎಸ್ಸಿ: ಸಸ್ಯಶಾಸ್ತ್ರ, ರಸಾಯನಶಾಸ್ತ್ರ, ಗಣಿತಶಾಸ್ತ್ರ, ಮತ್ತು ಭೌತಶಾಸ್ತ್ರ
13	ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸದುರ್ಗ.	ಎಂ.ಎ: ಕನ್ನಡ, ಇತಿಹಾಸ ಮತ್ತು ಪ್ರಾಕ್ತನಾಶಾಸ್ತ್ರ. ಎಂ.ಕಾಂ.
14	ಹೆಚ್.ಪಿ.ಪಿ.ಸಿ. ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚಳ್ಳಕೆರೆ.	ಎಂ.ಎ: ಕನ್ನಡ, ಮತ್ತು ಸಮಾಜಶಾಸ್ತ್ರ. ಎಂ.ಕಾಂ.
15	ಶ್ರೀಮತಿ ಯಶೋಧರಮ್ಮ ಬೋರಪ್ಪ ಮಹಿಳಾ ಪ್ರಥಮ ದರ್ಜೆ ಕಾಲೇಜು, ಚಿತ್ರದುರ್ಗ	ಎಂ.ಎ: ಇಂಗ್ಲೀಷ್.
16	ಎಸ್.ಆರ್.ಎಸ್ ಪದವಿ ಕಾಲೇಜು, ಚಿತ್ರದುರ್ಗ	ಎಂ.ಸಿ.ಎ.: ಮಾಸ್ಟರ್ ಆಫ್ ಕಂಪ್ಯೂಟರ್ ಅಪ್ಲಿಕೇಷನ್ಸ್ (ಪ್ರವೇಶಾತಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರ–ಪಿ.ಜಿ.ಸಿ.ಇ.ಟಿ. ಮುಖಾಂತರ)

ಅರ್ಜಿ ಶುಲ್ಕದ ವಿವರ

ಕ್ರ. ಸಂ.	ಶುಲ್ಕ ವಿವರಗಳು	ಸಾಮಾನ್ಯ/ಇತರೇ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ	ಪ.ಜಾ/ಪ.ಪಂ/ ಪ್ರವರ್ಗ–1ರ ವಿದ್ಯಾರ್ಥಿಗಳಿಗೆ	ಪಾವತಿಸುವ ವಿಧಾನ
1	ಅರ್ಜಿಗಳ ಪರಿಶೀಲನೆ ಮತ್ತು ಪ್ರವೇಶ ಪರೀಕ್ಷಾ ಶುಲ್ಕ	ರೂ.1000/–	ರೂ.500/–	ಶುಲ್ಕ ಪಾವತಿಯನ್ನು ಚಲನ್ ಮೂಲಕ (ಆಫ್‌ಲೈನ್) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ವಿಶ್ವವಿದ್ಯಾನಿಲಯ **ಖಾತೆ ಸಂಖ್ಯೆ: 40619101261 (IFSC Code: SBIN0040869)** ಶಾಖೆಗೆ ಸಂದಾಯವಾಗುವಂತೆ ಪಾವತಿಸಬಹುದು ಅಥವಾ ಹಣಕಾಸು ಅಧಿಕಾರಿಗಳು, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ –ಇವರ ಹೆಸರಿನಲ್ಲಿ ಡಿಡಿ ಮೂಲಕ ಪಾವತಿಸುವುದು.
2	ಹೆಚ್ಚುವರಿ ಕಾರ್ಯಕ್ರಮಗಳಿಗಾಗಿ	ರೂ.1000/–	ರೂ.500/–	

ಅರ್ಜಿಸಲ್ಲಿಸುವ ವಿಧಾನ: ಅರ್ಹ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ ಶಿವಗಂಗೋತ್ರಿ, ದಾವಣಗೆರೆ, ಸ್ನಾತಕೋತ್ತರ ಕೇಂದ್ರ ಜ್ಞಾನಗಂಗೋತ್ರಿ, ಜಿ.ಆರ್. ಹಳ್ಳಿ, ಚಿತ್ರದುರ್ಗ, ಸ್ವಾಯತ್ತ ಮತ್ತು ಸಂಯೋಜಿತ ಪದವಿ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿ ಶೈಕ್ಷಣಿಕ ಕಾರ್ಯಕ್ರಮಗಳಿಗೆ, ವಿಶ್ವವಿದ್ಯಾನಿಲಯದ ವೆಬ್‌ಸೈಟ್: www.davangereuniversity.ac.in ಮೂಲಕ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರತ್ಯೇಕವಾಗಿ ಅರ್ಜಿ ಭರ್ತಿ ಮಾಡಿ, ಅಗತ್ಯ ದಾಖಲಾತಿಗಳೊಂದಿಗೆ **ದಿನಾಂಕ:01.07.2026 ರಿಂದ ದಿನಾಂಕ: 31.07.2026 (ಕೆಲಸದ ದಿನಗಳಲ್ಲಿ ಕಛೇರಿಯ ಅವಧಿ ಬೆಳಗ್ಗೆ 10:00 ಗಂಟೆಯಿಂದ ಸಂಜೆ 5:30) ರೊಳಗಾಗಿ ಸಂಬಂಧಪಟ್ಟ ಸ್ನಾತಕೋತ್ತರ ಅಧ್ಯಯನ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ, ಶಿವಗಂಗೋತ್ರಿ, ದಾವಣಗೆರೆ**–ಇಲ್ಲಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಅರ್ಜಿಗಳನ್ನು ಸಲ್ಲಿಸಬಹುದು.

ಮುಖ್ಯ ಸೂಚನೆ: ಸ್ನಾತಕೋತ್ತರ ಪದವಿ, ಪಿ.ಜಿ. ಡಿಪ್ಲೋಮಾ, ಡಿಪ್ಲೋಮಾ ಮತ್ತು ಸರ್ಟಿಫಿಕೆಟ್ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಪ್ರವೇಶಾತಿ ಬಯಸುವ ಅಭ್ಯರ್ಥಿಗಳು ಪ್ರವೇಶಾತಿಗೆ ಸಂಬಂಧಪಟ್ಟ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.davangereuniversity.ac.in) ನಲ್ಲಿ ಪಡೆಯಬಹುದಾಗಿದೆ. ದೈನಂದಿನ ಅಥವಾ ಹೆಚ್ಚುವರಿ ಮಾಹಿತಿಗಾಗಿ ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನ್ನು ನಿಯಮಿತವಾಗಿ ಸಂಪರ್ಕಿಸಬಹುದಾಗಿದೆ. **ಈ ಸಂಬಂಧ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಯಾವುದೇ ಮಾಹಿತಿಯನ್ನು ರವಾನಿಸಲಾಗುವುದಿಲ್ಲ.**

IV. ಅರ್ಜಿಗಳೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ಪ್ರತಿಗಳ ವಿವರಗಳು:
(1) ಎಸ್.ಎಸ್.ಎಲ್.ಸಿ/10ನೇ ತರಗತಿಯ ಅಂಕಪಟ್ಟಿ ಪ್ರತಿ. (2) ಪದವಿ ಅಂಕಪಟ್ಟಿಗಳು (ಎಲ್ಲಾ 03 ವರ್ಷಗಳ/06 ಸೆಮಿಸ್ಟರ್‌ಗಳ ಪ್ರತಿಗಳು) (3) ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳ ಪ್ರತಿಗಳು. (4) ಆಧಾರ್ ಕಾರ್ಡ್ ಪ್ರತಿ. ಮೀಸಲಾತಿ/ದಿವ್ಯಾಂಗ/ಕ್ರೀಡಾ/ರಾ.ಸೇ.ಯೋ./ಎನ್.ಸಿ.ಸಿ./ರೇಂಜರ್ಸ್ ಮತ್ತು ರೋವರ್ಸ್/ಮಾಜಿ ಸೈನಿಕರ ಅವಲಂಭಿತರು/ಕಲ್ಯಾಣ ಕರ್ನಾಟಕ–371(ಜೆ)/ಕನ್ನಡ ಮಾಧ್ಯಮ/ಹುತಾತ್ಮ ರೈತರ ಮಕ್ಕಳು ಇತ್ಯಾದಿ, ಕುರಿತು ಸಂಬಂಧಪಟ್ಟ ಅಧಿಕೃತ ಅಧಿಕಾರಿಗಳಿಂದ ನೀಡಲ್ಪಟ್ಟ ದಾಖಲೆಗಳ ಪ್ರತಿ.

V ಪ್ರವೇಶ ಪರೀಕ್ಷೆ ವೇಳಾಪಟ್ಟಿ ಹಾಗೂ ಸಂದರ್ಶನ ಪ್ರಕ್ರಿಯೆಯ ವಿವರಗಳು

ಕ್ರ.ಸಂ.	ವಿವರಗಳು	ದಿನಾಂಕ
1	ಅರ್ಜಿ ವಿತರಣೆ ಹಾಗೂ ಸಲ್ಲಿಸಲು ಪ್ರಾರಂಭದ ದಿನಾಂಕ	01.07.2026
2	ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	31.07.2026
3	ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿ: (ವಿಭಾಗವಾರು ಪ್ರವೇಶ ಪರೀಕ್ಷೆಗಳ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ (www.davangereuniversity.ac.in)ನಲ್ಲಿ ಅಪ್‌ಲೋಡ್ ಮಾಡಲಾಗುವುದು)	03.08.2026, 04.08.2026, 05.08.2026
4	ತಾತ್ಕಾಲಿಕ ಜೇಷ್ಠತಾ ಪಟ್ಟಿಯ ಪ್ರಕಟಣೆ	07.08.2026
	ಕೇಂದ್ರಿಕೃತ ಸಂದರ್ಶನ, ಸ್ನಾತಕೋತ್ತರ ಪದವಿಗಳ ಪ್ರವೇಶಾತಿ ಮತ್ತು ತರಗತಿಗಳ ಪ್ರಾರಂಭ:	
5	ಮೆರಿಟ್, Enhanced Fees Structure (EFS) ಸೀಟುಗಳು, ಸ್ಪೆಷಲ್ ಕ್ಯಾಟಗರಿ ಸೀಟುಗಳು ಹಾಗೂ ಸಂಯೋಜಿತ ಕಾಲೇಜುಗಳ ಸೀಟುಗಳಿಗೆ ಮೊದಲನೇ ಸುತ್ತಿನ ಪ್ರವೇಶಾತಿ	10.08.2026 and 11.08.2026
	ಎರಡನೆಯ ಸುತ್ತಿನ ಪ್ರವೇಶಾತಿ	12.08.2026 and 13.08.2026
	ಮೂರನೆಯ ಸುತ್ತಿನ ಪ್ರವೇಶಾತಿ	14.08.2026
6	ತರಗತಿಗಳ ಪ್ರಾರಂಭ	17.08.2026

VI. ಅಭ್ಯರ್ಥಿಗಳಿಗೆ ಸಾಮಾನ್ಯ ಮಾರ್ಗಸೂಚಿಗಳು:

(1) ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ಪದವಿ ಶೈಕ್ಷಣಿಕ ಕಾರ್ಯಕ್ರಮಗಳಿಗೆ (ವಿಶ್ವವಿದ್ಯಾನಿಲಯ ಮುಖ್ಯ ಕೇಂದ್ರ ಶಿವಗಂಗೋತ್ರಿ, ದಾವಣಗೆರೆ/ಸ್ನಾತಕೋತ್ತರ ಕೇಂದ್ರ, ಜ್ಞಾನಗಂಗೋತ್ರಿ, ಜಿ.ಆರ್. ಹಳ್ಳಿ, ಚಿತ್ರದುರ್ಗ/ಘಟಕ ಕಾಲೇಜು/ಸ್ವಾಯತ್ತ ಕಾಲೇಜು/ಸಂಲಗ್ನಗೊಂಡ ಕಾಲೇಜುಗಳು) ಪ್ರವೇಶಾತಿ ಬಯಸುವ ಅರ್ಹ ಅಭ್ಯರ್ಥಿಗಳು **'ವಿಷಯವಾರು ಪ್ರತ್ಯೇಕ'** ಅರ್ಜಿಯನ್ನು ಸಲ್ಲಿಸತಕ್ಕದ್ದು. ಪ್ರತಿ ಶೈಕ್ಷಣಿಕ ಕಾರ್ಯಕ್ರಮಕ್ಕೆ ಪ್ರತ್ಯೇಕ ಅರ್ಜಿಗಳ ಪರಿಶೀಲನೆ ಮತ್ತು ಪ್ರವೇಶ ಪರೀಕ್ಷಾ ಶುಲ್ಕಗಳನ್ನು ಪಾವತಿಸತಕ್ಕದ್ದು. (2) **ಸ್ನಾತಕ ಪದವಿಯ ಅಂತಿಮ ವರ್ಷದ ಫಲಿತಾಂಶದ ನಿರೀಕ್ಷೆಯಲ್ಲಿರುವ ದಾವಣಗೆರೆ ವಿಶ್ವವಿದ್ಯಾನಿಲಯ ಅಥವಾ ಇತರೆ ವಿಶ್ವವಿದ್ಯಾನಿಲಯಗಳ ಅಭ್ಯರ್ಥಿಗಳು ಸಹ ಅರ್ಜಿ ಸಲ್ಲಿಸಲು ಹಾಗೂ ಪ್ರವೇಶ ಪರೀಕ್ಷೆಯನ್ನು ಬರೆಯಲು ಅರ್ಹರಾಗಿರುತ್ತಾರೆ.** (3) ಅಭ್ಯರ್ಥಿಗಳು ಅರ್ಜಿಗಳೊಂದಿಗೆ ಅಧಿಕೃತ ದಾಖಲೆಗಳ ಪ್ರತಿಗಳನ್ನು ಒದಗಿಸದಿದ್ದಲ್ಲಿ, ನಿಗದಿತ ಶುಲ್ಕವನ್ನು ಸೂಕ್ತ ಸಮಯದಲ್ಲಿ ಪಾವತಿ ಮಾಡದಿದ್ದಲ್ಲಿ, ಅಥವಾ ಪ್ರವೇಶಾತಿ ಪ್ರಕ್ರಿಯೆಗಳಿಂದ ವಿದ್ಯಾರ್ಥಿಗಳು ನಿಗದಿತ ದಿನಾಂಕ ಮತ್ತು ಸಮಯದೊಳಗೆ ಸಂಬಂಧಪಟ್ಟ ವಿಭಾಗದಲ್ಲಿ ಹಾಜರಾಗದಿದ್ದಲ್ಲಿ, ವಿದ್ಯಾರ್ಥಿಗಳ ಪ್ರವೇಶಾತಿಯು ಸ್ವಯಂಚಾಲಿತವಾಗಿ ರದ್ದಾಗುತ್ತದೆ. (4) ಪ್ರವೇಶಾತಿಯ ಯಾವುದೇ ಸಂದರ್ಭದಲ್ಲಿ ಅಭ್ಯರ್ಥಿಗಳು ಸಲ್ಲಿಸುವ ಅಧಿಕೃತ ಮೂಲ ದಾಖಲಾತಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ನಕಲಿ/ಕೊಟ್ಟಿ ಅಥವಾ ಅನಧಿಕೃತ ದಾಖಲಾತಿಗಳೆಂದು ಕಂಡುಬಂದಲ್ಲಿ ಯಾವುದೇ ಸಮಯದಲ್ಲಿ ಪ್ರವೇಶವನ್ನು ನೀಡಲಾಗುವುದಿಲ್ಲ. ಈಗಾಗಲೇ ಪ್ರವೇಶಾತಿಯನ್ನು ಪಡೆದಿದ್ದರೆ ಅಂತಹ ಪ್ರವೇಶಾತಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಪಡಿಸಲಾಗುವುದು, ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸದ ನಂತರ ಗೊತ್ತಾದಲ್ಲಿ ಸಹ ಅಂತಹ ಅಭ್ಯರ್ಥಿಗಳ ಪದವಿಯನ್ನು ಹಿಂಪಡೆಯಲಾಗುವುದು ಮತ್ತು ಅಂತಹ ಅಭ್ಯರ್ಥಿಗಳ ವಿರುದ್ಧ ಕಾನೂನು ರೀತ್ಯಾ ಕ್ರಮಕ್ಕೈಗೊಳ್ಳಲಾಗುವುದು. (5) ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ಯಾವುದೇ ನಿರ್ದಿಷ್ಟ ಶೈಕ್ಷಣಿಕ ಕಾರ್ಯಕ್ರಮಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ 15ಕ್ಕಿಂತ ಕಡಿಮೆಯಿದ್ದರೆ, ಅಭ್ಯರ್ಥಿಗಳನ್ನು ಶಿವಗಂಗೋತ್ರಿಯ ಮುಖ್ಯ ಕ್ಯಾಂಪಸ್ ಅಥವಾ ಚಿತ್ರದುರ್ಗದ ಸ್ನಾತಕೋತ್ತರ ಕೇಂದ್ರಕ್ಕೆ (ಅದೇ ಶೈಕ್ಷಣಿಕ ಕಾರ್ಯಕ್ರಮ ಅಥವಾ ಸಂಬಂಧಿತ ಶೈಕ್ಷಣಿಕ ಕಾರ್ಯಕ್ರಮಕ್ಕೆ) ವರ್ಗಾಯಿಸುವ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ. (6) ಪ್ರವೇಶಾತಿ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಂದ ಭರಿಸಲಾದ ಯಾವುದೇ (ಅರ್ಜಿ ಶುಲ್ಕ, ಪ್ರವೇಶ ಪರೀಕ್ಷಾ ಶುಲ್ಕ, ನೋಂದಣಿ ಶುಲ್ಕ ಅಥವಾ ಇನ್ನಾವುದೇ ಶುಲ್ಕ) ಶುಲ್ಕಗಳನ್ನು ಮರುಭರಿಕೆ ಮಾಡಲಾಗುವುದಿಲ್ಲ. (7) **ಭರ್ತಿ ಮಾಡಿದ ಪ್ರವೇಶಾತಿ ಅರ್ಜಿಯ ಮೂಲ ಪ್ರತಿ ಎಲ್ಲಾ ಅಗತ್ಯ ದಾಖಲಾತಿಗಳೊಂದಿಗೆ ಆಯಾ ವಿಭಾಗದ ಕಛೇರಿಗೆ ವೈಯಕ್ತಿಕವಾಗಿ ಸಲ್ಲಿಸುವುದು ಅಥವಾ ಆಯಾ ವಿಭಾಗಕ್ಕೆ ಅಂಚೆ ಮೂಲಕ ಕಳುಹಿಸುವುದು.** (8) ಪ್ರವೇಶಾತಿ ಬಯಸುವ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಸಂಬಂಧಪಟ್ಟ ವಿಭಾಗಗಳ ಕಛೇರಿಗೆ ಸಲ್ಲಿಸಿದ ನಂತರ ಪ್ರವೇಶ ಪರೀಕ್ಷೆಯ, ಪ್ರವೇಶ ಪತ್ರವನ್ನು (Hall Ticket) ತಪ್ಪದೇ ಪಡೆಯತಕ್ಕದ್ದು. (9) ಅಂಚೆ ಮೂಲಕ ಅರ್ಜಿಗಳನ್ನು ಕಳುಹಿಸಿದ ಅಭ್ಯರ್ಥಿಗಳು ತಮ್ಮ ಪ್ರವೇಶ ಪರೀಕ್ಷೆಯ ಪ್ರವೇಶ ಪತ್ರವನ್ನು ಸಂಬಂಧಪಟ್ಟ ವಿಭಾಗದ ಕಛೇರಿಯಲ್ಲಿ ವೈಯಕ್ತಿಕವಾಗಿ ಪ್ರವೇಶ ಪರೀಕ್ಷೆಯ ಒಂದು ದಿನ ಮುಂಚಿತವಾಗಿ ಪಡೆಯಬಹುದಾಗಿದೆ. (10) ಪ್ರವೇಶ ಪರೀಕ್ಷೆಯನ್ನು ವಿಶ್ವವಿದ್ಯಾನಿಲಯದ ಮುಖ್ಯ ಕೇಂದ್ರ, ಶಿವಗಂಗೋತ್ರಿ, ದಾವಣಗೆರೆಯಲ್ಲಿ ನಡೆಸಲಾಗುವುದು. (11) ಪ್ರವೇಶ ಪರೀಕ್ಷೆಯ ನಂತರ, ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳು ಮತ್ತು ಸ್ನಾತಕ ಪದವಿಯಲ್ಲಿ ಗಳಿಸಿದ ಅಂಕಗಳು (50:50) ಆಧಾರದ ಮೇಲೆ ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸಲಾಗುವುದು. (12) ಮೆರಿಟ್ ಹಾಗೂ Enhanced Fees Structure (EFS) ಸೀಟುಗಳ ಶುಲ್ಕ ತಃಖ್ತೆಯನ್ನು Prospectus ಹಾಗೂ ಅನುಬಂಧ–01ರಲ್ಲಿ ಸೂಚಿಸಲಾಗಿದೆ. ಸದರಿ ಶುಲ್ಕ ತಃಖ್ತೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. (13) ಪ್ರವೇಶಾತಿ ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ನಿಗದಿತ ದಿನಾಂಕಗಳಂದು ತರಗತಿಗಳು ಪ್ರಾರಂಭವಾಗಲಿವೆ. **"ಹೆಚ್ಚಿನ ಮಾಹಿತಿಗೆ ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ಗೆ ಭೇಟಿ ನೀಡತಕ್ಕದ್ದು."**

ಸಹಿ/– ಕುಲಸಚಿವರು,
ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.

ವಾಸಾಇ/ದಾವಣಗೆರೆ/184/ಕೆಎಸ್‌ಎಂಸಿಎ/2026–27

ಸುರಕ್ಷತೆಯೊಂದಿಗೆ ಸಫಾರಿ ಪುನರಾರಂಭ

ಅರಣ್ಯ ಅಧಿಕಾರಿಗಳಿಗೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನಿರ್ದೇಶನ

■ **ವಿಕ ಸುದ್ದಿಲೋಕ** ಬೆಂಗಳೂರು

ಅಗತ್ಯ ಸುರಕ್ಷತಾ ಕ್ರಮಗಳೊಂದಿಗೆ ಬಂಡೀಪುರ ಹಾಗೂ ನಾಗರಹೊಳೆ ರಾಷ್ಟ್ರೀಯ ಉದ್ಯಾನಗಳಲ್ಲಿ ಸಫಾರಿ ಮತ್ತು ಪರಿಸರ ಪ್ರವಾಸೋದ್ಯಮ ಚಟುವಟಿಕೆ ಪುನಾರಂಭಿಸಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ವಿಧಾನಸೌಧದಲ್ಲಿ ಮಂಗಳವಾರ ನಡೆದ ರಾಜ್ಯ ವನ್ಯಜೀವಿ ಮಂಡಳಿಯ ಸ್ಥಾಯಿ ಸಮಿತಿ ಸಭೆಯಲ್ಲಿ ಸಿಎಂ ಈ ನಿರ್ದೇಶನ ನೀಡಿದರು. ''ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಹುಲಿಗಳು ಮತ್ತು ಚಿರತೆಗಳ ಸಾಂದ್ರತೆ ಹೆಚ್ಚಿದೆ. ಪ್ರವಾಸಿಗರ ಸುರಕ್ಷತೆಗೆ ಯಾವುದೇ ಧಕ್ಕೆಯಾಗದಂತೆ ಅಗತ್ಯ ಮುನ್ನೆಚ್ಚರಿಕೆ ಮತ್ತು ಸುರಕ್ಷತಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿ ಸಫಾರಿ ಚಟುವಟಿಕೆಗಳನ್ನು ಆರಂಭಿಸಿ,'' ಎಂದು ಸೂಚಿಸಿದರು.

ಬಿಎಂಐಸಿ ಕಾರಿಡಾರ್ ನಿರ್ಮಾಣದಿಂದ ಆನೆ, ಹುಲಿ ಹಾಗೂ ಚಿರತೆಗಳ ಸಾಂಪ್ರದಾಯಿಕ ಸಂಚಾರ ಮಾರ್ಗಗಳಿಗೆ ಅಡ್ಡಿಯಾಗಿದೆ. ಇದರ ಪರಿಣಾಮವಾಗಿ ವನ್ಯಜೀವಿಗಳು ಅರಣ್ಯ ಪ್ರದೇಶಗಳಿಂದ ಹೊರಬಂದು ಚನ್ನಪಟ್ಟಣ ಹಾಗೂ ರಾಮನಗರ ಭಾಗಗಳತ್ತ ಸಂಚರಿಸುತ್ತಿದ್ದು, ಮಾನವ–ವನ್ಯಜೀವಿ ಸಂಘರ್ಷ ಹೆಚ್ಚಾಗಲು ಇದೂ ಪ್ರಮುಖ ಕಾರಣವಾಗಿದೆ ಎಂಬುದನ್ನು ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.

ಬೆಂಗಳೂರಿಗೆ ಆಗಮಿಸಿದ್ದ ರಾಷ್ಟ್ರಪತಿ ದ್ರೌಪತಿ ಮುರ್ಮು ಅವರನ್ನು ಬೆಂಗಳೂರಿನ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಸ್ವಾಗತಿಸಿದರು. ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಇದ್ದರು.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ನಿರ್ಮಾಣಕ್ಕೆ ಅನುಮತಿ ನೀಡುವ ಸಂದರ್ಭದಲ್ಲಿ ವನ್ಯಜೀವಿಗಳ ಸುರಕ್ಷಿತ ಸಂಚಾರಕ್ಕಾಗಿ ಅಗತ್ಯ ಅಂಡರ್‌ಪಾಸ್, ಓವರ್ ಪಾಸ್ ಹಾಗೂ ವನ್ಯಜೀವಿ ಕಾರಿಡಾರ್‌ಗಳನ್ನು ನಿರ್ಮಿಸುವ ಷರತ್ತು ವಿಧಿಸಲಾಗಿತ್ತು. ಆದರೆ, ರಸ್ತೆ ನಿರ್ಮಾಣದ ವೇಳೆ ಈ ಷರತ್ತುಗಳನ್ನು ಸಮರ್ಪಕವಾಗಿ ಪಾಲಿಸಲಾಗಿಲ್ಲ ಎಂಬ ವಿಚಾರವನ್ನು ಅಧಿಕಾರಿಗಳು ಸಭೆಗೆ ತಿಳಿಸಿದರು.

ತಕರಾರಿಗೆ ಅವಕಾಶ ನೀಡಬೇಡಿ

ಮೇಕೆದಾಟು ಯೋಜನೆಗೆ ಸಣ್ಣಪುಟ್ಟ ನೆಪಗಳನ್ನು ಮುಂದಿಟ್ಟುಕೊಂಡು ಸುಪ್ರೀಂಕೋರ್ಟ್‌ನಲ್ಲಿ ತಕರಾರು ಮಾಡಲು ತಮಿಳುನಾಡು ಪ್ರಯತ್ನಿಸುತ್ತಿದೆ. ಅದಕ್ಕೆ ಅವಕಾಶ ನೀಡದಿರಲು ತಾಂತ್ರಿಕ ಸಮಸ್ಯೆಗಳ ಬಗ್ಗೆ ಪರಿಶೀಲಿಸಿ, ಪರಿಣಾಮಕಾರಿಯಾಗಿ ಪರಿಹರಿಸಲು ಅಧಿಕಾರಿಗಳಿಗೆ ಸಿಎಂ ಸೂಚನೆ ನೀಡಿದರು.

ತುರ್ತು ಕ್ರಮಕ್ಕೆ ಸೂಚನೆ: ''ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಒಣಗಿರುವ ಹಾಗೂ ಅಪಾಯದ ಸ್ಥಿತಿಯಲ್ಲಿರುವ ಮರಗಳು, ಕೊಂಬೆಗಳನ್ನು ತೆರವುಗೊಳಿಸುವ ಕುರಿತು ಸ್ಪಷ್ಟ ಸೂಚನೆ ನೀಡಲಾಗಿದ್ದರೂ, ಅದರ ಪರಿಣಾಮಕಾರಿ ಅನುಷ್ಠಾನವಾಗದ ಹಿನ್ನೆಲೆಯಲ್ಲಿ ಮಳೆ, ಗಾಳಿಯಿಂದ ಮರಗಳು, ಕೊಂಬೆಗಳು ಬಿದ್ದು ಅವಘಡಗಳು ಸಂಭವಿಸುತ್ತಿವೆ ಎಂಬುದನ್ನು ಸ್ಥಾಯಿ ಸಮಿತಿ ಸದಸ್ಯರು ಸಿಎಂ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ, ಸಾರ್ವಜನಿಕರ ಸುರಕ್ಷತೆಗೆ ಆದ್ಯತೆ ನೀಡಿ ಅಪಾಯಕಾರಿಯಾಗಿರುವ ಮರಗಳು ಮತ್ತು ಕೊಂಬೆಗಳ ಪತ್ತೆ ಮಾಡಿ ತೆರವು ಮಾಡಲು ತುರ್ತು ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನರೇಗಲ್ ಗಲಾಟೆ: ಗಾಯಗೊಂಡವರಿಗೆ ವಿಜಯೇಂದ್ರ ಸಾಂತ್ವನ

ಕೌಂಟರ್ ಕೇಸ್: ಬಿಜೆಪಿ ಹೋರಾಟ ಎಚ್ಚರಿಕೆ

■ **ವಿಕ ಸುದ್ದಿಲೋಕ** ಹಾನಗಲ್ಲ (ಹಾವೇರಿ)

ತಾಲೂಕಿನ ನರೇಗಲ್‌ದಲ್ಲಿ ಸೋಮವಾರ ನಡೆದ ಗಲಾಟೆಯಲ್ಲಿ ಗಾಯಗೊಂಡ ಗ್ರಾಮದ ಕುರುಬ ಸಮುದಾಯದ ಯುವಕರ ಕುಟುಂಬ ಸದಸ್ಯರನ್ನು ಬಿಜೆಪಿ ರಾಜ್ಯ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಭೇಟಿ ಮಾಡಿ ಸಾಂತ್ವನ ಹೇಳಿದರು.

ಮಂಗಳವಾರ ಸಂಜೆ ಗ್ರಾಮಕ್ಕೆ ಭೇಟಿ ನೀಡಿದ್ದ ಅವರು, ಗಲಾಟೆಯಲ್ಲಿ ಗಾಯಗೊಂಡ ಯುವಕರ ಮನೆಯ ಸದಸ್ಯರಿಗೆ ಧೈರ್ಯ ತುಂಬಿದರು.

ಗಾಯಗೊಂಡು ಹುಬ್ಬಳ್ಳಿ ಕೆಎಂಸಿಆರ್‌ಐನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಲೋಹಿತ ಕುರುಬರ ಅವರ ತಂದೆ ರೇವಣೆಪ್ಪ ತನ್ನ ಮಗನ ಮೇಲೆ ನಡೆದ ದಾಳಿ ಬಗ್ಗೆ ವಿವರಣೆ ನೀಡಿ ಕಣ್ಣೀರು ಹಾಕಿದರು.

ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ವಿಜಯೇಂದ್ರ,''ಘಟನೆ ನಡೆದು ಒಂದು ದಿನ ಕಳೆದರೂ ಸ್ಥಳೀಯ ಶಾಸಕರು ಸ್ಥಳಕ್ಕೆ ಭೇಟಿ ನೀಡಿಲ್ಲ, ಇಲ್ಲಿನ ಶಾಸಕರಿಗೆ ಮುಸ್ಲಿಮರಷ್ಟೇ ಮತ ಹಾಕಿಲ್ಲ, ಹಿಂದೂಗಳ ರಕ್ಷಣೆ ಹೊಣೆಯನ್ನು ಶಾಸಕರು ಹೊರಬೇಕು,'' ಎಂದು ಆಗ್ರಹಿಸಿದರು.

''ಹಿಂದೂಗಳನ್ನು ಕುಡಗೋಲಿನಿಂದ ಕಡಿದ ದುಷ್ಕರ್ಮಿಗಳನ್ನು ಬಂಧಿಸಿಲ್ಲ, ದಾಳಿ ಮಾಡಿದವರಿಂದ ಕೌಂಟರ್ ಕೇಸ್ ತೆಗೆದುಕೊಳ್ಳುವ ಪ್ರಯತ್ನ ನಡೆದಿದೆ. ಈ ಘಟನೆಗೆ ಸಂಬಂಧಿಸಿ ಅನವಶ್ಯಕವಾಗಿ ಕೌಂಟರ್ ಕೇಸ್ ಹಾಕುವುದು ನಡೆದರೆ ಜನರು ಬೀದಿಗಿಳಿದು ಹೋರಾಡುತ್ತಾರೆ,'' ಎಂದು ಎಚ್ಚರಿಸಿದರು.

ಮಾಜಿ ಶಾಸಕ ಶಿವರಾಜ್ ಸಜ್ಜನರ, ಅರುಣಕುಮಾರ ಪೂಜಾರ, ಬಿಜೆಪಿ ಮುಖಂಡರಾದ ಭರತ ಬೊಮ್ಮಾಯಿ, ರಾಜಶೇಖರ ಕಟ್ಟೆಗೌಡ್ರ ಇದ್ದರು.

ನರೇಗಲ್‌ಗೆ ಮಂಗಳವಾರ ಭೇಟಿ ನೀಡಿದ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಗಾಯಾಗಳುಗಳಿಗೆ ಧೈರ್ಯ ತುಂಬಿದರು.

> **ನರೇಗಲ್ ಗ್ರಾಮದಲ್ಲಿ ನಡೆದ ಹಿಂಸಾತ್ಮಕ ಘಟನೆ ಅತ್ಯಂತ ಹೇಯ ಕೃತ್ಯವಾಗಿದ್ದು, ಉದ್ದೇಶ ಪೂರ್ವಕವಾಗಿ ಹೋರಿ ಬೆದರಿಸುವ ಯುವಕರ ಮೇಲೆ ಹಲ್ಲೆ ಮಾಡಿದ್ದು ಅತ್ಯಂತ ಖಂಡನೀಯ. ಕೂಡಲೇ ತಪ್ಪಿತಸ್ಥರ ಮೇಲೆ ಕಠಿಣ ಶಿಕ್ಷೆನ ಕ್ರಮ ಕೈಗೊಳ್ಳಬೇಕು.**
> **-ಬಸವರಾಜ ಬೊಮ್ಮಾಯಿ** ಮಾಜಿ ಸಿಎಂ, ಸಂಸದ

ಜೇಬಿನಲ್ಲಿದ್ದ ಚೆಕ್ ಕಳವು

ವಿಜಯೇಂದ್ರ ಅವರು ಹಾವೇರಿ ಜಿಲ್ಲಾಸ್ಪತ್ರೆಗೆ ತೆರಳಿ ಚಿಕಿತ್ಸೆಗೆ ದಾಖಲಾಗಿದ್ದ ಗಾಯಾಳುಗಳನ್ನು ಭೇಟಿ ಮಾಡಿದರು. ಆಗ ಬಿಜೆಪಿ ವತಿಯಿಂದ ನೀಡಿದ್ದ ಸಹಾಯದ ಒಂದು ಲಕ್ಷ ರೂ. ಮೊತ್ತದ ಚೆಕ್ ವಕೀಲ ಸತೀಶ ಕುರುಬರ್ ಅವರ ಜೇಬಿನಲ್ಲಿತ್ತು. ಈ ವೇಳೆ ಜಿಲ್ಲಾಸ್ಪತ್ರೆಯಲ್ಲಿ ನೂಕನುಗ್ಗಲು ಉಂಟಾದಾಗ ಆ ಚೆಕ್ ಅನ್ನು ಕಳವು ಮಾಡಲಾಗಿದ್ದು, ಮಂಗಳವಾರ ಸಂಜೆ ಹಾವೇರಿ ಶಹರ ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ.

ಗೃಹಜ್ಯೋತಿ ಪರಿಶೀಲನೆ: ಜುಲೈನಲ್ಲಿ ಸರಾಸರಿ ಬಿಲ್

■ **ವಿಕ ಸುದ್ದಿಲೋಕ** ಬೆಂಗಳೂರು

ಗೃಹ ಜ್ಯೋತಿ ಫಲಾನುಭವಿಗಳ ಮನೆಮನೆ ಪರಿಶೀಲನಾ ಕಾರ್ಯಕ್ಕೆ ಮೀಟರ್ ರೀಡರ್‌ಗಳನ್ನು ನಿಯೋಜಿಸಿರುವುದರಿಂದ ಜುಲೈ ತಿಂಗಳಲ್ಲಿ ನಿಯಮಿತ ಮೀಟರ್ ರೀಡಿಂಗ್ ಇರುವುದಿಲ್ಲ, ಸರಾಸರಿ ಬಿಲ್ ನೀಡಲಾಗುತ್ತದೆ ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದ್ದಾರೆ.

ಎಚ್.ಟಿ. ಗ್ರಾಹಕರು, 40 ಎಚ್‌ಪಿ ಮತ್ತು ಅದಕ್ಕಿಂತ ಹೆಚ್ಚಿನ ಮಂಜೂರಾದ ಲೋಡ್ ಹೊಂದಿರುವ ಲೋ ಟೆನ್ಷನ್ (ಎಲ್‌ಟಿ) ಗ್ರಾಹಕರು, ಸೋಲಾರ್ ರೂಫ್‌ಟಾಪ್ (ಎಸ್‌ಆರ್‌ಟಿಪಿಪಿ) ಗ್ರಾಹಕರು ಹಾಗೂ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆದಿರುವ ಗ್ರಾಹಕರಿಗೆ ನೈಜ ಮೀಟರ್ ರೀಡಿಂಗ್ ಆಧಾರದಲ್ಲಿ ಬಿಲ್ ನೀಡಲಾಗುವುದು. ಜುಲೈ ತಿಂಗಳ ಸರಾಸರಿ ಬಿಲ್‌ಗಳನ್ನು ಗ್ರಾಹಕರಿಗೆ ಎಸ್‌ಎಂಎಸ್ ಮತ್ತು ಇ–ಮೇಲ್ ಮೂಲಕ ಕಳುಹಿಸಲಾಗುವುದು. ಮನೆಗೆ ಭೇಟಿ ನೀಡುವ ಮೀಟರ್ ರೀಡರ್‌ಗಳಿಗೆ ಹಾಗೂ ಬೆಸ್ಕಾಂ ಸಿಬ್ಬಂದಿಗೆ ಗೃಹ ಜ್ಯೋತಿ ಯೋಜನೆಯ ಫಲಾನುಭವಿಗಳು ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ (ಎಪಿಕ್ ಕಾರ್ಡ್), ಪಾನ್ ಕಾರ್ಡ್, ಪಡಿತರ ಚೀಟಿ ಹಾಗೂ ಜಾತಿ ಪ್ರಮಾಣ ಪತ್ರ ಒದಗಿಸಬೇಕು. ಯೋಜನೆಯ ನಿಖರ ಪರಿಶೀಲನಾ ಕಾರ್ಯದ ಸಂದರ್ಭದಲ್ಲಿ ಉಂಟಾಗಬಹುದಾದ ತಾತ್ಕಾಲಿಕ ಅನಾನುಕೂಲತೆಗೆ ಗ್ರಾಹಕರು ಸಹಕರಿಸಬೇಕು. ಗ್ರಾಹಕರು ಬೆಸ್ಕಾಂ ಸಹಾಯವಾಣಿ ಸಂಖ್ಯೆ 1912 ಸಂಪರ್ಕಿಸಬಹುದು. ಬೆಸ್ಕಾಂ ಉಪ ವಿಭಾಗದ ಕಚೇರಿಗೆ ಭೇಟಿ ನೀಡಬಹುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಡ್ಡ ಮತದಾರರ ರಾಜಕೀಯ ಅಂತ್ಯ ಸನ್ನಿಹಿತ

■ **ವಿಕ ಸುದ್ದಿಲೋಕ** ಬೆಂಗಳೂರು

ಅಡ್ಡ ಮತದಾನ, ಯಾವ ಶಾಸಕರಿಂದಲೂ ಆಣೆ ಪ್ರಮಾಣ ಬೇಡ: ಅಶೋಕ್

ವಿಧಾನ ಪರಿಷತ್ ಅಡ್ಡ ಮತದಾನ ಮಾಡಿದವರ ಪಟ್ಟಿ ದಿಲ್ಲಿ ನಾಯಕರ ಬಳಿಯಿದ್ದು, ಪಕ್ಷದ ಬೆನ್ನಿಗೆ ಚೂರಿ ಹಾಕಿದವರ ರಾಜಕೀಯ ಅಂತ್ಯಕ್ಕೆ ಯೋಜನೆ ರೂಪುಗೊಳ್ಳುತ್ತಿದೆ. ಹಾಗಾಗಿ ಪಕ್ಷದ ಯಾವುದೇ ಶಾಸಕರು ಆಣೆ ಪ್ರಮಾಣ ಮಾಡಬಾರದು ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿರುವುದು ಗಮನ ಸೆಳೆದಿದೆ.

ಅಡ್ಡ ಮತದಾನ ಮಾಡಿಲ್ಲ ಎಂಬುದಾಗಿ ಬೇಲೂರಿನ ಬಿಜೆಪಿ ಶಾಸಕ ಎಚ್.ಕೆ.ಸುರೇಶ್ ಆಣೆ ಪ್ರಮಾಣ ಮಾಡಿರುವ ಬಗ್ಗೆ ಮಂಗಳವಾರ ರಾಜ್ಯ ಬಿಜೆಪಿ ಕಚೇರಿಯಲ್ಲಿ ಪ್ರತಿಕ್ರಿಯಿಸಿದ ಅವರು, ''ಅಡ್ಡ ಮತ ಹಾಕಿದವರ ಪಟ್ಟಿ ದಿಲ್ಲಿ ನಾಯಕರ ಬಳಿ ಇದೆ. ಹಾಗಾಗಿ ಯಾವುದೇ ಶಾಸಕರು ಆಣೆ ಪ್ರಮಾಣ ಮಾಡದಂತೆ ಕೋರುತ್ತೇನೆ. ಅದು ಒಳ್ಳೆಯದಲ್ಲ, ಯಾವ ಸಂದರ್ಭದಲ್ಲಿ ಯಾವ ಕ್ರಮ ಜರುಗಿಸಬೇಕೆಂಬುದನ್ನು ಹೈಕಮಾಂಡ್ ನಾಯಕರು ನಿರ್ಧರಿಸಲಿದ್ದಾರೆ. ಯಾವ ಸಂದರ್ಭದಲ್ಲಿ ಹೊಡೆತ ನೀಡಿದರೆ ಅವರು ಚುನಾವಣೆಯಲ್ಲಿ ಸ್ಪರ್ಧಿಸಲು ಸಾಧ್ಯವಾಗಬಾರದು ಎಂಬ ಕುರಿತಂತೆ ಚರ್ಚಿಸಲಾಗುತ್ತಿದ್ದು, ವರಿಷ್ಠರು ಕಾನೂನು ಪ್ರಕಾರವೇ ಕ್ರಮ ಜರುಗಿಸಲಿದ್ದಾರೆ,'' ಎಂದು ಹೇಳಿದರು.

''ಪಕ್ಷಕ್ಕೆ ಅನ್ಯಾಯ ಮಾಡಿದವರ ವಿರುದ್ಧ ವರಿಷ್ಠರು ಸೂಕ್ತ ಸಂದರ್ಭದಲ್ಲಿ ಕ್ರಮ ಕೈಗೊಳ್ಳಲಿದ್ದಾರೆ. ಹಾಗಾಗಿ ನಾವು 2028ರ ವಿಧಾನಸಭೆ ಚುನಾವಣೆ ಗೆಲ್ಲಲು ನಡೆಸಬೇಕಾದ ಸಿದ್ಧತೆ, ಜೆಡಿಎಸ್ ಜತೆಗೂಡಿ ಕಾರ್ಯ ನಿರ್ವಹಿಸುವ ಬಗ್ಗೆ ವರಿಷ್ಠರು ನೀಡಿರುವ ಸಲಹೆ, ಸೂಚನೆಯಂತೆ ಮುಂದಿನ ಕಾರ್ಯ ನಿರ್ವಹಿಸುತ್ತೇವೆ,'' ಎಂದು ಉತ್ತರಿಸಿದರು.

ಸಾಮೂಹಿಕ ನಾಯಕತ್ವ: ''ರಾಜ್ಯದಲ್ಲಿ ನಮ್ಮದು ಸಾಮೂಹಿಕ ನೇತೃತ್ವದ ಪಕ್ಷ. ಯಾರೋ ಒಬ್ಬರು ಹೇಳಿದ ಮಾತ್ರ ಎಲ್ಲವೂ ನಡೆಯಲ್ಲ,'' ಎಂದು ಅಶೋಕ್ ಹೇಳಿದರು.

ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಪದಚ್ಯುತಿ ವಿಚಾರವಾಗಿ ವೈರಲ್ ಆಗಿರುವ ಆಡಿಯೊದಲ್ಲಿನ ಧ್ವನಿಗೂ ಮಾಜಿ ಸಿಎಂ ಡಿ.ವಿ.ಸದಾನಂದಗೌಡ ಅವರ ಧ್ವನಿಗೂ ಸಾಮ್ಯತೆ ಇದೆ ಎಂಬ ಮಾತುಗಳ ಕುರಿತಂತೆ ಪ್ರತಿಕ್ರಿಯಿಸಿ,''ಆಡಿಯೋದಲ್ಲಿರುವುದು ತಮ್ಮ ಧ್ವನಿಯಲ್ಲ ತಮ್ಮದಲ್ಲ ಎಂದು ಸದಾನಂದ ಗೌಡರೇ ಹೇಳಿದ್ದಾರೆ. ಯಾರೋ ಹೇಳಿದ ಮಾತ್ರಕ್ಕೆ ಪಕ್ಷದಲ್ಲಿ ಏನೂ ನಡೆಯುವುದಿಲ್ಲ, ತೀರ್ಮಾನವೂ ಆಗುವುದಿಲ್ಲ,'' ಎಂದು ಹೇಳಿದರು.

''ನಮ್ಮದು ರಾಷ್ಟ್ರೀಯ ಪಕ್ಷ. ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯವಿಲ್ಲ, ಪಕ್ಷದ ಬಗ್ಗೆ ಯಾರೂ ಬಹಿರಂಗವಾಗಿ ಮಾತನಾಡಬಾರದು ಎಂಬ ಸೂಚನೆ ನೀಡಿದ್ದೇವೆ. ಎಸ್.ಆರ್.ವಿಶ್ವನಾಥ್ ಅವರೊಂದಿಗೂ ಚರ್ಚಿಸಲಾಗಿದೆ. ಪಕ್ಷ ಮುಖ್ಯವೇ ಹೊರತು ವ್ಯಕ್ತಿ ಮುಖ್ಯವಲ್ಲ, ಪಕ್ಷದ ಶಿಸ್ತು ಮುಖ್ಯ,'' ಎಂದು ಹೇಳಿದರು.

ಧರ್ಮಸ್ಥಳದಲ್ಲಿ ಬೇಲೂರು ಶಾಸಕ ಸುರೇಶ್ ಪ್ರಾರ್ಥನೆ

■ **ವಿಕ ಸುದ್ದಿಲೋಕ** ಧರ್ಮಸ್ಥಳ(ದ.ಕ.)

ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಶಾಸಕರ ಅಡ್ಡ ಮತದಾನ ತೀವ್ರ ಚರ್ಚೆಯಾಗುತ್ತಿರುವ ನಡುವೆಯೇ, ಹಾಸನ ಜಿಲ್ಲೆಯ ಬೇಲೂರು ಶಾಸಕ ಹುಲ್ಲಹಳ್ಳಿ ಕೆ.ಸುರೇಶ್ ಶ್ರೀಕ್ಷೇತ್ರ ಧರ್ಮಸ್ಥಳದಲ್ಲಿ ಮಂಗಳವಾರ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಡಾ.ಡಿ.ವೀರೇಂದ್ರ ಹೆಗ್ಗಡೆಯವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು. ನೇತ್ರಾವತಿ ನದಿಯಲ್ಲಿ ಸ್ನಾನ ಮಾಡಿ ಧರ್ಮಸ್ಥಳದಲ್ಲಿ ಮಂಜುನಾಥ ಸ್ವಾಮಿಯ ದರ್ಶನ ಪಡೆದರು. ನನ್ನ ವಿರುದ್ಧ ಅಪಪ್ರಚಾರ ಮಾಡಲಾಗುತ್ತಿದೆ. ನಾನು ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತ. ಪಕ್ಷಕ್ಕೆ ದ್ರೋಹ ಮಾಡಿಲ್ಲ, ಪಕ್ಷ ಸೂಚಿಸಿದ ವ್ಯಕ್ತಿಗೆ ಮತದಾನ ಮಾಡಿರುವುದಾಗಿ ದೇವರಲ್ಲಿ ಪ್ರಾರ್ಥನೆ ಮಾಡಿದ್ದೇನೆ,'' ಎಂದರು. ದೇವಸ್ಥಾನಕ್ಕೆ ಭೇಟಿ ನೀಡುವ ಮುನ್ನ ಅವರು ಅಣ್ಣಪ್ಪ ಬೆಟ್ಟದಲ್ಲಿಯೂ ಪ್ರಾರ್ಥನೆ ಸಲ್ಲಿಸಿದರು. 250ಕ್ಕೂ ಅಧಿಕ ಬೆಂಬಲಿಗರ ಜತೆ 100ಕ್ಕೂ ಹೆಚ್ಚು ಕಾರುಗಳಲ್ಲಿ ಕೇಸರಿ ಶಾಲು, ಬಿಜೆಪಿ ಪಕ್ಷದ ಬಾವುಟಗಳೊಂದಿಗೆ ಧರ್ಮಸ್ಥಳಕ್ಕೆ ಆಗಮಿಸಿದ್ದರು.

ಚಪ್ಪಲಿ ತೂರಿ ನಿಂದನೆ | ಫೋನ್‌ನಲ್ಲೇ ಡಿಸಿ, ಎಸ್ಪಿಗೆ ತರಾಟೆ

ಸಿದ್ದು ಮುಂದೆ ಶಾಸಕ ಪ್ರದೀಪ್ ಅಳಲು

■ **ವಿಕ ಸುದ್ದಿಲೋಕ** ಬೆಂಗಳೂರು

ಚಿಕ್ಕಬಳ್ಳಾಪುರ ಕ್ಷೇತ್ರದ ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಮೇಲೆ ಚಪ್ಪಲಿ ತೂರಿ ನಿಂದಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ ನೀಡಿದ್ದಾರೆ.

ಶಾಸಕ ಪ್ರದೀಪ್ ಈಶ್ವರ್ ಮಂಗಳವಾರ ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಭೇಟಿಯಾಗಿ, ಕೆಂಪೇಗೌಡ ಜಯಂತಿ ವೇಳೆ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರ ದಾಂಧಲೆ, ಚಪ್ಪಲಿ ಎಸೆದ ಬಗ್ಗೆ ಮಾಜಿ ಸಿಎಂ ಬಳಿ ದೂರು ಹೇಳಿಕೊಂಡರು.

ಪ್ರದೀಪ್ ಅವರಿಗೆ ಧೈರ್ಯ ಹೇಳಿದ ಸಿದ್ದರಾಮಯ್ಯ ಅವರು, ''ರಾಜಕಾರಣದಲ್ಲಿ ಇಂತಹ ಘಟನೆಗಳು ಸಾಮಾನ್ಯ. ಎಲ್ಲವನ್ನೂ ಎದುರಿಸಬೇಕು. ಇದರಿಂದ ಧೃತಿಗೆಡಬೇಡಿ. ನಿಮ್ಮೊಂದಿಗೆ ನಾವಿದ್ದೇವೆ,'' ಎಂದು ಭರವಸೆ ನೀಡಿದರು. ಜತೆಗೆ ''ಪೊಲೀಸರ ಸಮ್ಮುಖದಲ್ಲೇ ಆಡಳಿತ ಪಕ್ಷದ ಶಾಸಕರಿಗೆ ಈ ರೀತಿ ಆಗಿರುವುದು ಸರಿಯಲ್ಲ,'' ಎಂದು ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ ಚಿಕ್ಕಬಳ್ಳಾಪುರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರವಾಣಿ ಕರೆ ಮಾಡಿ, ''ಜನರಿಂದ ಆಯ್ಕೆಯಾಗಿರುವ ಶಾಸಕರೊಬ್ಬರ ಮೇಲೆ ಈ ರೀತಿ ದಬ್ಬಾಳಿಕೆ ನಡೆದರೂ ಏನು ಮಾಡುತ್ತಿದ್ದೀರಿ? ಇಲ್ಲಿಯವರೆಗೆ ಏನು ಮಾಡಿದ್ದೀರಿ,'' ಎಂದು ದಬಾಯಿಸಿದರು. ಬಳಿಕ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೂ ಕರೆ ಮಾಡಿ ಸೂಕ್ತ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಜರುಗಿಸಬೇಕು. ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧವೂ ಕ್ರಮ ಆಗಬೇಕು ಎಂದು ಸೂಚಿಸಿದರು.



ಬೆಂಬಲಿಗ ಶಾಸಕರಿಂದ ಸಿದ್ದರಾಮಯ್ಯ ಭೇಟಿ

ಸಿದ್ದರಾಮಯ್ಯ ಅವರನ್ನು ಕಾವೇರಿ ನಿವಾಸದಲ್ಲಿ ಡಿಸಿಎಂ ಪರಮೇಶ್ವರ್ ಸೇರಿದಂತೆ ಆಡಳಿತ ಪಕ್ಷದ ಹಲವು ಪ್ರಮುಖರು ಭೇಟಿಯಾದರು. ಮಾಜಿ ಸಚಿವರಾದ ಚಲುವರಾಯ ಸ್ವಾಮಿ, ಎನ್.ಎಸ್.ಬೋಸರಾಜು, ಮಧು ಬಂಗಾರಪ್ಪ, ಸಂತೋಷ್ ಲಾಡ್, ಶಾಸಕರಾದ ಶಿವಲಿಂಗೇಗೌಡ, ಯಾಸೀರ್ ಪಠಾಣ್, ಶ್ರೀನಿವಾಸ ಮಾನೆ, ಪಾವಗಡ ವೆಂಕಟೇಶ್ ಮತ್ತಿತರರು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು. ಸಚಿವ ಯತೀಂದ್ರ ಸಿದ್ದರಾಮಯ್ಯ ಅವರೂ ಇದ್ದರು.

ದೇಣಿಗೆ ಲೂಟಿ, ಘಾಸಿಯಾಗಿದೆ: ಸಿ.ಟಿ.ರವಿ

ಬೆಂಗಳೂರು: ರಾಮ ಮಂದಿರ ದೇಣಿಗೆ ಲೂಟಿ ವಿಚಾರ ಮನಸಿಗೆ ಘಾಸಿ ಉಂಟು ಮಾಡಿದ್ದು, ಉತ್ತರ ಪ್ರದೇಶದ ಸಿಎಂ ಯೋಗಿ ಆದಿತ್ಯನಾಥ್ ಯಾರ ತಪ್ಪನ್ನೂ ಸಹಿಸಲ್ಲ, ಈಗಾಗಲೇ 8 ಮಂದಿಯನ್ನು ಜೈಲಿಗೆ ಹಾಕಿದ್ದಾರೆ. ನಿಮ್ಮ ಬಳಿ ಬೇರೆ ಮಾಹಿತಿ ಇದ್ದರೆ ಎಸ್‌ಐಟಿಗೆ ನೀಡಿ,'' ಎಂದು ಬಿಜೆಪಿ ನಾಯಕ ಸಿ.ಟಿ ರವಿ ಹೇಳಿದರು.

ವಿಧಾನಸೌಧದಲ್ಲಿ ಮಂಗಳವಾರ ಪ್ರತಿಕ್ರಿಯಿಸಿ, ''ರಾಮ ಮಂದಿರ ನಿರ್ಮಾಣ ಕಾರ್ಯ 500 ವರ್ಷಗಳ ಶ್ರಮ. ಇದಕ್ಕಾಗಿ ಲಕ್ಷಾಂತರ ಜನ ಪ್ರಾಣ ಕೊಟ್ಟಿದ್ದಾರೆ. 1 ರೂ.ನಿಂದ ಕೋಟ್ಯಂತರ ರೂ. ದೇಣಿಗೆ ನೀಡಿದ್ದಾರೆ. ಆ ಭಾವನೆಗೆ ಬೆಲೆ ಕಟ್ಟಲಾಗದು. ಆ ಭಾವನೆಗೆ ಘಾಸಿ ಆಗಬಾರದು. ಈ ಸುದ್ದಿ ನಮ್ಮ ಮನಸ್ಸಿಗೂ ಘಾಸಿ ಉಂಟು ಮಾಡಿದೆ,'' ಎಂದು ತಿಳಿಸಿದರು.

''ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರೇ, ಟ್ರಸ್ಟ್‌ನಲ್ಲಿ ಬಿಜೆಪಿಯ ಯಾವ ಪದಾಧಿಕಾರಿಯೂ ಇರಲಿಲ್ಲ, ನೀವು ರಾಮಮಂದಿರ ನಿರ್ಮಾಣವಾಗಲಿ ಎಂದು ಹೇಳುವುದಕ್ಕಾಗದೇ ಹೇಡಿಗಳಾಗಿದ್ದಿರಿ,'' ಎಂದು ಕುಟುಕಿದರು.

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.
RNI No. 71653/99
Vol. 27 Issue No.181

Kia Seltos

The all-new Seltos is seamlessly connected with Kia Connect 2.0#, offering 85+ connected car features including navigation and voice recognition to keep you in control, whether you're on the move or off the grid. From real-time updates and remote access to essential vehicle information, every drive stays smarter. And with Over-the-Air Software Updates, the all-new Seltos continues to evolve, getting smarter, and sharper over time.

Commanding Presence Advanced, with attitude

Head-up Display - Windshield Projection

Digital Key

31.24 cm (12.3") HD Touchscreen Navigation Cockpit

Smart Dashcam with Front & Rear Camera (With Mobile App)

Smart Air Purifier with AQI Display


All Door Windows One Touch Auto Up/ Down with Safety

Robust 24 Hi-Safety Package
STANDARD ACROSS ALL VARIANTS

Front Dual Airbags | Front Seat Side Airbags | Side Curtain Airbags | Highline Tyre Pressure Monitor | ABS (Anti-lock Brake System) | BAS (Brake Assist System) | ESC (Electronic Stability Control) | VSM (Vehicle Stability Management) | HAC (Hill-start Assist Control) | ESS (Emergency Stop Signal) | Child Lock | All Wheel Disc Brakes | Rear Parking Sensors (x4) | Speed Sensing Auto Door Lock | Impact Sensing Auto Door Unlock | Front & Rear All-Seat 3-Point Seat Belts with Reminder | ISOFIX (Rear Anchors) | Front Passenger Airbag On/ Off Switch | Front Passenger Airbag On/ Off Indicator | Rear Occupant Alert | DBC (Downhill Brake Control) | Rollover Sensor | Auto Light Control & Headlamp Escort Function | Rear View Camera with Dynamic Guidelines

Kia Service
Connected • Adaptive • Responsive • Engage

3 Years Unlimited km Warranty	**Extended Warranty*** Up to 7 Years	**My Convenience Plus*** Best-in-class Cost of Ownership	**IoT Based** Smart Services*	**24x7 | 3 Years** Nationwide RSA*

Upgrade to the all-new Seltos with exclusive loyalty privileges for Kia owners.

Book now | **Call** 1800 108 5000 | 093195 91407 | **Visit** www.kia.com | Kia Seltos | Look for "Kia India" @

Scan the QR code to locate your nearest dealership.

*Terms & Conditions Apply. Ex-showroom price all India. The product & feature images shown in this ad is for representation purpose only. Features and specifications as shown may not be part of standard fitment and may vary. The colors shown are subject to availability and may not be available across all variants and may differ slightly from those shown in this ad. The specifications and features may vary depending on models/ variants. Segment is defined as Mid SUV whose length lies between 4 220 - 4 460 mm and width between 1 760 - 1 830 mm. #Kia Connect 2.0 comes with 3 years free subscription. Kia Connect 2.0 functionality is dependent on mobile network strength. The driver shall remain responsible for safe, vigilant, and attentive driving. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications, Kia Connect 2.0 features and other details of any model as mentioned in this ad to discontinue any model without prior notice. For more details visit your local Kia dealership. Kia India Pvt. Ltd. urges you to follow traffic rules, these are meant to keep you safe on roads. We do not endorse vandalism or illegal activities related to road safety. Safety is a top priority, and we urge responsible behavior regarding traffic regulations and road safety.

INNOCEAN-020/26

ಗಿಗ್ ಕಾರ್ಮಿಕರ ಕಾಯಿದೆ ಪ್ರಶ್ನಿಸಿ ಅರ್ಜಿ

ಬೆಂಗಳೂರು: ರಾಜ್ಯ ಸರಕಾರ ಜಾರಿಗೊಳಿಸಿರುವ ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ (ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ) ಕಾಯಿದೆ-2025' ಮತ್ತು ಅದರಡಿ ರೂಪಿಸಲಾಗಿರುವ ನಿಯಮಗಳ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಇಂಟರ್ನೆಟ್ ಆ್ಯಂಡ್ ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ, ದೇಶದ ಪ್ರಮುಖ ಇ-ಕಾಮರ್ಸ್ ಮತ್ತು ಗ್ರಾಹಕ ತಂತ್ರಜ್ಞಾನ ಸಂಸ್ಥೆಗಳಾದ ಸ್ವಿಗ್ಗಿ, ಜೊಮ್ಯಾಟೊ, ರ್‍ಯಾಪಿಡೊ, ಅರ್ಬನ್ ಕಂಪನಿ ಹಾಗೂ ವ್ಯಾಲ್ಯೂ ಟ್ರಾನ್ಸ್‌ಪೋರ್ಟೇಷನ್ ಸಲ್ಲಿಸಿರುವ ಅರ್ಜಿ ನ್ಯಾಯಪೀಠದ ಮುಂದೆ ವಿಚಾರಣೆಗೆ ಬರಬೇಕಾಗಿದೆ.

ಗಿಗ್ ಕಾರ್ಮಿಕರ ಕಲ್ಯಾಣ ಮಂಡಳಿ ಇತ್ತೀಚೆಗೆ ಹೊರಡಿಸಿರುವ ಕಲ್ಯಾಣ ಶುಲ್ಕ ಪಾವತಿ ನೋಟಿಸ್‌ಗಳು ಹಾಗೂ ಕಾರಣ ಕೇಳಿ ನೀಡಲಾಗಿರುವ ನೋಟಿಸ್‌ಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು ಎಂದು ಅರ್ಜಿದಾರರು ನ್ಯಾಯಾಲಯವನ್ನು ಕೋರಿದ್ದಾರೆ. ''ಭಾರತೀಯ ಸಂಸತ್ತು ಈಗಾಗಲೇ ದೇಶಾದ್ಯಂತ ಇರುವ ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕಾರ್ಮಿಕರನ್ನು ಒಳಗೊಂಡಂತೆ ಇಡೀ ಅಸಂಘಟಿತ ವಲಯದ ಕಾರ್ಮಿಕರಿಗಾಗಿ ಸಾಮಾಜಿಕ ಭದ್ರತಾ ಸಂಹಿತೆ-2020 ಎಂಬ ಸಮಗ್ರ ಹಾಗೂ ಏಕರೂಪದ ಕಾನೂನು ಜಾರಿಗೊಳಿಸಿದೆ. ಕೇಂದ್ರದ ಈ ಕಾನೂನು ಇಡೀ ದೇಶಕ್ಕೆ ಅನ್ವಯವಾಗುವಂತೆ ಜಾರಿಯಲ್ಲಿರುವಾಗ ರಾಜ್ಯ ಸರಕಾರವು ಅದೇ ವಿಷಯದ ಮೇಲೆ ಪ್ರತ್ಯೇಕ ಮತ್ತು ಸಮಾನಾಂತರ ಕಾನೂನನ್ನು ರೂಪಿಸಿರುವುದು ಸಂವಿಧಾನದ ವಿಧಿ 254ರಡಿ ನಿಯಮಬಾಹಿರ ಹಾಗೂ ಅಸಂವಿಧಾನಿಕವಾಗಿದೆ,'' ಎಂದು ಕಂಪನಿಗಳು ವಾದಿಸಿವೆ.

170 ಕಾಲೇಜುಗಳ 'ಕಾಮೆಡ್-ಕೆ' ಸೀಟ್ ಮ್ಯಾಟ್ರಿಕ್ಸ್ ಪ್ರಕಟ | 20,814 ಜನರಲ್ ಮೆರಿಟ್, 3,812 ಕಲ್ಯಾಣ ಕರ್ನಾಟಕಕ್ಕೆ ಮೀಸಲು

24,626 ಎಂಜಿನಿಯರಿಂಗ್ ಸೀಟು ಲಭ್ಯ

■ **ವಿಕ ಸುದ್ದಿಲೋಕ** ಬೆಂಗಳೂರು

2026ನೇ ಸಾಲಿನ ಮೊದಲ ಸುತ್ತಿನ ಕೌನ್ಸೆಲಿಂಗ್‌ಗೆ ಕರ್ನಾಟಕ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ಕಾಲೇಜುಗಳ ಒಕ್ಕೂಟ (ಕಾಮೆಡ್-ಕೆ) ಎಂಜಿನಿಯರಿಂಗ್ ಸೀಟುಗಳ ಸೀಟ್ ಮ್ಯಾಟ್ರಿಕ್ ಬಿಡುಗಡೆಗೊಳಿಸಿದ್ದು, 170 ಕಾಲೇಜುಗಳಲ್ಲಿ 24,626 ಸೀಟುಗಳು ಲಭ್ಯವಿವೆ. ಈ ಪೈಕಿ ಜನರಲ್ ಮೆರಿಟ್‌ಗೆ 20,814, ಕಲ್ಯಾಣ ಕರ್ನಾಟಕ ಕೋಟಾದಡಿ 3,812 ಸೀಟುಗಳನ್ನು ಮೀಸಲಿಡಲಾಗಿದೆ.

ಆನ್‌ಲೈನ್ ಕೌನ್ಸೆಲಿಂಗ್ ಮೂಲಕ ರ್‍ಯಾಂಕ್ ಆಧಾರದಲ್ಲಿ ಸೀಟು ಹಂಚಿಕೆ ಪ್ರಕ್ರಿಯೆ ನಡೆಯಲಿದ್ದು, ಶೀಘ್ರದಲ್ಲೇ ಮೊದಲ ಸುತ್ತಿನ ಕೌನ್ಸೆಲಿಂಗ್ ದಿನಾಂಕ ಘೋಷಿಸುವ ನಿರೀಕ್ಷೆಯಿದೆ. ಸದ್ಯ ವಿವಿಧ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳು ಹಾಗೂ ಶುಲ್ಕದ ವಿವರಗಳನ್ನು ಕಾಮೆಡ್-ಕೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದ್ದು, ಲಭ್ಯವಿರುವ ಕಾಲೇಜುಗಳು, ಶುಲ್ಕದ ವಿವರ ನೀಡಲಾಗಿದೆ.

ಪ್ರತಿಷ್ಠಿತ ಕಾಲೇಜುಗಳಲ್ಲಿ ಏರೋನ್ಯಾಟಿಕಲ್ ಎಂಜಿನಿಯರಿಂಗ್, ಎಐ, ಮೆಷಿನ್ ಲರ್ನಿಂಗ್, ಏರೋಸ್ಪೇಸ್ ಎಂಜಿನಿಯರಿಂಗ್ ಸೇರಿದಂತೆ ವಿವಿಧ ಕೋರ್ಸ್‌ಗಳಿಗೆ 3,22,000 ರೂ. ಶುಲ್ಕ ನಿಗದಿಗೊಳಿಸಲಾಗಿದ್ದು, ಕೆಲ ಕಾಲೇಜುಗಳಿಗೆ ಆಯಾ ಕೋರ್ಸ್‌ಗಳ ಆಧಾರದ ಮೇಲೆ ಶುಲ್ಕ ಪಟ್ಟಿ ಬಿಡುಗಡೆಗೊಳಿಸಲಾಗಿದೆ.

■ ಮೊದಲ ಸುತ್ತಿನ ಕೌನ್ಸೆಲಿಂಗ್‌ಗೆ ಅನುಕೂಲವಾಗುವಂತೆ ಪಟ್ಟಿ ಪ್ರಕಟ

■ ಈ ಬಾರಿ ಕೆಲ ಹೊಸ ಕಾಲೇಜುಗಳಿಗೂ ಸೇರಿ ಸೀಟ್ ಮ್ಯಾಟ್ರಿಕ್ಸ್

ವಿವಿಧ ಕಾಲೇಜುಗಳಲ್ಲಿ ವಿಟಿಯು ಮೂಲಕ ಅನುಮೋದಿಸಲಾಗಿರುವಂತೆ ಕನಿಷ್ಠ 10,000 ರೂ.ನಿಂದ ಗರಿಷ್ಠ 20,000 ರೂ.ವರೆಗೆ ಪ್ರಯೋಗಾಲಯ ಶುಲ್ಕ ನಿಗದಿಪಡಿಸಲಾಗಿದೆ. ಆಯಾ ಕಾಲೇಜುಗಳಲ್ಲಿ ಒದಗಿಸಲಾಗುವ ಮೂಲಸೌಕರ್ಯದ ಆಧಾರದ ಮೇಲೆ ಶುಲ್ಕ ದರಗಳು ವ್ಯತ್ಯಾಸವಾಗಬಹುದು ಎಂದು 'ಕಾಮೆಡ್-ಕೆ' ತಿಳಿಸಿದೆ.

ಕಾಲೇಜುಗಳ ಪಟ್ಟಿಯಲ್ಲಿ ನಮೂದಿಸಲಾಗಿರುವ ಮೈಸೂರಿನ ಇನ್ಸ್‌ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ ಫಾರ್ ವಿಮೆನ್ ಕೇವಲ ಮಹಿಳಾ ಅಭ್ಯರ್ಥಿಗಳಿಗೆ ಮೀಸಲಾಗಿದ್ದು, ಕಾಲೇಜು ಆಯ್ಕೆ ವೇಳೆ ಪುರುಷ ಅಭ್ಯರ್ಥಿಗಳು ಈ ಕಾಲೇಜನ್ನು ಆಯ್ಕೆ ಮಾಡದಂತೆ 'ಕಾಮೆಡ್-ಕೆ' ಸಲಹೆ ನೀಡಿದೆ.

ಇಚ್ಛೆ ದಾಖಲೆ ಮುಕ್ತಾಯ: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಇಚ್ಛೆ/ ಆಯ್ಕೆ ದಾಖಲಿಸಲು ನಿಗದಿಪಡಿಸಲಾಗಿದ್ದ ಜೂ.30ರ ಕೊನೆ ದಿನಾಂಕ ಮುಗಿದಿದ್ದು, ಇದುವರೆಗೂ ಆಯ್ಕೆ ದಾಖಲಿಸದ ವಿದ್ಯಾರ್ಥಿಗಳಿಗೆ ಅಣಕು ಸೀಟು ಹಂಚಿಕೆ ಫಲಿತಾಂಶದ ನಂತರ ಆಯ್ಕೆ ದಾಖಲಿಸಲು ಮತ್ತೊಮ್ಮೆ ಅವಕಾಶ ನೀಡಲಾಗುತ್ತದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ಈ ವಿಷಯದಲ್ಲಿ ಆತಂಕ ಬೇಡ ಎಂದಿರುವ ಅವರು, ಅಣಕು ಫಲಿತಾಂಶ ಬರುವವರೆಗೂ ಅಭ್ಯರ್ಥಿಗಳು ತಮ್ಮ ಇಷ್ಟದ ಕಾಲೇಜು, ಕೋರ್ಸ್‌ಗಳನ್ನು ಒಂದು ಕಡೆ ಬರೆದಿಟ್ಟುಕೊಳ್ಳುವಂತೆ ಸಲಹೆ ನೀಡಿದ್ದಾರೆ.

ಮೊದಲ ಸುತ್ತಿನ ಅಣಕು ಫಲಿತಾಂಶದ ನಂತರ ಹೊಸದಾಗಿ ಆಯ್ಕೆ ದಾಖಲಿಸಲು ಅಥವಾ ಬದಲಿಸಲು ಅವಕಾಶ ಇರುತ್ತದೆ. ಆ ಸಂದರ್ಭದಲ್ಲಿ ಹೊಸಬರು ಕೂಡ ಆಯ್ಕೆ ದಾಖಲು ಮಾಡಬಹುದಾಗಿದೆ.

ಜೂ.30ಕ್ಕೆ ಕ್ರೀಡಾಕೋಟಾ ಪರಿಶೀಲನೆ

ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕ್ರೀಡಾ ಕೋಟಾದಡಿ ಅರ್ಜಿ ಸಲ್ಲಿಸಿರುವ ಒಟ್ಟು 70 ಅಭ್ಯರ್ಥಿಗಳು ದಾಖಲೆ ಪರಿಶೀಲನೆಗೆ ಜು.3ರಂದು ಮೂಲ ದಾಖಲೆಗಳ ಸಮೇತ ಬರಲು ಸೂಚಿಸಲಾಗಿದೆ. ಕ್ರೀಡಾ ಪದಕ ಪಡೆದ ಮೂಲ ಪ್ರಮಾಣ ಪತ್ರಗಳನ್ನು ಹಾಜರುಪಡಿಸಲು ಸೂಚಿಸಲಾಗಿದ್ದು, ಕೆಇಎ ಬಿಡುಗಡೆಗೊಳಿಸಿರುವ ಪಟ್ಟಿಯಲ್ಲಿ ಹೆಸರು ಇರುವವರು ಪರಿಶೀಲನೆಗೆ ಬರಬೇಕು. ಉಳಿದವರು ಬರುವ ಅಗತ್ಯವಿಲ್ಲ ಎಂದು ಕೆಇಎ ತಿಳಿಸಿದೆ. ಕ್ರೀಡಾ ಕೋಟಾದಡಿ ಪರಿಶೀಲನೆಗೆ ಹಾಜರಾಗಲು ಅರ್ಹವಿರುವ ಅಭ್ಯರ್ಥಿಗಳ ಪಟ್ಟಿ ಹಾಗೂ ಹೆಚ್ಚಿನ ಮಾಹಿತಿಯನ್ನು ಕೆಇಎ ವೆಬ್‌ಸೈಟ್ ಮೂಲಕ ಪಡೆಯಬಹುದಾಗಿದೆ.

ನಿತ್ಯ ಭವಿಷ್ಯ

ರಾಜಗುರು ದ್ವಾರಕನಾಥ್

ಪ್ರಶ್ನೆ: ಕಳೆದ 6 ವರ್ಷಗಳಿಂದ ನೆಮ್ಮದಿ ಇಲ್ಲವಾಗಿದೆ. ಹೆಂಡತಿ ಸಾವು, ಷೇರು ವ್ಯವಹಾರದಲ್ಲಿ ನಷ್ಟ, ಮಗಳ ಓದಿನ ಸಮಸ್ಯೆ. ಪರಿಹಾರ ತಿಳಿಸಿಕೊಡಿ ಗುರೂಜಿ.

ಜನ್ಮ ದಿನಾಂಕ: 05.04.1983 **ನಕ್ಷತ್ರ:** ಪೂರ್ವಾಷಾಢ

ಪರಿಹಾರ: ಒಳ್ಳೆಯ ಸಮಯ ಬರುವವರೆಗೂ ಕಾಯಲೇಬೇಕು. ಶನಿ ಚತುರ್ಥದಲ್ಲಿರುವುದರಿಂದ ಏನೇ ಮಾಡಬೇಕಾದರೂ, ಚೆನ್ನಾಗಿ ಯೋಚಿಸಿ ಮುಂದಡಿ ಇಡುವ ಮೂಲಕ ನಿಮ್ಮ ಸ್ಥಾನ-ಮಾನ ಉಳಿಸಿಕೊಳ್ಳಿ. ನಿಮಗೆ ಅದೇ ಶ್ರೇಯಸ್ಸು. ಹಣಕಾಸಿನ ವಿಚಾರದಲ್ಲಿ ಖಂಡಿತವಾಗಲೂ ಜಯ ಸಿಗುತ್ತದೆ.

ನೀವೂ ಪ್ರಶ್ನೆ ಕೇಳಬಹುದು...

ವಾಟ್ಸ್‌ಆ್ಯಪ್ ಸಂಖ್ಯೆ: 6366422240

ಪಂಚಾಂಗ 01-07-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಜ್ಯೇಷ್ಠ.
ಪಕ್ಷ: ಕೃಷ್ಣ. **ಮಳೆ ನಕ್ಷತ್ರ:** ಆರಿದ್ರಾ.
ನಿತ್ಯನಕ್ಷತ್ರ: ಪೂರ್ವಾಷಾಢ.
ತಿಥಿ: ಪಾಡ್ಯ. **ಯೋಗ:** ಐಂದ್ರ.
ಕರಣ: ಕೌಲವ. **ವಾರ:** ಬುಧವಾರ.

ರಾಹು ಕಾಲ: ಮ. 12.00 - 1.30
ಗುಳಿಕ ಕಾಲ: ಬೆ. 10.30-12.00
ಯಮಗಂಡ ಕಾಲ: ಬೆ. 7.30-9.00
ಸೂರ್ಯ ಉದಯ: ಬೆ. 5.58 ಅಸ್ತ: ಸಂ.6.48

ಜಲಮಂಡಳಿ ನೇಮಕ, 6ರಿಂದ ಪರಿಶೀಲನೆ

ಬೆಂಗಳೂರು: ಜಲಮಂಡಳಿ ನೇರ ನೇಮಕಾತಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಜುಲೈ 6ರಿಂದ 1:5ರ ಅನುಪಾತದಲ್ಲಿ ಮೂಲ ದಾಖಲೆ ಪರಿಶೀಲನೆ ನಡೆಸಲಿದೆ. ಈ ಹುದ್ದೆಗಳಿಗೆ ವೃಂದವಾರು ದಾಖಲೆ ಪರಿಶೀಲನೆ ಜುಲೈ 6ರಿಂದ 24ರವರೆಗೆ ನಡೆಯಲಿದೆ. ದಾಖಲೆ ಪರಿಶೀಲನೆಗೆ ಪರಿಗಣಿಸಲಾಗಿರುವ ಅಭ್ಯರ್ಥಿಗಳ ಪಟ್ಟಿ, ದಿನಾಂಕ, ಸಮಯ, ಸ್ಥಳ ಹೆಚ್ಚಿನ ಮಾಹಿತಿಗೆ ಅಧಿಕೃತ ವೆಬ್‌ಸೈಟ್ www.bwssb.gov.in ವೀಕ್ಷಿಸಬಹುದಾಗಿದೆ.

ಎಚ್.ಆರ್. ಸ್ವಾಮಿಗೆ ಸಿದ್ದಲಿಂಗಯ್ಯ ಪ್ರಶಸ್ತಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ಪ್ರಸಕ್ತ ಸಾಲಿನ 'ಡಾ. ಸಿದ್ದಲಿಂಗಯ್ಯ ಸಾಹಿತ್ಯ ದತ್ತಿ ಪ್ರಶಸ್ತಿ'ಗೆ ಲೇಖಕ ಎಚ್.ಆರ್. ಸ್ವಾಮಿ ಅವರನ್ನು ಆಯ್ಕೆ ಮಾಡಲಾಗಿದೆ.



ಪ್ರಶಸ್ತಿಯು 10 ಸಾವಿರ ರೂ. ನಗದು ಒಳಗೊಂಡಿದೆ. ಶ್ರವಣಬೆಳಗೊಳದಲ್ಲಿ ನಡೆದ 81ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣಾರ್ಥ, ಸಮ್ಮೇಳನಾಧ್ಯಕ್ಷರಾಗಿದ್ದ ಕವಿ ಸಿದ್ದಲಿಂಗಯ್ಯ ಹೆಸರಿನಲ್ಲಿ ಈ ಸಾಹಿತ್ಯ ದತ್ತಿ ಪುರಸ್ಕಾರ ಸ್ಥಾಪಿಸಲಾಗಿದೆ. ಸಿದ್ದಲಿಂಗಯ್ಯ ಅವರ ತಾತ್ವಿಕತೆಯನ್ನು ಸಮರ್ಥವಾಗಿ ನಾನಾ ಮಾಧ್ಯಮಗಳ ಮೂಲಕ ಬಿಂಬಿಸುತ್ತಿರುವ ಸಾಧಕರಿಗೆ ಈ ಪುರಸ್ಕಾರ ನೀಡಲಾಗುತ್ತಿದೆ. ಪರಿಷತ್ತಿನ ಆಡಳಿತಾಧಿಕಾರಿ ಕೆ.ಎ. ದಯಾನಂದ ಅಧ್ಯಕ್ಷತೆಯಲ್ಲಿ ರಾಜಪ್ಪ ದಳವಾಯಿ, ಶ್ರೀದೇವಿ ಕೆರೆಮನೆ ಮತ್ತು ದತ್ತಿ ದಾನಿಗಳಾದ ರಮಾಕುಮಾರಿ ಸಿದ್ದಲಿಂಗಯ್ಯ ಮತ್ತು ಮಾನಸಾ ಸಿದ್ದಲಿಂಗಯ್ಯ ಅವರನ್ನು ಒಳಗೊಂಡ ಸಮಿತಿಯು ಪ್ರಶಸ್ತಿಗೆ ಸ್ವಾಮಿ ಅವರನ್ನು ಆಯ್ಕೆ ಮಾಡಿದೆ.

₹ 5 ಸಾವಿರ ಶಿಷ್ಯವೇತನಕ್ಕೆ ಮನವಿ

ಬೆಂಗಳೂರು: ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ವತಿಯಿಂದ ಪರಿಶಿಷ್ಟ ಜಾತಿಗೆ ಸೇರಿದ ಅಭ್ಯರ್ಥಿಗಳಿಗೆ ತೆಂಗಿನ ನಾರಿನ ಉತ್ಪನ್ನಗಳ ತಯಾರಿಕೆ ಕುರಿತು ನೀಡುತ್ತಿರುವ ತರಬೇತಿ ಅವಧಿಯನ್ನು 1 ತಿಂಗಳ ಬದಲಿಗೆ 6 ದಿನಗಳಿಗೆ ಸೀಮಿತಗೊಳಿಸಿ, 5 ಸಾವಿರ ರೂ. ಶಿಷ್ಯವೇತನ ನಿಗದಿಪಡಿಸಿ ಆದೇಶ ಹೊರಡಿಸಬೇಕೆಂದು ನಿಗಮದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಶ್ ಸರಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಈ ಕುರಿತು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಕಾರ್ಯದರ್ಶಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರಿಗೆ ಪತ್ರ ಬರೆದಿರುವ ಅವರು, ''ನಿಗಮದಿಂದ ಪರಿಶಿಷ್ಟ ಜಾತಿಯ 100 ಮಂದಿ ಅಭ್ಯರ್ಥಿಗಳಿಗೆ ತೆಂಗಿನ ನಾರಿನ ಉತ್ಪನ್ನಗಳ ತಯಾರಿಕೆಯಲ್ಲಿ ತರಬೇತಿ ನೀಡಲು 33 ಲಕ್ಷ ರೂ. ಅನುದಾನ ಬಿಡುಗಡೆ ಆಗಿದೆ. ಆದರೆ, ತರಬೇತಿಗೆ ನಿಗದಿಪಡಿಸಿರುವ 5 ಸಾವಿರ ರೂ. ಮಾಸಿಕ ಶಿಷ್ಯವೇತನಕ್ಕೆ ಅಭ್ಯರ್ಥಿಗಳು ಸಿಗುತ್ತಿಲ್ಲ. ಇದು ಕನಿಷ್ಠ ವೇತನಕ್ಕಿಂತ ಕಡಿಮೆ ಇದೆ,'' ಎಂದು ತಿಳಿಸಿದ್ದಾರೆ.

ಕನಿಷ್ಠ ವೇತನ: ಸರಕಾರಗಳಿಗೆ ನೋಟಿಸ್

ಬೆಂಗಳೂರು: ರಾಜ್ಯದ 80ಕ್ಕೂ ಅಧಿಕ ಉದ್ದಿಮೆಗಳಲ್ಲಿ ದುಡಿಯುತ್ತಿರುವ ಸಂಘಟಿತ ಮತ್ತು ಅಸಂಘಟಿತ ವಲಯದ ಕಾರ್ಮಿಕರ ಕನಿಷ್ಠ ವೇತನ ಪರಿಷ್ಕರಣೆ ಆಕ್ಷೇಪಿಸಿ ಸಲ್ಲಿಸಿರುವ ಅರ್ಜಿ ಸಂಬಂಧ ಹೈಕೋರ್ಟ್, ಕೇಂದ್ರ ಹಾಗೂ ರಾಜ್ಯ ಸರಕಾರಕ್ಕೆ ನೋಟಿಸ್ ಜಾರಿಗೊಳಿಸಿದೆ.

ವೇತನ ಪರಿಷ್ಕರಣೆ ಮಾಡಿ 2026ರ ಮೇ 22ರಂದು ರಾಜ್ಯ ಸರಕಾರ ಹೊರಡಿಸಿರುವ ಅಧಿಸೂಚನೆ ರದ್ದು ಕೋರಿ ಕರ್ನಾಟಕದಲ್ಲಿ 2 ಸಾವಿರ ಮಾರಾಟಗಾರರನ್ನು ಹೊಂದಿರುವ ದಿಲ್ಲಿ ಮೂಲದ 'ದಿ ಫೆಡರೇಷನ್ ಆಫ್ ಆಟೋಮೊಬೈಲ್ ಡೀಲರ್ಸ್ ಅಸೋಸಿಯೇಷನ್' (ಎಫ್‌ಎಡಿಎ) ಹಾಗೂ ಬೆಂಗಳೂರಿನಲ್ಲಿನ ಅದರ ನಾಲ್ಕು ಸದಸ್ಯ ಕಂಪನಿಗಳು ಸಲ್ಲಿಸಿರುವ ಅರ್ಜಿಯು ನ್ಯಾಯಮೂರ್ತಿ ಜ್ಯೋತಿ ಮೂಲಿಮನಿ ಅವರಿದ್ದ ಏಕಸದಸ್ಯಪೀಠದ ಮುಂದೆ ಮಂಗಳವಾರ ವಿಚಾರಣೆಗೆ ಬಂದಿತ್ತು.

ಕೆಲ ಕಾಲ ಅರ್ಜಿ ಪರಿಶೀಲಿಸಿದ ನ್ಯಾಯಪೀಠ ಪ್ರತಿವಾದಿಗಳಾದ ಕೇಂದ್ರ ಸರಕಾರದ ಕಾರ್ಮಿಕ ಸಚಿವಾಲಯ, ರಾಜ್ಯ ಕಾರ್ಮಿಕ ಇಲಾಖೆ, ಕಾರ್ಮಿಕ ಸಂಘಟನೆಗಳಾದ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎಐಟಿಯುಸಿ), ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು), ಕರ್ನಾಟಕ ಜನರಲ್ ಲೇಬರ್ ಯೂನಿಯನ್, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ (ಸಿಐಟಿಯು)ಗಳಿಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆಯನ್ನು ಜು.3ಕ್ಕೆ ಮುಂದೂಡಿತು.

ಅಲ್ಲದೆ, ಕೇಂದ್ರ ಸರಕಾರ 2025ರಲ್ಲಿ ಕಾರ್ಮಿಕ ಸಂಹಿತೆ-2019 ಜಾರಿಗೆ ತಂದು ಕನಿಷ್ಠ ವೇತನ ಕಾಯಿದೆ 1948 ಅನ್ನು ನಿರಸನಗೊಳಿಸಿದೆ. ದಕ್ಷಿಣದ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಕರ್ನಾಟಕದಲ್ಲಿ ಈಗಾಗಲೇ ಕನಿಷ್ಠ ವೇತನ ಹೆಚ್ಚೇ ಇದೆ. ಹೀಗಿದ್ದಾಗ, ರಾಜ್ಯ ಸರಕಾರ ವೇತನ ಪರಿಷ್ಕರಣೆ ಜಾರಿಗೆ ಬಂದರೆ ಆಟೋಮೊಬೈಲ್ ವಲಯದ ಉದ್ದಿಮೆ ಹಾಗೂ ಮಾರಾಟಗಾರರಿಗೆ ದೊಡ್ಡ ಹೊಡೆತ ಬಿದ್ದು, ಭಾರಿ ಆರ್ಥಿಕ ನಷ್ಟ ಉಂಟಾಗಲಿದೆ. ಆದ್ದರಿಂದ ಕನಿಷ್ಠ ವೇತನ ಪರಿಷ್ಕರಣೆ ಮಾಡಿ 2026ರ ಮೇ 22ರಂದು ರಾಜ್ಯ ಸರಕಾರ ಹೊರಡಿಸಿರುವ ಅಧಿಸೂಚನೆ ಕಾನೂನು ಬಾಹಿರವಾಗಿರುವುದರಿಂದ ಅದನ್ನು ರದ್ದುಪಡಿಸಬೇಕು ಎಂದು ಅರ್ಜಿದಾರರು ಕೋರಿದ್ದಾರೆ.

ಬೆಂಗಳೂರು ಕೇಂದ್ರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಶಿವಾಜಿನಗರ ವಿಭಾಗ, ಕ್ವೀನ್ಸ್ ರಸ್ತೆ, ತಿಮ್ಮಯ್ಯ ರಸ್ತೆ, ಬೆಂಗಳೂರು

ನಂ. ಕಾಅ/ಶಿವಾಜಿನಗರ/ಟೆಂಡರ್/17/2026-27 ದಿನಾಂಕ : 30.06.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ

(ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, (ಶಿವಾಜಿನಗರ), ಬೆಂಕೇನಪಾ, ರವರು ಬಿಬಿಎಂಪಿ/ ಕೆಪಿಡಬ್ಲ್ಯೂಡಿ/ ಸಿಪಿಡಬ್ಲ್ಯೂಡಿ/ ರೈಲ್ವೆ/ ಎಂಇಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಯಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಟೆಂಡರ್ ದಾಖಲೆ ಕೆಡ್ಯೂಲ್4

ಕ್ರ. ಸಂ.	ಕಾಮಗಾರಿ ವಿವರ
1.	ವಾರ್ಡ್ ಸಂಖ್ಯೆ 01ರ ರಾಮಸ್ವಾಮಿ ಪಾಳ್ಯದ ಗುಂಡಪ್ಪ ಬ್ಲಾಕ್, ಪಿಳ್ಳಪ್ಪ ಬ್ಲಾಕ್, ಮಾರೆಪ್ಪ ತೋಟ, ಎವಿಆರ್ ಬ್ಲಾಕ್, ಪೆಮ್ಮೇಗೌಡ ಅಡ್ಡರಸ್ತೆಗಳು, ಹಂಚಪ್ಪ ಬ್ಲಾಕ್ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು, ಹೊಸ ವಾರ್ಡ್ ಸಂಖ್ಯೆ 05 (ಹಳೆಯ ಸಂಖ್ಯೆ: 119) ಶಿವಾಜಿನಗರ ಉಪವಿಭಾಗ (ಪ್ಯಾಕೇಜ್ – 01) ರಲ್ಲಿ ಹಫೀಜಾ ಶಾಲಾ ಕಟ್ಟಡದ ಎದುರು ಕಾಕ್‌ಬರ್ನ್ ರಸ್ತೆಯಲ್ಲಿರುವ ಶಾದಿ ಮಹಲ್ ಮತ್ತು ಜಿಮ್, ಕ್ರೀಡಾ ಕೇಂದ್ರದ ಸುಧಾರಣೆ ಮತ್ತು ನಿರ್ಮಾಣ. **ಟೆಂಡರ್‌ಗಿಟ್ಟ ಮೊತ್ತ : ರೂ. 1000.00 ಲಕ್ಷಗಳು, ಇಎಂಡಿ : ರೂ. 10,00,000.00**
2.	ವಾರ್ಡ್ ನಂ. 02ರ ಜಯಮಹಲ್‌ನ ಖಾದ್ರಿಯಾ ಮಸೀದಿಯಿಂದ ಜೆ.ಸಿ. ನಗರ ಪೊಲೀಸ್ ಠಾಣೆವರೆಗಿನ ನಂದಿದುರ್ಗ ರಸ್ತೆಯಲ್ಲಿ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು, ಶಿವಾಜಿನಗರ ಕ್ಷೇತ್ರದ ಹಲಸೂರು ವಾರ್ಡ್‌ನ ಹೊಸ ವಾರ್ಡ್ ಸಂಖ್ಯೆ 08 (ಹಳೆಯ ಸಂಖ್ಯೆ 121) ರ ಎಸ್‌ಎನ್‌ಟಿ ಬೀದಿಯಲ್ಲಿ ಫುಟ್‌ಬಾಲ್ ಕ್ರೀಡಾಂಗಣದ ಸುಧಾರಣೆ ಮತ್ತು ನಿರ್ಮಾಣ. (ಪ್ಯಾಕೇಜ್ –02). **ಟೆಂಡರ್‌ಗಿಟ್ಟ ಮೊತ್ತ : ರೂ. 1000.00 ಲಕ್ಷಗಳು, ಇಎಂಡಿ : ರೂ. 10,00,000.00**
3.	ಜಯಮಹಲ್ ಎಕ್ಸ್‌ಟೆನ್ಷನ್‌ನಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. ವಾರ್ಡ್ ಸಂಖ್ಯೆ: 02 ಜಯಮಹಲ್ ಶಿವಾಜಿನಗರ ಉಪವಿಭಾಗದ ನಂದಿದುರ್ಗ ಎಕ್ಸ್‌ಟೆನ್ಷನ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಮತ್ತು ವಾರ್ಡ್ ಸಂಖ್ಯೆ: 01 ರಾಮಸ್ವಾಮಿ ಪಾಳ್ಯ ಶಿವಾಜಿನಗರ ಉಪವಿಭಾಗದ (ಪ್ಯಾಕೇಜ್–03) ಚಿನ್ನಪ್ಪ ಉದ್ಯಾನ, ಯುವಿ ಬ್ಲಾಕ್, ನಾರಾಯಣಪ್ಪ ಬ್ಲಾಕ್, ಕ್ರೆಸೆಂಟ್ ರಸ್ತೆ, ಮುದ್ದಮ್ಮ ಉದ್ಯಾನ ಎಕ್ಸ್‌ಟೆನ್ಷನ್, ಐಟಿಐ ಲೇಔಟ್ ಮತ್ತು ಚಿನ್ನಪ್ಪ ಗ್ರೇಡನ್ ಲಿಂಕ್ ರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು. **ಟೆಂಡರ್‌ಗಿಟ್ಟ ಮೊತ್ತ : ರೂ. 1000.00 ಲಕ್ಷಗಳು, ಇಎಂಡಿ : ರೂ. 10,00,000.00**
4.	ವಸಂತನಗರ ಉಪವಿಭಾಗದ ವಾರ್ಡ್ ಸಂಖ್ಯೆ 03 ರಲ್ಲಿರುವ ಕ್ವೀನ್ಸ್ ರಸ್ತೆ, ಕಂಟೋನ್ಮೆಂಟ್ ನಿಂದ ರಾಜಭವನ, ಎಡ್ವರ್ಡ್ ರಸ್ತೆ, ಕಮಲಾಬಾಯಿ ಶಾಲಾ ರಸ್ತೆ, ಶಿವಾಜಿ ರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ರಾಜಭವನ ರಸ್ತೆ ಮಿನ್ಸ್ಕ ಸ್ಕ್ವೇರ್ ನಿಂದ ಚಾಲುಕ್ಯ ವೃತ್ತ, ಚಂದ್ರಿಕಾ ಹೋಟೆಲ್ ವರೆಗೆ ಕನ್ನಿಂಗ್‌ಹ್ಯಾಮ್ ರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು, 8ನೇ ಮೇನ್ ಮತ್ತು ಅಡ್ಡ ರಸ್ತೆಗಳು, ಚಕ್ರವರ್ತಿ ಲೇಔಟ್, ಕಾವೇರಪ್ಪ ಲೇಔಟ್, ಕುಮಾರ ಪಾರ್ಕ್, ಶೇಷಾದ್ರಿಪುರಂ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಪ್ರದೇಶ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು (ಪ್ಯಾಕೇಜ್ – 04). **ಟೆಂಡರ್‌ಗಿಟ್ಟ ಮೊತ್ತ : ರೂ. 1200.00 ಲಕ್ಷಗಳು, ಇಎಂಡಿ : ರೂ. 12,00,000.00**
5.	ಕೆ.ಆರ್. ವೃತ್ತದಿಂದ ವಿಧಾನಸೌಧ ಮೆಟ್ರೋ ನಿಲ್ದಾಣ, ಹಡ್ಸನ್ ವೃತ್ತದಿಂದ ಮಿಷನ್ ರಸ್ತೆ, ಹಡ್ಸನ್ ವೃತ್ತದಿಂದ ರಿಚ್ಮಂಡ್ ವೃತ್ತದವರೆಗಿನ ರಾಜಾರಾಮ್ ಮೋಹನ್ ರಾಯ್ ರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಮಿಂಕ್ಸ್ ಜಂಕ್ಷನ್‌ನಿಂದ ಸರ್ ಎಂ. ವಿಶ್ವೇಶ್ವರಯ್ಯ ಮ್ಯೂಸಿಯಂ ರಸ್ತೆ ಮೂಲಕ ರಾಜಾರಾಮ್ ಮೋಹನ್ ರಾಯ್‌ವರೆಗಿನ ಕ್ವೀನ್ಸ್ ರಸ್ತೆ, ಸಿದ್ದಲಿಂಗಯ್ಯ ವೃತ್ತ ಮತ್ತು ವಿಠಲ್ ಮಲ್ಯ ಆಸ್ಪತ್ರೆ ರಸ್ತೆ, ಕೆ.ಆರ್. ವೃತ್ತದಿಂದ ಕಬ್ಬನ್ ಪಾರ್ಕ್ ಗೇಟ್, ಮಾಧವನಗರ, ಅಮೇರಿಕನ್ ಕಾಲೋನಿ ಸಿಂಧಿ ಕಾಲೋನಿ, ಚಾಬ್ರಿಯಾ ಲೇಔಟ್, ಫೈನ್ ಫೀಲ್ಡ್ ಲೇಔಟ್, ಕುಮಾರಪಾರ್ಕ್ ಸುತ್ತಮುತ್ತಲಿನ ಪ್ರದೇಶಗಳು, ಶ್ರೀಕಾಂತನ್ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು, ವಸಂತನಗರ ಉಪವಿಭಾಗ (ಪ್ಯಾಕೇಜ್–05) **ಟೆಂಡರ್‌ಗಿಟ್ಟ ಮೊತ್ತ : ರೂ. 1200.00 ಲಕ್ಷಗಳು, ಇಎಂಡಿ : ರೂ. 12,00,000.00**
6.	ಬೌರಿಂಗ್ ಆಸ್ಪತ್ರೆ ರಸ್ತೆಯ ಅಡ್ಡ ರಸ್ತೆಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳ ಅಡ್ಡ ರಸ್ತೆಗಳಲ್ಲಿ ಚರಂಡಿಗಳು ಮತ್ತು ರಸ್ತೆಗಳ ಸುಧಾರಣೆ ಮತ್ತು ನಿರ್ಮಾಣ, ಹೊಸ ವಾರ್ಡ್ ಸಂಖ್ಯೆ 05 (ಹಳೆಯ ಸಂಖ್ಯೆ 119) ಶಿವಾಜಿನಗರ ವಾರ್ಡ್‌ನಲ್ಲಿರುವ ಕಮರ್ಷಿಯಲ್ ಸ್ಟ್ರೀಟ್ ಅಡ್ಡ ರಸ್ತೆಗಳು, ನಾಲಾ ರಸ್ತೆಗಳು, ಅಡ್ಡ ರಸ್ತೆಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳು, ಚರಂಡಿಗಳು ಮತ್ತು ರಸ್ತೆಗಳ ಸುಧಾರಣೆ ಮತ್ತು ನಿರ್ಮಾಣ, ಎ.ಎಂ. ರಸ್ತೆ, ಶಿವನ್, ಸೇಂಟ್ ಜಾನ್ಸ್ ಚರ್ಚ್ ರಸ್ತೆ, ಸೆಪ್ಪಿಂಗ್ ರಸ್ತೆ, ತಿಮ್ಮಯ್ಯ ರಸ್ತೆ ಅಡ್ಡ ರಸ್ತೆಗಳು, ನೆಹರು ಪುರಂ ಪ್ರದೇಶ ಮತ್ತು ಸ್ಟಾರ್ ಆಸ್ಪತ್ರೆ ಅಡ್ಡ ರಸ್ತೆಗಳು, ಫ್ರೂಟ್ ಸ್ಟ್ರೀಟ್ ರಸ್ತೆ ಮತ್ತು ಅಡ್ಡ ರಸ್ತೆಗಳು ಮತ್ತು ಹೊಸ ವಾರ್ಡ್ ಸಂಖ್ಯೆ 06 (ಹಳೆಯ ಸಂಖ್ಯೆ 120) ವಾರ್ಡ್‌ನಲ್ಲಿ ಸುತ್ತಮುತ್ತಲಿನ ಪ್ರದೇಶಗಳು. (ಪ್ಯಾಕೇಜ್–06). **ಟೆಂಡರ್‌ಗಿಟ್ಟ ಮೊತ್ತ : ರೂ. 1000.00 ಲಕ್ಷಗಳು, ಇಎಂಡಿ : ರೂ. 10,00,000.00**
7.	ಶಿವಾಜಿನಗರ ಕ್ಷೇತ್ರದ ಹೊಸ ವಾರ್ಡ್ ಸಂಖ್ಯೆ 05 (ಹಳೆಯ ಸಂಖ್ಯೆ 119) ಶಿವಾಜಿನಗರ ವಾರ್ಡ್‌ನಲ್ಲಿನ ಚರಂಡಿಗಳು ಮತ್ತು ರಸ್ತೆಗಳು, ಸೇಂಟ್ ಜಾನ್ಸ್ ರಸ್ತೆ, ಓಸ್ಬೋರ್ನ್ ರಸ್ತೆ ಮತ್ತು ಅಡ್ಡ ರಸ್ತೆಗಳು, ಕಾಮರಾಜ್ ರಸ್ತೆ, ಹಲಸೂರು ರಸ್ತೆ ಮತ್ತು ಅಟ್ ಶಿವನ್ ಚೆಟ್ಟಿ ಗಾರ್ಡನ್‌ನಲ್ಲಿ ಆಂತರಿಕ ಸಿಮೆಂಟ್ ಕಾಂಕ್ರೀಟ್ ರಸ್ತೆಗಳು, ರುಕ್ಮಿಣಿ ಕಾಲೋನಿ ಅಡ್ಡರಸ್ತೆಗಳು, ಅಣ್ಣಾ ಸ್ವಾಮಿ ಮುದಲಿಯಾರ್ ಅಡ್ಡರಸ್ತೆಗಳು, ಕಾಮರಾಜ್ ವಾರ್ಡ್ ಸಂಖ್ಯೆ 07, ಇನ್‌ಫೆಂಟ್ರಿ ರಸ್ತೆಗಳ ಅಡ್ಡರಸ್ತೆಗಳು, ಲೇಡಿ ಕರ್ಜನ್ ರಸ್ತೆ, ಕಾಮರಾಜ್ ರಸ್ತೆ, ವಾಣಿಜ್ಯ ರಸ್ತೆ ಅಡ್ಡರಸ್ತೆಗಳು, ಡಿಸ್ಪೆನ್ಸರಿ ಅಡ್ಡರಸ್ತೆಗಳು ಮತ್ತು ಸುತ್ತಮುತ್ತಲಿನ ಪ್ರದೇಶಗಳ ಸುಧಾರಣೆ ಮತ್ತು ನಿರ್ಮಾಣ. (ಪ್ಯಾಕೇಜ್–07). **ಟೆಂಡರ್‌ಗಿಟ್ಟ ಮೊತ್ತ : ರೂ. 1000.00 ಲಕ್ಷಗಳು, ಇಎಂಡಿ : ರೂ. 10,00,000.00**
8.	ಶಿವಾಜಿನಗರ ನಗರ ಕ್ಷೇತ್ರದ ಸಂಪಂಗಿರಾಮನಗರದ ವಾರ್ಡ್ ಸಂಖ್ಯೆ 04 ರಲ್ಲಿ ಗುಪ್ತಾ ಲೇಔಟ್, ಕಾರ್ ಸ್ಟ್ರೀಟ್, ಪಳನಿ ಮುದಲಿಯಾರ್ ಸ್ಟ್ರೀಟ್, ಆರ್.ಕೆ. ಮಠ ರಸ್ತೆ, ಹನುಮಯ್ಯ, ಸುಬ್ಬಯ್ಯ, ಲಕ್ಷ್ಮಯ್ಯ ರಸ್ತೆಗಳು ಮತ್ತು ಒಳಗಿನ ಸಿಮೆಂಟ್ ಕಾಂಕ್ರೀಟ್ ಅಡ್ಡ ರಸ್ತೆಗಳು, ಹೊಸ ವಾರ್ಡ್ ಸಂಖ್ಯೆ 08 (ಹಳೆಯ ಸಂಖ್ಯೆ 121) ಹಲಸೂರು ವಾರ್ಡ್ ಎಸ್.ಆರ್. ನಾಗರ ಕರಗಪ್ಪ ಉದ್ಯಾನ, 8ನೇ ಮುಖ್ಯ ರಸ್ತೆ, 19ನೇ, 20ನೇ ಅಡ್ಡ ರಸ್ತೆ, ಅರಸಪ್ಪ ಉದ್ಯಾನ 3ನೇ, 4ನೇ, 5ನೇ ಅಡ್ಡರಸ್ತೆಗಳು, 4ನೇ ಮೇನ್ ಮತ್ತು 5ನೇ ಮುಖ್ಯ ರಸ್ತೆಗಳು, ಶ್ರೀರಾಮಪುರಂ ಲೇಔಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು (ಪ್ಯಾಕೇಜ್ 08). **ಟೆಂಡರ್‌ಗಿಟ್ಟ ಮೊತ್ತ : ರೂ. 1000.00 ಲಕ್ಷಗಳು, ಇಎಂಡಿ : ರೂ. 10,00,000.00**
9.	ವಾರ್ಡ್ ಸಂಖ್ಯೆ 02 ಜಯಮಹಲ್ ಶಿವಾಜಿನಗರ 02 ಜಯಮಹಲ್ ಶಿವಾಜಿನಗರ ಉಪವಿಭಾಗದ ಮಿಲ್ಲರ್ಸ್ ರಸ್ತೆಯಿಂದ ಬ್ಯಾಡರಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಮತ್ತು ಸುಧಾರಣೆಗಳು ಮತ್ತು ಸಮಗ್ರ ಅಭಿವೃದ್ಧಿ ಮತ್ತು ವಾರ್ಡ್ ಸಂಖ್ಯೆ 102 ಜಯಮಹಲ್ ಶಿವಾಜಿನಗರ ಉಪವಿಭಾಗದ (ಪ್ಯಾಕೇಜ್–09) ಜಯಮಹಲ್ ಮುಖ್ಯ ರಸ್ತೆ (ಅರಮನೆ ರಸ್ತೆ), ಕಾಕ್‌ಬರ್ನ್ ರಸ್ತೆ, ಜಯಮಹಲ್ ಎಕ್ಸ್‌ಟೆನ್ಷನ್ (ಕಾಗೆ ರಸ್ತೆಗಳು), ಬೋರ್ ಬ್ಯಾಂಕ್ ರಸ್ತೆ, ಬೆನ್ಸನ್ ಪಟ್ಟಣ ಮತ್ತು ಸುತ್ತಮುತ್ತಲಿನ ಪ್ರದೇಶಗಳ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸುಧಾರಣೆಗಳು. **ಟೆಂಡರ್‌ಗಿಟ್ಟ ಮೊತ್ತ : ರೂ. 800.00 ಲಕ್ಷಗಳು, ಇಎಂಡಿ : ರೂ. 8,00,000.00**
10.	ಹೊಸ ವಾರ್ಡ್ ಸಂಖ್ಯೆ 05 (ಹಳೆಯ ಸಂಖ್ಯೆ 119) ಶಿವಾಜಿನಗರ (ಪ್ಯಾಕೇಜ್ 10) ರಲ್ಲಿ ಮಹಿಳಾ ಪದವಿ ಕಾಲೇಜು ಮತ್ತು ಮಹಿಳಾ ಕೌಶಲ್ಯ ಅಭಿವೃದ್ಧಿ ಕೇಂದ್ರವನ್ನು ಸುಧಾರಿಸಲು ಹೆಚ್ಚುವರಿ ಗ್ರ್ಯಾಂಟ್ಸ್. **ಟೆಂಡರ್‌ಗಿಟ್ಟ ಮೊತ್ತ : ರೂ. 700.00 ಲಕ್ಷಗಳು, ಇಎಂಡಿ : ರೂ. 7,00,000.00**

ಟೆಂಡರ್‌ನ ಕಾರ್ಯಸೂಚಿ: (1) ಬಿಡ್ ಪೂರ್ವ ಸಭೆಯು ನಡೆಯುವ ದಿನಾಂಕ, ಸಮಯ ಮತ್ತು ದಿನಾಂಕ: **10.07.2026 ರಂದು ಮಧ್ಯಾಹ್ನ 03.30 ಕ್ಕೆ** ಕಾರ್ಯಪಾಲಕ ಅಭಿಯಂತರರವರ ಕಛೇರಿ, ಶಿವಾಜಿನಗರ ವಿಭಾಗ, ತಿಮ್ಮಯ್ಯ ರಸ್ತೆ, ಕ್ವೀನ್ಸ್ ರಸ್ತೆ, ಬೆಂಗಳೂರು-560001 (2) ಭರ್ತಿ ಮಾಡಿದ ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **17.07.2026 ರಂದು ಸಂಜೆ 04.00 ಗಂಟೆಯವರೆಗೆ.** (3) ತಾಂತ್ರಿಕ ಬಿಡ್ ಟೆಂಡರ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : **18.07.2026 ರಂದು ಸಂಜೆ 04.30 ರ ನಂತರ.**

ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬೆಂ.ಕೇಂ.ನ.ಪಾ

ನಗರಸಭಾ ಕಾರ್ಯಾಲಯ ಗೌರಿಬಿದನೂರು ಚಿಕ್ಕಬಳ್ಳಾಪುರ ಜಿಲ್ಲೆ

ಸಂಖ್ಯೆ: ನ.ಸ.ಗೌ/ತಾ.ಶಾ/ಸಿ.ಆರ್/85/2026-27 ದಿನಾಂಕ:20.06.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಪೌರಾಯುಕ್ತರು ನಗರಸಭೆ ಗೌರಿಬಿದನೂರು ಚಿಕ್ಕಬಳ್ಳಾಪುರ ಜಿಲ್ಲೆ. ಚಿಕ್ಕಬಳ್ಳಾಪುರ ರವರು ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ 2026-27ನೇ ಸಾಲಿನ ನಗರಸಭಾ ನಿಧಿ ಅನುದಾನದ ಯೋಜನೆಯಡಿಯಲ್ಲಿ ಐಟಂವಾರು ಟೆಂಡರ್‌ಗಳನ್ನು standard bidding documents KW-1 ಟೆಂಡರ್ ದಸ್ತಾವೇಜಿನಲ್ಲಿ DMA/2026-27/RD/WORK_INDENT60155 ಇ-ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. (1) ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 07.07.2026 ರ ಸಂಜೆ 5.00 ಘಂಟೆ** (2) ಟೆಂಡರ್ **ಕರೆಯುವ ದಿನಾಂಕ: 08.07.2026 ರ ಸಂಜೆ 5.30ಘಂಟೆ** (3) ಹೆಚ್ಚಿನ ಮಾಹಿತಿಗಾಗಿ ವಿವರಗಳನ್ನು **www.eproc.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ. ಹಾಗೂ ಕಛೇರಿಯ ಸಮಯದಲ್ಲಿ ನಗರಸಭೆಯ ಪೌರಾಯುಕ್ತರು/ ತಾಂತ್ರಿಕ ಶಾಖೆಯಲ್ಲಿ ಪಡೆಯಬಹುದಾಗಿರುತ್ತದೆ

ಸಹಿ/–	ಸಹಿ/–
ಪೌರಾಯುಕ್ತರು	ಜಿಲ್ಲಾಧಿಕಾರಿಗಳು/ಆಡಳಿತಾಧಿಕಾರಿಗಳು
ನಗರಸಭೆ, ಗೌರಿಬಿದನೂರು	ನಗರಸಭೆ, ಗೌರಿಬಿದನೂರು

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:118/ಕೆಎಸ್‌ಎಂಸಿಎ/2026-27

NAVODAYA VIDYALAYA SAMITI (NVS)

(Autonomous Organization under Ministry of Education, Govt. of India)

WALK-IN-INTERVIEW (CONTRACT BASIS) Academic Session 2026-27

Applications are invited from eligible candidates for engagement of Contract Teachers in PMSHRI JNV, MYSURU.

INTERVIEW SCHEDULE: On 03.07.2026
TGT: Hindi, Social Science
Time: 10:30 AM to 1:00 PM-(Interview)
Document Verification: 9:30 AM to 10:30AM

Venue

1. Regional Institute of Education (NCERT) Opp. to AIISH, Mysuru 570006 Karnataka
For detailed notification, visit: https://navodaya.gov.in/nvs/ro/Hyderabad/en/home

Contact Details

1. V SRINIVASAN PRINCIPAL 9438401912
2. SHAJU JOSEPH VICE-PRINCIPAL 9448367376

◆ Bring Original Testimonials (All degree certificate along with mark sheets) & Experience Certificates
◆ Carry one set of photocopies of all documents.
◆ Bring 2 passport-size photographs
◆ Ensure reporting before 9:30 AM for verification.

Sd/- Principal
PM SHRI SCHOOL, JNV-MYSURU
D.M.G. HALLI-570 02

ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು-560001

ಸಂಖ್ಯೆ: ಹೆಚ್‌ಸಿಆರ್‌ಬಿ/ಡಿಇಎ-6/2026 (ಆರ್.ಪಿ.ಸಿ) ದಿನಾಂಕ : 30.06.2026
ಹೆಚ್‌ಸಿಆರ್‌ಬಿ/ಡಿಇಎ-7/2026 (ಕೆ.ಕೆ.ಆರ್)

ಸಂಕ್ಷಿಪ್ತ ಅಧಿಸೂಚನೆ

ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ 28 ದತ್ತಾಂಶ ನಮೂದು ಸಹಾಯಕರ ಹುದ್ದೆಗಳ [21 ಹುದ್ದೆಗಳ ಉಳಿದ ಮೂಲ ವೃಂದ [06 ಉಳಿಕೆ (ಬ್ಯಾಕ್‌ಲಾಗ್) ಹುದ್ದೆಗಳನ್ನೊಳಗೊಂಡಂತೆ] ಮತ್ತು 7 ಹುದ್ದೆಗಳ ಕಲ್ಯಾಣ ಕರ್ನಾಟಕ ಸ್ಥಳೀಯ ವೃಂದ [05 ಉಳಿಕೆ (ಬ್ಯಾಕ್‌ಲಾಗ್) ಸೇರಿದಂತೆ] ನೇರ ನೇಮಕಾತಿಗೆ ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಿ ಅಧಿಸೂಚನೆ ಹೊರಡಿಸಿದೆ. ಈ ಹುದ್ದೆಯ ವೇತನ ಶ್ರೇಣಿ ರೂ.25,500/– ರೂ.81,100/–, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 28.07.2026 ರಾತ್ರಿ 11.59 ರವರೆಗೆ ನಿಗದಿಪಡಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಕೃತ ಜಾಲತಾಣ judiciary.karnataka.gov.in ಮೂಲಕ ಆನ್‌ಲೈನ್‌ನಲ್ಲಿ ಮಾತ್ರವೇ ಅರ್ಜಿ ಸಲ್ಲಿಸಬೇಕಾಗುತ್ತದೆ. ಇತರೆ ಯಾವುದೇ ರೀತಿ / ವಿಧಾನಗಳಲ್ಲಿಯೂ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ. ಅಧಿಸೂಚನೆ ಮತ್ತು ಇತರ ವಿವರಗಳು ಮೇಲೆ ತಿಳಿಸಿದ ಪೋರ್ಟಲ್‌ನಲ್ಲಿ ಹಾಗೂ ಕರ್ನಾಟಕ ರಾಜ್ಯ ಪತ್ರದಲ್ಲಿ (ಇ-ಗೆಜೆಟ್) ದಿನಾಂಕ: 29.06.2026ರಲ್ಲಿ ದೊರೆಯುತ್ತದೆ.

ಸಹಿ/– (ಎಂ. ಚಂದ್ರಶೇಖರ್ ರೆಡ್ಡಿ)
ಮಹಾವಿಲೇಖನಾಧಿಕಾರಿ
ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.

DIPR/CP/1395/Zen/2026-27

ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಪ್ರದೇಶ ಯೋಜನಾ ಪ್ರಾಧಿಕಾರ

#05, 2ನೇ ಮಹಡಿ, ಲೂಪ್‌ಲೇನ್, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560009
ದೂರವಾಣಿ: 080 – 22341230/35, ಇ-ಮೇಲ್: bmicapa@gmail.com

ಸಂಖ್ಯೆ: ಬಿಎಂಐಸಿಎಪಿಎ/ಭೂಉಬ-02/95/2025-26/524 ದಿನಾಂಕ: 25.06.2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ)ರ ಪ್ರಕಾರ)

ಶ್ರೀ ಬಿ.ವಿ ಮಲ್ಲಪ್ಪ ಬಿನ್ ಬಿ.ಎನ್. ವೀರಯ್ಯ, ಶ್ರೀ ರವಿ.ಎನ್ ಬಿನ್ ನಾಚಿಮುತ್ತು, ಶ್ರೀ ಶಿವಕುಮಾರ್ ಬಿ.ಎಸ್ ಬಿನ್ ಸಿದ್ದಯ್ಯ, ಮಂಜುಳ ಬಿ.ಎಸ್ ಬಿನ್ ಸಿದ್ದಯ್ಯ, ಲತಾ ಬಿನ್ ಲೇ ವೆಂಕಟಪ್ಪ.ಸಿ, ಲಕ್ಷ್ಮಮ್ಮ ಬಿನ್ ಲೇ ವೆಂಕಟಪ್ಪ.ಸಿ ಮತ್ತು ಪಂಕಜ ಬಿನ್ ಲೇ ವೆಂಕಟಪ್ಪ.ಸಿ, ಇವರುಗಳು ರಾಮನಗರ ತಾಲ್ಲೂಕು, ಬಿಡದಿ ಹೋಬಳಿ, ಬಾಣಂದೂರು ಗ್ರಾಮದ ಸರ್ವೆ ಸಂಖ್ಯೆ: 104/5ರ 02-03½ಗು, ಸರ್ವೆ ಸಂಖ್ಯೆ: 104/6ರ 0ಎ-10ಗು, ಸರ್ವೆ ಸಂಖ್ಯೆ: 104/27ರ 0-10ಗು, ಸರ್ವೆ ಸಂಖ್ಯೆ: 104/28ರ 01ಎ-26½ಗು, ಸರ್ವೆ ಸಂಖ್ಯೆ:104/63ರ 0ಎ-10ಗು, ಸರ್ವೆ ಸಂಖ್ಯೆ: 116/4ರ 0ಎ-33½ಗು, ಸರ್ವೆ ಸಂಖ್ಯೆ: 116/34ರ 0ಎ-01¾ಗು ಮತ್ತು ಸರ್ವೆ ಸಂಖ್ಯೆ:116/35ರ 0ಎ-01¼ಗು ಒಟ್ಟು 05ಎ-16½ಗು ವಿಸ್ತೀರ್ಣದ ಜಮೀನುಗಳನ್ನು ಕೆಟಿಸಿಪಿ ಕಾಯ್ದೆ, 1961ರ ಕಲಂ 14(ಎ)ರಡಿಯಲ್ಲಿ **"ವ್ಯವಸಾಯ"** ವಲಯದಿಂದ **"ವಾಣಿಜ್ಯ"** ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ಜಮೀನನ್ನು ಅನುಮೋದಿತ ಮಹಾಯೋಜನೆಯಲ್ಲಿ ವ್ಯವಸಾಯ ವಲಯದಲ್ಲಿ ಕಾಯ್ದಿರಿಸಲಾಗಿರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯು ಈ ಕೆಳಕಂಡ ಸಾರ್ವಜನಿಕ ಹಿತಾಸಕ್ತಿ ಹೊಂದಿರುವುದಾಗಿ ಅರ್ಜಿದಾರರು ತಿಳಿಸಿರುತ್ತಾರೆ.

1. ಸದರಿ ಜಮೀನಿನಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಅಭಿವೃದ್ಧಿ ಮಾಡುವುದರಿಂದ, ಆರ್ಥಿಕ ಚಟುವಟಿಕೆ ಹೆಚ್ಚಾಗಿ ಸಾರ್ವಜನಿಕರಿಗೆ ಉದ್ಯೋಗಾವಕಾಶಗಳು ದೊರೆಯುತ್ತವೆ. **2.** ವಾಣಿಜ್ಯ ಯೋಜನೆಯ ಅಭಿವೃದ್ಧಿ ಕಾರ್ಯಗಳ ಸಮಯದಲ್ಲಿ ಸ್ಥಳೀಯ ಕಾರ್ಮಿಕರು ಮತ್ತು ಕುಶಲ ಕೆಲಸಗಾರರಿಗೆ ಉದ್ಯೋಗಾವಕಾಶ ದೊರೆಯುತ್ತದೆ. **3.** ಮೇಲ್ಕಂಡ ಜಮೀನಿನಲ್ಲಿ ವಾಣಿಜ್ಯ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶಗಳು ಸಹ ಅಭಿವೃದ್ಧಿ ಹೊಂದುತ್ತವೆ. **4.** ಯೋಜಿತ ವಾಣಿಜ್ಯ ಅಭಿವೃದ್ಧಿಯಿಂದ ಉತ್ತಮ ರಸ್ತೆಗಳು, ಪಾರ್ಕಿಂಗ್ ಸೌಲಭ್ಯ, ಮೂಲಸೌಕರ್ಯಗಳ ಸುಧಾರಣೆ ಮುಂತಾದ ನಾಗರೀಕ ಸೌಲಭ್ಯಗಳು ಸಾರ್ವಜನಿಕರಿಗೆ ದೊರೆಯುತ್ತವೆ. ಜೊತೆಗೆ ಸರ್ಕಾರಕ್ಕೆ ತೆರಿಗೆಯ ರೂಪದಲ್ಲಿ ಆದಾಯವೂ ದೊರೆಯುತ್ತದೆ.

ಸಾರ್ವಜನಿಕರಿಂದ ಆಕ್ಷೇಪಣೆಗಳಿದ್ದಲ್ಲಿ ಆಹ್ವಾನಿಸಲಾಗಿದೆ. ಯಾವುದೇ ವ್ಯಕ್ತಿಯು ಈ **ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗೆ** ಸದಸ್ಯ ಕಾರ್ಯದರ್ಶಿ, ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು ಇವರಿಗೆ ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಬಹುದು. ನಿಗದಿತ ಅವಧಿಯ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– **ಸದಸ್ಯ ಕಾರ್ಯದರ್ಶಿಗಳು**
ಬಿ.ಎಂ.ಐ.ಸಿ.ಎ.ಪಿ.ಎ., ಬೆಂಗಳೂರು.

DIPR/CP/1392/SA/2026-27

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಿ.ಎ ನಿವೇಶನ ಖಾತೆ ನಂ. 31-511-371, ವಾರ್ಡ್ ನಂ. 20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110.

ಸಂ: ಬಿಐಎಪಿಎ/ಟಿಪಿ/ಭೂಉಬ/32/2026-27/1004 ದಿನಾಂಕ : 30.06.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎಂ.ಕೆ. ಕೃಪಾಕರ ರಾವ್ ಬಿನ್ ಲೇ॥ ಎಂ.ಎಚ್. ಕೃಷ್ಣರಾವ್	ದೇವನಹಳ್ಳಿ	ಚನ್ನರಾಯ ಪಟ್ಟಣ	ತೆಲ್ಲೋಹಳ್ಳಿ ಅಗ್ರಹಾರ	52/6	0-07	ವ್ಯವಸಾಯ	ವಾಣಿಜ್ಯ

ಷರಾ :– ಪ್ರಸ್ತಾವನೆಯಲ್ಲಿ ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಹಾಗೂ ಪರಿಸರದಲ್ಲಿ ವಸತಿ/ವಸತಿಯೇತರ ಅಭಿವೃದ್ಧಿ ಬೆಳವಣಿಗೆಗಳು ಬರುತ್ತಿದ್ದು, ಈ ಜಮೀನಿನ ಪರಿಸರದಲ್ಲಿ 'ವಾಣಿಜ್ಯ' ಉದ್ದೇಶಕ್ಕೆ ಸಾರ್ವಜನಿಕರಿಂದ ತುಂಬ ಬೇಡಿಕೆಯಿದ್ದು, ಭವಿಷ್ಯದಲ್ಲಿ 'ವಾಣಿಜ್ಯ' ಉದ್ದೇಶಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಪ್ರಸ್ತಾಪಿತ ಪ್ರದೇಶದಲ್ಲಿ 'ವಾಣಿಜ್ಯ' ಬೆಳವಣಿಗೆಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಿರುತ್ತೇವೆ. ಅಲ್ಲದೇ, ಪ್ರಸ್ತಾಪಿತ ಜಮೀನಿನಲ್ಲಿ 'ವಾಣಿಜ್ಯ' ಬೆಳವಣಿಗೆ ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಜಮೀನನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/1411/ಆಕಾರ್/2026-27

ಇಬ್ಬರು ಮಹಿಳೆಯರ ಒಡೆತನದ ಶೆಲ್ ಕಂಪನಿಗಳ ಖಾತೆಗೆ ವಾಲ್ಮೀಕಿ ನಿಗಮದ ಕೋಟಿ ಕೋಟಿ ಹಣ ಜಮೆ

ಮುಂಬಯಿ ಮಹಿಳೆಯರಿಗೆ ಸಿಬಿಐ ಶಾಕ್

■ ಮಂಜುನಾಥ್ ಲಗುಮೇನಹಳ್ಳಿ ಬೆಂಗಳೂರು
manjunatha.s@timesofindia.com

ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಬಹುಕೋಟಿ ರೂ. ಲೂಟಿ ತನಿಖೆಯನ್ನು ಕೇಂದ್ರ ತನಿಖಾ ದಳ (ಸಿಬಿಐ) ಚುರುಕುಗೊಳಿಸಿದ್ದು, ಮಾಜಿ ಸಚಿವ ಬಿ. ನಾಗೇಂದ್ರ ಅವರ ಮುಂಬಯಿ ಆಪ್ತರು ಹಾಗೂ ನಕಲಿ (ಶೆಲ್) ಕಂಪನಿಗಳ ಖಾತೆಗಳಿಗೆ 3.30 ಕೋಟಿ ರೂ. ವರ್ಗಾವಣೆಯಾಗಿರುವುದನ್ನು ಪತ್ತೆ ಹಚ್ಚಿದೆ. ಈ ಮೂಲಕ ಸಿಐಡಿ ಎಸ್‌ಐಟಿಯಲ್ಲಿ ಮಸುಕಾಗಿರುವ ಘಾತುಕ ಸತ್ಯಗಳು ಬಯಲಾಗುತ್ತಿವೆ.

ವಾಲ್ಮೀಕಿ ಸಮುದಾಯದ ಅಭ್ಯುದಯಕ್ಕೆ ಬಳಕೆಯಾಗಬೇಕಿದ್ದ ನಿಗಮದ 89.63 ಕೋಟಿ ರೂ.ಗಳನ್ನು ಯೂನಿಯನ್ ಬ್ಯಾಂಕ್ ಅಧಿಕಾರಿಗಳು ಹಾಗೂ ಬಿ.ನಾಗೇಂದ್ರ ಮತ್ತಿತರರು ವ್ಯವಸ್ಥಿತವಾಗಿ ದೋಚಿದ್ದಾರೆ. ಬೇರೆಬೇರೆ ಖಾತೆಗಳಿಗೆ ಅಕ್ರಮವಾಗಿ ಹಣ ವರ್ಗಾಯಿಸಿಕೊಂಡು ವಂಚಿಸಲಾಗಿದೆ. ಪ್ರಮುಖವಾಗಿ ಮುಂಬಯಿನ ರಾಣಿ ನರಸಿಂಗ್ ಮೋದಿ (43) ಹಾಗೂ ನೇಹಾ ಕಲಂ ಮನ್ಸೂರಿ (29) ಅವರು ನಡೆಸುವ ಬೇನಾಮಿ ಕಂಪನಿಗಳಿಗೆ ಪ್ರತ್ಯೇಕವಾಗಿ 3.30 ಕೋಟಿ ರೂ.ಗಳಿಗೂ ಹೆಚ್ಚು ಮೊತ್ತ ಅಕ್ರಮವಾಗಿ ವರ್ಗಾವಣೆಯಾಗಿರುವುದು ತನಿಖೆಯಲ್ಲಿ ಕಂಡು ಬಂದಿತ್ತು.

ಈ ನಿಟ್ಟಿನಲ್ಲಿ ರಾಣಿ ನರಸಿಂಗ್ ಮೋದಿ, ನೇಹಾ, ಅವರ ಸಹೋದರ ಹಾಗೂ ತಂದೆಗೆ ವಿಚಾರಣಾ ನೋಟಿಸ್ ಜಾರಿಗೊಳಿಸಿತ್ತು. ಸಿಬಿಐ ಬುಲಾವ್‌ಗೆ ಕಂಗಾಲಾದ ನಾಲ್ವರು ಬಂಧನ ಭೀತಿಯಿಂದ ನಿರೀಕ್ಷಣಾ ಜಾಮೀನು ಕೋರಿ ಪ್ರತ್ಯೇಕವಾಗಿ ಸಿಬಿಐ ವಿಶೇಷ ನ್ಯಾಯಾಲಯದ ಮೊರೆ ಹೋಗಿದ್ದರು.

- ಮುಂಬಯಿ ಖಾತೆಗಳಿಗೆ ಬಳ್ಳಾರಿಯಿಂದ ಹಣ
- ನಾಗೇಂದ್ರ ಅವರ ಆಪ್ತರ ಶೆಲ್ ಕಂಪನಿಗಳಿಗೆ ವರ್ಗಾವಣೆ
- ಬಂಧನ ಭೀತಿಯಿಂದ ಜಾಮೀನು ಪಡೆದ ಇಬ್ಬರು ಮಹಿಳೆಯರು

ಅವರ ಜಾಮೀನಿಗೆ ಪ್ರಬಲ ಆಕ್ಷೇಪ ವ್ಯಕ್ತಪಡಿಸಿದ್ದ ಸಿಬಿಐ ಅಧಿಕಾರಿಗಳು, ನಿಗಮದ ಹಣದ ಅಕ್ರಮ ಹಣ ವರ್ಗಾವಣೆಯ ಸ್ವರೂಪವನ್ನು ಬಿಚ್ಚಿಟ್ಟಿದ್ದರು.

ತಂದೆ-ಮಕ್ಕಳಿಗೆ ಸಿಬಿಐ ಶಾಕ್: ಮಾಜಿ ಸಚಿವ ಬಿ.ನಾಗೇಂದ್ರ ಅವರ ಆಪ್ತರಾದ ನೇಹಾ ಕಲಂ ಮನ್ಸೂರಿ ಅವರು ಮೆಸರ್ಸ್ ಕುತುಬ್ ಸ್ಟೀಲ್ಸ್ ಹೆಸರಿನ ಶೆಲ್ ಕಂಪನಿ ನಡೆಸುತ್ತಿದ್ದಾರೆ. ಈ ಕಂಪನಿಗೆ ಒಟ್ಟು 2,25,60,000 ರೂ. ಜಮೆ ಆಗಿದೆ. ಇದರಲ್ಲಿ ನಿಗಮದ ಹಣ ದೋಚಿದ್ದ ಆರೋಪಿಗಳಾದ ವಿಶ್ವನಾಥ್ ಖಾತೆಯಿಂದ 1,35,60,000 ರೂ. ಮತ್ತೊಬ್ಬ ಆರೋಪಿ ಮಾರುತಿ ಬ್ಯಾಂಕ್ ಖಾತೆಯಿಂದ 1,35,60,000 ರೂ., ಬಳ್ಳಾರಿಯ ಬಾಬಾ ರೋಡ್‌ಲೈನ್ಸ್ ಕಂಪನಿಯಿಂದ 45 ಲಕ್ಷ ರೂ. ಹಾಗೂ ನಗದು ರೂಪದಲ್ಲಿ 34 ಲಕ್ಷ ರೂ. ಜಮೆ ಮಾಡಲಾಗಿದೆ.

ಕುತುಬ್ ಸ್ಟೀಲ್ಸ್ ಖಾತೆಗೆ ಜಮೆಯಾದ ಮೊತ್ತವನ್ನು ನೇಹಾ ತನ್ನ ವೈಯಕ್ತಿಕ ಖಾತೆಗೆ ಮರು ವರ್ಗಾಯಿಸಿಕೊಂಡಿದ್ದಾರೆ. ಬಳಿಕ ತನ್ನ ತಮ್ಮ ಜಹೂರ್ ಕಲಂ ಮನ್ಸೂರಿ (27) ಖಾತೆಗೆ ಕಳಿಸಿದ್ದಾರೆ. ಈ ಅಕ್ರಮದಲ್ಲಿ ಅವರ ತಂದೆ ಕಲಂ ಶಕೂರ್ ಮನ್ಸೂರಿ (52) ಶಾಮೀಲಾಗಿದ್ದಾರೆ. ಖಾತೆಗೆ ಜಮೆಯಾದ ಹಣದಲ್ಲಿ ನೇಹಾ ಸೇರಿದಂತೆ ಮೂವರು ಚಿನ್ನಾಭರಣ ಹಾಗೂ ಸ್ಥಿರಾಸ್ತಿ ಖರೀದಿಸಿದ್ದರು. ಈ ಪೈಕಿ ಆಭರಣ ಸೇರಿ 84.04 ಲಕ್ಷ ರೂ. ಮೌಲ್ಯದ ಆಸ್ತಿ ಜಪ್ತಿ ಮಾಡಲಾಗಿದೆ ಎಂದು ಸಿಬಿಐ ನ್ಯಾಯಾಲಯಕ್ಕೆ ವಿವರಿಸಿದೆ.

ಮೋದಿಗೆ 1.18 ಕೋಟಿ ರೂ.: ಮುಂಬಯಿನ ಪೂರ್ವವಾಡಾಲ ನಿವಾಸಿ ರಾಣಿ ನರಸಿಂಗ್ ಮೋದಿ ಅವರ ಹೆಸರಿನಲ್ಲಿರುವ ಐಸಿಐಸಿಐ ಬ್ಯಾಂಕ್ ಖಾತೆಗೆ 2023ರ ಜುಲೈನಿಂದ 2024ರ ಮಾರ್ಚ್ ಅವಧಿಯಲ್ಲಿ 1.18 ಕೋಟಿ ರೂ. ವರ್ಗಾವಣೆಯಾಗಿದೆ. ಬಳ್ಳಾರಿಯ ಕೆ. ವಿಶ್ವನಾಥ್ 32 ಲಕ್ಷ ರೂ., ಬಿ. ಮಾರುತಿ ಅವರಿಂದ 11 ಲಕ್ಷ ರೂ., ಮೆಸರ್ಸ್ ಬಾಬಾ ರೋಡ್‌ಲೈನ್‌ನಿಂದ 11 ಲಕ್ಷ ರೂ., 50.99 ಲಕ್ಷ ರೂ. ನಗದು ಜಮೆ ಮಾಡಲಾಗಿದೆ. ಜತೆಗೆ, ರಾಣಿ ಮೋದಿ ಅವರು ನಡೆಸುವ ಮೆಸರ್ಸ್ ಪೆಗಸಾಸ್ ಎಂಟರ್‌ಪ್ರೈಸಸ್ ಕಂಪನಿಗೆ ಹಲವು ಬಾರಿ ಭಾರೀ ಪ್ರಮಾಣದ ನಗದು ಜಮೆಯಾಗಿದೆ. ಈ ಹಣದಲ್ಲಿಯೇ ರಾಣಿಯು ಎರಡು ಸ್ಥಿರಾಸ್ತಿ ಖರೀದಿ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಅರ್ಜಿದಾರರ ಕಸ್ಟಡಿ ವಿಚಾರಣೆಯು ಅಗತ್ಯವಾಗಿದೆ. ಈ ಮೂಲಕ ಬ್ಯಾಂಕ್ ಖಾತೆಗಳಿಗೆ ಅಕ್ರಮವಾಗಿ ಜಮೆಯಾದ ಹಣವು ಕೊನೆಯದಾಗಿ ಯಾರಿಗೆ ತಲುಪಿದೆ ಎಂಬುದನ್ನು ಪತ್ತೆ ಮಾಡಬೇಕಿದೆ ಎಂದು ಸಿಬಿಐ ಪ್ರತಿಪಾದಿಸಿತ್ತು.

ಅಂತಿಮವಾಗಿ ಎರಡೂ ಪ್ರತ್ಯೇಕ ಅರ್ಜಿಗಳ ವಿಚಾರಣೆಯಲ್ಲಿ ವಾದ-ಪ್ರತಿವಾದ ಆಲಿಸಿರುವ ನ್ಯಾಯಾಲಯ ಷರತ್ತುಬದ್ಧ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ತನಿಖೆಗೆ ಸಹಕರಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

16 ಮಂದಿ ವಿರುದ್ಧ ಚಾರ್ಜ್‌ಶೀಟ್

2024ರ ಫೆಬ್ರವರಿ 21ರಿಂದ ಮೇ 21ರ ಅವಧಿಯಲ್ಲಿ ವಾಲ್ಮೀಕಿ ನಿಗಮದ ಖಾತೆಯಲ್ಲಿದ್ದ 89.63 ರೂ. ಅಕ್ರಮ ಹಣ ವರ್ಗಾವಣೆಯು ಕೋಲಾಹಲ ಸೃಷ್ಟಿಸಿತ್ತು. ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವ ನಾಗೇಂದ್ರ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಪ್ರಕರಣದ ಮೊದಲ ತನಿಖೆಯನ್ನು ಸಿಐಡಿ ಎಸ್‌ಐಟಿ ನಡೆಸಿದ್ದು, ಹಲವು ಆರೋಪಿಗಳನ್ನು ಬಂಧಿಸಿತ್ತು. ನಾಗೇಂದ್ರರನ್ನು ಕೈ ಬಿಟ್ಟಿತ್ತು. ಜಾರಿ ನಿರ್ದೇಶನಾಲಯವು ತನಿಖೆ ಕೈಗೊಂಡು ಶಾಸಕ ನಾಗೇಂದ್ರರನ್ನು ಬಂಧಿಸಿತ್ತು. ಅಕ್ರಮದಲ್ಲಿ ಶಾಮೀಲಾಗಿರುವ ಯೂನಿಯನ್ ಬ್ಯಾಂಕ್ ಅಧಿಕಾರಿಗಳು ಹಾಗೂ ಇತರರ ವಿರುದ್ಧ ತನಿಖೆ ನಡೆಸುತ್ತಿರುವ ಸಿಬಿಐ, ಬಿ.ನಾಗೇಂದ್ರ ಸೇರಿ 16 ಮಂದಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಪಟ್ಟಿ ಸಲ್ಲಿಸಿದೆ.

ಹಿರಿಯ ಕಲಾವಿದ ಶಿವಪ್ರಸಾದ್ ನಿಧನ

■ ವಿಕ ಸುದ್ದಿಲೋಕ ಬೆಂಗಳೂರು

ರೈತರು, ದಲಿತರು ಹಾಗೂ ಹಿಂದುಳಿದವರ ಧ್ವನಿಯಾಗಿದ್ದ ಅಂತಾರಾಷ್ಟ್ರೀಯ ಖ್ಯಾತಿಯ ಹಿರಿಯ ಚಿತ್ರಕಲಾವಿದ ಕೆ.ಟಿ. ಶಿವಪ್ರಸಾದ್ (79) ಮಂಗಳವಾರ ನಿಧನರಾಗಿದ್ದಾರೆ.

ಅನಾರೋಗ್ಯದ ಹಿನ್ನೆಲೆಯಲ್ಲಿ ಬೆಂಗಳೂರಿನ ನಾರಾಯಣ ಹೃದಯಾಲಯದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು, ಚಿಕಿತ್ಸೆ ಫಲಕಾರಿಯಾಗದೆ ಕೊನೆಯುಸಿರೆಳೆದಿದ್ದಾರೆ. ರೈತ ಹಾಗೂ ದಲಿತ ಚಳವಳಿಯಲ್ಲಿ ಗುರುತಿಸಿಕೊಂಡಿದ್ದ ಕೆ. ಟಿ. ಶಿವಪ್ರಸಾದ್, ಹಾಸನ ಜಿಲ್ಲೆಯ ಕಾರ್ಲೆಯ ಖ್ಯಾತ ಉದ್ಯಮಿ ಎಲ್. ಟಿ. ಕಾರ್ಲೆ ಅವರ ಪುತ್ರರಾಗಿದ್ದಾರೆ.

ಶಿವಪ್ರಸಾದ್ ಅವರ ಕಲಾಕೃತಿಗಳಲ್ಲಿ 'ಬಂಡಾಯ ಸಾಹಿತ್ಯ ಚಳವಳಿ'ಯ ಪ್ರಭಾವವಿತ್ತು. ಕಲೆ ಮತ್ತು ಸೌಂದರ್ಯ ಪ್ರಜ್ಞೆಯನ್ನು ಸಮಾಜವಾದಿ ಉದ್ದೇಶಗಳೊಂದಿಗೆ ಬೆಸೆಯುವ ಪ್ರಯತ್ನದಲ್ಲಿ ಅವರು ಯಶಸ್ವಿಯಾಗಿದ್ದರು. ಕಲಾಕೃತಿಗಳನ್ನು ದೃಶ್ಯಾನಂದಕ್ಕೆ ಮಾತ್ರ ಬಳಸದೆ, ಬದಲಾವಣೆಯ ದನಿಗಳಾಗಿ ಬಳಸಿದ ಕೆಲವೇ ಕಲಾವಿದರಲ್ಲಿ ಅವರು ಪ್ರಮುಖರು.

1947ರಲ್ಲಿ ಜನಿಸಿದ ಶಿವಪ್ರಸಾದ್, ಬಾಲ್ಯದಿಂದಲೇ ಕಲೆಯತ್ತ ಒಲವು ಹೊಂದಿದ್ದರು. ಎಂಜಿನಿಯರಿಂಗ್ ವ್ಯಾಸಂಗವನ್ನು ಅರ್ಧಕ್ಕೇ ನಿಲ್ಲಿಸಿ ಮುಂಬಯಿನ ಪ್ರತಿಷ್ಠಿತ 'ಸರ್ ಜೆ.ಜೆ. ಸ್ಕೂಲ್ ಆಫ್ ಆರ್ಟ್'ಗೆ ಸೇರಿದರು. 1973ರಲ್ಲಿ ಚಿತ್ರಕಲೆಯಲ್ಲಿ ಡಿಪ್ಲೊಮಾ ಪಡೆದ ಅವರು, ನಂತರದ ದಿನಗಳಲ್ಲಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡರು.

ಕಲೆಗೆ ಅವರು ಸಲ್ಲಿಸಿದ ಅನನ್ಯ ಸೇವೆ ಗುರುತಿಸಿ, 2001ರಲ್ಲಿ ಪ್ರತಿಷ್ಠಿತ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಲಾಗಿತ್ತು. ಶಿವಪ್ರಸಾದ್ ಅವರ ನಿಧನಕ್ಕೆ ಕಲಾಕ್ಷೇತ್ರದ ಗಣ್ಯರು ಹಾಗೂ ಅಭಿಮಾನಿಗಳು ಸಂತಾಪ ಸೂಚಿಸಿದ್ದಾರೆ.

ಶಿವಪ್ರಸಾದ್ ಅವರ ಪಾರ್ಥಿವ ಶರೀರವನ್ನು ಬುಧವಾರ ಬೆಂಗಳೂರಿನಿಂದ ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನಕ್ಕೆ ಕೊಂಡೊಯ್ಯಲಾಗುತ್ತದೆ. ಸಾರ್ವಜನಿಕರಿಗೆ ಬೆಳಗ್ಗೆ 9.30ರಿಂದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಿ ಮಧ್ಯಾಹ್ನ 2 ಗಂಟೆಗೆ ಬಿಟ್ಟಗೌಡನಹಳ್ಳಿ ಶಾಂತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಟ್ರಾವೆಲ್ ಏಜೆಂಟ್ ವಿರುದ್ಧ ಪ್ರಕರಣ ರದ್ದತಿಗೆ ಹೈಕೋರ್ಟ್ ನಕಾರ

ಟ್ರಾವೆಲ್ ಏಜೆಂಟ್‌ಗೆ ಉಗ್ರ ನೆರವಿನ ಕಂಟಕ

■ ವಿಕ ಸುದ್ದಿಲೋಕ ಬೆಂಗಳೂರು

ಆಂಧ್ರಪ್ರದೇಶದ ಭಯೋತ್ಪಾದನಾ ನಿಗ್ರಹ ದಳಕ್ಕೆ (ಎಟಿಎಸ್) ಬೇಕಾಗಿದ್ದ ಶಂಕಿತ ಉಗ್ರನೂ ಸೇರಿ ಹಲವರಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಪಾಸ್‌ಪೋರ್ಟ್ ನವೀಕರಿಸಲು ನೆರವು ನೀಡಿದ ಆರೋಪ ಎದುರಿಸುತ್ತಿರುವ ವಿಶೇಷಚೇತನ ಟ್ರಾವೆಲ್ ಏಜೆಂಟ್ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ರಾಷ್ಟ್ರೀಯ ಭದ್ರತೆಗೆ ಧಕ್ಕೆ ತರುವ ಇಂತಹ ಗಂಭೀರ ಪ್ರಕರಣಗಳಲ್ಲಿ ದಿವ್ಯಾಂಗರು ಅಥವಾ ಅನಾರೋಗ್ಯದ ಕಾರಣಗಳನ್ನು ನೀಡಿ ಆರೋಪಿಯು ಕಾನೂನಿನ ಕ್ರಮದಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ ಎಂದು ತೀಕ್ಷ್ಣವಾಗಿ ನುಡಿದಿರುವ ನ್ಯಾಯಾಲಯ, ಅರ್ಜಿದಾರನ ಏಜೆನ್ಸಿಯಿಂದ ಸುಮಾರು 15 ಬೇರೆಬೇರೆ ಪಾಸ್‌ಪೋರ್ಟ್ ಅರ್ಜಿಗಳಿಗೆ ಒಂದೇ ವಿಳಾಸ ನೀಡಲಾಗಿದ್ದರೂ ಅವುಗಳ ಬಗ್ಗೆ ಸೂಕ್ತ ಪರಿಶೀಲನೆ ನಡೆಸದ ಪೊಲೀಸ್ ಕಾನ್‌ಸ್ಟೆಬಲ್ ಕಾರ್ಯವೈಖರಿಯನ್ನೂ ತೀವ್ರವಾಗಿ ಖಂಡಿಸಿದೆ.

ಪ್ರಕರಣ ರದ್ದು ಕೋರಿ ಮಂಗಳೂರಿನ ಯು. ಎಂ. ಹೈದರ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಜಾಗೊಳಿಸಿರುವ ನ್ಯಾ. ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ಮಾಡಿದೆ.

''ಅರ್ಜಿದಾರರು ಹೊಂದಿರುವ ಅಂಗವೈಕಲ್ಯ ಅಥವಾ ಆರೋಗ್ಯದ ಸಮಸ್ಯೆಗಳು ಮಾನವೀಯ ನೆಲೆಯಲ್ಲಿ ಸಹಾನುಭೂತಿಗೆ ಅರ್ಹವಾಗಿದ್ದರೂ ದೇಶದ ಹಿತಾಸಕ್ತಿಗೆ ವಿರುದ್ಧವಾದ ಕೃತ್ಯಗಳ ತನಿಖೆ ತಡೆಯಲು ಇವು ಕಾರಣವಾಗಲಾರವು. ಅರ್ಜಿದಾರರು ಪೂರ್ಣಪ್ರಮಾಣದ ವಿಚಾರಣೆ ಎದುರಿಸಿ ನಿರಪರಾಧಿಯೆಂದು ಸಾಬೀತುಪಡಿಸಬೇಕಾಗುತ್ತದೆ,'' ಎಂದು ನ್ಯಾಯಾಲಯ ಹೇಳಿದೆ.

'ಅರ್ಜಿದಾರ ಹೈದರ್ ಟ್ರಾವೆಲ್ ಏಜೆನ್ಸಿಯಿಂದ ಸಲ್ಲಿಕೆಯಾಗಿದ್ದ ಸುಮಾರು 15 ಪಾಸ್‌ಪೋರ್ಟ್ ಅರ್ಜಿಗಳಿಗೆ ಒಂದೇ ವಿಳಾಸ ನೀಡಲಾಗಿದ್ದರೂ ಸೂಕ್ತ ಸ್ಥಳ ಪರಿಶೀಲನೆ ನಡೆಸದೆ ಅನುಮೋದನೆ ನೀಡಿದ್ದ ಪೊಲೀಸ್ ಕಾನ್‌ಸ್ಟೆಬಲ್ ಲಕ್ಷ್ಮಣ್ ನಡೆ ತೀವ್ರ ಆಘಾತಕಾರಿಯಾಗಿದೆ. ಇದು ಕೇವಲ ಕರ್ತವ್ಯ ಲೋಪವಲ್ಲ, ಸಾರ್ವಜನಿಕ ನಂಬಿಕೆಗೆ ಬಗೆದ ದ್ರೋಹವಾಗಿದೆ. ಅವರನ್ನು ಸುಮ್ಮನೆ ಬಿಡಲು ಸಾಧ್ಯವಿಲ್ಲ,'' ಎಂದು ನ್ಯಾಯಾಲಯ ಕಟುವಾಗಿ ಹೇಳಿದೆ.

ಈ ನಡುವೆ, ''ಪಾಸ್‌ಪೋರ್ಟ್ ಪ್ರಕ್ರಿಯೆಯ ಭಾಗವಾಗಿ ಪರಿಶೀಲನೆ ನಡೆಸಿದ್ದ ಲಕ್ಷ್ಮಣ್ ವಿರುದ್ಧ ಕಾನೂನು ಕ್ರಮ ಜರುಗಿಸಲು ಈಗಾಗಲೇ ಅನುಮತಿ ಕೋರಲಾಗಿದ್ದು, ಸದ್ಯ ಪ್ರಸ್ತಾವನೆಯು ಸಕ್ಷಮ ಪ್ರಾಧಿಕಾರದ ಮುಂದೆ ಪರಿಗಣನೆಗೆ ಬಾಕಿ ಇದೆ,'' ಎಂದು ರಾಜ್ಯ ಸರಕಾರಿ ಅಭಿಯೋಜಕರು ತಿಳಿಸಿದ್ದಾರೆ.

ಪ್ರಕರಣದ ಹಿನ್ನೆಲೆ: ಪುತ್ತೂರು ತಾಲೂಕಿನಲ್ಲಿ ಟ್ರಾವೆಲ್ ಏಜೆನ್ಸಿ ನಡೆಸುತ್ತಿದ್ದ ಯು.ಎಂ. ಹೈದರ್ ವಿರುದ್ಧ ಆಂಧ್ರಪ್ರದೇಶದ ಎಟಿಎಸ್‌ನಿಂದ ಹುಡುಕಲ್ಪಡುತ್ತಿದ್ದ ಮೋಸ್ಟ್ ವಾಂಟೆಡ್ ಉಗ್ರ ಇಬ್ರಾಹಿಂ ಖಲೀಲ್ ಸೇರಿ 15 ಮಂದಿಗೆ ಮಂಗಳೂರಿನಲ್ಲಿ ನಕಲಿ ವಾಸ್ತವ್ಯದ ದಾಖಲೆಗಳು ಹಾಗೂ ನಕಲಿ ಶೈಕ್ಷಣಿಕ ಪ್ರಮಾಣಪತ್ರಗಳನ್ನು ಸೃಷ್ಟಿಸಲು ಸಹಕರಿಸಿದ್ದಲ್ಲದೆ, ಪೊಲೀಸರಿಗೆ ವಂಚಿಸಿ ತಪಾಸಣೆ ಯಶಸ್ವಿಯಾಗುವಂತೆ ಮಾಡಲು ಸಂಚು ರೂಪಿಸಿದ ಆರೋಪವಿದೆ. ಅರ್ಜಿದಾರರ ಏಜೆನ್ಸಿಯಿಂದ ಸೃಷ್ಟಿಸಲಾಗಿದೆ ಎನ್ನಲಾದ ನಕಲಿ ದಾಖಲೆಗಳ ಆಧಾರದಲ್ಲಿ ಬೆಂಗಳೂರಿನ ಪಾಸ್‌ಪೋರ್ಟ್ ಕಚೇರಿಯಿಂದ ಪಾಸ್‌ಪೋರ್ಟ್ ಪಡೆಯಲಾಗಿತ್ತು. ಈ ಆರೋಪದ ಸಂಬಂಧ ತನಿಖೆ ನಡೆಸಿದ್ದ ಮಂಗಳೂರು ಪೂರ್ವ ಠಾಣೆ ಪೊಲೀಸರು ಅರ್ಜಿದಾರ ಹೈದರ್ (ಎ3), ಶಂಕಿತ ಉಗ್ರ ಇಬ್ರಾಹಿಂ ಖಲೀಲ್ (ಎ1) ಸೇರಿ ಹಲವರ ವಿರುದ್ಧ ವಿಚಾರಣಾ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು.

KLE SOCIETY
Since 1916
| 318 Institutions
| 1,48,000 Students
| 18,000 Faculties
Tyagaveer Sirasangi Lingaraj College Road, BELAGAVI - 590001, KARNATAKA

WANTED

COORDINATOR
at KLE's S. Nijalingappa College, Rajajinagar, Bengaluru

MCA — QUALIFICATION : ME / M.Tech / MCA with Ph.D in relevant branch with a minimum 60% marks and a minimum of 10 years of Industry/ Teaching experience.

BCA — QUALIFICATION : ME / M.Tech / MCA with Ph.D in relevant branch with a minimum 60% marks and a minimum of 5 years of Industry/ Teaching experience.

LECTURER
at KLE's S. Nijalingappa College Rajajinagar & KLE's Degree College Nagarbhavi, Bengaluru

BCA — QUALIFICATION : ME / M.Tech / MCA with Ph.D in relevant branch with a minimum 60% marks and a minimum of 2 years of Industry/ Teaching experience.

LECTURER
at KLE's S. Nijalingappa College, Rajajinagar, Bengaluru

FAD (FASHION AND APPAREL DESIGN) — QUALIFICATION : M.Sc in Fashion and Textiles/Fashion Designing/ Fashion and Apparel Management/ M.Tech in Fashion Technology/ Textile Management.

Salary : As per AICTE scale
Interested candidates send your resume to klebbabcarecruitment@gmail.com on or before 10th July, 2026.

For Further Details Contact : 90804 05052

Belagavi
Date : 01/07/2026
Shri Amit P. Kore
Chairman, Board of Management,
KLE Society, Belagavi

VK ಜಾಬ್ಸ್ ಗೆಲುವಿನ ಮೆಟ್ಟಿಲು

THE INSTITUTE OF CHARTERED ACCOUNTANTS OF INDIA
(Set up by an Act of Parliament)
'ICAI Bhawan', Indraprastha Marg, New Delhi-110 002

The Institute of Chartered Accountants of India (ICAI) is a statutory body set up in 1949 by an Act to regulate and develop the Profession of Chartered Accountancy in India. ICAI invites applications for "BRANCH INCHARGE" positions under its Branch Human Resources Scheme, 2022 at various Branches of Regional Councils of ICAI.

For detailed advertisement please visit https://www.icai.org/post/career-in-icai
Submission of Applications through online portal from 3rd July'2026 to 19th July'2026

Positions are open in Karnataka: Ballari, Belagavi, Bengaluru, Hubballi, Kalaburagi, Udupi. Besides these, positions at other locations are given in the detailed advertisement.

KLE SOCIETY
Since 1916
BELAGAVI, KARNATAKA, INDIA
| 318 Institutions
| 1,48,000 Students
| 18,000 Faculties

Applications are invited for the post of LECTURERS

KLE SOCIETY'S DEGREE COLLEGE
NAGARABHAVI, BENGALURU
■ LECTURER IN COMMERCE
Qualification: Master's Degree in Commerce with 60% marks from a recognized university.
Preferred Candidates: Qualified in KSET/NET or Ph.D.

KLE SOCIETY'S S. NIJALINGAPPA COLLEGE
2nd BLOCK, RAJAJINAGAR, BENGALURU
■ LECTURER IN
• COMMERCE • CHEMISTRY • PHYSICS • SANSKRIT
Qualification: PG in the respective subjects a minimum of 60% marks from a recognized university.
Preferred Candidates: NET/KSET, Ph.D. and Experience candidates.

KLE INDEPENDENT PU COLLEGE
NAGARABHAVI, BENGALURU
■ LECTURER IN COMMERCE (Accountancy)
Qualification: Master's Degree in Commerce with 60% marks from a recognized university.
■ LIBRARIAN :
Qualification: M.Lib./ M.Li.Sc from a recognized university.

Candidates with teaching and industry experience will be preferred
• Salary: Commensurate with qualification and work experience.

Interested candidates should send their resume along with scanned copies of all relevant documents and testimonials to:
Email: principal@klenagarbhavi.edu.in
Last date for application: 10th July 2026.

for further details
CONTACT : 8088947005/ 9036340208

Belagavi
Date : 01/07/2026
Shri Amit P. Kore
Chairman, Board of Management,
KLE Society, Belagavi

VK ಜಾಬ್ಸ್
ಜಾಹೀರಾತಿಗಾಗಿ ಸಂಪರ್ಕಿಸಿ
(080) 40877 666
40877 543

SBI
ಅರ್ಜಿ ಸಲ್ಲಿಸಲು QR ಸ್ಕ್ಯಾನ್ ಮಾಡಿರಿ
ಭಾರತೀಯ ಸ್ಟೇಟ್ ಬ್ಯಾಂಕ್
ಕೇಂದ್ರೀಯ ನೇಮಕಾತಿ ಮತ್ತು ಪದೋನ್ನತಿ ವಿಭಾಗ
ಕಾರ್ಪೊರೇಟ್ ಕೇಂದ್ರ, ಮುಂಬೈ
ದೂರವಾಣಿ: 022-22820427

ಗುತ್ತಿಗೆ ಆಧಾರದ ಮೇಲೆ ಸ್ಪೆಷಲಿಸ್ಟ್ ವರ್ಗದ ಅಧಿಕಾರಿಗಳ ನೇಮಕಾತಿ

ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:
ಜಾಹೀರಾತು ನಂ. CRPD/SCO/2026-27/10 (ಗುತ್ತಿಗೆ ಆಧಾರದ ಹುದ್ದೆ)

ಹುದ್ದೆಯ ಹೆಸರು	ಖಾಲಿ ಹುದ್ದೆಗಳ ಸಂಖ್ಯೆ	ಗರಿಷ್ಠ ವಯಸ್ಸು (ಗರಿಷ್ಠ ಮಿತಿ 31.05.2026)
ರಕ್ಷಣಾ ಬ್ಯಾಂಕಿಂಗ್ ಸಲಹೆಗಾರ (ನೌಕಾಪಡೆ)	1	62 ವರ್ಷಗಳು
ಸಲಹೆಗಾರ (ಕೇಂದ್ರ ಸಶಸ್ತ್ರ ಪೊಲೀಸ್ ಪಡೆ)	1	
ವೃತ್ತ ರಕ್ಷಣಾ ಬ್ಯಾಂಕಿಂಗ್ ಸಲಹೆಗಾರ (ಸಿಡಿಬಿಎ)-(ಕೋಲ್ಕತ್ತಾ, ಲಕ್ನೋ, ಪುಣೆ)	3	60 ವರ್ಷಗಳು

ಅರ್ಹತೆಯ ಮಾನದಂಡಗಳು (ವಯಸ್ಸು, ಅನುಭವ, ಕೆಲಸದ ವಿವರಣೆ ಇತ್ಯಾದಿ), ಖಾಲಿ ಹುದ್ದೆಯ ವಿವರಗಳು, ಅವಶ್ಯಕ ಶುಲ್ಕಗಳು ಮತ್ತು ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಲು ಲಿಂಕ್ ನೊಂದಿಗೆ ಇತರ ವಿವರಗಳಿಗಾಗಿ ಹಾಗೂ ಅರ್ಜಿ ಶುಲ್ಕದ ಆನ್‌ಲೈನ್ ಪಾವತಿಗಾಗಿ ಬ್ಯಾಂಕ್‌ನ ವೆಬ್ ಸೈಟ್ https://sbi.bank.in/web/careers/current-openingsಗೆ ಲಾಗಿನ್ ಮಾಡಿರಿ. ಅರ್ಜಿ ಸಲ್ಲಿಸುವ ಮತ್ತು ಶುಲ್ಕಗಳನ್ನು ಪಾವತಿಸುವ ಮೊದಲು ಅರ್ಹತೆಯನ್ನು ಖಾತ್ರಿಮಾಡಿಕೊಳ್ಳಲು ಮತ್ತು ಇತರ ವಿವರಗಳಿಗಾಗಿ ವಿವರವಾದ ಜಾಹೀರಾತನ್ನು ಉಲ್ಲೇಖಿಸಿರಿ. ಯಾವುದೇ ವಿಚಾರಣೆಗಳಿದ್ದಲ್ಲಿ ದಯಮಾಡಿ ಈ ಲಿಂಕ್ ಮೂಲಕ ನಮಗೆ ಬರೆಯಿರಿ: "CONTACT US" —> "Post Your Query" ಇದು ಬ್ಯಾಂಕ್‌ನ ವೆಬ್‌ಸೈಟ್‌ನಲ್ಲಿ ಲಭ್ಯವಿದೆ (https://sbi.bank.in/web/careers/post-your-query).

• ಆನ್‌ಲೈನ್ ಅರ್ಜಿ ಸಲ್ಲಿಸುವ ಮತ್ತು ಶುಲ್ಕಪಾವತಿಸುವ ದಿನಾಂಕ: 18.06.2026 ರಿಂದ 08.07.2026

ಸ್ಥಳ: ಮುಂಬೈ
ದಿನಾಂಕ: 18.06.2026
ಪ್ರಧಾನ ವ್ಯವಸ್ಥಾಪಕರು (ಆರ್‌ಪಿ ಮತ್ತು ಪಿಎಮ್)

इंस्टीट्यूट ऑफ बैंकिंग पर्सोनेल सिलेक्शन®
(भारतीय रिज़र्व बैंक, केंद्रीय वित्तीय संस्थाओं व सार्वजनिक क्षेत्र के बैंकों द्वारा स्थापित एक स्वायत्त संस्था)
INSTITUTE OF BANKING PERSONNEL SELECTION
(An autonomous body set up by Reserve Bank of India, Central Financial Institutions and Public Sector Banks)
IBPS प्रज्ञाविभावनम्
असेसमेंट में, हम पर भरोसा रखता है भारत
In assessment, India trusts us
वेबसाइट देखने हेतु स्कैन करें
Scan to visit Website

CRP PO/MT-XVI ಮತ್ತು CRP SPL-XVI
ಭಾಗವಹಿಸುವ ಬ್ಯಾಂಕ್‌ಗಳಲ್ಲಿ ಪ್ರೊಬೇಷನರಿ ಆಫೀಸರ್ಸ್/ನಿರ್ವಹಣಾ ತರಬೇತಿದಾರರು ಮತ್ತು ತಜ್ಞ ಅಧಿಕಾರಿಗಳ (2027–28ರ ಖಾಲಿ ಹುದ್ದೆಗಳು) ನೇಮಕಾತಿಗಾಗಿ ಸಾಮಾನ್ಯ ನೇಮಕಾತಿ ಪ್ರಕ್ರಿಯೆ
ಅಧಿಕೃತ ವೆಬ್‌ಸೈಟ್: www.ibps.in
ಯಾವುದೇ ಪ್ರಶ್ನೆಗಳು/ದೂರುಗಳಿದ್ದಲ್ಲಿ https://cgrs.ibps.in ಗೆ ಲಾಗಿನ್ ಆಗಿರಿ.

ಭಾಗವಹಿಸುವ ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಪ್ರೊಬೇಷನರಿ ಆಫೀಸರ್ಸ್/ನಿರ್ವಹಣಾ ತರಬೇತಿದಾರರು ಮತ್ತು ತಜ್ಞ ಅಧಿಕಾರಿಗಳ ಕೇಡರ್ ಹುದ್ದೆಗಳ ನೇಮಕಾತಿ ಮತ್ತು ಆಯ್ಕೆಗಾಗಿ ಮುಂಬರುವ ಸಾಮಾನ್ಯ ನೇಮಕಾತಿ ಪ್ರಕ್ರಿಯೆಗೆ (CRP) ಆನ್‌ಲೈನ್ ಪರೀಕ್ಷೆಗಳನ್ನು ತಾತ್ಕಾಲಿಕವಾಗಿ ಕೆಳಕಂಡಂತೆ ನಿಗದಿಪಡಿಸಲಾಗಿದೆ.

ಪ್ರಮುಖ ದಿನಾಂಕಗಳು

ಚಟುವಟಿಕೆ	ಪಿಒ/ಎಂಟಿ	ತಜ್ಞ ಅಧಿಕಾರಿಗಳು
ಅಭ್ಯರ್ಥಿಗಳಿಂದ ಅರ್ಜಿಯ ತಿದ್ದುಪಡಿ/ಮಾರ್ಪಾಡು ಸೇರಿದಂತೆ ಆನ್‌ಲೈನ್ ನೋಂದಣಿ	01.07.2026 ರಿಂದ 21.07.2026 ರವರೆಗೆ	01.07.2026 ರಿಂದ 21.07.2026 ರವರೆಗೆ
ಅರ್ಜಿ ಶುಲ್ಕ/ಮಾಹಿತಿ ಶುಲ್ಕಗಳ ಪಾವತಿ (ಆನ್‌ಲೈನ್)	01.07.2026 ರಿಂದ 21.07.2026 ರವರೆಗೆ	01.07.2026 ರಿಂದ 21.07.2026 ರವರೆಗೆ
ಅರ್ಜಿ ನಮೂನೆಯ ಮಾರ್ಪಾಡು/ಸರಿಪಡಿಸಲು ಅಭ್ಯರ್ಥಿಗಳಿಗೆ ಎಡಿಟ್ ವಿಂಡೋ (ಎಡಿಟ್‌ಗೆ ಆನ್‌ಲೈನ್ ಪೇಮೆಂಟ್ ಸೇರಿದಂತೆ)	ನೋಂದಣಿ ಮುಕ್ತಾಯದ ನಂತರ (ಅಧಿಕೃತ IBPS ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು)	ನೋಂದಣಿ ಮುಕ್ತಾಯದ ನಂತರ (ಅಧಿಕೃತ IBPS ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು)
ಪರೀಕ್ಷಾ ಪೂರ್ವ ತರಬೇತಿ ನಡೆಸುವಿಕೆ	ಆಗಸ್ಟ್ 2026	--
ಆನ್‌ಲೈನ್ ಪರೀಕ್ಷೆ-ಪ್ರಾಥಮಿಕ	**ಆಗಸ್ಟ್ 2026**	**ಆಗಸ್ಟ್ 2026**
ಆನ್‌ಲೈನ್ ಪರೀಕ್ಷಾ ಫಲಿತಾಂಶ–ಪ್ರಾಥಮಿಕ	ಸೆಪ್ಟೆಂಬರ್ 2026	ಸೆಪ್ಟೆಂಬರ್/ಅಕ್ಟೋಬರ್ 2026
ಆನ್‌ಲೈನ್ ಪರೀಕ್ಷೆ-ಮುಖ್ಯ	**ಅಕ್ಟೋಬರ್ 2026**	**ನವೆಂಬರ್ 2026**
ಫಲಿತಾಂಶ ಪ್ರಕಟಣೆ–ಮುಖ್ಯ ಪರೀಕ್ಷೆ	ನವೆಂಬರ್ 2026	ನವೆಂಬರ್ 2026
ವ್ಯಕ್ತಿತ್ವ ಪರೀಕ್ಷೆ	**ನವೆಂಬರ್ 2026**	--
ಸಂದರ್ಶನ ನಡೆಸುವಿಕೆ	ನವೆಂಬರ್/ಡಿಸೆಂಬರ್ 2026	ನವೆಂಬರ್/ಡಿಸೆಂಬರ್ 2026
ತಾತ್ಕಾಲಿಕ ಹಂಚಿಕೆ	ಜನವರಿ 2027	ಜನವರಿ 2027

ವಿವರಗಳು ಮತ್ತು ನವೀಕರಣಗಳಿಗಾಗಿ IBPS ಅಧಿಕೃತ ವೆಬ್‌ಸೈಟ್ www.ibps.in ಗೆ ನಿಯಮಿತವಾಗಿ ಭೇಟಿ ನೀಡುವಂತೆ ಅಭ್ಯರ್ಥಿಗಳಿಗೆ ಸೂಚಿಸಲಾಗಿದೆ.
ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ವಿಸ್ತೃತ ಅಧಿಸೂಚನೆಯನ್ನು ಎಚ್ಚರಿಕೆಯಿಂದ ಓದುವಂತೆ ಸೂಚಿಸಲಾಗಿದೆ ಮತ್ತು ಆನ್‌ಲೈನ್‌ನಲ್ಲಿ ನೋಂದಣಿಗೂ ಮುನ್ನ ನಿಗದಿತ ದಿನಾಂಕಗಳಲ್ಲಿ ಕನಿಷ್ಠ ಅರ್ಹತಾ ಮಾನದಂಡಗಳನ್ನು ಪೂರೈಸಬೇಕು. ಅಭ್ಯರ್ಥಿಗಳು ವಿವರವಾದ ಅಧಿಸೂಚನೆಯಲ್ಲಿ ಉಲ್ಲೇಖಿಸಲಾದ ಸೂಚನೆಗಳನ್ನು ಅನುಸರಿಸಬೇಕು.

ಮುಂಬೈ
ದಿನಾಂಕ: 01.07.2026
ನಿರ್ದೇಶಕರು

pfrda
ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ
ಇ–500, ಟವರ್ ಇ, 5ನೇ ಮಹಡಿ, ವರ್ಲ್ಡ್ ಟ್ರೇಡ್ ಸೆಂಟರ್, ನೌರೋಜಿ ನಗರ, ನವದೆಹಲಿ–110029

ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದಲ್ಲಿ (PFRDA) ಒಪ್ಪಂದದ ಆಧಾರದ ಮೇಲೆ ಕಾನೂನು ಸಲಹೆಗಾರರನ್ನು ತೊಡಗಿಸಿಕೊಳ್ಳುವಿಕೆ

ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರವು (PFRDA) ಭಾರತದ ಸಂಸತ್ತಿನಿಂದ PFRDA ಕಾಯ್ದೆಯಡಿ (2013ರ 23) ಸ್ಥಾಪಿಸಲ್ಪಟ್ಟ ಶಾಸನಬದ್ಧ ನಿಯಂತ್ರಣ ಸಂಸ್ಥೆಯಾಗಿದ್ದು, ಭಾರತದಲ್ಲಿ ಪಿಂಚಣಿ ವಲಯವನ್ನು ಉತ್ತೇಜಿಸಲು ಮತ್ತು ಅಭಿವೃದ್ಧಿಪಡಿಸಲು ಹಾಗೂ ನಿಯಂತ್ರಿಸಲು ಭಾರತ ಸರ್ಕಾರದ ಹಣಕಾಸು ಸಚಿವಾಲಯದಡಿ ಸ್ಥಾಪಿತವಾಗಿದೆ. PFRDA, ಕಾನೂನು ಸಲಹೆಗಾರ ಹುದ್ದೆಗೆ ಸಂಪೂರ್ಣವಾಗಿ ಒಪ್ಪಂದದ ಆಧಾರದ ಮೇಲೆ ಎರಡು (02) ವರ್ಷಗಳ ಆರಂಭಿಕ ಅವಧಿಗಾಗಿ ಮಾಸಿಕ ರೂ.3 ಲಕ್ಷ ಸಂಭಾವನೆ/ಕ್ರೋಢೀಕೃತ ಪಾವತಿಯೊಂದಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಹುದ್ದೆಗೆ ಅಗತ್ಯ ವಿದ್ಯಾರ್ಹತೆ ಮತ್ತು ಅನುಭವ ಕುರಿತಾದ ವಿವರಗಳನ್ನು PFRDA ವೆಬ್‌ಸೈಟ್: www.pfrda.org.in ನಲ್ಲಿ ಕಾಣಬಹುದು.
ಎಲ್ಲಾ ರೀತಿಯಲ್ಲೂ ಪೂರ್ಣಗೊಂಡ, ನಿರ್ದಿಷ್ಟ ನಮೂನೆಯ ಅರ್ಜಿಗಳನ್ನು 23.07.2026ರಂದು ಅಥವಾ ಅದಕ್ಕೂ ಮೊದಲು ಸಲ್ಲಿಸಬೇಕು. ಪ್ರಾಧಿಕಾರವು ಸೂಕ್ತವೆಂದು ಪರಿಗಣಿಸಬಹುದಾದ ಯಾವುದೇ ಹಂತದಲ್ಲಿ ಪ್ರಕ್ರಿಯೆಯನ್ನು ಮಾರ್ಪಡಿಸುವ/ರದ್ದುಗೊಳಿಸುವ/ಮುಕ್ತಾಯಗೊಳಿಸುವ ಹಕ್ಕನ್ನು PFRDA ಕಾಯ್ದಿರಿಸಿಕೊಂಡಿದೆ.
ಪ್ರಧಾನ ವ್ಯವಸ್ಥಾಪಕರು
(ಮಾನವ ಸಂಪನ್ಮೂಲ)

TOI
ಅತೀ ಹೆಚ್ಚು ಓದುಗರನ್ನು ಹೊಂದಿರುವ ಭಾರತದ ನ್ಯೂಸ್ ಆ್ಯಪ್
TOI ಮೇಲೆ 100M+ ಓದುಗರ ವಿಶ್ವಾಸ
#1 ರೇಟಿಂಗ್ ಪಡೆದಿರುವ ಭಾರತೀಯ ನ್ಯೂಸ್ ಬ್ರ್ಯಾಂಡ್
24x7 ಬ್ರೇಕಿಂಗ್ ನ್ಯೂಸ್
ಡೌನ್‌ಲೋಡ್ ಮಾಡಿ TOI ಆ್ಯಪ್

iMPRESARIO
HANDMADE RESTAURANTS
ಇ–ಟೆಂಡರ್ ನೋಟಿಸ್ (2026–2027)
ದರ ಒಪ್ಪಂದಗಳಿಗಾಗಿ (ಆಗಸ್ಟ್ 2026 ರಿಂದ ಮಾರ್ಚ್ 2027ರವರೆಗೆ)
ನಮ್ಮ ಪ್ಯಾನ್ ಇಂಡಿಯಾ ರೆಸ್ಟೋರೆಂಟ್‌ಗಳಿಗಾಗಿ
ಸ್ಥಾಪಿತ & ವಿಶ್ವಾಸಾರ್ಹ ಪೂರೈಕೆದಾರರಿಂದ ಇ–ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ನಮ್ಮ ಬ್ರ್ಯಾಂಡ್‌ಗಳು
ಸೋಶಿಯಲ್, ಮೆಜ್ಜಲಿಟಾ, ಸ್ಮೋಕ್ ಹೌಸ್ ಡೆಲಿ, ಸ್ಲಿಂಕ್ & ಬಾರ್ಡೋಟ್, ಬ್ಯಾಂಗ್, ಬಾಂದ್ರಾ ಬಾರ್ನ್, ಪೃಥ್ವಿ ಕೆಫೆ.

ಟೆಂಡರ್ ವಿಭಾಗಗಳು & ಉಪ ವಿಭಾಗಗಳು

ಆಹಾರ
- ಬೇಕರಿ ಮತ್ತು ಮಿಠಾಯಿ
- ಬೇಕರಿ ಚಾಕೊಲೇಟ್ಸ್ • ಚೀಸ್ ಪ್ರಾಡಕ್ಟ್
- ಚಿಕನ್ ಪ್ರಾಡಕ್ಟ್ಸ್ • ಕೋಲ್ಡ್ ಕಟ್ಸ್
- ಅಡುಗೆ ಎಣ್ಣೆ • ಒಣ ಹಣ್ಣುಗಳು • ಮೊಟ್ಟೆಗಳು
- ಫರ್ಸಾನ್ & ಸ್ವೀಟ್ಸ್
- ಹಿಟ್ಟುಗಳು (ಬೇಕರಿ & ಗ್ಲುಟನ್ ಫ್ರೀ)
- ತಾಜಾ ಮತ್ತು ಘನೀಕೃತ ಸಮುದ್ರಾಹಾರ
- ತಾಜಾ ಮತ್ತು ಆಮದಿನ ತರಕಾರಿಗಳು
- ಫ್ರೋಜನ್ ಫ್ರೆಂಚ್ ಫ್ರೈಸ್ ಮತ್ತು ಸಂಸ್ಕರಿತ ಆಹಾರ
- ಹಣ್ಣುಗಳು • ಗ್ರೇವೀಸ್ & ಸಾಸಸ್ (ಕಸ್ಟಮೈಸ್ಡ್ ಸೇರಿದಂತೆ)
- ಐಸ್ ಕ್ರೀಮ್ • ಭಾರತೀಯ ದಿನಸಿ (ಸ್ಥಳೀಯ ಮತ್ತು ಆಮದು)
- ಹಾಲು ಮತ್ತು ಡೈರಿ ಉತ್ಪನ್ನಗಳು • ಮಟನ್ ಮತ್ತು ಟೆಂಡರ್ಲೋಯಿನ್
- ನಾಚೋಸ್ • ನೂಡಲ್ಸ್ • ಪಾಸ್ತಾ • ಅಕ್ಕಿ (ಎಲ್ಲಾ ವಿಧಗಳು)
- ಟಿನ್ ಮತ್ತು ಕ್ಯಾನ್ಡ್ (ತಾಜಾ ಶೀತಲ ಮತ್ತು ಘನೀಕೃತ)

ಪಾನೀಯಗಳು
- ಕ್ಯಾನ್ಡ್ & ಟೆಟ್ರಾ ಜ್ಯೂಸಸ್ • ಐಸ್ ಉತ್ಪನ್ನ
- ಸಿರಪ್ಸ್, ಕ್ರಶಸ್ & ಪ್ಯೂರೀ ಪ್ರಾಡಕ್ಟ್ಸ್

ಆಹಾರೇತರ ವಸ್ತುಗಳು
- ಇದ್ದಿಲು ಮತ್ತು ಇಂಧನ
- ಉಪಭೋಗ್ಯ & ಬಿಸಾಡಬಹುದಾದ ವಸ್ತುಗಳು
- ಗೃಹೋಪಯೋಗಿ ವಸ್ತುಗಳು • ಪ್ಯಾಕೇಜಿಂಗ್ ಮೆಟೀರಿಯಲ್ಸ್
- ಮುದ್ರಣ ಮತ್ತು ಲೇಖನ ಸಾಮಗ್ರಿಗಳು (ಸ್ಟ್ಯಾಂಡರ್ಡ್ & ಕಸ್ಟಮೈಸ್ಡ್)

ನೋಂದಣಿ ಮತ್ತು ಪ್ರಮುಖ ದಿನಾಂಕಗಳು
ಅರ್ಜಿ ಸಲ್ಲಿಕೆ ಹೇಗೆ: ನೋಂದಣಿ, ಶುಲ್ಕ ಪಾವತಿ ಮತ್ತು ಆನ್‌ಲೈನ್ https://tenders.impresario.tech ನಲ್ಲಿ ಸಲ್ಲಿಸಿ
- ಟೆಂಡರ್ ಶುಲ್ಕ: ಉಪ ವಿಭಾಗ ಮತ್ತು ನಗರಕ್ಕೆ ರೂ.2,000/– (ಮರುಪಾವತಿಸಲಾಗುವುದಿಲ್ಲ)
- ಆನ್‌ಲೈನ್ ಫಾರ್ಮ್‌ಗಳು ಲಭ್ಯ: 01ನೇ ಜುಲೈ 2026ರಿಂದ 05ನೇ ಜುಲೈ 2026ರವರೆಗೆ
- ಕೋಟ್ಸ್ ಸಲ್ಲಿಕೆಗೆ ಕೊನೆಯ ದಿನಾಂಕ: 10ನೇ ಜುಲೈ 2026

ನಿಯಮಗಳು ಮತ್ತು ಅನುಸರಣೆ
- ಕಡ್ಡಾಯ: GST ನೋಂದಣಿ, PAN ಕಾರ್ಡ್ ಮತ್ತು ಮಾನ್ಯತೆಯ FSSAI ಪರವಾನಗಿ (ಆಹಾರ ಮಾರಾಟಗಾರರಿಗೆ)
- ಧ್ಯೇಯ: ಮಾರಾಟಗಾರರು ನಿರ್ದಿಷ್ಟ ನಗರಗಳು/ಪ್ರದೇಶಗಳಿಗೆ ಬಿಡ್ ಮಾಡಬಹುದು.
- ವಿವರಣೆ ನೀಡದೆ, ಯಾವುದೇ ಟೆಂಡರ್ ಅನ್ನು ಸ್ವೀಕರಿಸುವ/ತಿರಸ್ಕರಿಸುವ ಹಕ್ಕನ್ನು ಮ್ಯಾನೇಜ್ಮೆಂಟ್ ಕಾಯ್ದಿರಿಸಿಕೊಂಡಿದೆ
- ಪಟ್ಟಿಯಲ್ಲಿರುವ ಮಾರಾಟಗಾರರನ್ನು (L1 ರಿಂದ L5) ಮಾತ್ರ ಸಭೆಗಳಿಗೆ ಆಹ್ವಾನಿಸಲಾಗುತ್ತದೆ

ವಿಚಾರಣೆಗಳಿಗೆ ಸಂಪರ್ಕಿಸಿ
- ವಿನಯ್ ನಾಗಪ್: +91 9029206603
- ಸಾಗರ್ ಮಂಜ್ರೇಕರ್: +91 8097887497

ಕೋರ್ಟ್‌ನಲ್ಲಿ ಟ್ರಂಪ್‌ಗೆ ಮುಖಭಂಗ

ಜನ್ಮಸಿದ್ಧ ಪೌರತ್ವ ನಿರ್ಬಂಧಿಸುವ ನೀತಿ ರದ್ದು | ಅಧ್ಯಕ್ಷರ ಆಡಳಿತಾತ್ಮಕ ನಿರ್ಧಾರ ವಜಾ

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಮತ್ತೊಂದು ಕಾನೂನು ಹಿನ್ನಡೆ ಉಂಟಾಗಿದೆ. ಜನ್ಮಸಿದ್ಧ ಪೌರತ್ವ ನಿರ್ಬಂಧಿಸುವ ಮತ್ತೊಂದು ಆಡಳಿತಾತ್ಮಕ ನೀತಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಸ್ವಯಂ ಚಾಲಿನ ಜನ್ಮಸಿದ್ಧ ಪೌರತ್ವ ಹಕ್ಕು ಪಡೆಯುವುದನ್ನು ನಿರ್ಬಂಧಿಸುವ ನೀತಿಯನ್ನು ಪ್ರಶ್ನಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್‌ನ 9 ನ್ಯಾಯಮೂರ್ತಿಗಳ ಪೀಠ, ಅಧ್ಯಕ್ಷರ ಆಡಳಿತಾತ್ಮಕ ನಿರ್ಧಾರವನ್ನು 6-3ರ ಬಹುಮತದ ತೀರ್ಪಿನಲ್ಲಿ ವಜಾಗೊಳಿಸಿದ್ದು, ಅಮೆರಿಕದಲ್ಲಿ ನೆಲೆಸಿದ ಜನರಿಗೆ ಜನಿಸಿದ ಎಲ್ಲರಿಗೂ ಪೌರತ್ವದ ಸಾಂವಿಧಾನಿಕ ಖಾತರಿ ನೀಡಿದೆ.

ಅಮೆರಿಕ ಅಧ್ಯಕ್ಷರಾಗಿ ಎರಡನೇ ಅವಧಿಗೆ ಅಧಿಕಾರ ವಹಿಸಿಕೊಂಡ ದಿನ ಮಹತ್ವದ ಆದೇಶ ಹೊರಡಿಸಿದ್ದ ಟ್ರಂಪ್, ತಾತ್ಕಾಲಿಕ ವೀಸಾ ಮೇಲೆ ಅಮೆರಿಕದಲ್ಲಿ ನೆಲೆಸಿದ ಪೋಷಕರಿಗೆ ಜನಿಸಿದ ಮಕ್ಕಳಿಗೆ ಸ್ವಯಂಚಾಲಿತವಾಗಿ ಸಿಗುತ್ತಿದ್ದ ಜನ್ಮಸಿದ್ಧ ಪೌರತ್ವ ಹಕ್ಕು ರದ್ದುಗೊಳಿಸಿದ್ದರು. ''ಜನ್ಮಸಿದ್ಧ ಪೌರತ್ವ ಸಾಂವಿಧಾನಿಕವಲ್ಲ, ಅಕ್ರಮ ವಲಸೆ ನಿಗ್ರಹಿಸಲು ಜನ್ಮಸಿದ್ಧ ಪೌರತ್ವ ಹಕ್ಕು ರದ್ದುಪಡಿಸಲಾಗುವುದು,'' ಎಂದು ಟ್ರಂಪ್ ಘೋಷಣೆ ಮಾಡಿದ್ದರು.

ಅಧ್ಯಕ್ಷರ ಆದೇಶವನ್ನು ಸಂವಿಧಾನದ ಉಲ್ಲಂಘನೆ ಎಂದು ಹೇಳಿದ್ದ ಫೆಡರಲ್ ಕೋರ್ಟ್‌ಗಳು ಕಾರ್ಯಾದೇಶವನ್ನು ವಜಾಗೊಳಿಸಿದ್ದವು. ದೀರ್ಘಕಾಲದಿಂದ ಅಮೆರಿಕದಲ್ಲಿ ನೆಲೆಸಿದ ಜನರಿಗೆ ಜನಿಸುವ ಮಕ್ಕಳಿಗೆ ವಲಸೆ ನೀತಿ ಬದಿಗಿರಿಸಿ ಪೌರತ್ವ ನೀಡಬೇಕು ಎಂದು ಆದೇಶ ನೀಡಿದ್ದವು.

ಫೆಡರಲ್ ಕೋರ್ಟ್‌ಗಳ ಆದೇಶ ಪ್ರಶ್ನಿಸಿ ಟ್ರಂಪ್ ಆಡಳಿತ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ತಾತ್ಕಾಲಿಕ ವೀಸಾದಡಿ ದೇಶದಲ್ಲಿ ನೆಲೆಸಿದ ಪೋಷಕರಿಗೆ ಜನಿಸುವ ಮಕ್ಕಳಿಗೆ ಸಂವಿಧಾನ ಜನ್ಮಸಿದ್ಧ ಪೌರತ್ವ ಖಾತರಿಪಡಿಸಿಲ್ಲ ಎಂದು ವಾದಿಸಿತು. ವಿಚಾರಣೆ ವೇಳೆ ಸ್ವಯಂ ಡೊನಾಲ್ಡ್ ಟ್ರಂಪ್ ಅವರೇ ಸರಕಾರದ ಪರವಾಗಿ ವಾದ ಮಂಡಿಸಿದ್ದರು. ಸುದೀರ್ಘ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, 6-3 ಬಹುಮತದ ತೀರ್ಪಿನಲ್ಲಿ ಟ್ರಂಪ್ ಆಡಳಿತದ ಕಾರ್ಯಾದೇಶವನ್ನು ವಜಾಗೊಳಿಸಿತು.

ಅಮೆರಿಕ ಸಂವಿಧಾನ ಹೇಳುವುದೇನು?

ಅಮೆರಿಕದಲ್ಲಿ ನೆಲೆಸಿದ ಅಥವಾ ಜನಿಸಿದ, ಸ್ವಾಭಾವಿಕವಾಗಿ ಸ್ವೀಕರಿಸಲ್ಪಟ್ಟ ಹಾಗೂ ದೇಶದ ಕಾನೂನು ವ್ಯಾಪ್ತಿಗೆ ಒಳಪಟ್ಟ ಎಲ್ಲರೂ ದೇಶದ ಪ್ರಜೆಗಳು ಎಂದು ಸಂವಿಧಾನ ಹೇಳುತ್ತದೆ. ಅಂತರ್ಯುದ್ಧದ ಬಳಿಕ ಸಂವಿಧಾನದ 14ನೇ ತಿದ್ದುಪಡಿ ಮೂಲಕ ಗುಲಾಮಗಿರಿಗೆ ಒಳಪಟ್ಟಿದ್ದ ಜನರು ಮತ್ತವರ ಮಕ್ಕಳಿಗೂ ಪೌರತ್ವದ ಖಾತರಿ ನೀಡಲಾಯಿತು.

ಯಾವ್ಯಾವ ಪ್ರಕರಣದಲ್ಲಿ ಹಿನ್ನಡೆ?

ಪ್ರತಿಸುಂಕ ನೀತಿ,
ಫೆಡರಲ್ ರಿಸರ್ವ್ ಅಧ್ಯಕ್ಷರ ವಜಾ, ಎಚ್1ಬಿ ವೀಸಾ ಮೇಲಿನ ಶುಲ್ಕ ಹೆಚ್ಚಳದ ಆದೇಶ

ಕಾಂಗ್ರೆಸ್ ನಾಯಕರಿಗೆ ಗೃಹಬಂಧನ

ಅಯೋಧ್ಯೆ: ರಾಮ ಮಂದಿರ ದೇಣಿಗೆ ಲೂಟಿ ವಿಚಾರ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ರಾಜಕೀಯ ಜಟಾಪಟಿಗೆ ಕಾರಣವಾಗಿದೆ. ದೇವರ ಹುಂಡಿ ಹಣ ಕಳವು ಖಂಡಿಸಿ ಅಯೋಧ್ಯೆಯಲ್ಲಿ ಪ್ರತಿಭಟನೆಗೆ ಮುಂದಾಗಿದ್ದ ಉತ್ತರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಅಜಯ್ ರಾಯ್ ಸಹಿತ ಹಲವು ನಾಯಕರನ್ನು ಗೃಹ ಬಂಧನದಲ್ಲಿಡಲಾಗಿದೆ.

ರಾಮ ಮಂದಿರ ಟ್ರಸ್ಟ್ ಬಳಿ ಪ್ರತಿಭಟನೆ ನಡೆಸಲು ಮುಂದಾಗಿದ್ದ ಕಾಂಗ್ರೆಸ್ ಸದಸ್ಯರನ್ನು ಬಂಧಿಸಿದ ಪೊಲೀಸರು, ಗೃಹಬಂಧನದಲ್ಲಿರಿಸಿದ್ದಾರೆ. ಮಂಗಳವಾರ ಮಧ್ಯಾಹ್ನ 1.30ರ ಸಮಯದಲ್ಲಿ ರಾಮ ಮಂದಿರಕ್ಕೆ ಪ್ರತಿಭಟನೆ ಮೆರವಣಿಗೆ ಹೊರಟಿದ್ದ ಅಜಯ್ ರಾಯ್ ಅವರನ್ನು ಅವರನ್ನು ಬಂಧಿಸಿದ ಪೊಲೀಸರು, ಆಚಾರ್ಯ ನರೇಂದ್ರ ದೇವ ವಿಶ್ವವಿದ್ಯಾಲಯದ ಅತಿಥಿ ನಿವಾಸದಲ್ಲಿ ಗೃಹಬಂಧನದಲ್ಲಿಟ್ಟಿದ್ದಾರೆ.

ರಾಯ್ ಬಂಧನದ ವೇಳೆ ಪೊಲೀಸರು ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ನೂಕಾಟ ತಳ್ಳಾಟ ನಡೆಯಿತು. ಮತ್ತಷ್ಟು ಪೊಲೀಸ್ ಬಲದೊಂದಿಗೆ ಕಾಂಗ್ರೆಸ್ ಕಾರ್ಯಕರ್ತರನ್ನು ಬಂಧಿಸಲಾಯಿತು. ರಾಜ್ಯಸಭೆ ಸದಸ್ಯ ಅಲಿಯಾ ಜುಬೈರಿ, ಯುವ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸುನಿಲ್ ಕೃಷ್ಣ ಗೌತಮ್ ರಾನು ಅವರನ್ನು ಬಂಧಿಸಲಾಗಿದೆ. ಮತ್ತೊಂದೆಡೆ ಅಯೋಧ್ಯೆಗೆ ಹೊರಟಿದ್ದ ಬಾರಬಂಕಿ ಕಾಂಗ್ರೆಸ್ ಸಂಸದ ತನುಜ್ ಪುನಿಯಾ ಅವರನ್ನು ಗೃಹಬಂಧದಲ್ಲಿರಿಸಲಾಗಿದೆ.

ಜುಲೈ 6ಕ್ಕೆ ಟ್ರಸ್ಟ್ ಮಹತ್ವದ ಸಭೆ: ರಾಮ ಮಂದಿರ ದೇಣಿಗೆ ಲೂಟಿ ಆರೋಪದ ನಡುವೆ ಜುಲೈ 6ರಂದು ಮಹತ್ವದ ಸಭೆ ಕರೆದಿರುವ ಶ್ರೀರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್, ಮಾಜಿ ಪ್ರಧಾನ ಕಾರ್ಯದರ್ಶಿ ಚಂಪತ್ ರಾಯ್ ಹಾಗೂ ಟ್ರಸ್ಟ್ ಮಾಜಿ ಸದಸ್ಯ ಅನಿಲ್ ಮಿಶ್ರಾ ಭವಿಷ್ಯದ ಕುರಿತು ನಿರ್ಧಾರ ಕೈಗೊಳ್ಳುವ ಸಾಧ್ಯತೆಗಳಿವೆ.

ದೇಣಿಗೆ ಲೂಟಿ ಪ್ರಕರಣ ದೇಶಾದ್ಯಂತ ವ್ಯಾಪಕ ಸುದ್ದಿಯಾಗುತ್ತಿದ್ದಂತೆ ಜುಲೈ 11ಕ್ಕೆ ಸಭೆ ನಿಗದಿಪಡಿಸಿದ್ದ ಟ್ರಸ್ಟ್, ಅವ್ಯವಹಾರದಲ್ಲಿ ಪ್ರಮುಖರೇ ಭಾಗಿಯಾಗಿರುವ ಸಂಗತಿ ಹೊರ ಬರುತ್ತಿದ್ದಂತೆ, ದೇವಾಲಯದ ಆಡಳಿತ ನಿರ್ವಹಣೆ, ಹಣಕಾಸು ವ್ಯವಹಾರದಲ್ಲಿ ಪಾರದರ್ಶಕತೆ ರೂಪಿಸುವ ಸಂಬಂಧ ಸಭೆಯನ್ನು ನಿಗದಿತ ದಿನಕ್ಕೂ ಮೊದಲೇ ಜುಲೈ 6ಕ್ಕೆ ಕರೆಯಲಾಗಿದೆ.

ತೈಲ ಬೆಲೆ ಇಳಿಸುವಂತೆ ಟ್ರಂಪ್ ಖಡಕ್ ಆದೇಶ

ವಾಷಿಂಗ್ಟನ್: ತೈಲ ಬೆಲೆಗಳನ್ನು ಕೂಡಲೇ ಕಡಿತಗೊಳಿಸುವಂತೆ ರಾಜ್ಯಗಳು ಹಾಗೂ ತೈಲ ಮಾರಾಟ ಕಂಪನಿಗಳಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಖಡಕ್ ಸೂಚನೆ ನೀಡಿದ್ದಾರೆ. ಸಾಮಾಜಿಕ ಜಾಲತಾಣ ಟ್ರುಥ್‌ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, ''ಗ್ಯಾಸೋಲಿನ್ ಮಾರಾಟಗಾರರು ತಕ್ಷಣವೇ ತೈಲ ಬೆಲೆ ಇಳಿಸಬೇಕು. ತೈಲ ಬೆಲೆ ಇಳಿದಿದ್ದರೂ ಬೆಲೆ ಇಳಿಕೆ ಮಾಡದ ಕ್ರಮ ಕಾನೂನು ಬಾಹಿರವಾಗಿದೆ. ಕನಿಷ್ಠ 2.50 ಡಾಲರ್ ಕಡಿತಗೊಳಿಸಲು ಕ್ರಮ ವಹಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಕಠಿಣ ಪರಿಸ್ಥಿತಿ ಎದುರಿಸಬೇಕಾಗುತ್ತದೆ,'' ಎಂದು ಎಚ್ಚರಿಕೆ ನೀಡಿದ್ದಾರೆ. ''ಚಿಲ್ಲರೆ ಮಾರಾಟಗಾರರು ಬೆಲೆ ಇಳಿಕೆ ಮಾಡದಿದ್ದರೆ ರಾಜ್ಯಗಳು ದೇಶದ ಜನರ ಮೇಲಿನ ಭಾರ ಕಡಿಮೆ ಮಾಡಲು ತೈಲದ ಮೇಲಿನ ಸುಂಕ ಕಡಿತಗೊಳಿಸಬೇಕು,'' ಎಂದು ಟ್ರಂಪ್ ಆಗ್ರಹಿಸಿದ್ದಾರೆ.

ಜುಲೈ 1

ವಿಕ ಈ ದಿನ ವಿಶೇಷ

ಕನ್ನಡ ಪತ್ರಿಕಾ ದಿನ

ಕರ್ನಾಟಕದಲ್ಲಿ ಕನ್ನಡದಲ್ಲಿ ಮೊದಲ ಪತ್ರಿಕೆ 1843ರ ಜುಲೈ 1ರಂದು ಪ್ರಕಟವಾಯಿತು. 'ಮಂಗಳೂರ ಸಮಾಚಾರ' ಎಂಬ ಕನ್ನಡ ಪಾಕ್ಷಿಕ ವನ್ನು ಜರ್ಮನಿ ಮೂಲದ ಮಂಗಳೂರು ನಿವಾಸಿಯಾಗಿದ್ದ ಹರ್ಮನ್ ಫ್ರೆಡ್ರಿಕ್ ಮೊಗ್ಲಿಂಗ್ ಹೊರತಂದರು. ಇದು ನಾಲ್ಕು ಪುಟಗಳನ್ನು ಹೊಂದಿತ್ತು.

ಜನುಮದಿನ

ಪಂ. ವೆಂಕಟೇಶ್ ಕುಮಾರ್



- ಬಳ್ಳಾರಿ ಜಿಲ್ಲೆಯ ಲಕ್ಷ್ಮೀಪುರದಲ್ಲಿ 1953ರ ಜುಲೈ 1ರಂದು ಜನಿಸಿದರು. ಖ್ಯಾತ ಹಿಂದುಸ್ತಾನಿ ಗಾಯಕರು. ದಾಸರ ಪದಗಳ ಗಾಯನದಲ್ಲೂ ಜನಮನ ಗೆದ್ದಿರುವ ಗಾಯಕ.

ಎಥೆನಾಲ್ ಮಿಶ್ರಣ ಟ್ರಯಲ್

ಸುಪ್ರೀಂ ಕೋರ್ಟ್‌ಗೆ ಕೇಂದ್ರ ಸರಕಾರದ ಸ್ಪಷ್ಟನೆ

ಹೊಸದಿಲ್ಲಿ: ''ದೇಶದಲ್ಲಿ ನಡೆಯುತ್ತಿರುವ ಪೆಟ್ರೋಲ್ ಜತೆ ಎಥನಾಲ್ ಮಿಶ್ರಣ ಯೋಜನೆ ಪ್ರಯೋಗಾತ್ಮಕವಾಗಿದೆ. ಮುಂದಿನ ವರ್ಷ ಇ20 ಇಂಧನದ ಫಲಿತಾಂಶ ಲಭಿಸಲಿದೆ. ಬಳಿಕವಷ್ಟೇ ಮುಂದಿನ ಪರಿಣಾಮಗಳು ತಿಳಿಯಲಿವೆ,'' ಎಂದು ಕೇಂದ್ರ ಸರಕಾರ ಮಂಗಳವಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಎಥೆನಾಲ್ ಖರೀದಿ ಪ್ರಮಾಣ ಹೆಚ್ಚಿಸುವಂತೆ ಕರ್ನಾಟಕ ಹೈಕೋರ್ಟ್ ನೀಡಿದ್ದ ಆದೇಶ ಪ್ರಶ್ನಿಸಿದ್ದ ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಅರ್ಜಿ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ನ್ಯಾ. ಎಂ.ಎಂ.ಸುಂದರೇಶ್ ಹಾಗೂ ನ್ಯಾ.ಶೀಲ್ ನಾಗು ಅವರಿದ್ದ ಪೀಠ, ಎಥೆನಾಲ್ ಹಂಚಿಕೆ ಹಾಗೂ ವಿತರಣೆಯಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಆದೇಶ ನೀಡಿತು. ಬಿಪಿಸಿಎಲ್ ಪರವಾಗಿ ಹಾಜರಾದ ಅಟಾರ್ನಿ ಜನರಲ್ ಆರ್.ವೆಂಕಟರಮಣಿ, ''ಕರ್ನಾಟಕ ಹೈಕೋರ್ಟ್ ಆದೇಶ ಪೆಟ್ರೋಲ್‌ಗೆ ಶೇ.20ರಷ್ಟು ಎಥೆನಾಲ್ ಮಿಶ್ರಣ ಮಾಡುವ ರಾಷ್ಟ್ರೀಯ ನೀತಿ ಕಾರ್ಯಕ್ರಮವನ್ನು ಅಸ್ಥಿರಗೊಳಿಸಬಹುದು,'' ಎಂದು ವಾದಿಸಿದರು.ಆ''ಪೆಟ್ರೋಲ್‌ಗೆ ಎಥೆನಾಲ್ ಮಿಶ್ರಣ ಸರಕಾರದ ಒಂದು ಪ್ರಯೋಗಾರ್ಥ ಕಾರ್ಯಕ್ರಮವಾಗಿದೆ. ಮುಂದಿನ ವರ್ಷದ ವೇಳೆಗೆ ಇ20 ಇಂಧನದ ಫಲಿತಾಂಶ ಹೊರಬರಲಿದ್ದು, ಎಥೆನಾಲ್ ಮಿಶ್ರಿತ ಇಂಧನ ಪರಿಣಾಮಗಳು ಸ್ಪಷ್ಟವಾಗಲಿವೆ. ಸದ್ಯದ ಸನ್ನಿವೇಶದಲ್ಲಿ ಎಥೆನಾಲ್ ಮಿಶ್ರಣದಿಂದ ಎಂಜಿನ್‌ಗೆ ಹಾನಿಯಾಗುತ್ತದೆ ಎಂಬ ವಾದದಲ್ಲಿ ಹುರುಳಿಲ್ಲ'' ಎಂದು ವೆಂಕಟರಮಣಿ ಅವರು ಸುಪ್ರೀಂ ಕೋರ್ಟ್ ಗಮನಕ್ಕೆ ತಂದರು. ''ಇ20 ಇಂಧನವನ್ನು ಪ್ರಾಯೋಗಿದ ಆಧಾರದ ಮೇಲೆ ಬಿಡುಗಡೆ ಮಾಡಲಾಗಿದೆ. ಎಥೆನಾಲ್ ಮಿಶ್ರಣದ ಮಿತಿ ಹೆಚ್ಚಳ ಬಗ್ಗೆ ಸರಕಾರ ಚಿಂತನೆ ನಡೆಸಿದೆ. ಆದರೆ, ಎಥೆನಾಲ್ ಪ್ರಮಾಣವನ್ನು ಹೆಚ್ಚಿಸುವ ಕುರಿತು ಸರಕಾರ ಯಾವುದೇ ಸಮಯದ ಮಿತಿ ನಿಗದಿಪಡಿಸಿಲ್ಲ'' ಎಂದು ಅಟಾರ್ನಿ ಜನರಲ್ ವಾದಿಸಿದರು.

ಇ20 ಇಂಧನ ಯೋಜನೆ

2022	ಜೈವಿಕ ಇಂಧನ ನೀತಿಗೆ ತಿದ್ದುಪಡಿ
2022-23	ಶೇ.12.6ರಷ್ಟು ಎಥೆನಾಲ್ ಮಿಶ್ರಣ
2023-24	ಶೇ.14.6ರಷ್ಟು ಎಥೆನಾಲ್ ಮಿಶ್ರಣ
2024-25	ಶೇ.17.98ರಷ್ಟು ಎಥೆನಾಲ್ ಮಿಶ್ರಣ
2025-26	ಶೇ.20ರಷ್ಟು ಎಥೆನಾಲ್ ಮಿಶ್ರಣ

ಹೈಕೋರ್ಟ್ ಹೇಳಿದ್ದೇನು?: ಎಥೆನಾಲ್ ಉತ್ಪಾದನೆ ಹೆಚ್ಚಳವಾಗಿದ್ದು, 9.9 ಕೋಟಿ ಲೀಟರ್ ಉತ್ಪಾದಿಸಲಾಗುತ್ತಿದೆ. ಆದರೆ, ಸರಕಾರ 3.92 ಕೋಟಿ ಲೀಟರ್ ಹಂಚಿಕೆ ಮಾಡಿದೆ. ಹೆಚ್ಚಿನ ಪ್ರಮಾಣದ ಎಥೆನಾಲ್ ಖರೀದಿಸಲು ತೈಲ ಕಂಪನಿಗಳಿಗೆ ನಿರ್ದೇಶನ ನೀಡುವಂತೆ ಕೋರಿ ಎಥೆನಾಲ್ ಉತ್ಪಾದಕರು ಹೈಕೋರ್ಟ್ ಮೊರೆ ಹೋಗಿದ್ದರು. ವಿಚಾರಣೆ ನಡೆಸಿದ್ದ ಹೈಕೋರ್ಟ್, ಎಥೆನಾಲ್ ಖರೀದಿ ಪ್ರಮಾಣ ಹೆಚ್ಚಳದ ಬೇಡಿಕೆ ಪರಿಗಣಿಸುವಂತೆ ಸರಕಾರಿ ಸ್ವಾಮ್ಯದ ಮೂರು ತೈಲ ಕಂಪನಿಗಳಿಗೆ ಸೂಚನೆ ನೀಡಿತ್ತು.

ಅಧಿಕೃತ ಇಂಧನ ನೀತಿಯ ಪ್ರಕಾರ ಪೆಟ್ರೋಲ್‌ಗೆ ಶೇ.20ರಷ್ಟು ಪ್ರಮಾಣ ಮೀರಿ ಎಥೆನಾಲ್ ಪ್ರಮಾಣ ಹೆಚ್ಚಿಸುವ ಕುರಿತು ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ, ಆದರೆ, ಶೇ.85ಕ್ಕೆ ಹೆಚ್ಚಿಸುವ ಯೋಜನೆ ಇದೆ ಎಂದು ಸಚಿವರಾದ ನಿತಿನ್ ಗಡ್ಕರಿ ಹಾಗೂ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ.

ವಯಸ್ಸಿನ ಕಾರಣಕ್ಕೆ ಗರ್ಭಧಾರಣೆ ಹಕ್ಕು ಕಸಿಯುವಂತಿಲ್ಲ: ಕೋರ್ಟ್

ಕೋಲ್ಕೊತಾ: ಪತಿಗೆ ವಯಸ್ಸಾಗಿದೆ ಎಂಬ ಕಾರಣಕ್ಕೆ ಪತ್ನಿಯ ಜನ್ಮ ನೀಡುವ ಹಕ್ಕನ್ನು ಕಸಿದುಕೊಳ್ಳಲಾಗದು ಎಂದು ಕೋಲ್ಕೊತಾ ಹೈಕೋರ್ಟ್ ಹೇಳಿದೆ. ಈ ತೀರ್ಪಿನ ಬಳಿಕ 2014ರಿಂದ ಬಂಜೆತನದಿಂದ ಬಳಲುತ್ತಿದ್ದ ದಂಪತಿಗೆ ಐವಿಎಫ್ ಚಿಕಿತ್ಸೆಯ ಹಾದಿ ಸುಗಮವಾಗಿದೆ.

''ಸಹಾಯಿತ ಸಂತಾನೋತ್ಪತ್ತಿ ತಂತ್ರಜ್ಞಾನ (ಎಆರ್‌ಟಿ) ಕಾಯಿದೆ 2021ರ ಅಡಿಯಲ್ಲಿ ಪತಿಗೆ ವಯಸ್ಸಾಗಿದೆ ಎಂಬ ಕಾರಣಕ್ಕೆ ಚಿಕಿತ್ಸೆಯನ್ನು ನಿರಾಕರಿಸುವಂತಿಲ್ಲ,'' ಎಂದು ನ್ಯಾ.ಕೃಷ್ಣ ರಾವ್ ಅವರ ಪೀಠ ಹೇಳಿದೆ.

ನ್ಯಾಯಪೀಠ ನೀಡಿದ ಆದೇಶದಲ್ಲಿ, ''ಮಹಿಳೆಗೆ ಬೆಂಬಲ ನೀಡುವುದನ್ನು ಬಿಟ್ಟು ಮಗುವಿನ ಜನನದಲ್ಲಿ ಪುರುಷನಿಗೆ ಯಾವುದೇ (ಭೌತಿಕ) ಪಾತ್ರವಿರುವುದಿಲ್ಲ, ಮಹಿಳೆಯು ವೈದ್ಯಕೀಯ ವರದಿಯು ಆಕೆ ಪ್ರಸ್ತುತ ಭ್ರೂಣವನ್ನು ಧರಿಸಲು ದೈಹಿಕವಾಗಿ ಸದೃಢಳಾಗಿದ್ದಾಳೆ ಎಂದು ಸೂಚಿಸುತ್ತದೆ. ಅಂದರೆ ವಯಸ್ಸು ಮತ್ತು ಆರೋಗ್ಯ ಎರಡರ ದೃಷ್ಟಿಯಿಂದಲೂ ಮಹಿಳೆಯು ಎಆರ್‌ಟಿ ಚಿಕಿತ್ಸೆ ಪಡೆಯಲು ಅರ್ಹಳಾಗಿರುತ್ತಾಳೆ,'' ಎಂದು ತಿಳಿಸಲಾಗಿದೆ.

ವಿವಾಹಿತ ದಂಪತಿ ಐವಿಎಫ್ ಚಿಕಿತ್ಸೆಗೆ ಅನುಮತಿ ಕೋರಿ ಕೋಲ್ಕೊತಾ ಹೈಕೋರ್ಟ್ ಮೆಟ್ಟಿಲೇರಿದ್ದರು. ದಂಪತಿ ಎಆರ್‌ಟಿ ಬ್ಯಾಂಕ್‌ನಿಂದ ವೀರ್ಯ ಮತ್ತು ಅಂಡಾಣುಗಳನ್ನು ಪಡೆದು ಗರ್ಭಧರಿಸಲು ಬಯಸಿದ್ದರು.

ದಂಪತಿ ಪರ ಹಾಜರಾದ ವಕೀಲ ಸ್ವಪ್ನದೀಪ್ ರಾಯ್, ''ಇವರು 2014ರಲ್ಲಿ ವಿವಾಹವಾಗಿದ್ದು, ಇದುವರೆಗೆ ಮಕ್ಕಳಾಗಿಲ್ಲ, ದಂಪತಿ ವೈದ್ಯಕೀಯವಾಗಿ ಸದೃಢರಾಗಿದ್ದರೂ, ಪತಿಯ ವಯಸ್ಸು 57 ವರ್ಷ ಆಗಿರುವುದರಿಂದ ಆಸ್ಪತ್ರೆಯು ಐವಿಎಫ್ ಮಾಡಲು ನಿರಾಕರಿಸಿದೆ. ಎಆರ್‌ಟಿ ಕಾಯಿದೆಯಡಿ ಪುರುಷರಿಗೆ ಗರಿಷ್ಠ ವಯೋಮಿತಿ 55 ವರ್ಷ (ಮಹಿಳೆಯರಿಗೆ 50 ವರ್ಷ) ಎಂದು ನಿಗದಿಪಡಿಸಲಾಗಿದೆ,'' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ವಾದ-ಪ್ರತಿವಾದ ಆಲಿಸಿದ ಪೀಠವು, ''ಪತ್ನಿ ಅರ್ಹಳಾಗಿದ್ದರೂ, ಪತಿಯ ವಯಸ್ಸು ಮೀರಿದೆ ಎಂಬ ಕಾರಣಕ್ಕೆ ಆಕೆಗೆ ಚಿಕಿತ್ಸೆ ನಿರಾಕರಿಸುವುದು ಅನ್ಯಾಯವಾಗುತ್ತದೆ. ಪತಿಯ ಅನರ್ಹತೆಯಿಂದ ಪತ್ನಿ ನೋವು ಅನುಭವಿಸಬಾರದು. ದಂಪತಿ ಎಆರ್‌ಟಿ ಸೌಲಭ್ಯ ಪಡೆಯಲು ಅರ್ಹರಾಗಿದ್ದಾರೆ. ಕಾನೂನಿನ ಪ್ರಕಾರ ಅವರಿಗೆ ಚಿಕಿತ್ಸೆ ನೀಡಬೇಕು,'' ಎಂದು ತೀರ್ಪು ನೀಡಿದೆ.

ರಾಜತಾಂತ್ರಿಕ ಮಾರ್ಗದಲ್ಲಿ ಬಿಕ್ಕಟ್ಟು ಇತ್ಯರ್ಥಕ್ಕೆ ಪ್ರಧಾನಿ ಮೋದಿ ಸಲಹೆ

ಹೊಸದಿಲ್ಲಿ: ''ಪ್ರಾದೇಶಿಕ ಶಾಂತಿ, ಸ್ಥಿರತೆ ಕಾಪಾಡಲು ಮಧ್ಯಪ್ರಾಚ್ಯ ಸಂಘರ್ಷವನ್ನು ಮಾತುಕತೆ ಹಾಗೂ ರಾಜತಾಂತ್ರಿಕ ಮಾರ್ಗದ ಮೂಲಕ ಇತ್ಯರ್ಥಪಡಿಸಿಕೊಳ್ಳಬೇಕು,'' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಇರಾನ್‌ಗೆ ಸಲಹೆ ನೀಡಿದ್ದಾರೆ.

ಇರಾನ್ ಅಧ್ಯಕ್ಷ ಮಸೌದ್ ಪೆಜೆಶ್ಕಿಯನ್ ಜತೆ ಮಂಗಳವಾರ ದೂರವಾಣಿಯಲ್ಲಿ ಮಾತುಕತೆ ನಡೆಸಿದ ಮೋದಿ ಅವರು, ಮಧ್ಯಪ್ರಾಚ್ಯ ಪರಿಸ್ಥಿತಿ, ಅಮೆರಿಕ-ಇರಾನ್ ನಡುವಿನ ಶಾಂತಿ ಮಾತುಕತೆಯ ಕುರಿತು ಸಮಾಲೋಚನೆ ನಡೆಸಿದರು.

ಮಧ್ಯಪ್ರಾಚ್ಯದಲ್ಲಿ ಶಾಶ್ವತ ಶಾಂತಿ ಸ್ಥಾಪನೆ, ಸ್ಥಿರತೆ ಖಚಿತಪಡಿಸಿಕೊಳ್ಳಲು ರಾಜತಾಂತ್ರಿಕ ಮಾತುಕತೆಗೆ ಒತ್ತು ನೀಡುವಂತೆ ಮೋದಿ ಅವರು ಸಲಹೆ ನೀಡಿದರು. ಹರ್ಮುಜ್ ಜಲಸಂಧಿಯಲ್ಲಿ ಹಡಗುಗಳ ಸುರಕ್ಷಿತ ಹಾಗೂ ಸುಲಭ ಸಂಚಾರಕ್ಕೆ ಕ್ರಮ ವಹಿಸಬೇಕು. ಜಾಗತಿಕ ವಾಣಿಜ್ಯ ವ್ಯವಹಾರ ರಕ್ಷಣೆಗೆ ಆದ್ಯತೆ ನೀಡಬೇಕು ಎಂದು ಮೋದಿ ಸೂಚಿಸಿದರು.

ರಕ್ಷಣಾ ಸಚಿವ ರಾಜನಾಥ್ ವಿರುದ್ಧ ಕಾಂಗ್ರೆಸ್ ಹಕ್ಕುಚ್ಯುತಿ ನೋಟಿಸ್

ಹೊಸದಿಲ್ಲಿ: 'ಆಪರೇಷನ್ ಸಿಂಧೂರ' ವೇಳೆ ಭಾರತೀಯ ಸೈನಿಕರು ಹುತಾತ್ಮರಾಗಿಲ್ಲ ಎಂದು ಹೇಳುವ ಮೂಲಕ ಸಂಸತ್ತನ್ನು ದಾರಿತಪ್ಪಿಸಿದ್ದಕ್ಕಾಗಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರ ವಿರುದ್ಧ ಹಕ್ಕುಚ್ಯುತಿ ಕ್ರಮ ಕೈಗೊಳ್ಳಬೇಕೆಂದು ಕಾಂಗ್ರೆಸ್ ಮಂಗಳವಾರ ಒತ್ತಾಯಿಸಿದೆ. ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಪತ್ರ ಬರೆದಿರುವ ಕಾಂಗ್ರೆಸ್ ಸಂಸದ ಮತ್ತು ಸಾರ್ವಜನಿಕ ಲೆಕ್ಕಪತ್ರ ಸಮಿತಿ ಅಧ್ಯಕ್ಷ ಕೆ.ಸಿ. ವೇಣುಗೋಪಾಲ್ ಅವರು ಲೋಕಸಭೆಯಲ್ಲಿ ಕಾರ್ಯವಿಧಾನ ಮತ್ತು ವ್ಯವಹಾರ ನಡವಳಿಕೆಯ ನಿಯಮಗಳ ಅಡಿಯಲ್ಲಿ ಹಕ್ಕುಚ್ಯುತಿ ಪ್ರಕ್ರಿಯೆಗಳನ್ನು ಪ್ರಾರಂಭಿಸುವಂತೆ ಸ್ಪೀಕರ್ ಅವರನ್ನು ಒತ್ತಾಯಿಸಿದ್ದಾರೆ. 2025ರ ಜುಲೈ 28ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿ ಮತ್ತು ಆಪರೇಷನ್ ಸಿಂಧೂರ ಕುರಿತು ಚರ್ಚೆಯ ಸಮಯದಲ್ಲಿ, ರಕ್ಷಣಾ ಸಚಿವರು, ''ಕಾರ್ಯಾಚರಣೆಯಲ್ಲಿ ನಮ್ಮ ಯಾವುದೇ ಸೈನಿಕರಿಗೆ ಹಾನಿಯಾಗಿಲ್ಲ,'' ಎಂದು ಹೇಳಿದ್ದರು ಎಂಬುದನ್ನು ವೇಣುಗೋಪಾಲ್ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಈಗ, ಸಚಿವ ರಾಜನಾಥ್ ಅವರ ಹೇಳಿಕೆಗೆ ವಿರುದ್ಧವಾಗಿ ರಕ್ಷಣಾ ಸಚಿವಾಲಯವು, ಆರು ಸಶಸ್ತ್ರ ಪಡೆಗಳ ಸಿಬ್ಬಂದಿ ಹುತಾತ್ಮರಾಗಿದ್ದಾರೆ ಎಂದು ಅಧಿಕೃತ ಹೇಳಿಕೆಯನ್ನು ಬಿಡುಗಡೆ ಮಾಡಿದೆ ಎಂದು ವೇಣುಗೋಪಾಲ್ ಆರೋಪಿಸಿದ್ದಾರೆ.

ಶಾಲಾ ಬಸ್ ಮೇಲೆ ಬಿದ್ದ ಮರ, ವಿದ್ಯಾರ್ಥಿ ಸಾವು

ಮುಂಬಯಿ: ವಿದ್ಯಾರ್ಥಿಗಳನ್ನು ಮನೆಗೆ ಕರೆದೊಯ್ಯುತ್ತಿದ್ದ ಶಾಲಾ ಬಸ್ ಮೇಲೆ ಬೃಹತ್ ಮರ ಬಿದ್ದು, ಓರ್ವ ವಿದ್ಯಾರ್ಥಿ ಮೃತಪಟ್ಟಿದ್ದಾರೆ. ದುರಂತದಲ್ಲಿ 10 ಮಕ್ಕಳು ಗಂಭೀರವಾಗಿ ಗಾಯಗೊಂಡಿದ್ದಾರೆ. ಚೆಂಬೂರ್ ಪ್ರದೇಶದಲ್ಲಿ ಈ ಘಟನೆ ನಡೆದಿದೆ. ಒಬ್ಬ ಬಾಲಕ ಬಸ್‌ನಲ್ಲೇ ಸಿಲುಕಿದ್ದಾನೆ. ಆತನ ರಕ್ಷಣೆಗೆ ಕಾರ್ಯಾಚರಣೆ ನಡೆಯುತ್ತಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಶಾಲಾ ಬಸ್‌ನಲ್ಲಿ ಮಕ್ಕಳನ್ನು ಕರೆದೊಯ್ಯುತ್ತಿದ್ದಾಗ ಮರ ಇದ್ದಕ್ಕಿದ್ದಂತೆ ಬಸ್ ಮೇಲೆ ಬಿದ್ದಿದೆ. ರಕ್ಷಣಾ ತಂಡಗಳು ಮತ್ತು ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಗಾಯಗೊಂಡ ಮಕ್ಕಳನ್ನು ಚಿಕಿತ್ಸೆಗಾಗಿ ಹತ್ತಿರದ ಆಸ್ಪತ್ರೆಗಳಿಗೆ ಸಾಗಿಸಲಾಗಿದೆ. ಹಿಂದೆ ಸಹ ಈ ಪ್ರದೇಶದಲ್ಲಿ ಇದೇ ರೀತಿಯ ಘಟನೆ ಸಂಭವಿಸಿದೆ. ಮರಗಳನ್ನು ಕತ್ತರಿಸುವಂತೆ ಅಥವಾ ತೆರವುಗೊಳಿಸುವಂತೆ ಬೃಹನ್ಮುಂಬಯಿ ಮುನ್ಸಿಪಲ್ ಕಾರ್ಪೊರೇಷನ್‌ಗೆ (ಬಿಎಂಸಿ) ಪತ್ರ ಬರೆಯಲಾಗಿದೆ. ಆದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಪ್ರವಾಸಿಸ್ನೇಹಿ ಭಾರತ ರೂಪಿಸಲು ನೀತಿ ಆಯೋಗ ಯೋಜನೆ

ಹೊಸದಿಲ್ಲಿ: ಭಾರತವನ್ನು ಪ್ರವಾಸಿಸ್ನೇಹಿ ದೇಶವಾಗಿ ರೂಪಿಸಲು ನೀತಿ ಆಯೋಗ ಹಲವು ಸುಧಾರಣೆ ಒಳಗೊಂಡ ಪ್ರವಾಸೋದ್ಯಮ ನೀತಿ, ನಿಯಮಗಳನ್ನು ಪ್ರಸ್ತಾಪಿಸಿದೆ.

ಆಯ್ದ ದೇಶಗಳಿಗೆ ಬಹು ಹಂತದ ವೀಸಾ ವ್ಯವಸ್ಥೆ, ವಿದೇಶಿಗರಿಗೆ ಪ್ರವಾಸದ ಹಂತದಲ್ಲಿಯೇ ವೀಸಾ ನೀಡುವುದು, ಹೋಟೆಲ್‌ಗಳ ಪ್ರವೇಶಕ್ಕೆ ಸುಲಭ ನಿಯಮ, ಸರಳ ಪರವಾನಗಿ ಮಾನದಂಡ ರೂಪಿಸುವಂತೆ ಶಿಫಾರಸು ಮಾಡಿದೆ.

ಬಂಡವಾಳ ಹೂಡಿಕೆ ಆಕರ್ಷಿಸುವುದು ಸೇರಿದಂತೆ ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚಿಸಲು ನೀತಿ ಆಯೋಗ ಮಹತ್ವದ ಪ್ರವಾಸೋದ್ಯಮ ಸುಧಾರಣಾ ನಿಯಮಗಳನ್ನು ಶಿಫಾರಸು ಮಾಡಿದೆ. ಪ್ರವಾಸೋದ್ಯಮ ಹಾಗೂ ಆತಿಥ್ಯ ವಲಯದ ಬೆಳವಣಿಗೆ ತೀವ್ರಗೊಳಿಸುವ ಉದ್ದೇಶದೊಂದಿಗೆ ಪ್ರವಾಸೋದ್ಯಮ ಸಚಿವಾಲಯ, ಕೈಗಾರಿಕೋದ್ಯಮಿಗಳ ಜತೆ ಸಮಾಲೋಚನೆ ನಡೆಸಿರುವ ನೀತಿ ಆಯೋಗ, ಪ್ರಸ್ತಾವಿತ ಶಿಫಾರಸುಗಳನ್ನು ಸಿದ್ಧಪಡಿಸಿದೆ.



ಆಯೋಗದ ಶಿಫಾರಸುಗಳು

- ಆಯ್ದ ದೇಶದ ಪ್ರವಾಸಿಗರಿಗೆ 90 ದಿನಗಳ ಬಹು ಪ್ರವೇಶ ವೀಸಾ
- ಅರ್ಹ ಪ್ರವಾಸಿಗರಿಗೆ ಪ್ರವಾಸದ ಮಧ್ಯೆಯೇ ವೀಸಾ ನೀಡಲು ಕ್ರಮ
- ನಿಗದಿಪಡಿಸಿದ ವಿಮಾನ ನಿಲ್ದಾಣ, ಬಂದರುಗಳಲ್ಲಿ ವೀಸಾ ವಿತರಣೆ
- ಪ್ರವಾಸೋದ್ಯಮ ಸೇವೆಗಳ ಜತೆಗೆ ವೀಸಾ ವ್ಯವಸ್ಥೆಯ ಸಂಯೋಜನೆ
- ಹೋಟೆಲ್, ರೆಸ್ಟೋರೆಂಟ್‌ಗಳಿಗೆ ಏಕರೂಪ ಪರವಾನಗಿ ನೀತಿ ಜಾರಿ
- ಮದ್ಯದ ಪರವಾನಗಿ ಮತ್ತು ನೋಂದಣಿ ಮಾನ್ಯತೆಯ ವಿಸ್ತರಣೆ
- ದೇಶದ ಬ್ರಾಂಡೆಡ್ ಹೋಟೆಲ್‌ಗಳಲ್ಲಿ ಕೊಠಡಿ ಸಾಮರ್ಥ್ಯ ಹೆಚ್ಚಳ

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
An ISO-9001:2015 & 14001:2015 Company
ಶ್ರೀಗಂಧ ನಗರ: ಅಂಚೆ ಪೆಟ್ಟಿಗೆ ಸಂಖ್ಯೆ: 5531, ಬೆಂಗಳೂರು-ಪುಣೆ ಹೆದ್ದಾರಿ, ಬೆಂಗಳೂರು-560 055, ದೂರವಾಣಿ ಸಂಖ್ಯೆ: 080-22164879, 22164886
ಜಾಲತಾಣ: www.mysoresandal.org ಇ-ಮೇಲ್: ksdl.dgmmtls@gmail.com
ದಿನಾಂಕ: 30.06.2026

ಟೆಂಡರ್ ಪ್ರಕಟಣೆ

ಕೆಎಸ್&ಡಿಎಲ್ ಸಂಸ್ಥೆಗೆ ಈ ಕೆಳಕಂಡ ಸರಕು/ಸೇವೆಗಳು/ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಜಾಲತಾಣ (https://kppp.karnataka.gov.in/) ದ ಮೂಲಕ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು	ಸಂಖ್ಯೆ	ಪ್ರಕಟಣೆ ದಿನಾಂಕ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ
1	KSDL/2026-27/SE0250	ಕೆಎಸ್ & ಡಿ.ಎಲ್ ಉದ್ಯೋಗಿಗಳಿಗೆ ಒಂದು ವರ್ಷದ ಅವಧಿಗೆ ಗ್ರೂಪ್ ಮೆಡಿಕ್ಲೈಮ್ ವಿಮಾ ಸೇವೆಗಳನ್ನು ಒದಗಿಸುವುದು.	ಸೇವೆಗಳು	27.06.2026	13.07.2026
2	KSDL/2026-27/IND1284	ಪ್ಲಾಸ್ಟಿಕ್ ಪ್ಯಾಲೇಟ್‌ಗಳ ಖರೀದಿ.	1000 ಸಂಖ್ಯೆ	30.06.2026	15.07.2026
3	KSDL/2026-27/BD/WORK_INDENT46	ಕೆಎಸ್&ಡಿಎಲ್ ಬೆಂಗಳೂರಿನಲ್ಲಿ ಹೊಸ ಕಚೇರಿ ಕಟ್ಟಡದ ನಿರ್ಮಾಣ.	ಕಾಮಗಾರಿ	30.06.2026	31.07.2026
4	KSDL/2026-27/IND1283	ಫ್ಲೆಕ್ಸಿಬಲ್ ಕಾಪರ್ ಕೇಬಲ್ ಖರೀದಿ	ಸರಕು	30.06.2026	15.07.2026

ಯಾವುದೇ ಹೆಚ್ಚಿನ ವಿಚಾರಣೆ/ಸ್ಪಷ್ಟೀಕರಣಕ್ಕೆ ಕೆಳಕಂಡ ಸಹಿದಾರರನ್ನು ಸಂಪರ್ಕಿಸಬಹುದು.
ಸಹಿ/- ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಾಮಗ್ರಿ)

ಕರ್ನಾಟಕ ಸರ್ಕಾರ (ಪ್ರವಾಸೋದ್ಯಮ ಇಲಾಖೆ)
ಸಹಾಯಕ ನಿರ್ದೇಶಕರ ಕಛೇರಿ, ಎ.ಸಿ. ಕಛೇರಿ ಕಟ್ಟಡ, ಮುಳಗುಂದ ನಾಕಾ ಹತ್ತಿರ, ಗದಗ ಜಿಲ್ಲೆ ಗದಗ-582103
Ph : 08372-233017 E-mail: gadagtourism@gmail.com
ಸಂಖ್ಯೆ:ಪ್ರಇ/ಸನಿಕ/ಗಜಿ/ಗ/ಸಾಕ್ಷ್ಯಚಿತ್ರ/2026-27 ದಿನಾಂಕ : 29.06.2026

ಟೆಂಡರ್ ಪ್ರಕಟಣೆ

ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಗದಗ ಜಿಲ್ಲೆ, ಗದಗ ಇವರಿಗೆ ಅವಶ್ಯವಿರುವ ಫೋಟೋಗ್ರಫಿಯೊಂದಿಗೆ ವೀಡಿಯೋಗ್ರಫಿ (ಸಾಕ್ಷ್ಯಚಿತ್ರ) ಸಲುವಾಗಿ ಅನುಬಂಧ-01 ರಿಂದ 03 ರ ವರೆಗೆ ನಮೂದಿಸಿರುವಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ (KTPP-ACT) ಅಧಿನಿಯಮ-1999 ಮತ್ತು ನಿಯಮಗಳು 2000 ರ ಪ್ರಕಾರ kppp.karnataka.gov.in portal ಮೂಲಕ ಅರ್ಹ ಟೆಂಡರ್‌ದಾರರಿಂದ ದ್ವಿ-ಲಕೋಟೆ ಪದ್ಧತಿಯಲ್ಲಿ (ತಾಂತ್ರಿಕ ಬಿಡ್ ಮತ್ತು ಆರ್ಥಿಕ ಬಿಡ್) ಟೆಂಡರ್ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಹಾಗೂ ಟೆಂಡರ್‌ನಲ್ಲಿ ಭಾಗವಹಿಸಲು ದಿನಾಂಕ : **28.07.2026** ರಂದು ಸಾಯಂಕಾಲ ಸಮಯ 05:30 ಹೆಚ್ಚಿನ ಮಾಹಿತಿಗಾಗಿ ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in/ ಮೂಲಕ Tender Reference No-DT/2026-27/SE0143 ಸಂಖ್ಯೆಯನ್ನು ಬಳಸಿಕೊಂಡು ಪರಿಶೀಲಿಸಬಹುದಾಗಿದೆ.
ಸಹಿ/- ಸಹಾಯಕ ನಿರ್ದೇಶಕರು,
ಪ್ರವಾಸೋದ್ಯಮ ಇಲಾಖೆ, ಗದಗ
ವಾಸಾಸಂಇ/ಗದಗ/142/ಕೆ.ಎಸ್.ಎಂ.ಸಿ.ಎ/2026-27

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು - 560 009. ದೂ.ಸಂಖ್ಯೆ : 080-22265383, website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ/19/1846/2026-27 ದಿನಾಂಕ : 29.06.2026

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಕೆಸಿಇಐನಿಂದ ಪಡೆದ ಸೂಪರ್ ಗ್ರೇಡ್ ವಿದ್ಯುತ್ ಪರವಾನಗಿ ಹಾಗೂ ಕೆಪಿಡಬ್ಲ್ಯೂಡಿ ದರ್ಜೆ-1 (ಸಿವಿಲ್) ಪರವಾನಗಿ ಹೊಂದಿರುವ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿ ಹೆಸರು : ಭಾಗ-ಎ : ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು 3ನೇ ಹಂತ ಕೈಗಾರಿಕಾ ಪ್ರದೇಶದಲ್ಲಿ 2x20 ಎಂ.ವಿ.ಎ, ಸಾಮರ್ಥ್ಯದ 66/11 ಕೆ.ವಿ ವಿದ್ಯುತ್ ಉಪ ಕೇಂದ್ರ ನಿರ್ಮಾಣ ಕಾಮಗಾರಿ. ಭಾಗ-ಬಿ : (i) ಕುಡುಮಲಕುಂಟೆ 66/11 ಕೆವಿ ಉಪ ಕೇಂದ್ರದಿಂದ ಕಾಮನ್ ಟವರ್‌ವರೆಗೆ 0.958 ಕಿಮೀ ಉದ್ದಕ್ಕೆ ಡಿಸಿ ಟವರ್‌ಗಳ ಮೇಲೆ 66 ಕೆವಿ ಎಸ್‌ಸಿ ಲೈನ್ ನಿರ್ಮಾಣ ಮಾಡುವುದು. (ii) ವಿಧುರಾಶ್ವತ 66/11 ಕೆವಿ ಉಪ ಕೇಂದ್ರದಿಂದ ಕಾಮನ್ ಟವರ್‌ವರೆಗೆ ಡಿಸಿ ಟವರ್‌ಗಳ ಮೇಲೆ 3.355 ಕಿಮೀ ಉದ್ದಕ್ಕೆ 66 ಕೆವಿ ಎಸ್‌ಸಿ ಲೈನ್ ನಿರ್ಮಾಣ ಮಾಡುವುದು. (iii) ಕಾಮನ್ ಟವರ್‌ನಿಂದ ಪ್ರಸ್ತಾವಿತ 66/11 ಕೆವಿ ಗೌರಿಬಿದನೂರು 3ನೇ ಹಂತ ಕೈಗಾರಿಕಾ ಪ್ರದೇಶದ ಉಪ ಕೇಂದ್ರದವರೆಗೆ ಡಿಸಿ ಟವರ್‌ಗಳ ಮೇಲೆ 1.971 ಕಿ.ಮೀ. ಉದ್ದಕ್ಕೆ 66 ಕೆವಿ ಡಿಸಿ ಲೈನ್ ನಿರ್ಮಾಣ ಮಾಡುವ ಕಾಮಗಾರಿ. ಭಾಗ-ಸಿ : (i) ಚಿಕ್ಕಬಳ್ಳಾಪುರ ಜಿಲ್ಲೆ, ಕುಡುಮಲಕುಂಟೆ ಕೈಗಾರಿಕಾ ಪ್ರದೇಶದ ಹಾಲಿ 66/11ಕೆವಿ ಉಪ ಕೇಂದ್ರದಲ್ಲಿ 1 ಸಂಖ್ಯೆ ಲೈನ್ ಟಿಬಿ ನಿರ್ಮಾಣ ಕಾಮಗಾರಿ. (ii) ಚಿಕ್ಕಬಳ್ಳಾಪುರ ಜಿಲ್ಲೆ, ವಿದುರಾಶ್ವಥ ಹಾಲಿ 66/11 ಕೆವಿ. ಉಪ ಕೇಂದ್ರದಲ್ಲಿ 1 ಸಂಖ್ಯೆ ಟಿಬಿ ನಿರ್ಮಾಣ ಕಾಮಗಾರಿ. (3ನೇ ಕರೆ).
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 14.07.2026 ಸಂಜೆ 4.00 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/-
ಪ್ರಧಾನ ಅಭಿಯಂತರರು,
ಕೆಐಎಡಿಬಿ, ಬೆಂಗಳೂರು
DIPR/CP/1390/Zen/2026-27

ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ ಬೆಳಗಾವಿ
(ಸ್ವಾಯತ್ತ ಸಂಸ್ಥೆ)
ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಳಗಾವಿ - 590001. (ಆಸ್ಪತ್ರೆ) ದೂ. : 0831-2420320
ಫ್ಯಾಕ್ಸ್ : 0831-2420173, (ಕಾಲೇಜ್) ದೂ. : 0831-2421464 ಫ್ಯಾಕ್ಸ್ : 0831-2403126
ಇ-ಮೇಲ್ : belgaum.bims@gmail.com, ವೆಬ್‌ಸೈಟ್ : www.bimsbelgaum.org
ಸಂಖ್ಯೆ : ಬಿಮ್ಸ್/ಆ.ಬೆ./ಸರಬರಾಜು-1/ಕೆ.ಪಿ.ಪಿ./ಟೆಂಡರ್/ಸಿ.ಆರ್-66/2026-27 ದಿನಾಂಕ : 29-06-2026

ಟೆಂಡರ್ ಅಧಿಸೂಚನೆ

ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಆರ್ಥಿಕ ಸಲಹೆಗಾರರು, ಬಿಮ್ಸ್ ಬೆಳಗಾವಿ ಟೆಂಡರ ಪ್ರಾಧಿಕಾರ ಇವರಿಂದ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿಗೆ ಈ ಕೆಳಕಾಣಿಸಿದ ಟೆಂಡರಗಳ ಸೇವೆಗಾಗಿ ಕೆ.ಪಿ.ಪಿ. ನಿಯಮಾವಳಿಗಳನ್ವಯ ದ್ವಿ-ಲಕೋಟೆ ಪದ್ಧತಿಯಲ್ಲಿ ಕೆ.ಪಿ.ಪಿ. ಪೋರ್ಟಲ್ ಮೂಲಕ ಪ್ರಕಟಣೆಯನ್ನು ಆಹ್ವಾನಿಸಲಾಗಿದೆ.

Sl. No.	Tender Notification	Description of Tender	Tender Value (Approximate) (Rs. In Lakhs)	Downloading of Tender Document
01	BIMS/HOSP/SUP-1/CR-25/2026-27	Retender for Purchase of Smart New Born & Maternal Monitors in OBG Department of BIMS Belagavi.	Rs. 70 Lakhs	K.P.P. Procurement Portal
02	BIMS/HOSP/SUP-1/TENDER/DRUGS (INJECTABLES)/CR-39/2026-27	Purchase of Injectables for BIMS Hospital Belagavi.	Rs. 99 Lakhs	K.P.P. Procurement Portal
03	BIMS/HOSP/SUP-1/TENDER/DRUGS(TABS)/CR-37/2026-27	Purchase of Tablets for BIMS Hospital Belagavi.	Rs. 98 Lakhs	K.P.P. Procurement Portal
04	BIMS/HOSP/SUP-1/TENDER/IVIG &ANTIBIOTICS/CR-65/2026-27	Purchase of IVIG & Antibiotics for BIMS Hospital Belagavi.	Rs. 99 Lakhs	K.P.P. Procurement Portal
05	BIMS/HOSP/SUP-1/TENDER/DRUGS (MISC ITEMS)/CR-38/2026-27	Purchase of Miscellaneous items for BIMS Hospital Belagavi.	Rs. 96 Lakhs	K.P.P. Procurement Portal
06	BIMS/GNL-2/CR-61/KITCHEN OUTSOURCING/2025-26	Tender for providing Ready Food to in Patients for One year to BIMS Hospital & Super Speciality Hospital, Belagavi.	Rs. 3.30 Cr.	K.P.P. Procurement Portal

ಕೆ.ಪಿ.ಪಿ. ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನೊಂದಾಯಿಸಿದ ಟೆಂಡರ್‌ದಾರರು ಟೆಂಡರ್ ಕುರಿತು ವಿವರಗಳಿಗೆ ಕರ್ನಾಟಕ ಸರ್ಕಾರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಕೆ.ಪಿ.ಪಿ. ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https//www.kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ನಿರ್ದೇಶಕರು, ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ ಇವರನ್ನು ಕಚೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.
ಟೆಂಡರ್ ಸ್ವೀಕರಿಸುವ ಅಧಿಕಾರಿಗಳು ಯಾವುದೇ ಕಾರಣ ನೀಡದೆ ಯಾವುದೇ ಟೆಂಡರ್‌ನ್ನು ಅಥವಾ ಎಲ್ಲ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರಿವನ್ನು ಹೊಂದಿರುತ್ತಾರೆ.
ಸಹಿ/- ನಿರ್ದೇಶಕರು,
ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬೆಳಗಾವಿ.
ಡಿಐಪಿಆರ್/ಬೆಳಗಾವಿ/513/ಮಣಿಪಾಲ್/2026-27

ಸುರಕ್ಷಿತ, ಸಮರ್ಥ ಮತ್ತು ಸುಭದ್ರ ಉತ್ತರ ಪ್ರದೇಶ

ಕಾನೂನು ಮತ್ತು ಸುವ್ಯವಸ್ಥೆಯಲ್ಲಿ ಹೊಸ ಅಧ್ಯಾಯ

ಸುಸ್ಥಿರ ಪೊಲೀಸ್ ಸುಧಾರಣೆಗಳು ಮತ್ತು ತಂತ್ರಜ್ಞಾನ ಆಧಾರಿತ ಆಡಳಿತದ ಮೂಲಕ ಉತ್ತರ ಪ್ರದೇಶವು ಕಾನೂನು ಮತ್ತು ಸುವ್ಯವಸ್ಥೆಯಲ್ಲಿ ಗಮನಾರ್ಹ ಪರಿವರ್ತನೆಗೆ ಒಳಪಟ್ಟಿದೆ. ಆಧುನೀಕರಣದ ಪ್ರಯತ್ನಗಳು ಅಪರಾಧ ತಡೆಗಟ್ಟುವಿಕೆಯನ್ನು ಬಲಪಡಿಸಿದ್ದು, ಸ್ಪಂದನಾ ವ್ಯವಸ್ಥೆಗಳನ್ನು ಸುಧಾರಿಸಿವೆ ಮತ್ತು ರಾಜ್ಯಾದ್ಯಂತ ಸಾರ್ವಜನಿಕ ಸುರಕ್ಷತೆಯನ್ನು ಹೆಚ್ಚಿಸಿವೆ.

ಪ್ರಮುಖ ನಗರಗಳಲ್ಲಿ ಪೊಲೀಸ್ ಆಯುಕ್ತರ ಕಚೇರಿಗಳ ಸ್ಥಾಪನೆಯು ಕಮಾಂಡ್ ರಚನೆಗಳನ್ನು ಸುವ್ಯವಸ್ಥಿತಗೊಳಿಸಿದ್ದು, ಇದು ವೇಗವಾಗಿ ನಿರ್ಧಾರ ಕೈಗೊಳ್ಳುವಿಕೆ ಮತ್ತು ಮತ್ತಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸುವಿಕೆಯನ್ನು ಸಕ್ರಿಯಗೊಳಿಸುತ್ತದೆ. ವಿಶೇಷ ಘಟಕಗಳು ಈಗ ಸಂಘಟಿತ ಅಪರಾಧ, ಸೈಬರ್ ಅಪರಾಧ ಮತ್ತು ಮಹಿಳೆಯರು ಹಾಗೂ ಮಕ್ಕಳ ಮೇಲಿನ ಅಪರಾಧಗಳನ್ನು ಮತ್ತಷ್ಟು ದಕ್ಷತೆಯಿಂದ ನಿಭಾಯಿಸುತ್ತವೆ.

ಸಿಸಿಟಿವಿ ನೆಟ್‌ವರ್ಕ್‌ಗಳು, ಕೃತಕ ಬುದ್ಧಿಮತ್ತೆ (AI)-ಸಕ್ರಿಯಗೊಳಿಸಿದ ಆ್ಯಪ್ಸ್ ಮತ್ತು ಸಂಯೋಜಿತ ಕಮಾಂಡ್ ಸಿಸ್ಟಮ್‌ಗಳ ಬಳಕೆಯು ಕಣ್ಗಾವಲು ಮತ್ತು ನೈಜ ಸಮಯದ ಮೇಲ್ವಿಚಾರಣೆಯನ್ನು ಸುಧಾರಿಸಿದೆ. ನಾಗರಿಕ ಕೇಂದ್ರಿತ ಆ್ಯಪ್ಸ್ ಮತ್ತು ಸಹಾಯವಾಣಿಗಳು ಕುಂದುಕೊರತೆ ಪರಿಹಾರವನ್ನು ಮತ್ತಷ್ಟು ಸುಲಭಗೊಳಿಸಿವೆ.

ಜೊತೆಗೆ, ಮಹಿಳಾ ಸುರಕ್ಷತೆ ಮತ್ತು ಭ್ರಷ್ಟಾಚಾರ ವಿರೋಧಿ ಕಾನೂನು ಹಾಗೂ ವಿಧಿವಿಜ್ಞಾನ ಸಾಮರ್ಥ್ಯದ ಮೇಲೆ ಕೇಂದ್ರೀಕೃತ ಉಪಕ್ರಮಗಳು ಉತ್ತರ ಪ್ರದೇಶದಲ್ಲಿ ಪೊಲೀಸ್ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಿವೆ.

PICS: DIPR, UP GOVT

ಸುಧಾರಣೆಯಿಂದ ಫಲಿತಾಂಶದವರೆಗೆ: ಪ್ರಬಲ ಪೊಲೀಸ್ ವ್ಯವಸ್ಥೆ, ಸುರಕ್ಷಿತ ಉತ್ತರ ಪ್ರದೇಶ

- ಪ್ರಮುಖ ಏಳು ನಗರಗಳಲ್ಲಿ ಪೊಲೀಸ್ ಆಯುಕ್ತರ ಕಚೇರಿಗಳ ಸ್ಥಾಪನೆಯು ಪೊಲೀಸ್ ಗುಣಮಟ್ಟ, ಕುಂದುಕೊರತೆ ಪರಿಹಾರ ಕಾರ್ಯವಿಧಾನಗಳು ಮತ್ತು ಅಪರಾಧ ನಿಯಂತ್ರಣದಲ್ಲಿ ಗಮನಾರ್ಹ ಸುಧಾರಣೆಗೆ ಕಾರಣವಾಗಿದೆ.
- ಕಠಿಣ ಅಪರಾಧಿಗಳ ವಿರುದ್ಧದ ಪೊಲೀಸ್ ಕಾರ್ಯಾಚರಣೆಯಲ್ಲಿ ಈವರೆಗೆ 267 ಅಪರಾಧಿಗಳನ್ನು ಎನ್‌ಕೌಂಟರ್ ಮಾಡಲಾಗಿದೆ ಮತ್ತು 10,990 ಅಪರಾಧಿಗಳು ಗಾಯಗೊಂಡಿದ್ದಾರೆ. ಬಂಧನಕ್ಕೊಳಗಾದವರಿಗೆ ಬಹುಮಾನ ನೀಡಲಾಗುತ್ತಿದ್ದು, ಒಟ್ಟು 22,306 ವಾಂಟೆಡ್ ಅಪರಾಧಿಗಳನ್ನು ಜೈಲಿಗೆ ಕಳುಹಿಸಲಾಗಿದೆ.
- ಗ್ಯಾಂಗ್‌ಸ್ಟರ್ಸ್ ಕಾಯ್ದೆಯಡಿ 85,118 ತಪ್ಪಿತಸ್ಥರ ವಿರುದ್ಧ ವಿಚಾರಣೆ ಆರಂಭಿಸಲಾಗಿದ್ದು, ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ (ಎನ್‌ಎಸ್‌ಎ) 977 ತಪ್ಪಿತಸ್ಥರನ್ನು ಬಂಧಿಸಲಾಗಿದೆ.
- ಗ್ಯಾಂಗ್‌ಸ್ಟರ್ಸ್ ಕಾಯ್ದೆಯಡಿ ಮಾರ್ಚ್ 2017 ರಿಂದ ಡಿಸೆಂಬರ್ 2025ರ ನಡುವೆ ರೂ.14,580 ಕೋಟಿಗೂ ಅಧಿಕ ಮೌಲ್ಯದ ಅಕ್ರಮ ಚರ ಮತ್ತು ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.
- ರಾಜ್ಯ ಪ್ರತಿ ಪೊಲೀಸ್ ಠಾಣೆಯಲ್ಲಿ ಮಿಷನ್ ಶಕ್ತಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಮತ್ತು ಅವುಗಳ ಪರಿಣಾಮಕಾರಿ ಕಾರ್ಯನಿರ್ವಹಣೆಗಾಗಿ 40,000 ಪೊಲೀಸ್ ಸಿಬ್ಬಂದಿಗೆ ತರಬೇತಿ ನೀಡಲಾಗಿದೆ.
- ಮಿಷನ್ ಶಕ್ತಿ ಕೇಂದ್ರಗಳ ಸ್ಥಾಪನೆ ಬಳಿಕ ಸೆಪ್ಟೆಂಬರ್ ಮತ್ತು ಡಿಸೆಂಬರ್ 2025ರ ನಡುವೆ ಮಹಿಳಾ ಮತ್ತು ಮಕ್ಕಳ ಮೇಲಿನ ಅಪರಾಧಗಳು ಇಳಿಮುಖವಾಗಿವೆ.
- ITSSO ಪೋರ್ಟಲ್ ಪ್ರಕಾರ, ಮಹಿಳಾ ಮತ್ತು ಮಕ್ಕಳ ಮೇಲಿನ ಅಪರಾಧಗಳ ವಿಲೇವಾರಿಯಲ್ಲಿ ಉತ್ತರ ಪ್ರದೇಶವು ದೇಶದಲ್ಲೇ ಮೊದಲ ಸ್ಥಾನದಲ್ಲಿದ್ದು, ಶೇ.98.90ರಷ್ಟು ವಿಲೇವಾರಿ ದರ ಸಾಧಿಸಿದೆ.
- ಮಹಿಳಾ ಶಕ್ತಿ ವಾಣಿ 1090, ಸರ್ಕಾರಿ ರೈಲ್ವೆ ಪೊಲೀಸ್ (GRP), ಅಗ್ನಿಶಾಮಕ ಸೇವೆಗಳು ಮತ್ತು ಮಹಿಳಾ ಸಹಾಯವಾಣಿ 181ನ್ನು ಸಂಯೋಜಿಸುವ ಮೂಲಕ ಮತ್ತಷ್ಟು ಪರಿಣಾಮಕಾರಿಯ ತುರ್ತು ಸ್ಪಂದನೆ ಮತ್ತು ನೆರವಿನ ವ್ಯವಸ್ಥೆಯನ್ನು ಒದಗಿಸಲಾಗಿದೆ.
- ಮಹಿಳಾ ಸುರಕ್ಷತೆ ಮತ್ತು ಸಬಲೀಕರಣವನ್ನು ಉತ್ತೇಜಿಸಲು ಮಿಷನ್ ಶಕ್ತಿ 5.0, ಆಪರೇಷನ್ ಗರುಡ, ಆಪರೇಷನ್ ಶೀಲ್ಡ್, ಆಪರೇಷನ್ ಡೆಸ್ಟ್ರಾಯ್, ಆಪರೇಷನ್ ಬಚ್ಚನ್, ಆಪರೇಷನ್ ಖೋಜ್, ಆಪರೇಷನ್ ಡಯಲ್ ಮತ್ತು ಆಪರೇಷನ್ ರಕ್ಷಾ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.
- ವಾಮ ಸಾರಥಿ ಮೂಲಕ ಸುಲಭವಾಗಿ ಲಭ್ಯವಿರುವ ಆರೋಗ್ಯ ಸೇವೆಗಳನ್ನು ಒದಗಿಸಿದ್ದು, 37,990ಕ್ಕೂ ಅಧಿಕ ಪೊಲೀಸ್ ಕುಟುಂಬಗಳಿಗೆ ಇದರ ಪ್ರಯೋಜನ ದೊರೆಯುತ್ತಿದೆ.
- ಗಾಜಿಯಾಬಾದ್, ಅಯೋಧ್ಯೆ ಮತ್ತು ಲಕ್ನೋದಲ್ಲಿ ಘಟಕಗಳ ಸ್ಥಾಪನೆಯೊಂದಿಗೆ ಭಯೋತ್ಪಾದನಾ ನಿಗ್ರಹ ದಳದ (ATS) ಮೂಲಸೌಕರ್ಯವನ್ನು ಬಲಪಡಿಸಲಾಗಿದೆ. 18 ಫೀಲ್ಡ್ ಯುನಿಟ್‌ಗಳು ಮತ್ತು 11 ಕಾರ್ಯಾಚರಣಾ ತಂಡಗಳ ನೆರವಿನೊಂದಿಗೆ, 2025ರಲ್ಲಿ ಸಂಭಾಲ್‌ನಲ್ಲಿ ಹೊಸ ಫೀಲ್ಡ್ ಯುನಿಟ್ ಸ್ಥಾಪಿಸಲಾಯಿತು.
- 2017ರಲ್ಲಿ 4 ಇದ್ದ ವಿಧಿವಿಜ್ಞಾನ ಪ್ರಯೋಗಾಲಯಗಳ ಸಂಖ್ಯೆ ಈಗ 12ಕ್ಕೇರಿದೆ. ಪ್ರತಿ ವಿಭಾಗದಲ್ಲೂ ಒಂದನ್ನು ಸ್ಥಾಪಿಸುವ ಗುರಿಯೊಂದಿಗೆ 6 ಹೆಚ್ಚುವರಿ ಪ್ರಯೋಗಾಲಯಗಳನ್ನು ಸ್ಥಾಪಿಸುವ ಕಾರ್ಯ ಪ್ರಗತಿಯಲ್ಲಿದೆ.
- ಲಕ್ನೋದಲ್ಲಿ ಉತ್ತರ ಪ್ರದೇಶ ರಾಜ್ಯ ವಿಧಿವಿಜ್ಞಾನ ಸಂಸ್ಥೆ ಸ್ಥಾಪಿಸಲಾಗಿದೆ.
- ಭ್ರಷ್ಟಾಚಾರ ವಿರೋಧಿ ಸಂಸ್ಥೆ (ACO) 8 ಹೊಸ ಪ್ರಾದೇಶಿಕ ಘಟಕಗಳನ್ನು ಸ್ಥಾಪಿಸಲಾಗಿದೆ ಮತ್ತು 2022 ರಿಂದ 999 ಯಶಸ್ವಿ ಟ್ರ್ಯಾಪ್ ಪ್ರಕರಣಗಳನ್ನು ದಾಖಲಿಸಲಾಗಿದೆ. ರೂ.1.26 ಕೋಟಿಗೂ ಹೆಚ್ಚಿನ ಹಣ ವಶಪಡಿಸಿಕೊಳ್ಳಲಾಗಿದೆ ಮತ್ತು 2,081 ಅಧಿಕಾರಿಗಳು ಮತ್ತು ಉದ್ಯೋಗಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ.
- ಆಪರೇಷನ್ ತ್ರಿನೇತ್ರದಡಿ 12,61,495 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಕೊಲೆ ಮತ್ತು ದರೋಡೆ ಹಾಗೂ ಅಪಹರಣ ಮತ್ತು ಸರಗಳ್ಳತನ ಸೇರಿದಂತೆ 9,864 ಗಂಭೀರ ಅಪರಾಧ ಪ್ರಕರಣಗಳನ್ನು ಪರಿಹರಿಸಲಾಗಿದೆ.
- ಯಕ್ಷ ಆ್ಯಪ್ ಆರಂಭಿಸಿದ್ದು, ಇದು ಡಿಜಿಟಲ್ ಬೀಟ್ ಬುಕ್ ಆಗಿ ಕಾರ್ಯನಿರ್ವಹಿಸಲು ಸುಧಾರಿತ AI ಮತ್ತು ಡೇಟಾ ವಿಶ್ಲೇಷಣೆಯನ್ನು ಹತೋಟಿಯಲ್ಲಿಡುತ್ತದೆ.
- ಪ್ರಹೇರಿ ಬೀಟ್ ಪೊಲೀಸಿಂಗ್ ಆ್ಯಪ್ ಅನ್ನು CCTNSನೊಂದಿಗೆ ಸಂಯೋಜಿಸಲಾಗಿದೆ. ಆದರೆ UPCOP ಆ್ಯಪ್, ಆನ್‌ಲೈನ್ FIR ನೋಂದಣಿ ಸೇರಿದಂತೆ 27 ಸೇವೆಗಳನ್ನು ಒದಗಿಸುತ್ತದೆ.

READER ENGAGEMENT INITIATIVE

ಕರ್ನಾಟಕ ಗೃಹ ಮಂಡಳಿ

3, 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009.

Karnataka Housing Board

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಪ.ಪ್ರ/100/2026-27 ದಿನಾಂಕ: 30-06-2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ರಾಜ್ಯದ ವಿವಿಧ ಬಡಾವಣೆಗಳಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ: 26-05-2026ರಂದು ವಿವಿಧ ದಿನಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆ ನೀಡಿದ್ದು, ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30-06-2026 ಆಗಿರುತ್ತದೆ. ಸಾರ್ವಜನಿಕರ ಹಿತದೃಷ್ಟಿಯಿಂದ **ನೋಂದಣಿ ಶುಲ್ಕ ಮತ್ತು ಆರಂಭಿಕ ಠೇವಣಿ ಮೊತ್ತದೊಂದಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15-07-2026 ರವರೆಗೆ ಕಾಲಾವಕಾಶ ವಿಸ್ತರಿಸಲಾಗಿರುತ್ತದೆ.** ಉಳಿದಂತೆ ದಿನಾಂಕ: 26-05-2026ರ ಪ್ರಕಟಣೆಯಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/-
ಗೃಹ ಆಯುಕ್ತರು,
ಕರ್ನಾಟಕ ಗೃಹ ಮಂಡಳಿ,
ಬೆಂಗಳೂರು

ವಾಸಾಸಂಇ/ವಾಪ್ರ/1407/ಎಂಎಎ/2026-27

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

KEA

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 012. ದೂರವಾಣಿ: 080-23 460 460 (5 ಲೈನ್ಸ್), ಇ-ಮೇಲ್: keauthority-ka@nic.in ವೆಬ್‌ಸೈಟ್: https://cetonline.karnataka.gov.in/kea

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್-04/2026 ದಿನಾಂಕ: 29-06-2026

ಪ್ರಕಟಣೆ – ಸಿಇಟಿ-2026 ರ ಅಭ್ಯರ್ಥಿಗಳ ಗಮನಕ್ಕೆ

2026 ನೇ ಸಾಲಿನ ವಿವಿಧ ವೃತ್ತಿಪರ ಕೋರ್ಸುಗಳ ಕಾಲೇಜುವಾರು, ಕೋರ್ಸುವಾರು, ಪ್ರವರ್ಗವಾರು ಸೀಟ್ ಮ್ಯಾಟ್ರಿಕ್ಸ್ ಅನ್ನು ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗಿದ್ದು, ಒಟ್ಟು ಸೀಟುಗಳ ಸಂಖ್ಯೆಯನ್ನು ಈ ಕೆಳಗೆ ನೀಡಲಾಗಿದೆ.

ಕೋರ್ಸುಗಳು	ಇಂಜಿನಿಯರಿಂಗ್	ವೆಟರಿನರಿ	ಕೃಷಿ ವಿಜ್ಞಾನ ಕೋರ್ಸುಗಳು	ಬಿ.ಪಿ.ಟಿ	ಬಿ.ಎಸ್.ಸಿ ನರ್ಸಿಂಗ್	ಬಿ.ಪಿ.ಓ & ಅಲೈಡ್ ಹೆಲ್ತ್ ಸೈನ್ಸ್
ಒಟ್ಟು ಸೀಟುಗಳು	81,044	366	3,915	2,062	35,362	7,404

ಈ ಮೇಲ್ಕಂಡ ಕೋರ್ಸುಗಳ ಆದ್ಯತಾ ಕ್ರಮದಲ್ಲಿ **Options** ಗಳನ್ನು ದಾಖಲಿಸಲು ದಿನಾಂಕ: **20-06-2026 ರಿಂದ** ಪ್ರಾರಂಭಿಸಲಾಗಿದೆ ಮತ್ತು ಮೊದಲನೇ ಸುತ್ತಿನ ಸೀಟು ಹಂಚಿಕೆಯ ವೇಳಾಪಟ್ಟಿಯನ್ನು ಪ್ರಚುರಪಡಿಸಲಾಗಿದೆ. ಅಣುಕು ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರ ಅಭ್ಯರ್ಥಿಗಳು ನಿಗದಿತ ದಿನಾಂಕದೊಳಗೆ **Options** ಗಳನ್ನು ಹೊಸದಾಗಿ ಸೇರಿಸಬಹುದು / ಬೇಡವಾದಲ್ಲಿ ತೆಗೆದುಹಾಕಬಹುದು / ಕ್ರಮಾಂಕ ಬದಲಾಯಿಸಿಕೊಳ್ಳಬಹುದು / ಮಾರ್ಪಡಿಸಿಕೊಳ್ಳಬಹುದು.

ಇಲ್ಲಿಯವರೆಗೆ **Options** ಗಳನ್ನು ದಾಖಲಿಸದೇ ಇರುವ ಅರ್ಹ ಅಭ್ಯರ್ಥಿಗಳೂ ಸಹ ಅಣುಕು ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರ ಆಸಕ್ತಿ ಇರುವ ಕೋರ್ಸುಗಳಿಗೆ ಆದ್ಯತಾ ಕ್ರಮದಲ್ಲಿ **Options** ಗಳನ್ನು ದಾಖಲಿಸಿ ಆನ್‌ಲೈನ್ ಸೀಟು ಹಂಚಿಕೆಯಲ್ಲಿ ಭಾಗವಹಿಸಲು ಸೂಚಿಸಿದೆ. (**Options** ಗಳನ್ನು ದಾಖಲಿಸುವ ಕುರಿತು ವಿವರವಾದ ಮಾಹಿತಿಯನ್ನು ಕೆಇಎ ವೆಬ್‌ಸೈಟಿನಿಂದ ಪಡೆಯಬಹುದು)

ಪರಿಶಿಷ್ಟ ಜಾತಿಯ ಅಭ್ಯರ್ಥಿಗಳ ಗಮನಕ್ಕೆ

ಸರ್ಕಾರವು ತನ್ನ ಆದೇಶ ಸಂಖ್ಯೆ. ಸಕಇ 08 ಎಸ್‌ಎಲ್‌ಪಿ 2024 ಬೆಂಗಳೂರು ದಿನಾಂಕ: 25-08-2025 ಹಾಗೂ ಸಿಆಸುಇ 02 ಸೇಹಿಮ 2026 ಬೆಂಗಳೂರು ದಿನಾಂಕ: 27-04-2026 ರ ಅನ್ವಯ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಎಸ್‌ಸಿಎ, ಎಸ್‌ಸಿಬಿ ಮತ್ತು ಎಸ್‌ಸಿಸಿ ಎಂದು ಒಳಮೀಸಲಾತಿ ಕಲ್ಪಿಸಿ ಆದೇಶಿಸಿರುತ್ತದೆ. ಅರ್ಜಿ ಸಲ್ಲಿಸುವಾಗ **SC** ಪ್ರಮಾಣ ಪತ್ರದ **RD** ಸಂಖ್ಯೆ ಸಲ್ಲಿಸಿದವರಿಗೆ **SCA, SCB, SCC** ಯ ಹೊಸ ಪ್ರಮಾಣ ಪತ್ರ ಪಡೆದು **RD** ಸಂಖ್ಯೆಯನ್ನು ನಮೂದಿಸಲು ಸಾಕಷ್ಟು ಬಾರಿ ಮನವಿ ಮಾಡಲಾಗಿತ್ತು. ಆದರೂ ಕೆಲವರು ಸಲ್ಲಿಸಿರುವುದಿಲ್ಲ.

ಆದ್ದರಿಂದ ಇಲ್ಲಿಯವರೆಗೆ ಒಳಮೀಸಲಾತಿ ವಿವರಗಳನ್ನು ಹೊಂದಿರುವ ಜಾತಿ ಪ್ರಮಾಣ ಪತ್ರಗಳನ್ನು ಸಲ್ಲಿಸದೇ ಇರುವ ಅಭ್ಯರ್ಥಿಗಳಿಗೆ ಅಂತಿಮ ಅವಕಾಶ ನೀಡಲಾಗಿದ್ದು, ಒಳಮೀಸಲಾತಿ ಮುದ್ರಿತವಾಗಿರುವ ಜಾತಿ ಪ್ರಮಾಣ ಪತ್ರಗಳನ್ನು ಕೂಡಲೇ ಪಡೆದು ದಿನಾಂಕ: **08-07-2026 ರೊಳಗೆ** ಆನ್‌ಲೈನ್ ಮೂಲಕ ಆರ್‌ಡಿ ಸಂಖ್ಯೆ ನಮೂದಿಸಿ, ವೆರಿಫಿಕೇಶನ್ ಸ್ಲಿಪ್ ಡೌನ್‌ಲೋಡ್ ಮಾಡಿ, ಅಣುಕು ಸೀಟು ಹಂಚಿಕೆಯ ಫಲಿತಾಂಶ ಪ್ರಕಟಣೆಯ ನಂತರ ದಿನಾಂಕ: **09-07-2026 ರ ಬೆಳಿಗ್ಗೆ 10.00 ಗಂಟೆಯೊಳಗೆ Options** ಗಳನ್ನು ದಾಖಲಿಸಲು ಸೂಚಿಸಿದೆ.

ಸಹಿ/-
(ಹೆಚ್. ಪ್ರಸನ್ನ, ಭಾ.ಆ.ಸೇ)
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾ.ಪ್ರ/1409/2026-27

ಬೆಂಗಳೂರು ಉತ್ತರ ನಗರ ಪಾಲಿಕೆ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಅಟ್ಟೂರು ಸಸ್ಯಕ್ಷೇತ್ರ,
ಕ್ಲಾರಿಯನ್ ಹೋಟೆಲ್ ಹತ್ತಿರ, ಕೆಂಪನಹಳ್ಳಿ ಮುಖ್ಯರಸ್ತೆ, ಅಟ್ಟೂರು, ಯಲಹಂಕ, ಬೆಂಗಳೂರು

ನಂ.: ಸಅಸಂ(ಬಿಎನ್‌ಸಿಸಿ)/ಕೆಪಿಪಿಪಿ/ಟೆಂಡರ್/14/2026-27 ದಿನಾಂಕ: 30.06.2026

ಅಲ್ಪಾವಧಿ ಮರು ಟೆಂಡರ್ ಅಧಿಸೂಚನೆ

ಎರಡು ಕವರ್ ವ್ಯವಸ್ಥೆ ಟೆಂಡರ್ ಪ್ರಕಟಣೆ
ಕೆಪಿಪಿಪಿ-ಪೋರ್ಟಲ್ ಮೂಲಕ ಮಾತ್ರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿಎನ್‌ಸಿಸಿ, ಇವರು ಬೆಂಗಳೂರು ಉತ್ತರ ನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಗುತ್ತಿಗೆದಾರರಿಂದ ಅಥವಾ ಸಾಮಾನ್ಯ ನೋಂದಣಿ / ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ಅರಣ್ಯ / ರೈಲ್ವೆಗಳು / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಒಂದು ಅಥವಾ ಎಲ್ಲಾ ಕಾಮಗಾರಿಗಳಿಗಾಗಿ ಎರಡು ಕವರ್ ವ್ಯವಸ್ಥೆಗಳ ಕಾಮಗಾರಿಗಳ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ. ಟೆಂಡರ್‌ಗಳು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಕೆಪಿಪಿ ಪೋರ್ಟಲ್ ಮೂಲಕ (https://kppp.karnataka.gov.in) ಕೋಷ್ಟಕದಲ್ಲಿ ನೀಡಲಾದ ಎಲ್ಲಾ ಅಥವಾ ಯಾವುದೇ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಸಲ್ಲಿಸಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು
1	ಬೆಂಗಳೂರು ಉತ್ತರ ನಗರ ಪಾಲಿಕೆ, ಬ್ಯಾಟರಾಯನಪುರ ವಲಯ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. 2000 ಗಿಡಗಳು. (ಬ್ಲಾಕ್-1). **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 40.55, ಇಎಂಡಿ (ರೂ. ಗಳಲ್ಲಿ): 40,550/-, ಮೀಸಲಾತಿ: ಪ.ಜಾ.**
2	ಬೆಂಗಳೂರು ಉತ್ತರ ನಗರ ಪಾಲಿಕೆ, ಬ್ಯಾಟರಾಯನಪುರ ವಲಯ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. 1500 ಗಿಡಗಳು. (ಬ್ಲಾಕ್-2). **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 30.42, ಇಎಂಡಿ (ರೂ. ಗಳಲ್ಲಿ): 30,420/-, ಮೀಸಲಾತಿ: ಪ.ಜಾ.**
3	ಬೆಂಗಳೂರು ಉತ್ತರ ನಗರ ಪಾಲಿಕೆ, ಬ್ಯಾಟರಾಯನಪುರ ವಲಯ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. 1500 ಗಿಡಗಳು. (ಬ್ಲಾಕ್-3). **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 30.42, ಇಎಂಡಿ (ರೂ. ಗಳಲ್ಲಿ): 60,840/-, ಮೀಸಲಾತಿ: ಇತರೆ.**
4	ಬೆಂಗಳೂರು ಉತ್ತರ ನಗರ ಪಾಲಿಕೆ, ಬ್ಯಾಟರಾಯನಪುರ ವಲಯ, ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. 1500 ಗಿಡಗಳು. **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 30.42, ಇಎಂಡಿ (ರೂ.ಗಳಲ್ಲಿ): 60,840/-, ಮೀಸಲಾತಿ: ಇತರೆ.**
5	ಬೆಂಗಳೂರು ಉತ್ತರ ನಗರ ಪಾಲಿಕೆ, ಬ್ಯಾಟರಾಯನಪುರ ವಲಯ, ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. 1500 ಗಿಡಗಳು. **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 30.42, ಇಎಂಡಿ (ರೂ.ಗಳಲ್ಲಿ): 60,840/-, ಮೀಸಲಾತಿ: ಇತರೆ.**
6	ಬೆಂಗಳೂರು ಉತ್ತರ ನಗರ ಪಾಲಿಕೆ, ಯಲಹಂಕ ವಲಯ, ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. 2000 ಗಿಡಗಳು. ಬ್ಲಾಕ್-1 **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 40.55, ಇಎಂಡಿ (ರೂ.ಗಳಲ್ಲಿ): 81,100/-, ಮೀಸಲಾತಿ: ಪ್ರವರ್ಗ-2ಎ.**
7	ಬೆಂಗಳೂರು ಉತ್ತರ ನಗರ ಪಾಲಿಕೆ, ಯಲಹಂಕ ವಲಯ, ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. 1500 ಗಿಡಗಳು. (ಬ್ಲಾಕ್-2). **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 30.42, ಇಎಂಡಿ (ರೂ.ಗಳಲ್ಲಿ): 30,420/-, ಮೀಸಲಾತಿ: ಪ.ಪಂ.**
8	ಬೆಂಗಳೂರು ಉತ್ತರ ನಗರ ಪಾಲಿಕೆ, ಯಲಹಂಕ ವಲಯ, ಯಲಹಂಕ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. 1500 ಗಿಡಗಳು. (ಬ್ಲಾಕ್-3). **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 30.42, ಇಎಂಡಿ (ರೂ.ಗಳಲ್ಲಿ): 60,840/-, ಮೀಸಲಾತಿ: ಪ್ರವರ್ಗ-2ಎ.**
9	ಬೆಂಗಳೂರು ಉತ್ತರ ನಗರ ಪಾಲಿಕೆ, ಯಲಹಂಕ ವಲಯ, ಹೆಬ್ಬಾಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. 2000 ಗಿಡಗಳು. **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 40.55, ಇಎಂಡಿ (ರೂ.ಗಳಲ್ಲಿ): 81,100/-, ಮೀಸಲಾತಿ: ಇತರೆ.**
10	ಬೆಂಗಳೂರು ಉತ್ತರ ನಗರ ಪಾಲಿಕೆ, ಯಲಹಂಕ ವಲಯ, ಆರ್.ಆರ್. ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. ಬ್ಲಾಕ್-1 2000 ಗಿಡಗಳು. **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 40.55, ಇಎಂಡಿ (ರೂ.ಗಳಲ್ಲಿ): 81,100/-, ಮೀಸಲಾತಿ: ಇತರೆ.**
11	ಬೆಂಗಳೂರು ಉತ್ತರ ನಗರ ಪಾಲಿಕೆ, ಯಲಹಂಕ ವಲಯ, ಆರ್.ಆರ್. ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. ಬ್ಲಾಕ್-2 2000 ಗಿಡಗಳು. **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 40.55, ಇಎಂಡಿ (ರೂ.ಗಳಲ್ಲಿ): 40,550/-, ಮೀಸಲಾತಿ: ಪ.ಜಾ.**
12	ಬೆಂಗಳೂರು ಉತ್ತರ ನಗರ ಪಾಲಿಕೆ, ಯಲಹಂಕ ವಲಯ, ಆರ್.ಆರ್. ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. ಬ್ಲಾಕ್-3 2000 ಗಿಡಗಳು. **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 40.55, ಇಎಂಡಿ (ರೂ.ಗಳಲ್ಲಿ): 81,100/-, ಮೀಸಲಾತಿ: ಇತರೆ.**
13	ಬೆಂಗಳೂರು ಉತ್ತರ ನಗರ ಪಾಲಿಕೆ, ಯಲಹಂಕ ವಲಯ, ಆರ್.ಆರ್. ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. ಬ್ಲಾಕ್-4 2000 ಗಿಡಗಳು. **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 40.55, ಇಎಂಡಿ (ರೂ.ಗಳಲ್ಲಿ): 81,100/-, ಮೀಸಲಾತಿ: ಇತರೆ.**
14	ಬೆಂಗಳೂರು ಉತ್ತರ ನಗರ ಪಾಲಿಕೆ, ಯಲಹಂಕ ವಲಯ, ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 2026-27ನೇ ಸಾಲಿನ ಮುಂಗಾರು ಸಸ್ಯಕ್ಷೇತ್ರ ನಿರ್ಮಾಣ ಮತ್ತು ನಿರ್ವಹಣೆ ಹಾಗೂ 2027-28 ಮತ್ತು 2028-29ನೇ ಸಾಲಿನ ನಿರ್ವಹಣಾ ಕಾಮಗಾರಿ. 2000 ಗಿಡಗಳು. **ಟೆಂಡರ್ ವೆಚ್ಚ (ರೂ. ಲಕ್ಷಗಳಲ್ಲಿ): 40.55, ಇಎಂಡಿ (ರೂ.ಗಳಲ್ಲಿ): 81,100/-, ಮೀಸಲಾತಿ: ಇತರೆ.**

ಟೈಮ್ ಷೆಡ್ಯೂಲ್: (1) ಟೆಂಡರ್ ದಾಖಲಾತಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **01.07.2026 ಸಂಜೆ 4:00 ನಂತರ.** (2) ಟೆಂಡರ್ ಸಂಬಂಧ ಆನ್‌ಲೈನ್ ದೂರುಗಳಿದ್ದಲ್ಲಿ ನೀಡಲು ಕೊನೆಯ ದಿನಾಂಕ: **04.07.2026 ಸಂಜೆ 4:30 ವರೆಗೆ.** (3) ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: **06.07.2026 ಸಂಜೆ 4:00 ಗಂಟೆಗೆ ಸ್ಥಳ: ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಅಟ್ಟೂರು ಸಸ್ಯಕ್ಷೇತ್ರ, ಕ್ಲಾರಿಯನ್ ಹೋಟೆಲ್ ಹತ್ತಿರ, ಕೆಂಪನಹಳ್ಳಿ ಮುಖ್ಯರಸ್ತೆ, ಅಟ್ಟೂರು, ಯಲಹಂಕ, ಬೆಂಗಳೂರು. e-mail: acfbncc@gmail.com.** (4) ಟೆಂಡರ್ ಸ್ವೀಕರಿಸಲು ನಿಗದಿಪಡಿಸಲಾದ ದಿನಾಂಕ: **10.07.2026 ಸಂಜೆ 5:30 ಗಂಟೆವರೆಗೆ.** (5) ಟೆಂಡರ್ ತೆರೆಯುವ ದಿನಾಂಕ: **13.07.2026 ಮಧ್ಯಾಹ್ನ 3:00 ಗಂಟೆಗೆ.** (6) ಸಂಪರ್ಕಿಸಬಹುದಾದದ ಕಛೇರಿ ವಿಳಾಸ: **ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳವರ ಕಛೇರಿ, ಅಟ್ಟೂರು ಸಸ್ಯಕ್ಷೇತ್ರ, ಕ್ಲಾರಿಯನ್ ಹೋಟೆಲ್ ಹತ್ತಿರ, ಕೆಂಪನಹಳ್ಳಿ ಮುಖ್ಯರಸ್ತೆ, ಅಟ್ಟೂರು, ಯಲಹಂಕ, ಬೆಂಗಳೂರು.**

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು ಉತ್ತರ ನಗರ ಪಾಲಿಕೆ

CHIKKABALLAPURA DISTRICT CO-OPERATIVE MILK PRODUCER'S SOCIETIES UNION LIMITED., CHIKKABALLAPURA

Admns off: Yaluvahalli,Nandi Cross,Doddamarali Post,NH-44,Chikkaballapura-562 103
GST:: 29AAFAC7468L2Z1 Email ID:chimulpurchase@gmail.com

IFT No.CHIMUL/PUR/E-PROCUREMENT/1230/2026-27 Date:30.06.2026

E-PROCUREMENT SHORT TERM TENDER NOTIFICATION

The Chikkaballapura Milk Union Limited, Chikkaballapura invites tenders from eligible Tenderers for the supply of the following materials.

Sl. No.	Description of Material	Qty In No's
01	**Design Supply, Installation & Commissioning of on-grid 10 kw & 12 kw capacity solar PV systems at Chikkaballapura Taluk DCS of CHIMUL**	**02No's**

Access to E-tender Documents : 01.07.2026 to 07.07.2026 5.30 PM
Last date for submission : on or before 07.07.2026 5.30 PM
Date of opening of Tech. Tender : 09.07.2026, 11.00 AM onwards
Tender documents may be downloaded from e-procurement website https://kppp.karnataka.gov.in/.

Sd/- **Managing Director**
Chikkaballapura Milk Union Ltd., Chikkaballapura

ಬೆಂಗಳೂರು ಪಶ್ಚಿಮ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ವಿಶೇಷ ವಿಭಾಗ, ವಲಯ-2,
2ನೇ ಮಹಡಿ, 19ನೇ ಮುಖ್ಯರಸ್ತೆ, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010.

ಸಂಖ್ಯೆ: ಕಾಅ/ವಿವಿ/ಟೆಂಡರ್/10/2026-27 ದಿನಾಂಕ: 30-06-2026

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)

(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ವಿಶೇಷ ವಿಭಾಗ, ವಲಯ-2, ಬೆಂಪನಪಾ, ಬೆಂಗಳೂರು ಇವರು ಈ ಕೆಳಕಂಡ ಸೇವೆಗಾಗಿ ಹೆಸರಾಂತ ಸೇವಾ ಪೂರೈಕೆದಾರರಿಂದ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕೆಲಸದ ಹೆಸರು
1	ಬೆಂಗಳೂರು ಪಶ್ಚಿಮ ನಗರ ಪಾಲಿಕೆಗೆ ಪದವೀಧರ / ಡಿಪ್ಲೊಮಾ ಇಂಜಿನಿಯರ್‌ಗಳನ್ನು ಒದಗಿಸುವುದು / ಹೊರಗುತ್ತಿಗೆ ನೀಡುವುದು. **ಅಂದಾಜು ಮೊತ್ತ (ರೂ. ಗಳಲ್ಲಿ): 2,78,51,505/- (ಸೇವಾ ಶುಲ್ಕ ಸೇರಿದಂತೆ), ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 4,40,000/-**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **01-07-2026 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ: **04-07-2026 ರಂದು ಮಧ್ಯಾಹ್ನ 3.00 ಗಂಟೆಗೆ.** 3) ಟೆಂಡರ್‌ಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ಸಮಯ: **10-07-2026 ರಂದು ಸಂಜೆ 4.00 ಗಂಟೆವರೆಗೆ.** 4) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **13-07-2026 ರಂದು ಸಂಜೆ 4.30 ಗಂಟೆಗೆ.** 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **14-07-2026 ರಂದು ಸಂಜೆ 4.30 ಗಂಟೆಗೆ** (ಸಾಧ್ಯವಾದಲ್ಲಿ). ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ವಿಶೇಷ ವಿಭಾಗ, ವಲಯ-2, ಬೆಂಪನಪಾ.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸಿ.ಎ ನಿವೇಶನ ಖಾತ ಸಂಖ್ಯೆ: 31-511-371, ವಾರ್ಡ್ ನಂ-20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ,
ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110

ಸಂ.: ಬಿಐಎಎಪಿಎ/ಟಿಪಿ/ಭೂಉಬ/137/2025-26/2026-27/1003 ದಿನಾಂಕ: 30.06.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ-ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎ. ಸುನೀಲ್ ಬಿನ್ ಎನ್.ಆಂಜಿನಪ್ಪ	ದೇವನಹಳ್ಳಿ	ವಿಜಯಪುರ	ಬುಳ್ಳಹಳ್ಳಿ	6/2	2-15	ವ್ಯವಸಾಯ	ವಸತಿ
2	ಶ್ರೀ ಎನ್. ಹನುಮಪ್ಪ-ಮುನಿನಾರಾಯಣಪ್ಪ				6/3	2-36		

ಷರಾ :- ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲ, ಹಾಗೂ ಪ್ರಶ್ನಿತ ಜಮೀನುಗಳ ಪರಿಸರದಲ್ಲಿ ಈಗಾಗಲೇ ವಸತಿ ಉದ್ದೇಶದ ಅಭಿವೃದ್ಧಿಗಳು ಬಂದಿರುವುದರಿಂದ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಉದ್ದೇಶಿತ ಜಮೀನುಗಳಲ್ಲಿ ಯೋಜಿತ ಬೆಳವಣಿಗೆಯ ಅಭಿವೃದ್ಧಿಯನ್ನು ಅಭಿವೃದ್ಧಿಪಡಿಸುವುದರಿಂದ ಸುತ್ತಮುತ್ತಲ ಗ್ರಾಮಸ್ಥರಿಗೆ ಉದ್ಯೋಗಾವಕಾಶ ಕಲ್ಪಿಸಿದಂತಾಗುವುದು. ಸದರಿ ಜಮೀನುಗಳು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ಸದರಿ ಜಮೀನುಗಳನ್ನು ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಯೋಜನಾಬದ್ಧವಾಗಿ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು ಅಭಿವೃದ್ಧಿಪಡಿಸುವುದರಿಂದ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-,
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾಸಾಸಂಇ/ವಾಪ್ರ/ಎಲ್‌ಸಿ/1414/2026-27

K-tech | STARTUP KARNATAKA

ಮಾನವ ಸಂಪನ್ಮೂಲದ ನೇಮಕಾತಿ (HIRING OF MANPOWER RESOURCES)

ಕರ್ನಾಟಕ ಸರ್ಕಾರದ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಅಧೀನದಲ್ಲಿರುವ **ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (KITS)**, ರಾಜ್ಯದಲ್ಲಿ ಇಲಾಖೆಯ ನೀತಿಗಳನ್ನು ಅನುಷ್ಠಾನಗೊಳಿಸುವ ಮತ್ತು ನಾವೀನ್ಯತೆ ಹಾಗೂ ತಂತ್ರಜ್ಞಾನ ಉಪಕ್ರಮಗಳನ್ನು ಮುನ್ನಡೆಸುವ ನೋಡಲ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತದೆ.

I. ಸ್ಥಳೀಯ ಆರ್ಥಿಕ ವೇಗವರ್ಧಕ ಕಾರ್ಯಕ್ರಮ (LEAP)

ಸ್ಥಳೀಯ ಆರ್ಥಿಕತೆ ವೇಗವರ್ಧಕ ಕಾರ್ಯಕ್ರಮ (Local Economy Accelerator Program-LEAP) ಎಂಬುದು ಕರ್ನಾಟಕ ಸರ್ಕಾರವು ಪ್ರಾದೇಶಿಕ ಉದ್ಯಮಶೀಲತೆಯನ್ನು ಉತ್ತೇಜಿಸಲು, ನಾವೀನ್ಯತೆಯನ್ನು ವಿಕೇಂದ್ರೀಕರಿಸಲು ಮತ್ತು ರಾಜ್ಯದ ಉದಯೋನ್ಮುಖ ತಂತ್ರಜ್ಞಾನ ಕ್ಲಸ್ಟರ್‌ಗಳಲ್ಲಿ ಬೆಳವಣಿಗೆಯನ್ನು ವರ್ಧಿಸಲು ಪ್ರಾರಂಭಿಸಿರುವ ರೂ. 1,000 ಕೋಟಿ ವೆಚ್ಚದ 5 ವರ್ಷಗಳ ಯೋಜನೆಯಾಗಿದೆ. **LEAP ಕಾರ್ಯಕ್ರಮದಡಿಯಲ್ಲಿ ಈ ಕೆಳಗಿನ ಗುತ್ತಿಗೆ ಹುದ್ದೆಗಳಿಗೆ (ಗರಿಷ್ಠ 11 ಮಾಸಗಳ ಅವಧಿಗೆ) ಅರ್ಜಿಗಳನ್ನು ಆಹ್ವಾನಿಸುತ್ತಿದೆ:**

ಕ್ರ. ಸಂ.	ಹುದ್ದೆ / ಹುದ್ದೆಗಳ ಸಂಖ್ಯೆ / ವೇತನ ಮತ್ತು ವಯೋಮಿತಿ	ವಿದ್ಯಾರ್ಹತೆ ಮತ್ತು ಅನುಭವ
1	**ಯೋಜನಾ ವ್ಯವಸ್ಥಾಪಕರು** ಹುದ್ದೆಗಳ ಸಂಖ್ಯೆ: 1 ಮಾಸಿಕ ವೇತನ: ರೂ. 80,000/- (ಕ್ರೋಢೀಕರಿಸಿದ) ಗರಿಷ್ಠ ವಯೋಮಿತಿ: 40 ವರ್ಷಗಳು	• ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಬಿಸಿನೆಸ್ ಮ್ಯಾನೇಜ್‌ಮೆಂಟ್, ಪಬ್ಲಿಕ್ ಪಾಲಿಸಿ, ಫೈನಾನ್ಸ್ ಅಥವಾ ಸಂಬಂಧಿತ ಕ್ಷೇತ್ರದಲ್ಲಿ ಸ್ನಾತಕೋತ್ತರ ಪದವಿ (MBA/PGDM) ಅಥವಾ ತತ್ಸಮಾನ ವಿದ್ಯಾರ್ಹತೆ. • ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್, ಇನ್ಕ್ಯುಬೇಶನ್/ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆ ಅಭಿವೃದ್ಧಿ ಅಥವಾ ವೆಂಚರ್ ಕ್ಯಾಪಿಟಲ್‌ನಲ್ಲಿ ವಿದ್ಯಾರ್ಹತೆಯ ನಂತರ ಕನಿಷ್ಠ **5 ವರ್ಷಗಳ** ಅನುಭವ ಕಡ್ಡಾಯ. • ಸರ್ಕಾರಿ ಯೋಜನೆಗಳೊಂದಿಗೆ ಕೆಲಸ ಮಾಡಿದ ಅನುಭವ ಮತ್ತು ಬಲವಾದ ನಾಯಕತ್ವದ ಕೌಶಲ್ಯ ಹೊಂದಿರಬೇಕು. • ಕನ್ನಡ ಭಾಷೆಯಲ್ಲಿ ಓದುವ ಮತ್ತು ಬರೆಯುವ ಸಾಮರ್ಥ್ಯ ಹೊಂದಿರಬೇಕು.
2	**ಸಹಾಯಕ ವ್ಯವಸ್ಥಾಪಕರು** ಹುದ್ದೆಗಳ ಸಂಖ್ಯೆ: 1 ಮಾಸಿಕ ವೇತನ: ರೂ. 45,000/- (ಕ್ರೋಢೀಕರಿಸಿದ) ಗರಿಷ್ಠ ವಯೋಮಿತಿ: 35 ವರ್ಷಗಳು	• ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಸಂಬಂಧಿತ ಕ್ಷೇತ್ರದಲ್ಲಿ ಸ್ನಾತಕೋತ್ತರ ಪದವಿ (MBA/PGDM) ಅಥವಾ ತತ್ಸಮಾನ ವಿದ್ಯಾರ್ಹತೆ ಅಥವಾ ಪದವಿ (B.E/B.Tech, BBA, B. Com, BA, ಇತ್ಯಾದಿ). • ಪ್ರೋಗ್ರಾಂ ಕೋ-ಆರ್ಡಿನೇಷನ್ (ಕಾರ್ಯಕ್ರಮ ಸಮನ್ವಯ), ಡೇಟಾ ವಿಶ್ಲೇಷಣೆ ಅಥವಾ ಸಂಬಂಧಿತ ಕ್ಷೇತ್ರದಲ್ಲಿ ವಿದ್ಯಾರ್ಹತೆಯ ನಂತರ ಕನಿಷ್ಠ **3 ವರ್ಷಗಳ** ಅನುಭವ. • ತಂತ್ರಜ್ಞಾನ ಅಥವಾ ಸ್ಟಾರ್ಟ್‌ಅಪ್ ವಲಯದಲ್ಲಿ ಅಥವಾ ಸರ್ಕಾರಿ ವಲಯದ ಯೋಜನೆಗಳನ್ನು ನಿರ್ವಹಿಸಿದ ಅನುಭವ, ಅತ್ಯುತ್ತಮ ಸಂವಹನ ಕೌಶಲ್ಯ ಮತ್ತು MS Office ಪ್ರಾವೀಣ್ಯತೆ ಹೊಂದಿರಬೇಕು. • ಕನ್ನಡ ಭಾಷೆಯಲ್ಲಿ ಓದುವ ಮತ್ತು ಬರೆಯುವ ಸಾಮರ್ಥ್ಯ ಹೊಂದಿರಬೇಕು.
3	**ಯೋಜನಾ ಅಧಿಕಾರಿ (Program Officer)** ಹುದ್ದೆಗಳ ಸಂಖ್ಯೆ: 1 ಮಾಸಿಕ ವೇತನ: ರೂ. 40,000/- (ಕ್ರೋಢೀಕರಿಸಿದ) ಗರಿಷ್ಠ ವಯೋಮಿತಿ: 35 ವರ್ಷಗಳು	• ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ (B.E/B.Tech, BBA, B. Com, BA, ಇತ್ಯಾದಿ). • ಸಮನ್ವಯ (Coordination) ಅಥವಾ ಆಡಳಿತಾತ್ಮಕ ಪಾತ್ರದಲ್ಲಿ ವಿದ್ಯಾರ್ಹತೆಯ ನಂತರ ಕನಿಷ್ಠ **2 ವರ್ಷಗಳ** ಅನುಭವ. • ಸರ್ಕಾರಿ ಕಾರ್ಯವಿಧಾನಗಳ ಪರಿಚಯ, ಬಲವಾದ ಸಾಂಸ್ಥಿಕ ಕೌಶಲ್ಯ ಮತ್ತು ವ್ಯಾಪಕವಾಗಿ ಪ್ರಯಾಣಿಸುವ ಇಚ್ಛೆ ಹೊಂದಿರಬೇಕು. • ಕನ್ನಡ ಭಾಷೆಯಲ್ಲಿ ಓದುವ ಮತ್ತು ಬರೆಯುವ ಸಾಮರ್ಥ್ಯ ಹೊಂದಿರಬೇಕು.
4	**ಯೋಜನಾ ನಿರ್ವಾಹಕರು – ಐಟಿ (IT)** ಹುದ್ದೆಗಳ ಸಂಖ್ಯೆ: 1 ಮಾಸಿಕ ವೇತನ: ರೂ. 45,000/- (ಕ್ರೋಢೀಕರಿಸಿದ) ಗರಿಷ್ಠ ವಯೋಮಿತಿ: 35 ವರ್ಷಗಳು	• ಕಂಪ್ಯೂಟರ್ ಸೈನ್ಸ್, ಇನ್‌ಫರ್ಮೇಷನ್ ಟೆಕ್ನಾಲಜಿ (M.Tech, MCA, B.E/B.Tech/BCA) ಅಥವಾ ಸಂಬಂಧಿತ ಕ್ಷೇತ್ರದಲ್ಲಿ ಸ್ನಾತಕೋತ್ತರ/ಪದವಿ. • ಕನಿಷ್ಠ **4 ವರ್ಷಗಳ** ಅನುಭವ ಹಾಗೂ ಸರ್ಕಾರಿ ಸಂಸ್ಥೆಯಲ್ಲಿ ಕನಿಷ್ಠ 1 ವರ್ಷದ ಅನುಭವ ಅಪೇಕ್ಷಣೀಯ. • DBMS (Mongo DB, AWS, Django ಇತ್ಯಾದಿ) ಜ್ಞಾನ ಹೊಂದಿರಬೇಕು. • WordPress, JavaScript, Type Script, Python, React, PHP, CSS, HTML, Node.js ನಂತಹ ಪ್ಲಾಟ್‌ಫಾರ್ಮ್‌ಗಳ ಜ್ಞಾನ ಹೊಂದಿರಬೇಕು. • ಇ-ಟೆಂಡರ್ (E-tender) ಮತ್ತು ಪ್ರಸ್ತಾವನೆಗಳ ಕರೆಗಳ (call for proposals) ಬಗ್ಗೆ ಜ್ಞಾನ ಹೊಂದಿರಬೇಕು.
5	**ಯೋಜನಾ ನಿರ್ವಾಹಕರು – ಮಾರ್ಕೆಟಿಂಗ್ (Marketing)** ಹುದ್ದೆಗಳ ಸಂಖ್ಯೆ: 1 ಮಾಸಿಕ ವೇತನ: ರೂ. 45,000/- (ಕ್ರೋಢೀಕರಿಸಿದ) ಗರಿಷ್ಠ ವಯೋಮಿತಿ: 35 ವರ್ಷಗಳು	• ಮಾರ್ಕೆಟಿಂಗ್‌ನಲ್ಲಿ ಎಂಬಿಎ (MBA) ಅಥವಾ ಮಾರ್ಕೆಟಿಂಗ್, ಕಮ್ಯುನಿಕೇಷನ್ಸ್ ಅಥವಾ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ನಲ್ಲಿ ಪದವಿ (BBA/BBM). • ಮಾರ್ಕೆಟಿಂಗ್, ಕಮ್ಯುನಿಕೇಷನ್ಸ್ ಅಥವಾ ಸಾರ್ವಜನಿಕ ಸಂಪರ್ಕದಲ್ಲಿ (PR) ಕನಿಷ್ಠ **3 ವರ್ಷಗಳ** ಅನುಭವ (ಪ್ರೋಗ್ರಾಂ ಅಥವಾ ಈವೆಂಟ್ ಮಾರ್ಕೆಟಿಂಗ್‌ಗೆ ಆದ್ಯತೆ).

II. ಕರ್ನಾಟಕ ಸ್ಟಾರ್ಟ್‌ಅಪ್ ಕೋಶ (Start-up Cell)

ಕರ್ನಾಟಕ ಸ್ಟಾರ್ಟ್‌ಅಪ್ ನೀತಿ 2025-30ರ (Karnataka Start-up Policy 2025-30) ಅಡಿಯಲ್ಲಿ ವಿವಿಧ ಯೋಜನೆಗಳನ್ನು ಬೆಂಬಲಿಸಲು ಮತ್ತು ಸ್ಟಾರ್ಟ್‌ಅಪ್ ಕೋಶಕ್ಕೆ (Start-up Cell) ನೆರವಾಗಲು ಕಿಟ್ಸ್ (KITS) ಈ ಕೆಳಗಿನ ಗುತ್ತಿಗೆ ಹುದ್ದೆಗಳಿಗೆ (ಗರಿಷ್ಠ 11 ಮಾಸಗಳ ಅವಧಿಗೆ) ಅರ್ಜಿಗಳನ್ನು ಆಹ್ವಾನಿಸುತ್ತಿದೆ:

ಕ್ರ. ಸಂ.	ಹುದ್ದೆ / ಹುದ್ದೆಗಳ ಸಂಖ್ಯೆ / ವೇತನ ಮತ್ತು ವಯೋಮಿತಿ	ವಿದ್ಯಾರ್ಹತೆ ಮತ್ತು ಅನುಭವ
1	**ವ್ಯವಸ್ಥಾಪಕರು – ಮಾರ್ಕೆಟಿಂಗ್ ಮತ್ತು ಔಟ್‌ರೀಚ್ (Manager-Marketing & Outreach)** ಹುದ್ದೆಗಳ ಸಂಖ್ಯೆ: 1 ಮಾಸಿಕ ವೇತನ: ರೂ. 80,000/- (ಕ್ರೋಢೀಕರಿಸಿದ) ಗರಿಷ್ಠ ವಯೋಮಿತಿ: 40 ವರ್ಷಗಳು	• ಮಾರ್ಕೆಟಿಂಗ್ ಸ್ಪೆಷಲೈಸೇಶನ್‌ನೊಂದಿಗೆ ಪೂರ್ಣ-ಅವಧಿಯ MBA/PGDM/PGDBA (2 ವರ್ಷಗಳ ಅವಧಿ). • ಸ್ಟಾರ್ಟ್‌ಅಪ್ ಸೆಲ್ ಕಾರ್ಯಕ್ರಮಗಳಿಗಾಗಿ ಮಾರ್ಕೆಟಿಂಗ್, ಬ್ರ್ಯಾಂಡಿಂಗ್, ಕಮ್ಯುನಿಕೇಷನ್ಸ್ ಅಥವಾ ಔಟ್‌ರೀಚ್ ಪ್ರೋಗ್ರಾಂಗಳಲ್ಲಿ ಕನಿಷ್ಠ **5 ವರ್ಷಗಳ** ವೃತ್ತಿಪರ ಕೆಲಸದ ಅನುಭವ (ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯ ಪರಿಚಯವಿದ್ದವರಿಗೆ ಆದ್ಯತೆ).
2	**ವ್ಯವಸ್ಥಾಪಕರು-ಫಂಡಿಂಗ್, ಪ್ರೋಗ್ರಾಂ/ ಐಟಿ (Manager - Funding & Program/ IT)** ಹುದ್ದೆಗಳ ಸಂಖ್ಯೆ: 1 ಮಾಸಿಕ ವೇತನ: ರೂ. 80,000/- (ಕ್ರೋಢೀಕರಿಸಿದ) ಗರಿಷ್ಠ ವಯೋಮಿತಿ: 40 ವರ್ಷಗಳು	• ಪೂರ್ಣ-ಅವಧಿಯ MBA/PGDBM/PGDBA (2 ವರ್ಷಗಳ ಅವಧಿ). • ಉತ್ತಮ ವಿಶ್ಲೇಷಣಾತ್ಮಕ ಕೌಶಲ್ಯಗಳೊಂದಿಗೆ ಫಂಡಿಂಗ್ ಕಾರ್ಯಕ್ರಮಗಳಲ್ಲಿ ಕನಿಷ್ಠ **5 ವರ್ಷಗಳ** ವೃತ್ತಿಪರ ಕೆಲಸದ ಅನುಭವ, ಡೇಟಾ ನಿರ್ವಹಣೆ (Data handling & Management) ಹಾಗೂ ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯ ಬಲವಾದ ಜ್ಞಾನ. • ಅತ್ಯುತ್ತಮ ಸಂವಹನ ಕೌಶಲ್ಯ (ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ).
3	**ಯೋಜನಾ ನಿರ್ವಾಹಕರು (Project Executive)** ಹುದ್ದೆಗಳ ಸಂಖ್ಯೆ: 3 ಮಾಸಿಕ ವೇತನ: ರೂ. 45,000/- (ಕ್ರೋಢೀಕರಿಸಿದ) ಗರಿಷ್ಠ ವಯೋಮಿತಿ: 35 ವರ್ಷಗಳು	• ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ವಿಷಯದಲ್ಲಿ ಪದವಿ (B.E/B.Tech, BBA, B. Com, BA, ಇತ್ಯಾದಿ). • ಇನ್ಕ್ಯುಬೇಟರ್‌ಗಳು/ಆಕ್ಸಿಲರೇಟರ್‌ಗಳು/ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯಲ್ಲಿ **ಕನಿಷ್ಠ 2** ವರ್ಷಗಳ ಸಂಬಂಧಿತ ಅನುಭವ. • ಅತ್ಯುತ್ತಮ ಸಂವಹನ ಕೌಶಲ್ಯ, ಬಲವಾದ ಸಾಂಸ್ಥಿಕ ಸಾಮರ್ಥ್ಯಗಳು ಮತ್ತು ಸಮಸ್ಯೆಗಳನ್ನು ಪರಿಹರಿಸುವ ಯೋಗ್ಯತೆ. • ಐಟಿ ಜ್ಞಾನ ಹಾಗೂ ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ಓದುವ ಮತ್ತು ಬರೆಯುವ ಸಾಮರ್ಥ್ಯ ಹೊಂದಿರಬೇಕು.

ಅರ್ಜಿ ಸಲ್ಲಿಸಲು ಸ್ಕ್ಯಾನ್ ಮಾಡಿ

ಸೂಚನೆ: ಮೇಲಿನ ಎಲ್ಲಾ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಮತ್ತು ವಿವರವಾದ ಉದ್ಯೋಗ ವಿವರಣೆಗಾಗಿ, ಇಲಾಖೆಯ ಜಾಲತಾಣಕ್ಕೆ ಭೇಟಿ ನೀಡಿ: https://eitbt.karnataka.gov.in/217/recruitment/en
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15/07/2026, ಸಂಜೆ 5:00 ಗಂಟೆಯವರೆಗೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು
ಕಿಟ್ಸ್

ವಾ.ಸಾ.ಸಂ.ಇ/ವಾಪ್ರ/1404/ಆಕಾರ್/2026-27

ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್)
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ
ಬಿಕೆಜಿ ಸಫೈರ್, # 59, 3ನೇ ಮಹಡಿ, ರೈಲ್ವೆ ಪ್ಯಾರಲೆಲ್ ರೋಡ್, ಕುಮಾರ ಪಾರ್ಕ್ ವೆಸ್ಟ್, ಶೇಷಾದ್ರಿಪುರಂ, ಬೆಂಗಳೂರು-560020.
ದೂರವಾಣಿ: 080-2223-1006 / 8. E-mail: itbt.kitshr@gmail.com

ಸಿಂಧೂ ನೀರು ಕಸಿದುಕೊಳ್ಳುವ ಕೈಗಳನ್ನು ಕತ್ತರಿಸುತ್ತೇವೆ!

ಇಸ್ಲಾಮಾಬಾದ್: ''ಪಾಕಿಸ್ತಾನಕ್ಕೆ ಸೇರಬೇಕಾದ ನೀರನ್ನು ಕಸಿದುಕೊಳ್ಳಲು ಪ್ರಯತ್ನಿಸುವ ಕೈಗಳನ್ನು ಕತ್ತರಿಸುತ್ತೇವೆ,'' ಎಂದು ಹೇಳಿರುವ ಪಾಕಿಸ್ತಾನದ ಹವಾಮಾನ ಬದಲಾವಣೆ ಸಚಿವ ಮುಸಾದಿಕ್ ಮಲಿಕ್, ನೇರವಾಗಿ ಭಾರತವನ್ನು ಕೆಣಕಿದ್ದಾರೆ.

''ಸಿಂಧು ಜಲ ಒಪ್ಪಂದದಂತೆ ಪಾಕಿಸ್ತಾನಕ್ಕೆ ಹಂಚಿಕೆಯಾದ ನೀರನ್ನು ತಡೆಯುವ ಅಥವಾ ಬೇರೆಡೆಗೆ ತಿರುಗಿಸಲು ಯಾರಿಗೂ ಅವಕಾಶ ನೀಡುವುದಿಲ್ಲ. ನಮ್ಮ ಪಾಲಿನ ನೀರಿನ ಮೇಲೆ ಹಕ್ಕು ಸಾಧಿಸಲು ಯಾವುದೇ ಶಕ್ತಿಗಳು ಪ್ರಯತ್ನಿಸಿದರೂ ಸುಮ್ಮನಿರುವುದಿಲ್ಲ. ಅಗತ್ಯವಿದ್ದರೆ ಬಲಪ್ರಯೋಗಕ್ಕೂ ಹಿಂದೇಟು ಹಾಕುವುದಿಲ್ಲ. ನಮ್ಮ ಕಡೆಗೆ ಹರಿಯುವ ನೀರಿನ ಹರಿವು ನಿಯಂತ್ರಿಸುವ ಕೈಗಳನ್ನು ಕತ್ತರಿಸುವುದಕ್ಕೂ ಹೆದರುವುದಿಲ್ಲ,'' ಎಂದು ಸಚಿವ ಮಲಿಕ್ ಪ್ರಚೋದನಾತ್ಮಕ ಹೇಳಿಕೆ ನೀಡಿದ್ದಾರೆ.

ಸಿಂಧು ಜಲ ಒಪ್ಪಂದ ಅಮಾನತುಗೊಳಿಸಿದ ಭಾರತ ಸರಕಾರದ ನೀತಿಯನ್ನು ಟೀಕಿಸಿರುವ ಮಲಿಕ್, ''ಪಾಕಿಸ್ತಾನದ ಶೇ.50ರಷ್ಟು ಕೃಷಿ ಭೂಮಿ ಸಿಂಧು ನೀರು ಅವಲಂಬಿಸಿದೆ. ನೀರು ನಿಯಂತ್ರಣದಿಂದ ದೇಶದ ಆಹಾರ ಭದ್ರತೆಗೂ ಆತಂಕ ಎದುರಾಗಲಿದೆ. ದೇಶದ ಜೀವನಾಡಿಯಾದ ಸಿಂಧೂ ನದಿ ನೀರಿನ ಹರಿವನ್ನು ನಿಯಂತ್ರಿಸುವ ಭಾರತ ಪ್ರಯತ್ನ ಶೇ.25ರಷ್ಟು ಆರ್ಥಿಕತೆ ಕುಸಿತಕ್ಕೂ ಕಾರಣವಾಗಲಿದೆ,'' ಎಂದು ಆರೋಪಿಸಿದ್ದಾರೆ.

ಪ್ಯಾರಾ ಮೆಡಿಕಲ್ ಪರೀಕ್ಷಾ ಅಕ್ರಮ ಜಾಲ ಪತ್ತೆ: ನಾಲ್ವರ ಬಂಧನ

ಜೈಪುರ: ರಾಜಸ್ಥಾನ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ನಡೆಸಬೇಕಿದ್ದ ಪ್ಯಾರಾ ಮೆಡಿಕಲ್ ಪರೀಕ್ಷೆಯಲ್ಲಿನ ವಂಚನೆ ಜಾಲವನ್ನು ಪೊಲೀಸರು ಭೇದಿಸಿದ್ದಾರೆ. ಪರೀಕ್ಷಾ ಕೇಂದ್ರದ ಮೇಲ್ವಿಚಾರಕರನ್ನು ಬಳಸಿಕೊಂಡು ಸಾಮೂಹಿಕ ನಕಲು ಮಾಡಲು ಸಂಚು ರೂಪಿಸಿದ್ದ ಕಾಲೇಜು ಅಧಿಕಾರಿಗಳು ಸೇರಿದಂತೆ ನಾಲ್ವರನ್ನು ಜೈಪುರ ಪೊಲೀಸರು ಬಂಧಿಸಿದ್ದಾರೆ. ಮೊದಲ ವರ್ಷದ ಪರೀಕ್ಷೆಗಳಲ್ಲಿ ಫೇಲ್ ಆಗಿ ಬ್ಯಾಕ್‌ಲಾಗ್ ಉಳಿಸಿಕೊಂಡಿದ್ದ ಸುಮಾರು 45 ವಿದ್ಯಾರ್ಥಿಗಳನ್ನು ಪಾಸ್ ಮಾಡಿಸುವುದಾಗಿ ನಂಬಿಸಿ, ಪ್ರತಿ ವಿದ್ಯಾರ್ಥಿಯಿಂದ 5.5 ಲಕ್ಷ ರೂ. ವಸೂಲು ಮಾಡಲಾಗಿತ್ತು ಎನ್ನುವುದು ಬಹಿರಂಗಗೊಂಡಿದೆ.

ಜೂನ್ 29ರಿಂದ ಆರಂಭವಾಗಬೇಕಿದ್ದ ಪ್ಯಾರಾ ಮೆಡಿಕಲ್ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳಿಗೆ ಅಕ್ರಮವಾಗಿ ಸಹಾಯ ಮಾಡಲು ಹಣ ವಸೂಲಿ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಜೂನ್ 27 ರಂದೇ ಪೊಲೀಸರಿಗೆ ಸಿಕ್ಕಿತ್ತು. ವಿಶೇಷ ತಂಡವು ಕಾರ್ಯಾಚರಣೆ ನಡೆಸಿ ಮೊದಲು ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದುಕೊಂಡಿತು. ಅವರ ಬ್ಯಾಗ್‌ಗಳಲ್ಲಿ ಪರೀಕ್ಷೆ ಬರೆಯುತ್ತಿರುವ ವಿದ್ಯಾರ್ಥಿಗಳ ಹೆಸರುಗಳು ಹಾಗೂ ಅವರಿಂದ ವಸೂಲಿ ಮಾಡಲಾದ ಹಣದ ವಿವರಗಳಿದ್ದ ಎರಡು ಡೈರಿಗಳು ಪತ್ತೆಯಾಗಿವೆ.

ಮತ್ತೊಂದೆಡೆ, ಪರೀಕ್ಷಾ ಅಕ್ರಮದ ದೂರುಗಳು ಕೇಳಿಬಂದ ಬೆನ್ನಲ್ಲೇ ಎಚ್ಚೆತ್ತುಕೊಂಡಿರುವ ರಾಜಸ್ಥಾನ ಪ್ಯಾರಾ ಮೆಡಿಕಲ್ ಕೌನ್ಸಿಲ್, ಜೈಪುರದ ಪ್ರಭಾ ದೇವಿ ಮೆಮೋರಿಯಲ್ ಪಿಜಿ ಕಾಲೇಜು ಪರೀಕ್ಷಾ ಕೇಂದ್ರವನ್ನು ರದ್ದುಗೊಳಿಸಿದೆ. ಪೇಪರ್‌ಲೀಕ್ ಮತ್ತು ಪೊಲೀಸ್ ಕಾರ್ಯಾಚರಣೆಯ ಸುದ್ದಿ ತಿಳಿಯುತ್ತಿದ್ದಂತೆ ಪರೀಕ್ಷಾ ಕೇಂದ್ರದಲ್ಲಿ ಭಾರಿ ಗದ್ದಲ ಸೃಷ್ಟಿಯಾಗಿದ್ದು, ಇಡೀ ಪರೀಕ್ಷೆಯನ್ನು ರದ್ದುಗೊಳಿಸಲಾಗಿದೆ.

ಎಲ್ಲ ಸರಕಾರಿ ಬಸ್ ಹವಾನಿಯಂತ್ರಿತ: ಸಿಎಂ ವಿಜಯ್

ಚೆನ್ನೈ: ರಾಜ್ಯದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯಲ್ಲಿ ಆರಾಮದಾಯಕ ಪ್ರಯಾಣದ ಅನುಭವವನ್ನು ನೀಡಲು ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರು ಹೊಸ ನಿರ್ಧಾರ ಕೈಗೊಂಡಿದ್ದಾರೆ. ಎಲ್ಲಾ ಹೊಸ ಬಸ್‌ಗಳು ಕಡ್ಡಾಯವಾಗಿ ಹವಾನಿಯಂತ್ರಿತ (ಎಸಿ) ಸೌಲಭ್ಯವನ್ನು ಹೊಂದಿರಬೇಕು ಎಂದು ಸಾರಿಗೆ ಇಲಾಖೆಗೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ. ಸೇಲಂನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದ ರಾಜ್ಯ ಸಾರಿಗೆ ಸಚಿವ ವಿಜಯ್ ಪಾರ್ಥಿಬನ್ ಅವರು ಮುಖ್ಯಮಂತ್ರಿ ಅವರ ಹೊಸ ಮಹತ್ವಾಕಾಂಕ್ಷಿ ಯೋಜನೆಯನ್ನು ಅಧಿಕೃತವಾಗಿ ಮಾಧ್ಯಮಗಳಿಗೆ ಬಹಿರಂಗಪಡಿಸಿದ್ದಾರೆ. ಕಳೆದ ವಾರವಷ್ಟೇ ವಿಜಯ್ ಸಾರ್ವಜನಿಕ ಸೇವೆಗಾಗಿ 127 ಕೋಟಿ ರೂ. ವೆಚ್ಚದ 300 ಹೊಸ ಬಸ್‌ಗಳ ಸಂಚಾರಕ್ಕೆ ಚಾಲನೆ ನೀಡಿದ್ದರು. ಮಾಲಿನ್ಯ ನಿಯಂತ್ರಣಕ್ಕೆ ಪೂರಕವಾಗಿರುವ ಪರಿಸರ ಸ್ನೇಹಿ ಸಿಎನ್‌ಜಿ ಮತ್ತು ಡೀಸೆಲ್ ಮಾದರಿಯ ಈ ವಾಹನಗಳನ್ನು ಚೆನ್ನೈನ ಪ್ರಮುಖ ನಿಲ್ದಾಣಗಳಾದ ಕೋಯಂಬೇಡು ಮತ್ತು ಕಿಲಾಂಬಾಕ್ಕಂ ಮಾರ್ಗಗಳಲ್ಲಿ ಈಗಾಗಲೇ ಕಾರ್ಯಾಚರಣೆಗೆ ಇಳಿಸಲಾಗಿದೆ.

ವಿಜಯ ಕರ್ನಾಟಕ

ನಮ್ಮ ಬೆಂಗಳೂರು

ಬುಧವಾರ,1 ಜುಲೈ 2026

ಇಂದಿನ ತಾಪಮಾನ 22° ಕನಿಷ್ಠ 26° ಗರಿಷ್ಠ

X.com/vijaykarnataka | facebook.com/vijaykarnataka | www.vijaykarnataka.com

ಎಸ್ಐಆರ್ ವಿರೋಧಿಸಿ ಫ್ರೀಡಂಪಾರ್ಕ್‌ನಲ್ಲಿ ಪ್ರತಿಭಟನೆ ನಡೆಯಿತು.

ಅಪಾರ್ಟ್‌ಮೆಂಟ್‌ನಲ್ಲಿ ದಟ್ಟ ಹೊಗೆ: ತಪ್ಪಿದ ಅನಾಹುತ

ಬೆಂಗಳೂರು: ಅಶೋಕನಗರ ಠಾಣಾ ವ್ಯಾಪ್ತಿಯ ಗರುಡ ಮಾಲ್ ಸಮೀಪದ ಅಪಾರ್ಟ್‌ಮೆಂಟ್‌ನಲ್ಲಿ ಸಣ್ಣ ಪ್ರಮಾಣದ ಬೆಂಕಿ ಹಾಗೂ ದಟ್ಟ ಹೊಗೆ ಕಾಣಿಸಿಕೊಂಡು ಮಂಗಳವಾರ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಅದೃಷ್ಟವಶಾತ್ ಯಾವುದೇ ಹಾನಿ ಸಂಭವಿಸಿಲ್ಲ.

ಗರುಡ ಮಾಲ್ ಸನಿಹದಲ್ಲಿಯೇ ಇರುವ ನೆಲಮಹಡಿ ಸೇರಿ ನಾಲ್ಕಂತಸ್ತಿನ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ಮಧ್ಯಾಹ್ನ 3.23ರ ಸುಮಾರಿಗೆ ದಟ್ಟ ಹೊಗೆ ಕಾಣಿಸಿಕೊಂಡಿತ್ತು. ನೋಡ ನೋಡುತ್ತಲೇ ಹೊಗೆಯು ಅಪಾರ್ಟ್‌ಮೆಂಟ್ ತುಂಬೆಲ್ಲಾ ವ್ಯಾಪಿಸಿತ್ತು. ಅಲ್ಲಿನ ನಿವಾಸಿಗಳು ಆತಂಕದಿಂದ ಹೊರಗಡೆ ಓಡಿ ಬಂದಿದ್ದರು. ವಿಷಯ ತಿಳಿದ ಕೂಡಲೇ ಸಮೀಪದಲ್ಲಿಯೇ ಇರುವ ಅಗ್ನಿಶಾಮಕ ಕಚೇರಿಯಿಂದ ವಾಹನಗಳು ಆಗಮಿಸಿ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಸಿದವು. ಸಣ್ಣಪ್ರಮಾಣದಲ್ಲಿ ಫ್ಲ್ಯಾಟ್‌ನಲ್ಲಿ ಕಾಣಿಸಿಕೊಂಡಿದ್ದ ಬೆಂಕಿಯನ್ನು ಕ್ಷಿಪ್ರವಾಗಿ ನಂದಿಸಿದ ಬಳಿಕ ಎಲ್ಲರೂ ನೆಮ್ಮದಿಯ ನಿಟ್ಟುಸಿರು ಬಿಟ್ಟರು.

ಫ್ಲ್ಯಾಟ್‌ನಲ್ಲಿ ಅಡುಗೆ ಮಾಡುವಾಗ ಅನಿಲ ಸೋರಿಕೆಯಾಗಿ ಸಣ್ಣ ಬೆಂಕಿ ಹೊತ್ತಿಕೊಂಡಿತ್ತು. ಇಡೀ ಕುಟುಂಬ ಹೊರಗಡೆ ಬಂದಿದ್ದರಿಂದ ಯಾವುದೇ ಅನಾಹುತ ಸಂಭವಿಸಿಲ್ಲ. ಅಗ್ನಿ ಅವಘಡದ ಸಂಬಂಧ ದೂರು ದಾಖಲಿಸಿ ಹೆಚ್ಚಿನ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಗ್‌ಬಾಸ್ ಮಾಜಿ ಸ್ಪರ್ಧಿ ದಿವ್ಯಾ ಸುರೇಶ್‌ಗೆ ಕಿರುಕುಳ

ಬೆಂಗಳೂರು: ನಡೆದುಕೊಂಡು ಹೋಗುವಾಗ ಅಪರಿಚಿತನೊಬ್ಬ ಅಸಭ್ಯವಾಗಿ ವರ್ತಿಸಿ ಕಿರುಕುಳ ನೀಡಿದ್ದಾನೆ ಎಂದು ನಟಿ, ಬಿಗ್‌ಬಾಸ್ ಸ್ಪರ್ಧಿ ದಿವ್ಯಾ ಸುರೇಶ್ ಆರೋಪಿಸಿದ್ದು, ಸಾಮಾಜಿಕ ಜಾಲತಾಣದಲ್ಲಿ ಕಹಿ ಘಟನೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಜತೆಗೆ, ಕೀಚಕನ ಕೃತ್ಯದ ಬಗ್ಗೆ ವಿಡಿಯೊ ರಿಲೀಸ್ ಮಾಡಿ ಅವರ ವಿರುದ್ಧ ಕ್ರಮ ಜರುಗಿಸುವಂತೆ ಪೊಲೀಸರಿಗೆ ಮನವಿ ಮಾಡಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ನಟಿ ಬೇಸರ

ನಟಿಯು ಹಂಚಿಕೊಂಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಭಾನುವಾರ ರಾತ್ರಿ ನಡೆದಿರುವ ಘಟನೆ ಬಗ್ಗೆ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ವಿವರಿಸಿರುವ ನಟಿ ದಿವ್ಯಾ ಸುರೇಶ್, ''ನಾನು ನನ್ನ ಸಂಬಂಧಿ ಜತೆ ರಾತ್ರಿ 11.30ರ ಸುಮಾರಿಗೆ ಕಾರಿನ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಅಪರಿಚಿತನು ಹಿಂಬಾಲಿಸಿದ್ದ. ನನ್ನ ದೇಹದ ಖಾಸಗಿ ಭಾಗ ಮುಟ್ಟಿ ಅಸಭ್ಯವಾಗಿ ವರ್ತಿಸಿದ. ಇದನ್ನು ಗಮನಿಸಿ ಅವನಿಗೆ ತರಾಟೆಗೆ ತೆಗೆದುಕೊಂಡರೂ ಪುನಃ ಅವನು ತನ್ನ ಅಸಭ್ಯ ವರ್ತನೆ ಮುಂದುವರಿಸಿದ್ದ. ನಾವು ಕಾರು ಹತ್ತುವ ತನಕ ತನ್ನ ವಿಕೃತಿ ಮುಂದುವರಿಸಿದ್ದ,'' ಎಂದು ವಿವರಿಸಿದ್ದಾರೆ.

''ಮಹಿಳೆಯರಿಗೆ ರಕ್ಷಣೆಯ ಭರವಸೆ ಎಂದರೆ ಇದೇನಾ? ಯಾವುದೇ ಹೆಣ್ಣಿಗೆ ಇಂತಹ ಕೆಟ್ಟ ಅನುಭವವಾಗಬಾರದು'' ಎಂದಿರುವ ನಟಿ, ದುಷ್ಕರ್ಮಿ ವಿರುದ್ಧ ಕ್ರಮ ಜರುಗಿಸುವಂತೆ ಕೋರಿದ್ದಾರೆ. ನಟಿಯ ಪೋಸ್ಟ್‌ಗೆ ಪ್ರತಿಕ್ರಿಯಿಸಿರುವ ನಗರ ಪೊಲೀಸ್ ವಿಭಾಗವು, ಈ ಸಂಬಂಧ ತಕ್ಷಣ ಗಮನಹರಿಸಿ ಕ್ರಮ ಜರುಗಿಸುವಂತೆ ಬೆಂಗಳೂರು ದಕ್ಷಿಣ ವಿಭಾಗ ಹಾಗೂ ಕೋಣನಕುಂಟೆ ಪೊಲೀಸರಿಗೆ ಟ್ಯಾಗ್ ಮಾಡಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಪೊಲೀಸರು, ''ನಟಿಯು ಇದುವರೆಗೂ ದೂರು ನೀಡಿಲ್ಲ. ಆದಾಗ್ಯೂ ದುಷ್ಕರ್ಮಿಯ ಪತ್ತೆಗೆ ಕ್ರಮ ಜರುಗಿಸಲಾಗಿದೆ,'' ಎಂದು ತಿಳಿಸಿದ್ದಾರೆ.

ವಿಧಾನಸೌಧದ ಎದುರು ಫೈಟ್: ನೇಪಾಳದ ನಾಲ್ವರ ಬಂಧನ

ಬೆಂಗಳೂರು: ವಿಧಾನಸೌಧದ ಎದುರು ಛಾಯಾಚಿತ್ರ ತೆಗೆಯುವ ವೇಳೆ ಅಡ್ಡ ಬಂದ ವಿಚಾರಕ್ಕೆ ನೇಪಾಳದ ಎರಡು ಗುಂಪಿನ ನಡುವೆ ಹೊಡೆದಾಟ ನಡೆದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ವಿಧಾನಸೌಧ ಎದುರಿನ 'ನಮ್ಮ ಮೆಟ್ರೊ' ನಿಲ್ದಾಣದ ಬಳಿ ಜೂನ್ 28ರಂದು ಎರಡು ಗುಂಪಿನ ಯುವಕರು ಪರಸ್ಪರ ಹೊಡೆದಾಡಿಕೊಂಡಿದ್ದಾರೆ. ಮುಖಕ್ಕೆ ಹೊಡೆಯುತ್ತಿರುವ, ಒದೆಯುತ್ತಿರುವ ದೃಶ್ಯವನ್ನು ಸ್ಥಳೀಯರು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದರು. ಆ ದೃಶ್ಯವನ್ನು ಸಾಮಾಜಿಕ ಜಾಲತಾಣದಲ್ಲಿ ಅಪ್‌ಲೋಡ್ ಮಾಡಿದ್ದರು. ಆ ದೃಶ್ಯ ಆಧರಿಸಿ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ. ಒಂದು ಗುಂಪಿನ ಯುವಕರು ವಿಧಾನಸೌಧದ ಎದುರು ನಿಂತು ಫೋಟೊ ತೆಗೆಸಿಕೊಳ್ಳುತ್ತಿದ್ದರು. ಆಗ ಮತ್ತೊಂದು ಗುಂಪಿನ ಯುವಕರು ಅಡ್ಡ ಬಂದಿದ್ದರು. ಅದೇ ಕಾರಣಕ್ಕೆ ಎರಡೂ ಗುಂಪಿನವರ ನಡುವೆ ಗಲಾಟೆಯಾಗಿದೆ ಎಂದು ಮೂಲಗಳು ಹೇಳಿವೆ. 13 ಸೆಕೆಂಡಿನ ವಿಡಿಯೊ ತುಣುಕಿನಲ್ಲಿ ಪರಸ್ಪರ ತಳ್ಳಾಡುತ್ತಿರುವ, ಗುದ್ದಾಡುತ್ತಾ ಪಾದಚಾರಿ ಮಾರ್ಗದಲ್ಲಿ ಯುವಕರು ಬೀಳುತ್ತಿರುವ ದೃಶ್ಯವು ಸೆರೆಯಾಗಿದೆ. ಕೈಯಲ್ಲಿದ್ದ ವಸ್ತುಗಳಿಂದಲೂ ಹಲ್ಲೆ ಮಾಡಿಕೊಂಡಿದ್ದಾರೆ.

ಹಿಂದೆಯೂ ನಡೆದಿತ್ತು ಗಲಾಟೆ: ಕಳೆದ ವರ್ಷದ ನವೆಂಬರ್‌ನಲ್ಲೂ ನೇಪಾಳದ ಯುವಕರೇ ವಿಧಾನಸೌಧದ ಎದುರು ಗಲಾಟೆ ಮಾಡಿಕೊಂಡಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ನೇಪಾಳದ 11 ಯುವಕರನ್ನು ಕೇಂದ್ರ ವಿಭಾಗದ ಪೊಲೀಸರು ಬಂಧಿಸಿದ್ದರು. ಆಗ ರೀಲ್ಸ್ ವಿಚಾರಕ್ಕೆ ಗಲಾಟೆ ನಡೆದಿತ್ತು.

ನನ್ನ ಕಿವಿಯಲ್ಲಿ ದಾಸವಾಳ ಹೂವು ಕಾಣ್ತೆದ್ಯಾ ಅಧಿಕಾರಿಗಳಿಗೆ ಸಚಿವ ಕೃಷ್ಣ ಬೈರೇಗೌಡ ತರಾಟೆ

ಶ್ವಾನ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಕಳ್ಳಾಟಕ್ಕೆ ಕಿಡಿ

■ **ವಿಕ ಸುದ್ದಿಲೋಕ** ಬೆಂಗಳೂರು

''ನಗರದಲ್ಲಿ 25 ವರ್ಷಗಳಿಂದ ಬೀದಿ ನಾಯಿಗಳಿಗೆ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆ ಮಾಡುತ್ತಿದ್ದರೂ ನಾಯಿಗಳ ಸಂಖ್ಯೆ ಹೆಚ್ಚುತ್ತಲೇ ಇದೆ. ಇದು ಹೇಗೆ ಸಾಧ್ಯ. ನನ್ನ ಕಿವಿಯಲ್ಲಿ ದಾಸವಾಳ ಹೂವು ಕಾಣ್ತೆದ್ಯಾ?'' ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಜಿಬಿಎ ವ್ಯಾಪ್ತಿಯ ಪಶುಸಂಗೋಪನಾ ಇಲಾಖೆ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಜಿಬಿಎ ಕೇಂದ್ರ ಕಚೇರಿಯಲ್ಲಿ ಮಂಗಳವಾರ ಪಶುಸಂಗೋಪನೆ ಮತ್ತು ಅರಣ್ಯ ಇಲಾಖೆಯ ಪ್ರಗತಿ ಪರಿಶೀಲನೆ ನಡೆಸಿದ ಅವರು, ''ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸಾ ಕಾರ್ಯಕ್ರಮವು ಯಾವಾಗಿನಿಂದ ಚಾಲ್ತಿಯಲ್ಲಿದೆ. ಇಷ್ಟು ದಿನ ಎಷ್ಟು ನಾಯಿಗಳಿಗೆ ಶಸ್ತ್ರಚಿಕಿತ್ಸೆ ಮಾಡಿದ್ದೀರಿ? ಆದರೂ, ನಾಯಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿರಲು ಕಾರಣ ವೇನು?'' ಎಂದು ಸರಣಿ ಪ್ರಶ್ನೆಗಳನ್ನು ಕೇಳಿದರು.

ಇದಕ್ಕೆ ಉತ್ತರಿಸಲು ತಡಬಡಾಯಿಸಿದ ಅಧಿಕಾರಿಯೊಬ್ಬರು, ''ಕಳೆದ 5 ವರ್ಷಗಳಲ್ಲಿ ಶಸ್ತ್ರಚಿಕಿತ್ಸೆಗಾಗಿ 42.50 ಕೋಟಿ ರೂ. ವೆಚ್ಚವಾಗಿದೆ. ಸಂತಾನಹರಣ ಶಸ್ತ್ರಚಿಕಿತ್ಸೆಯ ಗುತ್ತಿಗೆಯನ್ನು ಐದು ಏಜೆನ್ಸಿಗಳಿಗೆ ನೀಡಲಾಗಿದೆ. ಹಲವು ವರ್ಷಗಳಿಂದ ಇದೇ ಏಜೆನ್ಸಿಗಳು ಕಾರ್ಯನಿರ್ವಹಿಸುತ್ತಿವೆ. ಬೇರೆ ಸಂಸ್ಥೆಗಳು ಈ ಕಾರ್ಯ ನಿರ್ವಹಿಸಲು ಮುಂದೆ ಬರುತ್ತಿಲ್ಲ,'' ಎಂದು ಹೇಳಿದರು.

ಇದರಿಂದ ಕೆಂಡಾಮಂಡಲರಾದ ಸಚಿವರು, ''ನೀವು ಹಾವು ಸಾಯಬಾರದು, ಕೋಲು ಮುರಿಯಬಾರದು ಎಂಬಂತೆ ಕೆಲಸ ಮಾಡುತ್ತಿದ್ದೀರಿ. ನನ್ನ ಕಿವಿಯಲ್ಲಿ ದಾಸವಾಳ ಹೂವು ಕಾಣ್ತೆದ್ಯಾ? ಬೀದಿ ನಾಯಿಗಳ ದಾಳಿಯಿಂದ ಜನ ಸಾಯುತ್ತಿದ್ದಾರೆ. ನೀವು ಚೆಲ್ಲಾಟವಾಡುತ್ತಿದ್ದೀರಿ. ನಿಮಗೆ ಪ್ರಜ್ಞೆ ಇದೆಯೇ? 100 ವರ್ಷವಾದರೂ ಶಸ್ತ್ರಚಿಕಿತ್ಸೆ ಮಾಡುತ್ತಲೇ ಇರಬೇಕಾ? ಬೇರೆ ಯಾವುದೇ ಏಜೆನ್ಸಿಗಳು ಬರುವುದಿಲ್ಲ, ಸಮಸ್ಯೆ ಇರಬೇಕು, ದುಡ್ಡು ಖರ್ಚಾಗಬೇಕು, ಏಜೆನ್ಸಿಗಳು ಸುಭಿಕ್ಷವಾಗಿರಬೇಕು. ತೆರಿಗೆ ಕಟ್ಟುವ ಜನರ ಬದುಕು ಹೈರಾಣಾಗಬೇಕಲ್ಲವೇ,'' ಎಂದು ಬೆವರಿಳಿಸಿದರು.

ಕರ್ತವ್ಯದಿಂದ ಬಿಡುಗಡೆಗೆ ಸೂಚನೆ: ಬೀದಿ ನಾಯಿಗಳ ಕುರಿತಂತೆ ಅಂಕಿ-ಅಂಶಗಳಿಲ್ಲದೆ ಬರಿಗೈನಲ್ಲಿ ಬಂದಿದ್ದ ಅಧಿಕಾರಿಗಳ ಕಾರ್ಯವೈಖರಿಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ''ಪಶುಸಂಗೋಪನಾ ಇಲಾಖೆಯಲ್ಲಿ 19 ಮಂದಿ ಅಧಿಕಾರಿಗಳು ಇದ್ದೀರಿ. ಕನಿಷ್ಠ ದತ್ತಾಂಶದೊಂದಿಗೆ ಸಭೆಗೆ ಬರಬೇಕೆಂಬುದು ಗೊತ್ತಿಲ್ಲವೇ. ಮತ್ತ್ಯಾಕೆ ಸಭೆಗೆ ಬಂದ್ರಿ?'' ಎಂದು ತರಾಟೆಗೆ ತೆಗೆದುಕೊಂಡರು. ಬಳಿಕ 'ಈ ಎಲ್ಲ ಅಧಿಕಾರಿಗಳನ್ನು ತಕ್ಷಣವೇ ಕರ್ತವ್ಯದಿಂದ ಬಿಡುಗಡೆ ಮಾಡಿ ಕಳುಹಿಸಿ' ಎಂದು ಜಿಬಿಎ ಮುಖ್ಯ ಆಯುಕ್ತರಿಗೆ ಸೂಚಿಸಿದರು.

ಎಬಿಸಿ ಶೇ. 100ರಷ್ಟು ಗುರಿ ಸಾಧಿಸಿ: ''ಜಿಬಿಎ ವ್ಯಾಪ್ತಿಯಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಬೀದಿ ನಾಯಿಗಳ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಯಲ್ಲಿ (ಎಬಿಸಿ) ಶೇ. 100ರಷ್ಟು ಗುರಿ ಸಾಧಿಸಲು ಸಮಗ್ರ ಕಾರ್ಯಸೂಚಿ ಸಿದ್ಧಪಡಿಸಬೇಕು,'' ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''ನಗರದಲ್ಲಿ ಬೀದಿ ನಾಯಿಗಳ ಸಮಸ್ಯೆ ಪರಿಹರಿಸಲು ಕಳೆದ 50 ವರ್ಷಗಳಿಂದ ಪ್ರಯತ್ನಗಳು ನಡೆದಿದ್ದರೂ, ನಿರೀಕ್ಷಿತ ಫಲಿತಾಂಶ ಸಿಕ್ಕಿಲ್ಲ. 2007ರಿಂದ ಈವರೆಗೆ 8.80 ಲಕ್ಷ ನಾಯಿಗಳಿಗೆ ಎಬಿಸಿ ಮಾಡಲಾಗಿದೆ. 2019ರ ಸಮೀಕ್ಷೆಯಂತೆ 3.10 ಲಕ್ಷ ಹಾಗೂ 2023ರಲ್ಲಿ ನಡೆಸಿದ ಗಣತಿಯಲ್ಲಿ ನಾಯಿಗಳ ಸಂಖ್ಯೆ 2.79 ಲಕ್ಷ ಇದೆ. 2016ರಿಂದ 2023ರವರೆಗೆ 3.33 ಲಕ್ಷ ನಾಯಿಗಳಿಗೆ ಎಬಿಸಿ ಮಾಡಲಾಗಿದೆ. ಆದರೂ, ಬೀದಿ ನಾಯಿಗಳ ಸಂಖ್ಯೆಯಲ್ಲಿ ನಿರೀಕ್ಷಿತ ಇಳಿಕೆ ಕಂಡುಬಂದಿಲ್ಲ, ಇದೇ ರೀತಿ ಮುಂದುವರಿದರೆ ಹಲವು ವರ್ಷ ಕಳೆದರೂ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗುವುದಿಲ್ಲ, ಆದ್ದರಿಂದ ಕಟ್ಟುನಿಟ್ಟಿನ ಕಾರ್ಯತಂತ್ರ ರೂಪಿಸಿ ಸಮಸ್ಯೆಯನ್ನು ನಿಯಂತ್ರಣಕ್ಕೆ ತರಲು ಸೂಚಿಸಲಾಗಿದೆ,'' ಎಂದು ಹೇಳಿದರು.

90,000 ನಾಯಿಗಳಿಗೆ ಎಬಿಸಿ

''ಸದ್ಯ ವರ್ಷಕ್ಕೆ 45 ಸಾವಿರ ಬೀದಿ ನಾಯಿಗಳಿಗೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ. ಈ ಸಂಖ್ಯೆಯನ್ನು 90 ಸಾವಿರಕ್ಕೆ ಹೆಚ್ಚಿಸಬೇಕು. ಈ ರೀತಿ ಮೂರು ವರ್ಷ ನಿರಂತರವಾಗಿ ಕಾರ್ಯ ನಿರ್ವಹಿಸಿ, ಶೇ.100ರಷ್ಟು ಗುರಿ ಸಾಧಿಸಬೇಕು. ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಪಶುವೈದ್ಯರ ಜತೆಗೆ ಹೊರಗುತ್ತಿಗೆ ಆಧಾರದ ಮೇಲೆ ಹೆಚ್ಚುವರಿ ವೈದ್ಯರನ್ನು ನೇಮಕ ಮಾಡಿಕೊಂಡು ಎಬಿಸಿ ಶಸ್ತ್ರಚಿಕಿತ್ಸೆ ಪ್ರಮಾಣ ವನ್ನು ಹೆಚ್ಚಿಸಲು ನಿರ್ದೇಶನ ನೀಡಲಾಗಿದೆ,'' ಎಂದು ಕೃಷ್ಣ ಬೈರೇಗೌಡ ಹೇಳಿದರು.

ಬೀದಿ ವ್ಯಾಪಾರಿಗಳನ್ನು ಒಕ್ಕಲೆಬ್ಬಿಸುತ್ತಿಲ್ಲ

''ಪಾದಚಾರಿ ಮಾರ್ಗಗಳ ಒತ್ತುವರಿ ತೆರವು ಮಾಡಲಾಗುತ್ತಿದ್ದು, ಯಾರನ್ನೂ ಒಕ್ಕಲೆಬ್ಬಿಸುತ್ತಿಲ್ಲ, ನಗರದಲ್ಲಿ ಶೇ.20ರಷ್ಟು ಪ್ರಮುಖ ರಸ್ತೆಗಳಲ್ಲಿ ಮಾತ್ರ ಪಾದಚಾರಿಗಳ ಸುರಕ್ಷತೆಯ ದೃಷ್ಟಿಯಿಂದ ಬೀದಿ ವ್ಯಾಪಾರ ಮಾಡದಂತೆ ಮನವಿ ಮಾಡಲಾಗಿದೆ. ಉಳಿದ ಶೇ.80ರಷ್ಟು ರಸ್ತೆಗಳಲ್ಲಿ ವ್ಯಾಪಾರ ನಡೆಸಲು ಅವಕಾಶವಿದೆ. ಅಂಗಡಿ ಮುಂಭಾಗವನ್ನು ಅಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವವರು ಸ್ವಯಂಪ್ರೇರಿತವಾಗಿ ತೆರವುಗೊಳಿಸಬೇಕು. ಇಲ್ಲದಿದ್ದರೆ ನಿಯಮಾನುಸಾರ ತೆರವುಗೊಳಿಸಿ ದಂಡ ವಿಧಿಸಲಾಗುವುದು,'' ಎಂದು ಕೃಷ್ಣ ಬೈರೇಗೌಡ ಎಚ್ಚರಿಕೆ ನೀಡಿದರು.

ಗುಣಿ ತೆಗೆಯದೆ ಗಿಡ ನೆಟ್ಟು ಹಣ ಗುಳುಂ

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಗುಣಿ ತೆಗೆಯದೆಯೇ ಗಿಡಗಳನ್ನು ನೆಟ್ಟು, ದುಡ್ಡು ನುಂಗಿ ಹಾಕಲಾಗಿದೆ. ಗುಣಿ ತೆಗೆಯದೆಯೇ ಕಾಟಾಚಾರಕ್ಕೆ ಕೆದಕಿ, ಅದರೊಳಗೆ ಸಸಿಗಳನ್ನು ನೆಡಲಾಗಿದೆ ಎಂದು ಕೃಷ್ಣ ಬೈರೇಗೌಡ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

''ಬೆಂಗಳೂರಿನಲ್ಲಿ ಎಲ್ಲಿಯೂ ಸಮರ್ಪಕವಾಗಿ ಗುಣಿ ತೆಗೆದು, ಗಿಡಗಳನ್ನು ನೆಟ್ಟಿಲ್ಲ, ಗುಣಿ ತೋಡದೆಯೇ ಗೊಬ್ಬರ ಹೇಗೆ ಹಾಕಲು ಸಾಧ್ಯ. ಕನಿಷ್ಠ ಎರಡೂವರೆ ಚ.ಅಡಿಯಷ್ಟು ಗುಂಡಿ ತೆಗೆದು, ಸಸಿಗಳನ್ನು ನೆಡಬೇಕಿದೆ. ಆದರೆ, ಫುಟ್‌ಪಾತ್‌ಗಳಲ್ಲಿ ಎರಡು ಫೇವರ್ ಬ್ಲಾಕ್ ತೆಗೆದು ಮುಕ್ಕಾಲು ಚ.ಅಡಿಯಷ್ಟು ಗುಣಿಯಲ್ಲಿ ಗಿಡಗಳನ್ನು ನೆಡಲಾಗಿದೆ. ವೈಟ್‌ಟಾಪಿಂಗ್ ರಸ್ತೆಗಳ ಅಂಚಿನಲ್ಲಿ ಗುಣಿ ತೆಗೆದು ಗಿಡಗಳನ್ನು ಹಾಕಲು ಸಾಧ್ಯವೇ ಇಲ್ಲ, ಆದರೂ, ಚಿಕ್ಕದಾಗಿ ಗುಣಿ ತೆಗೆದು ಸಸಿಗಳನ್ನು ನೆಡಲಾಗಿದೆ,'' ಎಂದು ಅಧಿಕಾರಿಗಳ ವಿರುದ್ಧ ಕಿಡಿಕಾರಿದರು.

''ಗುಣಿ ತೆಗೆದು ಗಿಡಗಳನ್ನು ನೆಡಲು 300 ರೂ. ವೆಚ್ಚ ಮಾಡುತ್ತಿದ್ದು, ಅಷ್ಟೂ ಹಣವನ್ನು ಕೊಳ್ಳೆ ಹೊಡೆಯಲಾಗುತ್ತಿದೆ. 2016-17ರಿಂದ 10 ಲಕ್ಷ ಗಿಡ ನೆಟ್ಟಿರುವ ಲೆಕ್ಕ ನೀಡಲಾಗಿದೆ. ವರ್ಷಕ್ಕೆ 7 ಬಾರಿ ನೀರು ಹಾಕಿರುವ ಮಾಹಿತಿ ನೀಡಲಾಗಿದೆ. ಗಿಡಗಳನ್ನು ನೋಡಿಕೊಳ್ಳಲು 116 ರೂ., ಜತೆಗೆ ಮೂರನೇ ವ್ಯಕ್ತಿಯಿಂದ ಮೌಲ್ಯಮಾಪನಕ್ಕೂ ಶುಲ್ಕ ಪಾವತಿಸಲಾಗುತ್ತಿದೆ. 20 ವರ್ಷದಲ್ಲಿ ಎಷ್ಟು ಗಿಡ ನೆಟ್ಟಿದ್ದೀರಿ. ಯಾವ್ಯಾವ ವರ್ಷ ಮರಗಳ ಗಣತಿ ಮಾಡಿದ್ದೀರಿ. ನೆಟ್ಟಿರುವ ಸಸಿಗಳಲ್ಲಿ ಉಳಿದಿರುವುದೆಷ್ಟು ಎಂಬುದರ ಮಾಹಿತಿ ಕೊಡಿ,'' ಎಂದು ಕೇಳಿದರು.

ಪ್ರತಿ ಸಸಿ ನೆಡಲು ಸುಮಾರು 2,300 ರೂ. ವೆಚ್ಚ

''ಪ್ರತಿಯೊಂದು ಸಸಿ ನೆಟ್ಟು ಪೋಷಿಸಲು 2,300 ರೂ. ವೆಚ್ಚ ಮಾಡಲಾಗುತ್ತಿದೆ. ಬದಲಿ ಸಸಿ ನೆಡುವ ಕಡ್ಡಾಯ ಅರಣ್ಯೀಕರಣ ಯೋಜನೆಯಲ್ಲಿ ಪ್ರತಿ ಸಸಿಗೆ ಸುಮಾರು 3,108 ರೂ. ವ್ಯಯಿಸಲಾಗುತ್ತಿದೆ,'' ಎಂದು ಕೃಷ್ಣ ಬೈರೇಗೌಡ ಹೇಳಿದರು.

64,130 ಸಸಿ ನೆಡುವ ಗುರಿ: ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''2008ರಿಂದ ಈವರೆಗೆ ಸುಮಾರು 20 ಲಕ್ಷ ಸಸಿಗಳನ್ನು ನೆಟ್ಟಿರುವ ದಾಖಲೆಗಳಿವೆ. ಆದರೆ, ಮರಗಳ ಗಣತಿಯು ಶೇ.85ರಷ್ಟು ಪೂರ್ಣಗೊಂಡಿದ್ದು, ಸುಮಾರು 11 ಲಕ್ಷ ಮರಗಳನ್ನಷ್ಟೇ ಗುರುತಿಸಲಾಗಿದೆ. ಉಳಿದ ಸಸಿಗಳ ಕುರಿತು ಸ್ಪಷ್ಟ ಮಾಹಿತಿ ಲಭ್ಯವಿಲ್ಲ, ಪ್ರತಿಯೊಂದು ಸಸಿ ನೆಡುವ ಕಾರ್ಯಕ್ಕೂ ಸಂಪೂರ್ಣ ಉತ್ತರದಾಯಿತ್ವ ಮತ್ತು ದಾಖಲೆ ನಿರ್ವಹಣೆ ಕಡ್ಡಾಯವಾಗಿರಬೇಕೆಂದು ಸೂಚಿಸಲಾಗಿದೆ,'' ಎಂದರು.

ಸಭೆಯಲ್ಲಿ ಮುಖ್ಯ ಆಯುಕ್ತ ಮಹೇಶ್ವರ ರಾವ್, ಪಾಲಿಕೆ ಆಯುಕ್ತರಾದ ಡಿ.ಎಸ್. ರಮೇಶ್, ಪೊಮ್ಮಲ ಸುನಿಲ್‌ಕುಮಾರ್, ಜಿ.ಜಗದೀಶ್, ಕೆ.ಎನ್.ರಮೇಶ್, ಡಾ. ಕೆ.ವಿ.ರಾಜೇಂದ್ರ ಉಪಸ್ಥಿತರಿದ್ದರು.

ಜಿಬಿಎ ಚುನಾವಣೆ: ವಾರದಲ್ಲಿ ವರದಿಗೆ ಸೂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಜಿಬಿಎ ವ್ಯಾಪ್ತಿಯ ಪಂಚ ಪಾಲಿಕೆಗಳಿಗೆ ಸದ್ಯದಲ್ಲೇ ಚುನಾವಣೆ ನಡೆಯುವ ನಿರೀಕ್ಷೆಯಲ್ಲಿ ಸಿದ್ಧತಾ ಕಾರ್ಯವನ್ನು ಚುರುಕುಗೊಳಿಸಿರುವ ಬಿಜೆಪಿ, ವಾರ್ಡ್‌ವಾರು ಆಕಾಂಕ್ಷಿಗಳು, ಗೆಲ್ಲುವ ಸಾಮರ್ಥ್ಯವಿರುವ ಸಂಭಾವ್ಯ ಅಭ್ಯರ್ಥಿಗಳು, ಸ್ಥಳೀಯ ಸಮಸ್ಯೆಗಳು, ರಾಜಕೀಯ ಚಿತ್ರಣ ಕುರಿತಂತೆ ವಾರದೊಳಗೆ ವರದಿ ಸಲ್ಲಿಸುವಂತೆ ಪಾಲಿಕೆವಾರು ನೇಮಕ ಗೊಂಡಿರುವ ಉಸ್ತುವಾರಿಗಳಿಗೆ ಸೂಚಿಸಿದೆ.

ಬಿಜೆಪಿ ಪಾಳಯದಲ್ಲಿ ಗರಿಗೆದರಿದ ಚಟುವಟಿಕೆ

ಆರ್.ಅಶೋಕ್ ಅಧ್ಯಕ್ಷತೆಯಲ್ಲಿ ಸಭೆ

ರಾಜ್ಯ ಬಿಜೆಪಿ ಕಚೇರಿಯಲ್ಲಿ ಮಂಗಳವಾರ ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಅಧ್ಯಕ್ಷತೆಯಲ್ಲಿ ಬೆಂಗಳೂರಿನ ಸಂಸದರು, ಶಾಸಕರು, ಪ್ರಮುಖರ ಸಭೆಯಲ್ಲಿ ಈ ಸೂಚನೆ ನೀಡಲಾಗಿದೆ. ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವತ್ಥ ನಾರಾಯಣ, ಶಾಸಕರಾದ ಕೆ.ಗೋಪಾಲಯ್ಯ, ಎಸ್.ರಘು, ಎಲ್.ಎ.ರವಿಸುಬ್ರಮಣ್ಯ, ಸಿ.ಕೆ.ರಾಮಮೂರ್ತಿ, ಸಂಸದ ಪಿ.ಸಿ.ಮೋಹನ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿಗೌಡ ಇತರರು ಪಾಲ್ಗೊಂಡಿದ್ದರು.

ಚುನಾವಣಾ ಸಿದ್ಧತಾ ಕಾರ್ಯ, ಎಸ್ಐಆರ್ ಪರಿಷ್ಕರಣೆ ಪ್ರಕ್ರಿಯೆ, ವಿಧಾನಸಭಾ ಕ್ಷೇತ್ರವಾರು ರಾಜಕೀಯ ಚಟುವಟಿಕೆಗಳ ಕುರಿತಂತೆ ಸಭೆಯಲ್ಲಿ ಚರ್ಚೆ ನಡೆಯಿತು. ಸಭೆ ಬಳಿಕ ಪ್ರತಿಕ್ರಿಯಿಸಿದ ಅಶೋಕ್, ''ಜಿಬಿಎ ವ್ಯಾಪ್ತಿಯ ಪಂಚ ಪಾಲಿಕೆಗಳಿಗೆ ಶಾಸಕರೂ ಸೇರಿದಂತೆ ಮೂರ್ನಾಲ್ಕು ಮಂದಿಯನ್ನು ಉಸ್ತುವಾರಿಗಳಾಗಿ ಈಗಾಗಲೇ ರಾಜ್ಯಾಧ್ಯಕ್ಷರು ನೇಮಕ ಮಾಡಿದ್ದಾರೆ. ಆ ತಂಡಗಳು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ಭೇಟಿ ನೀಡಿ ಒಟ್ಟಾರೆ 369 ವಾರ್ಡ್‌ಗಳಲ್ಲಿನ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ, ಟಿಕೆಟ್ ಆಕಾಂಕ್ಷಿಗಳು, ಗೆಲ್ಲುವ ಸಾಮರ್ಥ್ಯವಿರುವ ಸಂಭಾವ್ಯರು, ಅಲ್ಲಿನ ಸಮಸ್ಯೆಗಳ ಕುರಿತಂತೆ ವಾರದೊಳಗೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ,'' ಎಂದು ಹೇಳಿದರು.

''ಈಗಾಗಲೇ ಚುನಾವಣೆ ಸಿದ್ಧತೆ ಸಂಬಂಧ ನಾಲ್ಕೈದು ಸಭೆ ನಡೆಸಲಾಗಿದೆ. ಕಳೆದ ಮೂರು ವರ್ಷಗಳಲ್ಲಿ ಕಾಂಗ್ರೆಸ್ ಸರಕಾರದ ವೈಫಲ್ಯಗಳು, ಬೆಂಗಳೂರಿಗೆ ಮಾಡಿರುವ ದ್ರೋಹ, ತ್ಯಾಜ್ಯ ಸಮಸ್ಯೆ, ರಸ್ತೆಗುಂಡಿ ಹಾವಳಿ ಸೇರಿದಂತೆ ಇತರೆ ಸಮಸ್ಯೆಗಳ ಬಗ್ಗೆ ಪಟ್ಟಿ ಮಾಡಲು ಸಮಿತಿ ರಚಿಸಲಾಗಿದೆ. ಪ್ರಣಾಳಿಕೆ ರಚನಾ ಸಮಿತಿ ರಚನೆಗೂ ಸಮಿತಿ ರಚಿಸುವಂತೆ ರಾಜ್ಯಾಧ್ಯಕ್ಷರನ್ನು ಕೋರಲಾಗುವುದು,'' ಎಂದು ತಿಳಿಸಿದರು.

ಎಸ್ಐಆರ್: 60,368 ಗಣತಿ ನಮೂನೆ ವಿತರಣೆ

■ **ವಿಕ ಸುದ್ದಿಲೋಕ** ಬೆಂಗಳೂರು

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ (ಎಸ್ಐಆರ್) ಪ್ರಕ್ರಿಯೆಯ ಭಾಗವಾಗಿ ಜಿಬಿಎ ವ್ಯಾಪ್ತಿಯಲ್ಲಿ ಬಿಎಲ್‌ಒಗಳು ಮಂಗಳವಾರ ಮನೆ ಮನೆಗೆ ಭೇಟಿ ನೀಡಿ, 60,368 ಗಣತಿ ನಮೂನೆಗಳನ್ನು ವಿತರಿಸಿದ್ದಾರೆ.

'ಕೇಂದ್ರ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಬಿಎ ವ್ಯಾಪ್ತಿಯಲ್ಲಿ ಬೂತ್ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಮತದಾರರ ಮಾಹಿತಿ ಪರಿಶೀಲಿಸುವ ಹಾಗೂ ಗಣತಿ ನಮೂನೆಗಳನ್ನು ವಿತರಿಸುವ ಕಾರ್ಯವನ್ನು ಆರಂಭಿಸಿದ್ದಾರೆ. ಜು.29ರವರೆಗೆ ನಡೆಯಲಿರುವ ಈ ವಿಶೇಷ ಅಭಿಯಾನದಲ್ಲಿ ಮತದಾರರು ಬಿಎಲ್‌ಒಗಳಿಗೆ ಅಗತ್ಯ ದಾಖಲೆಗಳನ್ನು ಒದಗಿಸಿ ಸಹಕರಿಸಬೇಕು,'' ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್ ಮನವಿ ಮಾಡಿಕೊಂಡಿದ್ದಾರೆ.

''ಮತದಾರರು ಭರ್ತಿ ಮಾಡಿದ ಗಣತಿ ನಮೂನೆಗಳೊಂದಿಗೆ ಅಗತ್ಯ ದಾಖಲೆಗಳನ್ನು ಬಿಎಲ್‌ಒಗಳು ಅಥವಾ ಸಂಬಂಧಿತ ಮತಗಟ್ಟೆ ಮಟ್ಟದಲ್ಲಿ ಸಲ್ಲಿಸಬಹುದಾಗಿದೆ. ಈ ಪ್ರಕ್ರಿಯೆಯಿಂದ ಮತದಾರರ ಪಟ್ಟಿಯನ್ನು ಇನ್ನಷ್ಟು ನಿಖರ ಹಾಗೂ ದೋಷರಹಿತವಾಗಿಸಲು ಸಹಕಾರಿಯಾಗಲಿದೆ,'' ಎಂದು ತಿಳಿಸಿದ್ದಾರೆ.

ವಿತರಣೆ ವಿವರ

- ಕೇಂದ್ರ- 12,122
- ಉತ್ತರ- 23,221
- ದಕ್ಷಿಣ- 10,620
- ಬೆಂಗಳೂರು ನಗರ- 14,405

ಅಧಿಕಾರಿಗಳ ತಂಡ ಮನೆಗಳಿಗೆ ತೆರಳಿ ಎಸ್ಐಆರ್ ಗಣತಿ ನಮೂನೆ ವಿತರಿಸಿತು.

ರಸ್ತೆ ಅಭಿವೃದ್ಧಿಗೆ 3 ವರ್ಷದಲ್ಲಿ 8,825 ಕೋಟಿ ರೂ. ಖರ್ಚು!

■ **ವಿಕ ಸುದ್ದಿಲೋಕ** ಬೆಂಗಳೂರು

ಕಳೆದ 3 ವರ್ಷಗಳ ಅವಧಿಯಲ್ಲಿ ನಗರದ ಆರ್ಟಿರಿಯಲ್ ಮತ್ತು ಸಬ್ ಆರ್ಟಿರಿಯಲ್ ರಸ್ತೆಗಳೂ ಸೇರಿದಂತೆ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ಹಾಗೂ ಈ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಲು 8825.11 ಕೋಟಿ ರೂ. ವೆಚ್ಚ ಮಾಡಲಾಗಿದ್ದು, ಇದರಲ್ಲಿ ಸಾಕಷ್ಟು ಅಕ್ರಮ ನಡೆದಿದೆ ಎಂದು ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ಎನ್.ಆರ್.ರಮೇಶ್, ಸಚಿವ ಕೃಷ್ಣಬೈರೇಗೌಡ ಅವರಿಗೆ ದೂರು ನೀಡಿದ್ದಾರೆ.

ಜಿಬಿಎ ಕೇಂದ್ರ ಕಚೇರಿಯಲ್ಲಿ ದಾಖಲೆಗಳ ಸಹಿತ ಸಚಿವರಿಗೆ ದೂರು ಸಲ್ಲಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ''2023ರ ಏ.1ರಿಂದ 2026ರ ಮೇ 31ರವರೆಗೆ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ 8230.52 ಕೋಟಿ ರೂ. ಹಾಗೂ ಈ ರಸ್ತೆಗಳಲ್ಲಿನ ಗುಂಡಿಗಳನ್ನು ಮುಚ್ಚಲು 594.58 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಇಷ್ಟು ಹಣವನ್ನು ಸಮರ್ಪಕವಾಗಿ ಬಳಸಿದ್ದರೆ, ಕನಿಷ್ಠ 10 ವರ್ಷ ಸದೃಢವಾಗಿರುವಂತೆ ವೈಜ್ಞಾನಿಕವಾಗಿ ಮತ್ತು ಅತ್ಯಾಧುನಿಕ ತಂತ್ರಜ್ಞಾನಗಳೊಂದಿಗೆ ರಸ್ತೆಗಳನ್ನು ನಿರ್ಮಿಸಬಹುದಿತ್ತು'' ಎಂದು ವಿವರಿಸಿದ್ದಾರೆ.

''ಪ್ರತಿ ಕಾಮಗಾರಿಯ ಟೆಂಡರ್ ಪ್ರಕ್ರಿಯೆ ಯಿಂದ ಹಿಡಿದು ಗುತ್ತಿಗೆದಾರರಿಗೆ ಬಿಲ್ ಪಾವತಿಸುವವರೆಗೆ ಎಇ, ಎಇಇ, ಇಇ, ಸಿಇ, ಜಂಟಿ ಆಯುಕ್ತರು, ಹೆಚ್ಚುವರಿ ಆಯುಕ್ತರು, ಗುಣಮಟ್ಟ ನಿಯಂತ್ರಣ ಅಧಿಕಾರಿಗಳು, ಟಿಪಿಸಿಸಿ, ಮುಖ್ಯ ಲೆಕ್ಕಾಧಿಕಾರಿಗಳು, ಡಿಸಿಎಫ್ ವಿಭಾಗದ ಅಧಿಕಾರಿಗಳಿಗೆ ಶೇ. 30ರಷ್ಟು ಲಂಚ ನೀಡಬೇಕಿದೆ. ಆಗ ಮಾತ್ರ ಕಡತಗಳು ಅನುಮೋದನೆಗೆ ಮುಂದಿನ ಹಂತಕ್ಕೆ ಹೋಗುವ ಪರಿಸ್ಥಿತಿ ಇದೆ,'' ಎಂದು ಆಪಾದಿಸಿದರು.

''ಗುತ್ತಿಗೆದಾರರು ಪ್ರತಿ ಕಾಮಗಾರಿಗೆ ಶೇ. 35ರಿಂದ ಶೇ. 40ರಷ್ಟು ಕಮಿಷನ್ ನೀಡಬೇಕಿದೆ. ಉಳಿದ ಶೇ. 60ರಷ್ಟು ಮೊತ್ತದಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಿದೆ. ಹೀಗಾಗಿ, ಗುತ್ತಿಗೆದಾರರು ಕಡಿಮೆ ಬೆಲೆಯ ಕಚ್ಚಾ ಸಾಮಗ್ರಿಗಳನ್ನು ಬಳಸುತ್ತಿರುವುದರಿಂದ ಕಾಮಗಾರಿಗಳು ಕಳಪೆಯಾಗುತ್ತಿವೆ,'' ಎಂದು ಹೇಳಿದರು.

ಚಿಕ್ಕಪೇಟೆಯಲ್ಲಿ ಕಟ್ಟಡ ಸಮೀಕ್ಷೆಗೆ ಸೂಚನೆ

ಬೆಂಗಳೂರು: ಜಿಬಿಎ ಮಟ್ಟದಲ್ಲಿ ನಗರ ಯೋಜಕರನ್ನೊಳಗೊಂಡ ವಿಶೇಷ ತಂಡ ರಚಿಸಿ, ಚಿಕ್ಕಪೇಟೆ ವಿಭಾಗದಲ್ಲಿರುವ ಎಲ್ಲ ಕಟ್ಟಡಗಳನ್ನು ಸಮಗ್ರವಾಗಿ ಸಮೀಕ್ಷೆ ನಡೆಸಬೇಕು ಎಂದು ಮುಖ್ಯ ಆಯುಕ್ತ ಮಹೇಶ್ವರ ರಾವ್ ಅಧಿಕಾರಿಗಳಿಗೆ ಸೂಚಿಸಿದರು.ಜಿಬಿಎ ಕೇಂದ್ರ ಕಚೇರಿಯಲ್ಲಿ ಮಂಗಳವಾರ ನಡೆದ ನಾನಾ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ''ಸರ್ವೆ ವೇಳೆ ಅನಧಿಕೃತ ಕಟ್ಟಡಗಳನ್ನು ಗುರುತಿಸಿ ನೋಟಿಸ್ ಜಾರಿ ಮಾಡಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು,'' ಎಂದು ನಿರ್ದೇಶನ ನೀಡಿದರು.

ಅಗ್ನಿ ಸುರಕ್ಷತೆಗೆ ಫೈರ್ ಆಡಿಟ್: ''ಚಿಕ್ಕಪೇಟೆ ಸೇರಿದಂತೆ ಸೂಕ್ಷ್ಮ ಪ್ರದೇಶಗಳಲ್ಲಿ ಅಗ್ನಿ ಅವಘಡಗಳ ಸಾಧ್ಯತೆಯನ್ನು ಗಮನದಲ್ಲಿಟ್ಟುಕೊಂಡು ಅಗ್ನಿಶಾಮಕ ಸುರಕ್ಷತಾ ವ್ಯವಸ್ಥೆಗಳು, ತುರ್ತು ನಿರ್ಗಮನ ಮಾರ್ಗಗಳು ಹಾಗೂ ತುರ್ತು ಪರಿಸ್ಥಿತಿಯಲ್ಲಿ ಅನುಸರಿಸಬೇಕಾದ ಕ್ರಮಗಳ ಕುರಿತು ಕೂಡಲೇ ಫೈರ್ ಆಡಿಟ್ ನಡೆಸಬೇಕು,'' ಎಂದು ಸೂಚಿಸಿದರು.

''ಕೆ-100 ಜಲಮಾರ್ಗದ ಕೆಲವೆಡೆ ಕೊಳಚೆ ನೀರು ಸೇರುತ್ತಿದ್ದು, ಅದನ್ನು ತಡೆಯಲು ತುರ್ತು ಕ್ರಮ ಕೈಗೊಳ್ಳಬೇಕು. ನಗರದ ಮೂಲಸೌಕರ್ಯ ಕಾಮಗಾರಿಗಳ ಸಮನ್ವಯಕ್ಕಾಗಿ ಭೂಗತ ಕೇಬಲ್‌ಗಳ ಸಮಗ್ರ ನಕ್ಷೆಯನ್ನು ಆದಷ್ಟು ಬೇಗ ಸಲ್ಲಿಸಬೇಕು,'' ಎಂದು ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಡ್ರಗ್ಸ್‌ಮುಕ್ತ ರಾಜ್ಯಕ್ಕೆ ಆಪರೇಷನ್ ರೈಸ್, ಬೇಡ ಬ್ರೋ

ಮಹತ್ವದ ಅಭಿಯಾನಗಳಿಗೆ ಸಿಎಂ ಡಿ.ಕೆ.ಶಿವಕುಮಾರ್ ಚಾಲನೆ | ಪೊಲೀಸರ ಜೊತೆ ಕೈಜೋಡಿಸಲು ಸಾರ್ವಜನಿಕರಲ್ಲಿ ಮನವಿ

■ **ವಿಕ ಸುದ್ದಿಲೋಕ** ಬೆಂಗಳೂರು

ಮಾದಕ ವಸ್ತು ಮುಕ್ತ-ನಶೆ ಮುಕ್ತ ಕರ್ನಾಟಕಕ್ಕಾಗಿ ರೂಪಿಸಿರುವ 'ಆಪರೇಷನ್ ರೈಸ್' ಮತ್ತು 'ಬೇಡ ಬ್ರೋ' ಅಭಿಯಾನಗಳಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ರಾಜಧಾನಿಯಲ್ಲಿ ಮಂಗಳವಾರ ಚಾಲನೆ ನೀಡಿದರು.

ಪೊಲೀಸ್ ಇಲಾಖೆಯು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಾದಕ ವ್ಯಸನ ಮತ್ತು ಕಳ್ಳ ಸಾಗಾಣಿಕೆ ವಿರೋಧಿ ದಿನಾಚರಣೆಯಲ್ಲಿ ಈ ಮಹತ್ವದ ಅಭಿಯಾನಗಳಿಗೆ ಚಾಲನೆ ಕೊಟ್ಟು ಮಾತನಾಡಿದ ಸಿಎಂ ಡಿ. ಕೆ. ಶಿವಕುಮಾರ್, ''2028ರ ವೇಳೆಗೆ ಮಾದಕ ವಸ್ತು ಮುಕ್ತ-ನಶೆ ಮುಕ್ತ ಕರ್ನಾಟಕ ರೂಪಿಸುವುದು ನಮ್ಮ ಗುರಿ. ಇದಕ್ಕೆ ಪ್ರತಿಜ್ಞೆ ಮಾಡಿದ್ದೇವೆ. ಸಾರ್ವಜನಿಕರು, ಯುವಜನತೆ ಮತ್ತು ವಿದ್ಯಾರ್ಥಿಗಳು ಸರಕಾರದ ಜೊತೆ ಕೈ ಜೋಡಿಸಿದರೆ ಡ್ರಗ್ಸ್ ದಂಧೆ ಇಲ್ಲವಾಗಿಸಬಹುದು,'' ಎಂದರು.

''ಡ್ರಗ್ಸ್ ಮುಕ್ತ ಕರ್ನಾಟಕ ಎಂಬುದು ಕೇವಲ ಸರಕಾರದ ಘೋಷಣೆಯಲ್ಲ, ಇದು ಪ್ರತಿಯೊಬ್ಬ ಕನ್ನಡಿಗರ ಸಂಕಲ್ಪ. ಮಾದಕ ವಸ್ತುಗಳ ಕಂಟಕವನ್ನು ಸಮಾಜದಿಂದ ಕಿತ್ತು ಹಾಕಬೇಕು. ನಶೆ ಬಿಡಿ ಖುಷಿ ಪಡಿ ಇದು ನಮ್ಮ ಚಿಂತನೆ. ಸುತ್ತಲಿನ ಪರಿಸರದಲ್ಲೂ ಈ ಬಗ್ಗೆ ಜಾಗೃತಿ ಮೂಡಿಸಬೇಕು. ಅನೇಕರು ನಮ್ಮ ಮೇಲೆ ಒತ್ತಡ ಹೇರಬಹುದು. ಆದಕ್ಕೆ ವಿದ್ಯಾರ್ಥಿಗಳು, ಯುವಜನತೆ ಮಣಿಯಬಾರದು. ದೇಹ, ಮನಸ್ಸನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕು. ಮಾನಸಿಕ ಸ್ಥಿಮಿತ ಕಳೆದುಕೊಳ್ಳಬಾರದು,'' ಎಂದು ಕರೆ ನೀಡಿದರು.

''ಸಮಾಜದಲ್ಲಿ ಗೌರವ ಹಾಳಾಗಲಿದೆ ಎಂದು ಮಕ್ಕಳ ಯಾವುದೇ ವಿಚಾರವನ್ನು ಪೋಷಕರು ಮುಚ್ಚಿಟ್ಟುಕೊಳ್ಳಬಾರದು. ಮಕ್ಕಳ ದುರಭ್ಯಾಸವನ್ನು ಮುಚ್ಚಿಟ್ಟಷ್ಟು ಅವರ ಭವಿಷ್ಯ ಹಾಳಾಗಲಿದೆ. ಪೋಷಕರು ಮಕ್ಕಳಿಗೆ ತಿಳಿವಳಿಕೆ ನೀಡಿ. ಪೊಲೀಸರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಡ್ರಗ್ಸ್ ಜಾಲದ ಮೂಲ ಕಂಡು ಹಿಡಿಯಲು ಸಹಾಯ ಮಾಡಬೇಕು. ಮಕ್ಕಳ ಹೆಸರು ಅಥವಾ ಗುರುತು ಬಹಿರಂಗಪಡಿಸದಂತೆ ಪೊಲೀಸ್ ಇಲಾಖೆಗೆ ನಿರ್ದೇಶನ ನೀಡುತ್ತೇನೆ,'' ಎಂದು ತಿಳಿಸಿದರು.

ರಾಜ್ಯದ 4,081 ಕಾಲೇಜುಗಳಲ್ಲಿ ಕಾರ್ಯಕ್ರಮದ ನೇರ ಪ್ರಸಾರದ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿತ್ತು. ಶಾಸಕ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಸದಸ್ಯ ಗೋವಿಂದರಾಜು, ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯ, ಬೆಂಗಳೂರು ನಗರ ಪೊಲೀಸ್ ಆಯುಕ್ತ ಸೀಮಂತ್‌ಕುಮಾರ್ ಸಿಂಗ್ ಪಾಲ್ಗೊಂಡಿದ್ದರು.

ಶೂನ್ಯ ಸಹಿಷ್ಣುತೆ: ''ರಾಜ್ಯದಲ್ಲಿ ಮಾದಕ ವಸ್ತುಗಳ ಜಾಲವನ್ನು ಬೇರು ಸಹಿತ ನಿರ್ಮೂಲನೆ ಮಾಡಲು ಸರಕಾರ ಶೂನ್ಯ ಸಹಿಷ್ಣುತೆ ನೀತಿಯನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಿದೆ. ಡ್ರಗ್ಸ್ ವಿರುದ್ಧದ ಹೋರಾಟವನ್ನು ಕೇವಲ ಪೊಲೀಸ್ ಕ್ರಮಕ್ಕೆ ಸೀಮಿತಗೊಳಿಸದೆ, ಸಮಾಜದ ಎಲ್ಲಾ ವರ್ಗಗಳ ಸಹಭಾಗಿತ್ವದೊಂದಿಗೆ ವ್ಯಾಪಕ ಜನಾಂದೋಲನವಾಗಿ ರೂಪಿಸಲಾಗುತ್ತಿದೆ,'' ಎಂದು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಮಾಹಿತಿ ಕೊಟ್ಟರೆ ಬಹುಮಾನ: ''ಮಾದಕ ವಸ್ತುಗಳ ಸೇವನೆ ಬಗ್ಗೆ ಸಾರ್ವಜನಿಕರು, ಪೋಷಕರು ಮಾಹಿತಿ ನೀಡಿದರೆ ಅವರಿಗೆ ಪೊಲೀಸ್ ಇಲಾಖೆಯಿಂದ ಬಹುಮಾನ ಕೊಡಲು ತೀರ್ಮಾನಿಸಲಾಗಿದೆ. ಇದರಿಂದ ಮಾದಕ ವಸ್ತುಗಳ ಪೂರೈಕೆ ಜಾಲವನ್ನು ಹತ್ತಿಕ್ಕಬಹುದು. ಮಾದಕ ವಸ್ತುಗಳ ವಿರುದ್ಧದ ಹೋರಾಟದಿಂದ ಇಡೀ ಕುಟುಂಬ, ಊರು, ಪರಿಸರ ಹಾಗೂ ರಾಜ್ಯ ಎಲ್ಲವೂ ಚೆನ್ನಾಗಿರಲಿದೆ. ದೇಶದ ಪ್ರಗತಿಗೂ ಸಹಕಾರಿಯಾಗಲಿದೆ,'' ಎಂದು ಸಿಎಂ ಅಭಿಪ್ರಾಯಪಟ್ಟರು. ''ಶಾಲಾ ಕಾಲೇಜುಗಳಲ್ಲಿ ಸ್ಟೂಡೆಂಟ್ ಪೊಲೀಸಿಂಗ್ ವ್ಯವಸ್ಥೆ ಜಾರಿಗೊಳಿಸಲಾಗಿದೆ. ಡ್ರಗ್ಸ್ ಸೇವನೆ ಸೇರಿದಂತೆ ಕಾನೂನುಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ಸಾರ್ವಜನಿಕರು ಪೊಲೀಸ್ ಇಲಾಖೆಯೊಂದಿಗೆ ಕೈ ಜೋಡಿಸಬೇಕು,'' ಎಂದು ಮನವಿ ಮಾಡಿದರು.

'ಆಪರೇಷನ್ ರೈಸ್' ಮತ್ತು 'ಬೇಡ ಬ್ರೋ' ಅಭಿಯಾನಗಳಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು.

ಬೇಡ ಬ್ರೋ

ಇಂದಿನ ಡಿಜಿಟಲ್ ಜಾಲ, ನೈಟ್‌ಲೈಫ್ ಹಾಗೂ ಸ್ನೇಹಿತರ ಒತ್ತಡಕ್ಕೆ ಸಿಲುಕಿ ದಾರಿ ತಪ್ಪುತ್ತಿರುವ ಯುವಜನತೆಯನ್ನು ಸೆಳೆಯಲು 'ಬೇಡ ಬ್ರೋ' ಯುವಸ್ನೇಹಿ ಅಭಿಯಾನ ಆರಂಭಿಸಲಾಗಿದೆ. ಯುವಕರನ್ನು ಸುಲಭವಾಗಿ ಸೆಳೆಯುವ ಭಾಷೆಯಲ್ಲೇ ಮಾದಕ ವಸ್ತುಗಳ ದೈಹಿಕ ಮತ್ತು ಕಾನೂನುಬದ್ಧ ದುಷ್ಪರಿಣಾಮಗಳನ್ನು ಮನವರಿಕೆ ಮಾಡಿಕೊಡುವುದು ಈ ಅಭಿಯಾನದ ಉದ್ದೇಶ. ಈ ಅಭಿಯಾನದ ಮೂಲಕ ಮಾದಕ ವ್ಯಸನಕ್ಕೆ ಬದಲಾಗಿ ಕ್ರೀಡೆ, ಶಿಕ್ಷಣ ಮತ್ತು ಆರೋಗ್ಯಕರ ಜೀವನಶೈಲಿಗೆ ಒತ್ತು ನೀಡುವಂತೆ ಯುವ ಪೀಳಿಗೆಯನ್ನು ಪ್ರೇರೇಪಿಸಲಾಗುತ್ತದೆ.

ಆಪರೇಷನ್ ರೈಸ್

ಯುವಜನತೆಯನ್ನು ಮಾದಕ ವಸ್ತುಗಳ ಜಾಲದಿಂದ ರಕ್ಷಿಸಲು ಮತ್ತು ಮಾದಕ ವಸ್ತುಗಳ ಅಕ್ರಮ ಮಾರಾಟಕ್ಕೆ ಕಡಿವಾಣ ಹಾಕಲು ರೂಪಿಸಿರುವ ಬಹು ಇಲಾಖೆಗಳ ಸಮನ್ವಯದ ವಿಶೇಷ ಅಭಿಯಾನವೇ ಆಪರೇಷನ್ ರೈಸ್. ಈ ಅಭಿಯಾನದಲ್ಲಿ ಪೊಲೀಸ್ ಇಲಾಖೆ ಜೊತೆಗೆ ಕಂದಾಯ, ಸಾರಿಗೆ, ಉನ್ನತ ಶಿಕ್ಷಣ, ಆರೋಗ್ಯ ಮತ್ತು ಔಷಧ ನಿಯಂತ್ರಣ ಸೇರಿದಂತೆ ಪ್ರಮುಖ ಇಲಾಖೆಗಳು ಒಟ್ಟಾಗಿ ಕೆಲಸ ಮಾಡಲಿವೆ.

- **R- Refuse (ತಿರಸ್ಕರಿಸು):** ಮಾದಕ ವಸ್ತುಗಳನ್ನು ಸಂಪೂರ್ಣವಾಗಿ ನಿರಾಕರಿಸುವುದು.
- **I- Inform (ಮಾಹಿತಿ ನೀಡು):** ಅಕ್ರಮ ಚಟುವಟಿಕೆಗಳ ಬಗ್ಗೆ ಪೊಲೀಸ್ ಇಲಾಖೆಗೆ ಮಾಹಿತಿ ಒದಗಿಸುವುದು.
- **S- Support (ಬೆಂಬಲಿಸು):** ವ್ಯಸನಮುಕ್ತರಾಗಲು ಬಯಸುವವರಿಗೆ ಸಮಾಲೋಚನೆ ಹಾಗೂ ಚಿಕಿತ್ಸೆಗೆ ನೆರವಾಗುವುದು.
- **E- Empower (ಸಬಲೀಕರಣ):** ಯುವ ಜನತೆಯಲ್ಲಿ ಜಾಗೃತಿ ಮೂಡಿಸಿ ಅವರನ್ನು ಶಕ್ತಿಶಾಲಿಯಾಗಿಸುವುದು.

ಕೆನರಾ ಬ್ಯಾಂಕ್‌ನ 121ನೇ ಸಂಸ್ಥಾಪನಾ ದಿನ ಇಂದು

ಬೆಂಗಳೂರು: ಭಾರತದ ಅತಿದೊಡ್ಡ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲೊಂದಾದ ಕೆನರಾ ಬ್ಯಾಂಕ್ ಬುಧವಾರ (ಜು.1) ತನ್ನ 121ನೇ ಸಂಸ್ಥಾಪನಾ ದಿನ ಆಚರಿಸುತ್ತಿದೆ.

1906ರ ಜುಲೈ 1ರಂದು ಸ್ಥಾಪನೆಯಾದ ಕೆನರಾ ಬ್ಯಾಂಕ್ ಭಾರತದ ಪ್ರಮುಖ ಸಾರ್ವಜನಿಕ ವಲಯದ ಬ್ಯಾಂಕ್‌ಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಬ್ಯಾಂಕ್‌ನ ಒಟ್ಟು ಜಾಗತಿಕ ವ್ಯವಹಾರವು 28,06,226 ಕೋಟಿ ರೂ. ಗಳಷ್ಟಿದೆ. ಇದರಲ್ಲಿ 12,37,548 ಕೋಟಿ ರೂ. ಜಾಗತಿಕ ಮುಂಗಡ ಮತ್ತು 15,68,678 ಕೋಟಿ ರೂ. ಜಾಗತಿಕ ಠೇವಣಿಗಳಾಗಿವೆ.

ಬ್ಯಾಂಕ್ ಒಟ್ಟು 10,097 ಶಾಖೆಗಳು, 11,306 ಎಟಿಎಂಗಳು ಮತ್ತು ನಗದು ಮರುಬಳಕೆದಾರರ ಜಾಲದೊಂದಿಗೆ 12 ಕೋಟಿಗೂ ಹೆಚ್ಚು ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿದೆ. ಆ ಮೂಲಕ ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಕೃಷಿ, ವಸತಿ ಸಾಲ ಮತ್ತು ಎಂಎಸ್‌ಎಂಇ ಕ್ರೆಡಿಟ್ ಸಾಲ, ಚಿಲ್ಲರೆ ಸಾಲ ಸೇರಿದಂತೆ ಪ್ರಮುಖ ಸಾಲ ವಿಭಾಗಗಳಲ್ಲಿ ಬ್ಯಾಂಕ್ ಬಲವಾದ ಬಂಡವಾಳವನ್ನು ಹೊಂದಿದೆ. ಭಾರತದ ಸುಸ್ಥಿರ ಅಭಿವೃದ್ಧಿಗೆ ಕೊಡುಗೆ ನೀಡಲು ಡಿಜಿಟಲ್ ಬ್ಯಾಂಕಿಂಗ್ ಮತ್ತು ಇಎಸ್‌ಜಿ ನೇತೃತ್ವದ ಚಟುವಟಿಕೆಗೆ ಉತ್ತೇಜನ ನೀಡುವುದರ ಜತೆಗೆ, ಹಸಿರು ಹಣಕಾಸು ಉಪಕ್ರಮಗಳನ್ನು ಪ್ರೋತ್ಸಾಹಿಸುವ ಮೂಲಕ ಕೆನರಾ ಬ್ಯಾಂಕ್ ಸುಸ್ಥಿರತೆಗೆ ಬದ್ಧವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

'ನುಡಿಸಿರಿ ಸಾಹಿತ್ಯ ಪ್ರಶಸ್ತಿ'ಗೆ ಎಸ್. ಗೋಪಾಲಗೌಡ ಆಯ್ಕೆ

ಬೆಂಗಳೂರು: ಪ್ರತಿ ವರ್ಷ ಹಿರಿಯ ಕವಿ ಜರಗನಹಳ್ಳಿ ಶಿವಶಂಕರ್ ಹೆಸರಿನಲ್ಲಿ ನೀಡುವ 2026ನೇ ಸಾಲಿನ 'ನುಡಿಸಿರಿ ಸಾಹಿತ್ಯ ಪ್ರಶಸ್ತಿ'ಗೆ ಹಿರಿಯ ಸಾಹಿತಿ ಎಸ್. ಗೋಪಾಲಗೌಡ ಕಲ್ಪ ಮಂಜಲಿ ಆಯ್ಕೆಯಾಗಿದ್ದಾರೆ.



ಪ್ರಶಸ್ತಿಯು ಐದು ಸಾವಿರ ರೂ. ನಗದು, ಫಲಕ, ಫಲ ತಾಂಬೂಲ ಒಳಗೊಂಡಿದೆ. ನಗರದಲ್ಲಿ ಜುಲೈನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ.ಚನ್ನೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂಲತಃ ಕೋಲಾರ ಜಿಲ್ಲೆಯ ಎಸ್. ಗೋಪಾಲಗೌಡ ಅವರು ಕವನ, ಕಥಾ ಸಂಕಲನ, ನಾಟಕ, ಕಾದಂಬರಿ, ಜನಪದ ಸಾಹಿತ್ಯ ಹಾಗೂ ಜೀವನ ಚರಿತ್ರೆ ಸೇರಿದಂತೆ ಒಟ್ಟು 31 ಕೃತಿಗಳನ್ನು ರಚಿಸಿದ್ದಾರೆ. 2025ರಲ್ಲಿ ಚಿಕ್ಕಬಳ್ಳಾಪುರದಲ್ಲಿ ನಡೆದ 10ನೇ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಎಲ್ಲಿ-ಏನು? ಬುಧವಾರ

ಕರ್ನಾಟಕ ಮಾಧ್ಯಮ ಅಕಾಡೆಮಿ: ಪತ್ರಿಕಾ ದಿನಾಚರಣೆ. ಉದ್ಘಾಟನೆ ಹಾಗೂ ಅಕಾಡೆಮಿಯ ವಾರ್ಷಿಕ ವರದಿ ಬಿಡುಗಡೆ : ಸಿಎಂ ಡಿ.ಕೆ.ಶಿವಕುಮಾರ್, ಉಪಸ್ಥಿತಿ: ಡಿಸಿಎಂ ಡಾ.ಜಿ.ಪರಮೇಶ್ವರ, ಪ್ರಾಸ್ತಾವಿಕ ನುಡಿ: ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಎಂ.ಎನ್. ಅನುಚೇತ್, ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಡಾ.ಆರ್.ಪೂರ್ಣಿಮಾ **ಸ್ಥಳ :** ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ. ಬೆಳಗ್ಗೆ 11.

ರಾಘವೇಂದ್ರ ಸೇವಾ ಸಮಿತಿ: ಕಲ್ಯಾ ಶ್ರೀಕಾಂತಾಚಾರ್ಯರಿಂದ ಸುಮಧ್ವವಿಜಯ ವಿಷಯವಾಗಿ ಧಾರ್ಮಿಕ ಪ್ರವಚನ. **ಸ್ಥಳ :** ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ. ಸಂಜೆ 7.

ಕಾಯಂ ಪ್ರಾಧ್ಯಾಪಕರಿಲ್ಲದೆ ವಿದ್ಯಾರ್ಥಿಗಳಿಗೆ ಸಂಕಷ್ಟ | ವಿಭಾಗಕ್ಕೆ ಕಾಯಂ ಮುಖ್ಯಸ್ಥರೂ ಇಲ್ಲ

ಸೊರಗುತ್ತಿದೆ ಬೆಂವಿವಿ ದೃಶ್ಯಕಲಾ ವಿಭಾಗ

■ **ಶಾಂತಮೂರ್ತಿ** ಬೆಂಗಳೂರು
shantha.a@timesofindia.com

ಬದಲಾದ ಕಾಲಘಟ್ಟದಲ್ಲಿ ಮೂಲೆ ಸೇರಿದ್ದ ಕಲಾ ವಿಭಾಗಕ್ಕೆ ಹೊಸ ಮೆರುಗು ತುಂಬಿದ್ದ ಬೆಂಗಳೂರು ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗ ಈಗ ಮೂಲಸೌಕರ್ಯ, ಕಾಯಂ ಪ್ರಾಧ್ಯಾಪಕರಿಲ್ಲದೆ ಸೊರಗುವಂತಾಗಿದೆ. ವ್ಯಾಪಕ ಉದ್ಯೋಗಾವಕಾಶ ಸೃಷ್ಟಿಸುವ ಈ ಕೋರ್ಸ್‌ಗೆ ವರ್ಷದಿಂದ ವರ್ಷಕ್ಕೆ ಬೇಡಿಕೆ ಹೆಚ್ಚಾಗುತ್ತಿದ್ದು, ಬೇಡಿಕೆಗೆ ತಕ್ಕಂತೆ ಮೂಲಸೌಕರ್ಯಗಳಿಲ್ಲದಿರುವುದು ವಿದ್ಯಾರ್ಥಿಗಳಿಗೆ ಸಂಕಷ್ಟ ತಂದಿಟ್ಟಿದೆ.

2004ರಲ್ಲಿ ಆರಂಭಿಸಲಾದ ದೃಶ್ಯಕಲಾ ವಿಭಾಗದಲ್ಲಿ ಪ್ರಸ್ತುತ 36 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಈ ವಿಭಾಗದಲ್ಲಿ 11 ಮಂದಿ ಪ್ರಾಧ್ಯಾಪಕರು ಬೋಧನೆ ಮಾಡುತ್ತಿದ್ದು, ಈ ಪೈಕಿ 4 ಮಂದಿ ಮಾತ್ರ ಕಾಯಂ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇತರೆ ಕೋರ್ಸ್‌ಗಳಂತೆ ಕೇವಲ ಪಠ್ಯಕ್ಕೆ ಸೀಮಿತವಾಗದೇ ಚಟುವಟಿಕೆ, ಪ್ರಾಯೋಗಿಕ ಕಲಿಕೆಗೆ ಹೆಚ್ಚು ಗಮನಹರಿಸುವ ಈ ವಿಭಾಗಕ್ಕೆ ಅಗತ್ಯ ಮೂಲಸೌಕರ್ಯ ಒದಗಿಸಲು ಹಾಗೂ ಕಾಯಂ ಪ್ರಾಧ್ಯಾಪಕರ ನೇಮಕ ಮಾಡಲು ಒತ್ತಾಯ ಕೇಳಿ ಬಂದಿದೆ.

ಖಾಸಗಿ ಕೋಟಾ, ಪೇಮೆಂಟ್ ಕೋಟಾ, ವಿಶೇಷಚೇತನ ಕೋಟಾ, ಕನ್ನಡ ಮಾಧ್ಯಮ, ಗ್ರಾಮೀಣ ವಿದ್ಯಾರ್ಥಿ ಸೇರಿದಂತೆ ವಿವಿಧ ಕೋಟಾಗಳಲ್ಲಿ ಕೂಡ ಈ ವಿಭಾಗಕ್ಕೆ ದಾಖಲಾತಿಗೆ ಅವಕಾಶ ನೀಡಲಾಗಿದೆ. ರಾಜ್ಯದ ವಿದ್ಯಾರ್ಥಿಗಳು ಮಾತ್ರವಲ್ಲದೆ ವಿದೇಶಗಳಿಂದಲೂ ವಿದ್ಯಾರ್ಥಿಗಳು ಬಂದು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ದೃಶ್ಯಕಲಾ ವಿಭಾಗಕ್ಕಾಗಿ ನಿರ್ಮಿಸಲಾಗಿದ್ದ ಕಟ್ಟಡದಲ್ಲಿ ಈಗ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ ಒಂದು ವಿಭಾಗದ ನಿರ್ವಹಣೆಗೆ ಕೂಡ ಜಾಗ ಒದಗಿಸಲಾಗಿದೆ. ಹೆಚ್ಚುವರಿ ಕೊಠಡಿ, ಪ್ರಾಯೋಗಿಕ ಕಲಿಕೆಗೆ ಬೇಕಾದ ಸಾಮಗ್ರಿಗಳು, ಪೇಂಟಿಂಗ್ ಮುಂತಾದ ವಿಭಾಗದ ವಿದ್ಯಾರ್ಥಿಗಳಿಗೆ ಒದಗಿಸಬೇಕಾದ ಪರಿಕರಗಳು ಮತ್ತಷ್ಟು ಸುಧಾರಿಸಬೇಕಿದೆ ಎಂದು ವಿಶ್ವವಿದ್ಯಾಲಯದ ಪ್ರಾಧ್ಯಾಪಕರೊಬ್ಬರು ತಿಳಿಸಿದ್ದಾರೆ.

ರಾಜ್ಯದ ಕೆಲವೇ ಕೆಲವು ವಿಶ್ವವಿದ್ಯಾಲಯಗಳಲ್ಲಿ ಮಾತ್ರ ದೃಶ್ಯಕಲಾ ವಿಭಾಗ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಈ ಪೈಕಿ ಬೆಂಗಳೂರು ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗ ಅತಿಹೆಚ್ಚು ಖ್ಯಾತಿ ಪಡೆದುಕೊಂಡಿದೆ. ವಿದ್ಯಾರ್ಹತೆಗಿಂತ ಹೆಚ್ಚಾಗಿ ಕಲೆ, ಕೌಶಲ, ಹೊಸತನದ ಬಗ್ಗೆ ಆಸಕ್ತಿ ಹೊಂದಿರುವ ಕಾಯಂ ಪ್ರಾಧ್ಯಾಪಕರು ನೇಮಕವಾದರೆ ಮತ್ತಷ್ಟು ಗುಣಮಟ್ಟದ ಕಲಿಕೆ ಸಾಧ್ಯವಾಗಲಿದೆ ಎಂಬ ಆಗ್ರಹ ವಿದ್ಯಾರ್ಥಿಗಳಿಂದ ಕೇಳಿ ಬಂದಿದೆ. ಈಗಾಗಲೇ ತುಮಕೂರು ವಿವಿಯ ದೃಶ್ಯಕಲಾ ವಿಭಾಗ ಮುಚ್ಚುವ ಹಂತ ತಲುಪಿದೆ. ವಿಜಯಪುರ ವಿವಿಯ ವಿಭಾಗ ಸ್ಥಗಿತಗೊಂಡಿದೆ. ಹಂಪಿ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗ ಅಲ್ಪಸ್ವಲ್ಪ ಉಸಿರಾಡುತ್ತಿದೆ. ಯುವಜನರಿಗೆ ಭವಿಷ್ಯದ ಉದ್ಯೋಗದ ಭರವಸೆ ನೀಡುವ ಇಂತಹ ಕೋರ್ಸ್‌ಗಳನ್ನು ಉಳಿಸಿಕೊಳ್ಳುವತ್ತ ಸರಕಾರ ಗಮನಹರಿಸಬೇಕು ಎಂದು ವಿದ್ಯಾರ್ಥಿಗಳು ಒತ್ತಾಯಿಸಿದ್ದಾರೆ.

ಹೆಚ್ಚು ಉದ್ಯೋಗಾವಕಾಶ ಸೃಷ್ಟಿಸುವ ವಿಭಾಗಕ್ಕೆ ಬೇಕಿದೆ ಮರುಜೀವ

ಹಲವು ವಿವಿಗಳಲ್ಲಿ ದೃಶ್ಯಕಲಾ ವಿಭಾಗ ಬಂದ್

ಮೂಲ ಸೌಕರ್ಯ ಕೊರತೆ

ದೃಶ್ಯಕಲಾ ವಿಭಾಗಕ್ಕೆ ಕಾಯಂ ಪ್ರಾಧ್ಯಾಪಕರ ಜತೆಗೆ, ವಿಭಾಗದ ಕಾಯಂ ಮುಖ್ಯಸ್ಥರು ಕೂಡ ಇಲ್ಲ. ಡೀನ್ ಮೂಲಕ ವಿಭಾಗದ ನಿರ್ವಹಣೆಯಾಗುತ್ತಿದ್ದು, ಪ್ರತಿ ಬಾರಿ ಡೀನ್ ಬದಲಾದಾಗ ವಿಭಾಗಕ್ಕೆ ನಾಯಕನಿಲ್ಲದಂತಾಗುತ್ತಿದೆ. ಪ್ರಸ್ತುತ ಡೀನ್ ಆಗಿ ಕಾರ್ಯನಿರ್ವಹಿಸುತ್ತಿರುವ ಸೋಮಶೇಖರ್ ಅವರ ಅವಧಿ ಜೂ.30ಕ್ಕೆ ಮುಕ್ತಾಯವಾಗುತ್ತಿದೆ. ಪ್ರತಿ ಬಾರಿ ವಿಭಾಗದ ಮುಖ್ಯಸ್ಥರ ಹೊಣೆ ಬದಲಾಗುತ್ತಿರುವುದು ವಿಭಾಗಕ್ಕೆ ಅಗತ್ಯವಾದ ಮೂಲಸೌಕರ್ಯ, ಬೇಡಿಕೆಗಳನ್ನು ಪೂರೈಸುವುದು ವಿಶ್ವವಿದ್ಯಾಲಯಕ್ಕೆ ಸವಾಲಾಗಿ ಪರಿಣಮಿಸಿದೆ.

ಸಂಕಷ್ಟದ ನಡುವೆ ಹೊಸ ಕೋರ್ಸ್‌ಗೆ ಪ್ಲ್ಯಾನ್

ದೃಶ್ಯ ಕಲಾ ವಿಭಾಗದಿಂದ ಚಿತ್ರಕಲೆ, ಶಿಲ್ಪಕಲೆ, ಗ್ರಾಫಿಕ್ ಆರ್ಟ್ಸ್ ಸೇರಿದಂತೆ ವಿವಿಧ ವಿಷಯಗಳನ್ನು ಬೋಧಿಸಲಾಗುತ್ತಿದೆ. ಈ ಕೋರ್ಸ್‌ಗಳ ಜತೆಗೆ, ಎಐ ತಂತ್ರಜ್ಞಾನ, ಅಪ್ಲೈಡ್ ಆರ್ಟ್ಸ್, ಹಿಸ್ಟರಿ ಆಫ್ ಆರ್ಟ್ಸ್ ವಿಷಯಗಳ ಸೇರ್ಪಡೆಗೆ ಕೂಡ ತಯಾರಿ ನಡೆಸಲಾಗುತ್ತಿದೆ. 6 ತಿಂಗಳ ಅವಧಿಗೆ ಕಡಿಮೆ ಅವಧಿಯ ಕೋರ್ಸ್‌ಗಳ ಆರಂಭಕ್ಕೂ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ, ಸದ್ಯ ಇರುವ ಅತಿಥಿ ಉಪನ್ಯಾಸಕರು ಹೊಸ ಕೋರ್ಸ್ ಗಳನ್ನು ಸಮರ್ಥವಾಗಿ ನಿಭಾಯಿಸಬಲ್ಲರಾ ? ಎಂಬ ಪ್ರಶ್ನೆ ವಿದ್ಯಾರ್ಥಿಗಳ ವಲಯದಲ್ಲಿ ಮೂಡಿದೆ.

ದೃಶ್ಯಕಲಾ ವಿಭಾಗದಲ್ಲಿ ಅತಿಥಿ ಪ್ರಾಧ್ಯಾಪಕರೇ ಹೆಚ್ಚಾಗಿದ್ದಾರೆ. ಅತಿಥಿ ಪ್ರಾಧ್ಯಾಪಕರ ಬದಲು ಕಾಯಂ ಪ್ರಾಧ್ಯಾಪಕರು ಹಾಗೂ ವಿಭಾಗಕ್ಕೆ ಮುಖ್ಯಸ್ಥರು ನೇಮಕವಾದರೆ ಮತ್ತಷ್ಟು ಗುಣಮಟ್ಟದ ಕಲಿಕೆ ಸಾಧ್ಯವಾಗಲಿದೆ.

- ಸಿದ್ದರಾಜು ವಿದ್ಯಾರ್ಥಿ

ಮುಖ್ಯಮಂತ್ರಿ ಚಂದ್ರು ಒತ್ತಾಯ | ಖಾಸಗಿ ಶಾಲೆಗಳಲ್ಲಿ ಕನ್ನಡ ಕಲಿಕೆ ಬಗ್ಗೆ ಪೂರ್ವಭಾವಿ ಸಭೆ

ಕನ್ನಡ ಕಲಿಸದ ಶಾಲೆಗಳಿಗೆ ದಂಡ ವಿಧಿಸಿ

ಕನ್ನಡ ಕಲಿಕೆ ಬಗ್ಗೆ ಸಿಎಂ ಭೇಟಿಯ ಪೂರ್ವಭಾವಿ ಸಭೆ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯಿತು.

■ **ವಿಕ ಸುದ್ದಿಲೋಕ** ಬೆಂಗಳೂರು

ಮಹಾರಾಷ್ಟ್ರದಲ್ಲಿ ಮರಾಠಿ ಕಲಿಸದ ಶಾಲೆಗಳಿಗೆ ದಂಡ ವಿಧಿಸಿರುವಂತೆ ಕರ್ನಾಟಕದಲ್ಲಿಯೂ ಕನ್ನಡದಲ್ಲಿ ಶಿಕ್ಷಣ ಕೊಡದ ಶಾಲೆಗಳಿಗೆ ದಂಡ ವಿಧಿಸಬೇಕು ಎಂದು ನಟ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು, ಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಒತ್ತಾಯಿಸಿದರು.

ಕನ್ನಡ ಸಂಘಗಳ ಬಳಗ, ಕರ್ನಾಟಕ ಸಾಹಿತ್ಯ ಅಕಾಡೆಮಿ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ 'ಖಾಸಗಿ ಶಾಲೆಗಳಲ್ಲಿ ಕನ್ನಡ ಕಲಿಕೆ' ಬಗ್ಗೆ ಸಿಎಂ ಭೇಟಿಯಾಗಲು ಏರ್ಪಡಿಸಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಮಾತನಾಡಿ, ''ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮದ ಅಂಶಗಳು ಜಾರಿಯಾದರೆ ಕನ್ನಡ ಭಾಷೆಯ ಬೆಳವಣಿಗೆಯಾಗುತ್ತದೆ. ರಾಜ್ಯ ಸರಕಾರದ ಅಧಿಕಾರಿಗಳು ಕನ್ನಡದ ಅಭಿವೃದ್ಧಿ ಬಗ್ಗೆ ಆಡಳಿತಾತ್ಮಕವಾದ ಕನ್ನಡ ಚಿಂತನೆ ಅನುಷ್ಠಾನ ಮಾಡಬೇಕು. ಇಲ್ಲದಿದ್ದರೆ ಖಾಸಗಿ ಶಿಕ್ಷಣ ಸಂಸ್ಥೆಗಳು ಕನ್ನಡವನ್ನು ಕೊಲ್ಲಬಲ್ಲವು,'' ಎಂದು ಆತಂಕ ವ್ಯಕ್ತಪಡಿಸಿದರು.

ಕನ್ನಡ ಭಾಷೆ ಅಭಿವೃದ್ಧಿಗಾಗಿ ನಾಡಿನ ಸಾಹಿತಿಗಳು, ಹೋರಾಟಗಾರರು, ಅಕಾಡೆಮಿಗಳ ಅಧ್ಯಕ್ಷರ ನಿಯೋಗವು ಮುಖ್ಯಮಂತ್ರಿಗಳೊಂದಿಗೆ ಚರ್ಚಿಸಬೇಕು ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಮಾಜಿ ಅಧ್ಯಕ್ಷೆ ಡಾ. ವಸುಂಧರಾ ಭೂಪತಿ ಮನವಿ ಮಾಡಿದರು. ರಾಜ್ಯಸಭಾ ಮಾಜಿ ಸದಸ್ಯ ಡಾ.ಎಲ್. ಹನುಮಂತಯ್ಯ ಮಾತನಾಡಿ, ''ಸರಕಾರದ ಎಲ್ಲ ಸಿಎಸ್‌ಆರ್ ನಿಧಿಯನ್ನು ಸರಕಾರಿ ಶಾಲೆಗಳ ಸಬಲೀಕರಣಕ್ಕೆ ಬಳಸಿಕೊಳ್ಳಬೇಕು ಹಾಗೂ ಕರ್ನಾಟಕ ಲಾಂಛನದಲ್ಲಿ 'ಕನ್ನಡ ನಾಡು' ಎಂಬ ಬರಹ ಅಳವಡಿಸಬೇಕು,'' ಎಂದು ಒತ್ತಾಯಿಸಿದರು.

ಕನ್ನಡ ಮೊದಲು ಬಳಗದ ಅಧ್ಯಕ್ಷ ಎಂ. ಜ್ಞಾನೇಶ್ವರ ಅವರು 8 ವರ್ಷದ ಅಧ್ಯಯನದ ಸಮಗ್ರ ಕನ್ನಡ ಪರಿಸರ ನಿರ್ಮಾಣ ವರದಿಯನ್ವಯ ಕನ್ನಡ ಭಾಷಾ ಕೌಶಲ, ಆನ್‌ಲೈನ್ ಪರೀಕ್ಷೆ, ಕರ್ನಾಟಕ ಲಾಂಛನದಲ್ಲಿ 'ಕನ್ನಡನಾಡು' ಬಳಕೆ, ಸಮಗ್ರ ಕನ್ನಡ ಅಭಿವೃದ್ಧಿ ಅಧಿನಿಯಮ ತಿದ್ದುಪಡಿ ವರದಿ, ನಮ್ಮ ಶಾಲೆನನ್ನ ಕೊಡುಗೆ (ಜ್ಞಾನ ಕಮ್ಮಟ) ವರದಿ ಪ್ರಸ್ತುತಪಡಿಸಿದರು, ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ. ಎನ್.ಎಲ್. ಮುಕುಂದರಾಜ್, ಮಾಜಿ ಸಚಿವೆ ಬಿ.ಟಿ. ಲಲಿತಾನಾಯಕ್, ನೇ.ಭ. ರಾಮಲಿಂಗಶೆಟ್ಟಿ ಹಾಗೂ ಪಾಲನೇತ್ರ, ಕೆನಾಲಿ ಗೌಡ, ಕನ್ನಡ ಮೊದಲು ಬಳಗದ ಶ್ರೀರಾಜ್‌ಪಾಲ್ಗೊಂಡಿದ್ದರು.

ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಿ

ಬೆಂಗಳೂರು: ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಲ್ಲಿ (ಎಸ್‌ಟಿಪಿ) ಯಾವುದೇ ರೀತಿಯ ಅವಘಡ ಉಂಟಾಗದಂತೆ ಮುಂಜಾಗ್ರತೆ ಕ್ರಮ ಕೈಗೊಳ್ಳಬೇಕು ಎಂದು ಜಲಮಂಡಳಿ ಅಧ್ಯಕ್ಷೆ ಡಾ.ಎನ್.ಮಂಜುಳಾ ಅಧಿಕಾರಿಗಳಿಗೆ ಸೂಚಿಸಿದರು.

ಕಾವೇರಿ ಭವನದಲ್ಲಿ ಸೋಮವಾರ ಜಲಮಂಡಳಿ ವತಿಯಿಂದ ಹಮ್ಮಿಕೊಂಡಿದ್ದ 'ಆರೋಗ್ಯ ಮತ್ತು ಸುರಕ್ಷತೆ' ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ''ನೌಕರರು ಸುರಕ್ಷತೆಗೆ ಆದ್ಯತೆ ನೀಡಬೇಕು. ನಿಮ್ಮ ಕಾರ್ಯ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಸಮಸ್ಯೆಗಳು ಉದ್ಭವಿಸದಂತೆ ಮುಂಜಾಗ್ರತಾ ಕ್ರಮ ಅಳವಡಿಸಿಕೊಂಡು ಎಚ್ಚರಿಕೆಯಿಂದ ಕಾರ್ಯನಿರ್ವಹಿಸಬೇಕು'' ಎಂದು ಸಲಹೆ ಮಾಡಿದರು.

''ನೌಕರರ ಸುರಕ್ಷತೆ ದೃಷ್ಟಿಯಿಂದ ಈ ಕಾರ್ಯಾಗಾರ ಹಮ್ಮಿಕೊಂಡಿದ್ದು, ಸುರಕ್ಷತೆಗಾಗಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಮುಕ್ತವಾಗಿ ಚರ್ಚೆ ಮಾಡಬೇಕು. ಯಾವುದೇ ತೊಂದರೆ, ಸಮಸ್ಯೆಯಿದ್ದರೆ ಚರ್ಚೆ ಮೂಲಕ ಆ ವ್ಯಾಪ್ತಿಯ ಪರಿಧಿಯಲ್ಲೇ ಪರಿಹರಿಸಿಕೊಳ್ಳಬೇಕು,'' ಎಂದು ಹೇಳಿದರು.

ಮಿಲ್ಲರ್ಸ್ ರಸ್ತೆಯ ಸೇಂಟ್ ಆನ್ಸ್ ಎಜುಕೇಶನಲ್ ಸೊಸೈಟಿ ವತಿಯಿಂದ ಟೀಮ್ ತೂಫಾನ್ ಸಹಯೋಗದಲ್ಲಿ ಡ್ರಗ್ಸ್ ತಡೆ ಜಾಗೃತಿ ರ್‍ಯಾಲಿ ನಡೆಯಿತು.

ಕೋರಮಂಗಲದ ಸೇಂಟ್ ಜಾನ್ಸ್ ಕ್ರೀಡಾಂಗಣದಲ್ಲಿ ನಡೆದ 19ನೇ ಆವೃತ್ತಿಯ ನಂದನ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯಲ್ಲಿ ನಂದನ ಮಾಸ್ಟರ್ ತಂಡವು ವಿನ್ನರ್ ಆಗಿ ಹೊರಹೊಮ್ಮಿದೆ. ನಂದನ ಥಂಡರ್ ತಂಡವು ರನ್ನರ್ ಸ್ಥಾನ ಪಡೆಯಿತು. ನಂದನ ಪ್ಯಾಲೇಸ್ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ.ಆರ್. ರವಿಚಂದರ್ ಮತ್ತು ಡಾ.ವಿ.ಜಿ.ಕಿರಣ್ ಕುಮಾರ್, ಗಿರೀಶ್ ಆರಾಧ್ಯ ಇದ್ದರು.

ಕೆಪೆಕ್ ಎಂಡಿ ಶಿವಪ್ರಕಾಶ್ ಸೇವಾ ನಿವೃತ್ತಿ

ಬೆಂಗಳೂರು: ವಾಣಿಜ್ಯ ತೆರಿಗೆ ಇಲಾಖೆ ಅಪರ ಆಯುಕ್ತ, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ಅವರು ಮಂಗಳವಾರ ಸೇವಾ ನಿವೃತ್ತಿ ಹೊಂದಿದರು. ಕೆಪೆಕ್ ಆವರಣದಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಸಂಸ್ಥೆಯ ಅಧ್ಯಕ್ಷ ಬಿ.ಎಚ್. ಹರೀಶ್ ಹಾಗೂ ಸಿಬ್ಬಂದಿಯು ಆತ್ಮೀಯವಾಗಿ ಬೀಳ್ಕೊಟ್ಟರು. ಮಾಜಿ ಶಾಸಕ ಎಂ.ಸಿ ಅಶ್ವತ್ಥ್ ಸೇರಿ ಹಿತೈಷಿಗಳು ಉಪಸ್ಥಿತರಿದ್ದರು.

ಪಶು ಆರೋಗ್ಯ, ಜೈವಿಕ ಸಂಸ್ಥೆಗೆ ಶತಮಾನೋತ್ಸವದ ಸಂಭ್ರಮ

■ **ವಿಕ ಸುದ್ದಿಲೋಕ** ಬೆಂಗಳೂರು

ದೇಶದ ಮೊದಲ ಜಾನುವಾರು ಲಸಿಕಾ ಪ್ರಯೋಗಾಲಯವೆಂಬ ಹೆಗ್ಗಳಿಕೆಗೆ ಪಾತ್ರವಾದ ಹೆಬ್ಬಾಳದ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆಗೆ ಈಗ ಶತಮಾನೋತ್ಸವದ ಸಂಭ್ರಮ.

ಜಾನುವಾರುಗಳಿಗೆ ಬರುವ ನಾನಾ ರೋಗಗಳಿಗೆ ಲಸಿಕೆಗಳನ್ನು ಸಂಶೋಧಿಸಿ ತಯಾರಿಸುವ ಮೂಲಕ ಅವುಗಳನ್ನು ನಾನಾ ರೋಗಗಳಿಂದ ರಕ್ಷಿಸುವಲ್ಲಿ ನಿರಂತರವಾಗಿ ಶ್ರಮಿಸುತ್ತಿರುವ ಸಂಸ್ಥೆ ಇದಾಗಿದೆ. ಶತಮಾನೋತ್ಸವದ ಅಂಗವಾಗಿ ಜು.2 ಮತ್ತು 3ರಂದು ಹೆಬ್ಬಾಳದಲ್ಲಿ ಶತಮಾನೋತ್ಸವ ಸಮಾರಂಭವನ್ನು ಆಚರಿಸಲಾಗುತ್ತಿದೆ. ಜತೆಗೆ, ಪಶು ರೋಗ ತನಿಖಾ ಪ್ರಯೋಗಾಲಯ ಮತ್ತು ಮಾಹಿತಿ ಕೇಂದ್ರ ಕಟ್ಟಡವನ್ನು ಜು.2ರಂದು ಲೋಕಾರ್ಪಣೆಗೊಳಿಸಲಾಗುತ್ತಿದೆ.

ಹೆಬ್ಬಾಳದ ಕರ್ನಾಟಕ ಪಶುವೈದ್ಯಕೀಯ ಪರಿಷತ್ತಿನ ಸಭಾಂಗಣದಲ್ಲಿ ಕಾರ್ಯಕ್ರಮ ನಡೆಯಲಿದೆ. ನೂತನ ಜಾನುವಾರು ಲಸಿಕೆ ದಾಸ್ತಾನು ಕೇಂದ್ರ ಹಾಗೂ ಪ್ರಾದೇಶಿಕ ಪ್ರಯೋಗಾಲಯಗಳ ಲೋಕಾರ್ಪಣೆ ಮತ್ತು ಅತ್ಯಾಧುನಿಕ ಲಸಿಕೆ ಉತ್ಪಾದನಾ ಘಟಕದ ಶಂಕುಸ್ಥಾಪನೆ ಸಮಾರಂಭ ನಡೆಯಲಿದೆ. ಜು.2ರಂದು ಬೆಳಗ್ಗೆ 8.30 ರಿಂದ 10.30ರವರೆಗೆ ಪ್ರಗತಿಪರ ಪಶುಪಾಲಕರೊಂದಿಗೆ ವಿಜ್ಞಾನಿಗಳ ವಿಚಾರಗೋಷ್ಠಿ ನಡೆಯಲಿದೆ. ಬೆಳಗ್ಗೆ 11 ಗಂಟೆಗೆ ಶತಮಾನೋತ್ಸವ ಸಮಾರಂಭವನ್ನು ಬೀದರ್‌ನ ಕರ್ನಾಟಕ ಪಶುಪಾಲನಾ ಹಾಗೂ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ.ಸಿ. ವೀರಣ್ಣ ಉದ್ಘಾಟಿಸಲಿದ್ದಾರೆ. ಅಂದು ಮಧ್ಯಾಹ್ನ 3 ಗಂಟೆಗೆ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ ನಿವೃತ್ತ ನೌಕರರನ್ನು ಸನ್ಮಾನಿಸಲಾಗುವುದು ಎಂದು ಹೆಬ್ಬಾಳದ ಪಶು ಆರೋಗ್ಯ ಮತ್ತು ಜೈವಿಕ ಸಂಸ್ಥೆ ನಿರ್ದೇಶಕಿ ಡಾ. ಡಿ. ರತ್ನಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜು.3ರಂದು ಬೆಳಗ್ಗೆ 10.30ಕ್ಕೆ ಶತಮಾನೋತ್ಸವದ ಪ್ರಯುಕ್ತ ಅಂತಾರಾಷ್ಟ್ರೀಯ ತಾಂತ್ರಿಕ ಸಮ್ಮೇಳನ ಆಯೋಜಿಸಲಾಗಿದೆ. ಹಲವು ಸಂಪನ್ಮೂಲ ವ್ಯಕ್ತಿಗಳು ಜಾನುವಾರುಗಳ ಆರೈಕೆ, ರೋಗಗಳ ನಿಯಂತ್ರಣ ಸೇರಿದಂತೆ ನಾನಾ ವಿಚಾರಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ. ಮಧ್ಯಾಹ್ನ 3 ಗಂಟೆಗೆ ಸಮಾರೋಪ ನಡೆಯಲಿದೆ.

■ ನಾಳೆಯಿಂದ ಹೆಬ್ಬಾಳದಲ್ಲಿ ಸಮ್ಮೇಳನ

■ ಲಸಿಕಾ ದಾಸ್ತಾನು ಕೇಂದ್ರ ಉದ್ಘಾಟನೆ

ಸೆಲ್ಫಿ ಬುಕ್ ಆ್ಯಪ್ ಬಿಡುಗಡೆ

■ **ವಿಕ ಸುದ್ದಿಲೋಕ** ಬೆಂಗಳೂರು

ರಾಜ್ಯವು ಎಐ ಸೇರಿದಂತೆ ತಾಂತ್ರಿಕ ಬೆಳವಣಿಗೆಗಳ ಸವಾಲು ಎದುರಿಸಲು ಸಶಕ್ತವಾಗಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸೆಲ್ಫಿಬುಕ್ ಅಪ್ಲಿಕೇಶನ್ ಪ್ರೈವೇಟ್ ಲಿಮಿಟೆಡ್ ಕಂಪನಿ ಅಭಿವೃದ್ಧಿಪಡಿಸಿರುವ 'ಸೆಲ್ಫಿ ಬುಕ್' ಆ್ಯಪ್ ಬಿಡುಗಡೆ ಮಾಡಿ ಅವರು ಮಾತನಾಡಿದರು.

''ಡಿಜಿಟಲ್ ಯುಗದಲ್ಲಿ ಯುವ ಪೀಳಿಗೆ ಹಾಗೂ ಕ್ರಿಯೇಟರ್‌ಗಳಿಗೆ ಹೊಸ ತಂತ್ರಜ್ಞಾನಗಳು ಅಗತ್ಯವಾಗಿದ್ದು, ಕರ್ನಾಟಕವು ಯಾವಾಗಲೂ ನಾವೀನ್ಯತೆ ಮತ್ತು ಸ್ಟಾರ್ಟ್‌ಅಪ್‌ಗಳಿಗೆ ಮುಂಚೂಣಿಯಲ್ಲಿದೆ. ಈ ಹಾದಿಯಲ್ಲಿ ಇನ್ನೂ ಹಲವು ಸವಾಲುಗಳಿದ್ದು, ಅವುಗಳನ್ನು ಎದುರಿಸುವ ವಿಶ್ವಾಸವಿದೆ,'' ಎಂದರು.

ಶಾಸಕ ಕೆ.ಎಸ್. ನವೀನ್, ''ಸೆಲ್ಫಿ ಬುಕ್ ಆ್ಯಪ್ ಕನ್ನಡಿಗರಿಗೆ ಹೆಮ್ಮೆಯ ವಿಚಾರ. ಇನ್‌ಸ್ಟಾಗ್ರಾಂನಲ್ಲಿಯೇ ಸುಮಾರು 60 ಕೋಟಿ ಭಾರತೀಯ ಖಾತೆಗಳಿದ್ದು, ಸಾಮಾಜಿಕ ಜಾಲತಾಣಗಳ ಬಳಕೆಯಲ್ಲಿ ನಮ್ಮದೇ ದೇಶದ ಸಂಸ್ಥೆಗಳನ್ನು ಬೆಂಬಲಿಸುವುದು ಅಗತ್ಯವಾಗಿದೆ,'' ಎಂದು ಅಭಿಪ್ರಾಯಪಟ್ಟರು.

ಶಾಸಕ ಸಲೀಂ ಅಹ್ಮದ್, ವಿನಯ್ ಗುರೂಜಿ, ಕಂಪನಿಯ ಸ್ಥಾಪಕ ನಂಜೇಶ್ ಬೆಣ್ಣೂರು ಉಪಸ್ಥಿತರಿದ್ದರು.

ಆಯುಷ್ ಇಲಾಖೆಯಲ್ಲಿ ಗುಣಮಟ್ಟದ ಸೇವೆಗೆ ಆಗ್ರಹ

■ **ವಿಕ ಸುದ್ದಿಲೋಕ** ಬೆಂಗಳೂರು

ಆಯುಷ್ ಆಸ್ಪತ್ರೆಗಳ ಪರಿಣಾಮಕಾರಿ ಮೇಲ್ವಿಚಾರಣೆ ನಡೆಸುವಂತೆ ಹಾಗೂ ತಜ್ಞ ವೈದ್ಯರು ಮತ್ತು ಸಿಬ್ಬಂದಿ ಕೊರತೆ ನೀಗಿಸುವಂತೆ ಕರ್ನಾಟಕ ರಾಜ್ಯ ಆಯುಷ್ ಸ್ನಾತಕೋತ್ತರ ಪದವೀಧರರ ಸಂಘ ಆರೋಗ್ಯ ಇಲಾಖೆಯನ್ನು ಒತ್ತಾಯಿಸಿದೆ.

ಎಲ್ಲಾ ಆಯುಷ್ ಆಸ್ಪತ್ರೆಗಳು, ಚಿಕಿತ್ಸಾಲಯ ಹಾಗೂ ಆಯುಷ್ ಘಟಕಗಳಲ್ಲಿ ಆಯುರ್ವೇದ, ಯೋಗ, ಯುನಾನಿ, ಸಿದ್ಧ ಮತ್ತು ಹೋಮಿಯೋಪಥಿ ಸೇವೆಗಳು ನಿಯಮಿತವಾಗಿ ಹಾಗೂ ಗುಣಮಟ್ಟದೊಂದಿಗೆ ಲಭ್ಯವಾಗುವಂತೆ ಕ್ರಮ ವಹಿಸಬೇಕು. ವೈದ್ಯರು, ತಜ್ಞ ವೈದ್ಯರು ಹಾಗೂ ಇತರ ಸಿಬ್ಬಂದಿಯ ಕಾರ್ಯಕ್ಷಮತೆಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಿ, ಆಯುಷ್ ಆಸ್ಪತ್ರೆಗೆ ಬರುವವರಿಗೆ ತೊಂದರೆಯಾಗದಂತೆ ಕ್ರಮ ವಹಿಸಲು ಆಗ್ರಹಿಸಿದೆ.

ಪ್ರತಿ ಆಸ್ಪತ್ರೆಯಲ್ಲಿ ವೈದ್ಯರ ವಿವರ, ಸೇವೆಗಳ ಮಾಹಿತಿ, ಒಪಿಡಿ ಸಮಯ, ದೂರು ಸಲ್ಲಿಕೆ ವಿಧಾನ ಹಾಗೂ ಲಭ್ಯವಿರುವ ಚಿಕಿತ್ಸೆಗಳ ಮಾಹಿತಿಯನ್ನು ಸಾರ್ವಜನಿಕರಿಗೆ ಸ್ಪಷ್ಟವಾಗಿ ಪ್ರದರ್ಶಿಸಬೇಕು. ಅಗತ್ಯ ಔಷಧಿಗಳು, ಚಿಕಿತ್ಸಾ ಉಪಕರಣ ಹಾಗೂ ಮೂಲಸೌಕರ್ಯ ಯಾವಾಗಲೂ ಲಭ್ಯವಾಗುವಂತೆ ಖಚಿತಪಡಿಸಬೇಕು ಎಂದು ಸಂಘಟನೆ ಕೋರಿದೆ.

ಉಪನಿರ್ದೇಶಕರು ಹಾಗೂ ಜಿಲ್ಲಾ ಆಯುಷ್ ಅಧಿಕಾರಿಗಳು ಕೇವಲ ಆಡಳಿತಾಧಿಕಾರಿಗಳಲ್ಲ, ಅವರು ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ವಿಶ್ವಾಸ ಉಳಿಸುವ ಕೆಲಸ ಮಾಡಬೇಕು. ಪಾರದರ್ಶಕತೆ, ಉತ್ತರದಾಯಿತ್ವ, ಮಾನವೀಯತೆ ಹಾಗೂ ವೃತ್ತಿಪರತೆಯೊಂದಿಗೆ ಕಾರ್ಯನಿರ್ವಹಿಸಿ ಸರಕಾರಿ ಆಯುಷ್ ಸೇವೆಗಳ ಬಗ್ಗೆ ಜನರಲ್ಲಿ ವಿಶ್ವಾಸ ಮೂಡಿಸಬೇಕು ಎಂದು ಸಂಘ ಒತ್ತಾಯಿಸಿದೆ.

ಕೃಷಿ ಮಾರಾಟ ಇಲಾಖೆ
ಕೃಷಿ ಮಾರಾಟ ನಿರ್ದೇಶಕರ ಕಛೇರಿ,
ನಂ.16, 2ನೇ ರಾಜಭವನ ರಸ್ತೆ, ಪಿ.ಬಿ. ನಂ.5309, ಬೆಂಗಳೂರು – 560001.
ದೂರವಾಣಿ: 080–22867192, ಇ–ಮೇಲ್: directoramdgok@gmail.com

ಸಂಖ್ಯೆ: ಕೃಮಾಇ/ನಿಯವಿ/ಎಂಐಎಸ್‌ಸಿ/04/2026 ದಿನಾಂಕ: 20–06–2026

ಅಧಿಸೂಚನೆ

ಅಧಿಸೂಚನೆ ಸಂಖ್ಯೆ: ಕೃಮಾಇ/20/ನಿಯವಿ/ಉಮಾ/2022, ದಿನಾಂಕ: 30–09–2022 ರ ಮೂಲಕ ಹೊಸಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮಾರುಕಟ್ಟೆ ಪ್ರದೇಶದಲ್ಲಿ ಅಧಿಸೂಚಿಸಲ್ಪಟ್ಟಿರುವ ಕೃಷಿ ಉತ್ಪನ್ನಗಳ ಮಾರಾಟ ನಿಯಂತ್ರಣಕ್ಕಾಗಿ ಗೊಣಕನಹಳ್ಳಿ ಗ್ರಾಮದ ಪರಿಮಿತಿಯೊಳಗಿನ ಪ್ರದೇಶವನ್ನು ಉಪ ಮಾರುಕಟ್ಟೆ ಎಂದು ಹಾಗೂ ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ಗೊಣಕನಹಳ್ಳಿ ಗ್ರಾಮದ ಸರ್ವೆ ನಂ.49 ರಲ್ಲಿ ಹೊಸಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗೆ ಸೇರಿದ 9.20 ಎಕರೆ ಜಮೀನನ್ನು ಅಧಿಸೂಚಿತ ಕೃಷಿ ಉತ್ಪನ್ನಗಳ ಸಗಟು ಮಾರಾಟ ನಿಯಂತ್ರಣಕ್ಕಾಗಿ ಉಪ ಮಾರುಕಟ್ಟೆ ಪ್ರಾಂಗಣವೆಂದು ಘೋಷಿಸಲಾಗಿದೆ.

ಮಾರುಕಟ್ಟೆ ಪ್ರಾಂಗಣ ನಿರ್ಮಾಣ ಮಾಡಲು ಉದ್ದೇಶಿಸಿ, ಹೊಸಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿನ ಗೊಣಕನಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ಹೊಂದಿಕೊಂಡಂತಿರುವ ಭಕ್ತಗೊಂಡನಹಳ್ಳಿ ಗ್ರಾಮದ ಸರ್ವೆ ನಂ.4 ರಲ್ಲಿನ 15.20 ಎಕರೆ ಜಮೀನನ್ನು ಭೂಸ್ವಾಧೀನ ಮೂಲಕ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಹೊಸಕೋಟೆ ಇವರು ಸ್ವಾಧೀನಪಡಿಸಿಕೊಂಡಿರುತ್ತಾರೆ.

ಅಧಿಸೂಚಿತ ಕೃಷಿ ಉತ್ಪನ್ನಗಳ ಸಗಟು ವಹಿವಾಟಿಗಾಗಿ ಸೌಲಭ್ಯವನ್ನು ಕಲ್ಪಿಸಲು ಭೂಸ್ವಾಧೀನ ಮೂಲಕ ಪಡೆದಿರುವ 15.20 ಎಕರೆ ಜಮೀನಿನಲ್ಲಿ ಕ್ರಮ ವಹಿಸಿದ್ದು, ಹಾಲಿ ಇರುವ ಪ್ರಾಂಗಣದ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಂಡಿರುವ ಕೆಳಕಂಡ ಚೆಕ್‌ಬಂದಿಯನ್ನೊಳಗೊಂಡ ಪ್ರದೇಶವನ್ನು ಅಧಿಕೃತವಾಗಿ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966 ರ ಕಲಂ 6(3) ರಡಿಯಲ್ಲಿ ಕ್ರಮ ವಹಿಸಬೇಕಿರುತ್ತದೆ.

ಆದ್ದರಿಂದ, ವಿಸ್ತರಣೆಗಾಗಿ 15.20 ಎಕರೆ ಜಮೀನನ್ನು ಈ ಕೆಳಕಂಡ ಚೆಕ್‌ಬಂದಿಯೊಂದಿಗೆ ಅಧಿಸೂಚಿತ ಕೃಷಿ ಉತ್ಪನ್ನಗಳ ವಹಿವಾಟಿಗಾಗಿ ಘೋಷಣೆ ಮಾಡಲು ಉದ್ದೇಶವನ್ನು ಪ್ರಕಟಿಸಿದ್ದು, ಸದರಿ ಅಧಿಸೂಚನೆಯಿಂದ ಬಾಧಿತರಾಗುವ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ / ಸಲಹೆಯನ್ನು ಕನ್ನಡ ದಿನಪತ್ರಿಕೆಯಲ್ಲಿ ಪ್ರಕಟಣೆಗೊಂಡ 15 ದಿನಗಳೊಳಗಾಗಿ **ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ನಂ. 16, 2ನೇ ರಾಜಭವನ ರಸ್ತೆ, ಬೆಂಗಳೂರು – 560001** ಇವರಿಗೆ ಸಲ್ಲಿಸಬಹುದಾಗಿದೆ. ನಿಗಧಿತ ದಿನಾಂಕದ ನಂತರದಲ್ಲಿ ಬರುವ ಆಕ್ಷೇಪಣೆ / ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲ.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಹೊಸಕೋಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ವ್ಯಾಪ್ತಿಯಲ್ಲಿನ ಭಕ್ತಗೊಂಡನಹಳ್ಳಿ ಗ್ರಾಮದ 15.20 ಎಕರೆ ಜಮೀನಿನ ಚೆಕ್‌ಬಂದಿ.

ಹೊಸಕೋಟೆ ತಾಲ್ಲೂಕು ವ್ಯಾಪ್ತಿಯಲ್ಲಿನ ಗೊಣಕನಹಳ್ಳಿ ಉಪ ಮಾರುಕಟ್ಟೆ ಪ್ರಾಂಗಣಕ್ಕೆ ಹೊಂದಿಕೊಂಡಂತಿರುವ ಭಕ್ತಗೊಂಡನಹಳ್ಳಿ ಗ್ರಾಮದ ಸರ್ವೆ ನಂ. 4 ರ 15.20 ಎಕರೆ ಜಮೀನಿನ ಈ ಕೆಳಗಿನ ಸೀಮಾಬದ್ಧ ಸ್ಥಳ:

ಪೂರ್ವಕ್ಕೆ : ವಿಜೀಪುರ ಗಡಿ
ಪಶ್ಚಿಮಕ್ಕೆ : ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಕ್ಕೆ ಕಾಯ್ದಿರಿಸಿರುವ ಭಕ್ತಗೊಂಡನಹಳ್ಳಿ ಗ್ರಾಮದ ಸರ್ವೆ ನಂ. 4 ರ ಉಳಿಕೆ ಜಮೀನು ಹಾಗೂ ಗೊಣಕನಹಳ್ಳಿ ಗ್ರಾಮದ ಸರ್ವೆ ನಂ. 49 ರ ಉಳಿಕೆ ಜಮೀನು (ಆಶ್ರಯ ಯೋಜನೆಗೆ ಮಂಜೂರಾಗಿರುವ ಜಮೀನು)
ಉತ್ತರಕ್ಕೆ : ಗೊಣಕನಹಳ್ಳಿ ಗ್ರಾಮದ ಸರ್ವೆ ನಂ. 108 ರ ಜಮೀನು ಹಾಗೂ ಗೊಣಕನಹಳ್ಳಿ ಗ್ರಾಮದ ಸರ್ವೆ ನಂ. 49 ರ ಉಳಿಕೆ ಜಮೀನು
ದಕ್ಷಿಣಕ್ಕೆ : ಭಕ್ತಗೊಂಡನಹಳ್ಳಿ ಗ್ರಾಮದ ಸರ್ವೆ ನಂ. 4 ರ ಉಳಿಕೆ ಜಮೀನಿನಲ್ಲಿರುವ ರಸ್ತೆ.

ಸಹಿ/– ನಿರ್ದೇಶಕರು

ವಾಸಾಸಂಇ/ವಾ.ಪ್ರ/ಅಡ್ವಟೋರ್/1391/2026–27

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ಸಿ.ಎ ನಿವೇಶನ ಖಾತೆ ನಂ. 31–511–371, ವಾರ್ಡ್ ನಂ. 20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ–562110.

ಸಂ: ಬಿಐಎಪಿಎ/ಟಿಪಿ/ಭೂಉಬ/45/2026–27/1001 ದಿನಾಂಕ : 29.06.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ಭೂಉಪಯೋಗ ವಲಯದಿಂದ **ವಸತಿ ವಲಯಕ್ಕೆ** ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ.	ಮಹಾಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1.	ಮೆ॥ ಎಸ್.ಎಲ್.ವಿ ಬಿಲ್ಡರ್ಸ್ ಪರವಾಗಿ ಅಧಿಕೃತ ಪಾಲುದಾರರಾದ ಶ್ರೀ ಹರಿಬಾಬು	ದೇವನಹಳ್ಳಿ	ಕಸಬಾ	ಸಣ್ಣ ಅಮಾನಿಕೆರೆ	48/3ರ ಪೈಕಿ(ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ವಿಸ್ತೀರ್ಣವನ್ನು ಹೊರತುಪಡಿಸಿ)	0–04.08	ವ್ಯವಸಾಯ	**ವಸತಿ**
2.	ಶ್ರೀ ಅಂಜನ್ ಕುಮಾರ್ ಎಂ ಬಿನ್ ಮುನಿರಾಜ ಹೆಚ್ ಎ & ಶ್ರೀಮತಿ ಎಂ.ಎನ್.ರಾಧಾ ಕೋಂ ವೆಂಕಟೇಶಪ್ಪ ಕೆ.ಎಸ್	ದೇವನಹಳ್ಳಿ	ಕಸಬಾ	ಸಣ್ಣ ಅಮಾನಿಕೆರೆ	46/15ರ ಪೈಕಿ(ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಿರುವ ವಿಸ್ತೀರ್ಣವನ್ನು ಹೊರತುಪಡಿಸಿ)	0–02	ವ್ಯವಸಾಯ	**ವಸತಿ**
3.		ದೇವನಹಳ್ಳಿ	ಕಸಬಾ	ಸಣ್ಣ ಅಮಾನಿಕೆರೆ	46/16	0–08	ವ್ಯವಸಾಯ	**ವಸತಿ**

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದು ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನುಗಳನ್ನು **ವ್ಯವಸಾಯ ವಲಯ**ದಿಂದ **ವಸತಿ ವಲಯ**ಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **"ವ್ಯವಸಾಯ ಭೂಉಪಯೋಗ ವಲಯ"**ದಿಂದ **"ವಸತಿ ವಲಯ"** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.

ವಾಸಾಸಂಇ/ವಾ.ಪ್ರ/1412/ಎಂಎಂ/2026–27

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/98/2025–26 ದಿನಾಂಕ: 25.06.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಅಖಿಲೇಶ್ ಕುಮಾರ್, ಶ್ರೀ ಅವಿನಾಶ್ ಹಾಗೂ ಇತರರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ M/s. Quambiant Developers ಪರವಾಗಿ ನಿರ್ದೇಶಕರಾದ ಶ್ರೀ ಬೊಮ್ಮು ವೀರ ನರೇಂದ್ರನಾಥ್ ರೆಡ್ಡಿ	ಆನೇಕಲ್	ಸರ್ಜಾಪುರ	ಚಂಬೇನಹಳ್ಳಿ	144/1	2–20	ಕೈಗಾರಿಕಾ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗಾವಕಾಶ ಸೃಷ್ಟಿಯಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ವಸತಿ ರಹಿತ ಸಾರ್ವಜನಿಕರಿಗೆ ಕಾನೂನು ಬದ್ಧ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **ಕೈಗಾರಿಕಾ** ವಲಯದಿಂದ **ವಸತಿ** ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/1418/2026–27

ನಟ ರಣವೀರ್ ಸಿಂಗ್ ಅಭಿನಯದ 'ಪ್ರಳಯ್' ಸೆಪ್ಟೆಂಬರ್‌ನಿಂದ ಆಸ್ಟ್ರೇಲಿಯಾದಲ್ಲಿ ಶೂಟಿಂಗ್ ಆರಂಭಿಸಲಿದೆ. ಮುಂಬಯಿಯ ನರಕಸದೃಶ ಸ್ಥಳದಲ್ಲಿ ನಡೆಯುವ ರೋಮಾಂಚಕ ಥ್ರಿಲ್ಲರ್ ಕಥೆಯನ್ನು ಜೈ ಮೆಹ್ತಾ ನಿರ್ದೇಶಿಸಲಿದ್ದಾರೆ.

ನಿರ್ದೇಶಕ ತ್ರಿವಿಕ್ರಮ್ ಹಾಗೂ ನಟ ಜೂ.ಎನ್‌ಟಿಆರ್ ಕಾಂಬಿನೇಷನ್‌ನ ಹೊಸ ಸಿನಿಮಾ ಪೋಸ್ಟರ್‌ನಲ್ಲಿ ಸಂಸ್ಕೃತ ಬಳಕೆಯಾಗಿರುವುದು ಹಾಗೂ ಶಿವನ ಪುತ್ರ ಸುಬ್ರಹ್ಮಣ್ಯನಿಗೆ ಉತ್ತರ ಭಾರತ ಮೂಲ ಎಂದಿರುವುದು ವಿವಾದಕ್ಕೆ ಕಾರಣವಾಗಿದೆ.

ನೆನಪಿರಲಿ ಇವರು ಕೆಂಪಾಂಬುಧಿ ಕೆಂಪೇಗೌಡರು

ಕಿರಣ್ ಚಂದ್ರ
kiran.b@timesofindia.com

ದೂರದೃಷ್ಟಿಯ ಆಡಳಿತಗಾರ, ಜನಪರ ನಾಯಕ ಹಾಗೂ ಪರಿಸರದ ಮಹತ್ವವನ್ನು ಬಹಳ ಹಿಂದೆಯೇ ಅರಿತು ಅನುಷ್ಠಾನಗೊಳಿಸಿದ್ದ ನಾಡಪ್ರಭು ಕೆಂಪೇಗೌಡರ ಚಿಂತನೆಗಳು ಇಂದಿಗೂ ಬೆಂಗಳೂರಿನ ಅಸ್ತಿತ್ವದ ಅವಿಭಾಜ್ಯ ಅಂಗವಾಗಿವೆ. ಲೇಖಕ ಜಾಣಗೆರೆ ವೆಂಕಟರಾಮಯ್ಯ ಅವರ ಜನಪ್ರಿಯ ಕಾದಂಬರಿಯನ್ನು ಆಧರಿಸಿ ರಮೇಶ್ ಬೇಗಾರ್ ನಿರ್ದೇಶನದಲ್ಲಿ ಸಿದ್ಧವಾಗುತ್ತಿರುವ 'ಕೆಂಪಾಂಬುಧಿ' ಸಿನಿಮಾದ ವೈಶಿಷ್ಟ್ಯತೆ ಬಗ್ಗೆ ಹೆಮ್ಮೆಯಿಂದ ಮಾತನಾಡುತ್ತಾರೆ ನೆನಪಿರಲಿ ಪ್ರೇಮ್.

ನಾಡಪ್ರಭು ಕೆಂಪೇಗೌಡರ ಪಾತ್ರದಲ್ಲಿ ನಟಿಸಿದ ಅನುಭವದ ಬಗ್ಗೆ ಮಾತನಾಡುತ್ತಾ ಪ್ರೇಮ್, 'ಈ ತರಹದ ಪಾತ್ರ ನಾನು ಮಾಡಿರಲಿಲ್ಲ, ಕೆಂಪೇಗೌಡರು ನಮ್ಮೆಲ್ಲರ ಪಾಲಿನ ಹೀರೋ. ಅವರ ಪಾತ್ರ ಮಾಡಲು ಸಿಗುವ ಅವಕಾಶವೇ ಒಂದು ಅದೃಷ್ಟ. ಆ ಕಥೆಯನ್ನು ಅಷ್ಟೇ ಚೆನ್ನಾಗಿ ಸಿನಿಮಾ ಮಾಡಬಲ್ಲ ಅಂಶಗಳು ನಿರ್ದೇಶಕರು ಮತ್ತು ಚಿತ್ರತಂಡದಲ್ಲಿ ಕಾಣಿಸಿದವು. ಮೊದಲು ನನಗೆ ಈ ಸಿನಿಮಾದ ಮೂಲಕೃತಿಯಾದ ಜಾಣಗೆರೆ ವೆಂಕಟರಾಮಯ್ಯ ಅವರ ಕಾದಂಬರಿ ಓದಲು ನೀಡಿದರು. ಕಾದಂಬರಿ ಓದುವಾಗಲೇ ಅದಕ್ಕೆ ಮಾಡಿರುವ ಸಂಶೋಧನೆ ತಿಳಿಯಿತು. ತುಂಬಾ ನೈಜತೆಯಿಂದ ಕೂಡಿತ್ತು' ಎಂದಿದ್ದಾರೆ. ಹೀಗಾಗಿಯೇ ಅವರೂ ಚಿತ್ರಕ್ಕಾಗಿ ವಿಶೇಷ ತಯಾರಿ ಮಾಡಿಕೊಂಡಿದ್ದಾರೆ. 'ಈ ಚಿತ್ರದಲ್ಲಿನ ನನ್ನ ಪಾತ್ರದ ಹೇರ್‌ಸ್ಟೈಲ್, ಕಾಸ್ಟ್ಯೂಮ್‌ನಿಂದ ಹಿಡಿದು ಎಲ್ಲವೂ ಪರ್ಫೆಕ್ಟ್ ಆಗಿ ಇರಬೇಕೆಂದು ನಾನು ತುಂಬಾ ಹೋಮ್ ವರ್ಕ್ ಮಾಡಿಕೊಂಡೆ. ಕೆಂಪೇಗೌಡರ ಸಮಾಧಿಸ್ಥಳಕ್ಕೂ ಭೇಟಿ ನೀಡಿದ್ದೆ. ನಿರ್ದೇಶನ ತಂಡದ ಕಥೆ, ಸಂಭಾಷಣೆ ಬರಹದ ವೇಳೆ ಸಾಕಷ್ಟು ಚರ್ಚೆಗಳು ನಡೆದವು. ನಿರ್ದೇಶಕರು ಈ ಕುರಿತು ಹೆಚ್ಚು ತಿಳಿದುಕೊಂಡಿದ್ದರಿಂದ ನನಗೆ ಸ್ವಲ್ಪ ಸುಲಭವಾಯ್ತು. ಪ್ರತಿ ಪಾತ್ರವನ್ನು ಪುಸ್ತಕದಲ್ಲಿ ಅದ್ಭುತವಾಗಿ ಬರೆದಿರುವುದರಿಂದ, ಯಾವ ಪಾತ್ರಕ್ಕೂ, ಅದರ ಹಾವಭಾವ, ಸಂಭಾಷಣೆಗೆ ಚ್ಯುತಿ ಬಾರದ ರೀತಿಯಲ್ಲಿ ರಿಹರ್ಸಲ್ ಮಾಡಿಕೊಂಡೆವು' ಎಂದಿದ್ದಾರೆ ಪ್ರೇಮ್.

ಕಾದಂಬರಿಯನ್ನು ತೆರೆಗೆ ತರುವ ಕಷ್ಟ: ಕಾದಂಬರಿ ಒಂದನ್ನು ಸಿನಿಮಾ ಮಾಡುವುದು ಎಷ್ಟು ಸವಾಲಿನ ಕೆಲಸ ಎನ್ನುವುದನ್ನು ಹೇಳಿರುವ ಪ್ರೇಮ್, 'ಬರವಣಿಗೆಗೂ ಅದನ್ನು ತೆರೆಗೆ ತರುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಒಂದೇ ಸಾಲಿನಲ್ಲಿ ಬರೆದ ವರ್ಣನೆಯನ್ನು ತೆರೆಗೆ ಇಡುವುದು ಸುಲಭವಲ್ಲ, ಉದಾಹರಣೆಗೆ 'ಕೆಂಪೇಗೌಡರು ಕುದುರೆ ಏರಿ ಬಂದರು' ಎಂದಿದ್ದರೆ ಅದನ್ನು ತೆರೆಗೆ ಇಡುವುದಕ್ಕೆ ಲೊಕೇಷನ್, ವೇಷಭೂಷಣ, ನಟನೆ ಎಲ್ಲವೂ ಬೇಕು. ಕೆಲವೊಮ್ಮೆ ಒಂದು ಸಾಲನ್ನು ತೆರೆಗೆ ತರಲು ಒಂದಿಡೀ ದಿನ ಶೂಟ್ ಮಾಡಬೇಕಾಗುತ್ತೆ. ಕಾದಂಬರಿಯನ್ನು ಅದ್ಭುತವಾಗಿ ಬರೆದಿರುವ ಕಾರಣ, ಅಷ್ಟೇ ಸೊಗಸಾಗಿ ತೆರೆಗೆ ತರುವುದು ಚಾಲೆಂಜಿಂಗ್ ಆಗಿತ್ತು' ಎಂದು ವಿವರ ನೀಡಿದ್ದಾರೆ.

ಈಗಿನ ಜೆನ್ ಜೀ ಜನರೇಷನ್‌ಗೆ ಗೊತ್ತಿಲ್ಲದ ಬೆಂಗಳೂರಿನ ಸ್ವಾರಸ್ಯಕರ ವಿಷಯಗಳನ್ನು ಚಿತ್ರದಲ್ಲಿ ಹೇಳಲಾಗಿದೆ. 'ಬೆಂಗಳೂರನ್ನು ಕೆಂಪೇಗೌಡರು ಕಟ್ಟಿದರು ಎಂಬ ಮಾಹಿತಿ ಇದೆ. ಈ ಸುಂದರ ಬೆಂಗಳೂರಿನ ನಿರ್ಮಾಣಕ್ಕೆ ಅವರು ಪಟ್ಟ ಕಷ್ಟವೇನು? ಮಾಡಿದ ತ್ಯಾಗಗಳೇನು? ಬೆಂಗಳೂರಿನಲ್ಲಿ ಕುಡಿಯುವ ನೀರಿಗೆ ಬರ ಬಾರದಂತೆ ಆ ಕಾಲಕ್ಕೆ ಅವರು ಮಾಡಿದ ಉಪಾಯ ಇಂದಿಗೂ ಜಲಕ್ಷಾಮವಾಗದಂತೆ ಕಾಯುತ್ತಿದೆ. ಇದಕ್ಕೆ ಆಗಿನ ಕಾಲಕ್ಕೆ ಅವರು ಮಾಡಿರುವ ಭೂಗತ ನೀರಿನ ವ್ಯವಸ್ಥೆಯಿಂದ ಹಿಡಿದು, ಆ ಕಾಲಕ್ಕೆ ಬೆಂಗಳೂರನ್ನು ವರ್ಲ್ಡ್ ಟ್ರೇಡ್ ಸೆಂಟರ್ ಮಾಡಿದ, ಎಲ್ಲಾ ಜಾತಿ ಜನಾಂಗಕ್ಕೂ, ಅವರ ವೃತ್ತಿಗನುಸಾರವಾಗಿ ಪೇಟೆ ಕಟ್ಟಿದ ಮಹಾನ್ ವ್ಯಕ್ತಿಯನ್ನು ದೇವರೆಂದರೂ ತಪ್ಪಿಲ್ಲ. ಅಂತಹ ಅನೇಕ ಕುತೂಹಲಭರಿತ ವಿಷಯಗಳು ಸಿನಿಮಾದಲ್ಲಿ ಇರಲಿವೆ' ಎಂದಿದ್ದಾರೆ ಪ್ರೇಮ್. ■

> ಈ ಸಿನಿಮಾದಲ್ಲಿ ನನ್ನ ಪಾತ್ರಕ್ಕೆ ಮೂರು ಶೇಡ್‌ಗಳಿವೆ. ಕೆಂಪೇಗೌಡರ ಬಾಲ್ಯ, ಯೌವನ, ವೃದ್ಧಾಪ್ಯದ ಲುಕ್‌ಗಳಿವೆ. ಹೀಗಾಗಿ ನನ್ನ ಮೀಸೆ ತೆಗೆದು ಸಂಪೂರ್ಣ ಕೃತಕ ಮೀಸೆಯಲ್ಲಿ ನಟಿಸುವ ಪ್ಲಾನ್ ಆಗಿತ್ತು. ಆದರೆ ಕೆಂಪೇಗೌಡರ ಗತ್ತೇ ಆ ಮೀಸೆ. ಹಾಗಾಗಿ ನಾನೇ ನೈಜವಾಗಿ ಅವರಂತೆಯೇ ಮೀಸೆ ಬಿಡಲು ಆರೇಳು ತಿಂಗಳು ಹೆಚ್ಚು ಸಮಯ ಬೇಕಾಯಿತು. ನಂತರ ಗಡ್ಡದ ಲುಕ್‌ನಲ್ಲಿ ಕೆಲ ದಿನ ಚಿತ್ರೀಕರಿಸಲಾಗಿದೆ. ಅಂತಿಮವಾಗಿ ಈ ಲುಕ್‌ಗಳ ಬಗ್ಗೆ ತೃಪ್ತಿ ಇದೆ.
>
> **- ನೆನಪಿರಲಿ ಪ್ರೇಮ್ | ನಟ**

ವೈದ್ಯರ ದಿನ ವಿಶೇಷ

CONSUMER CONNECT INITIATIVE

ವೈದ್ಯರ ಬದುಕಿಗೆ ವೆಬ್‌ಸಿರೀಸ್ ಹಿಡಿದ ಕನ್ನಡಿ

ಇಂದು ವೈದ್ಯರ ದಿನ. ಜಾಗತಿಕ ಚಿತ್ರರಂಗ ವೈದ್ಯರ ಬದುಕಿನ ಒಳಹೊರಗನ್ನು ವಿವಿಧ ಸಂದರ್ಭಗಳಲ್ಲಿ ತೆರೆದಿಟ್ಟಿದೆ. ಈಗ ವೆಬ್ ಸರಣಿಗಳ ಸರದಿ. ಹಲವು ವೆಬ್ ಸಿರೀಸ್‌ಗಳು ವೈದ್ಯರ ಸುತ್ತ ಹೆಣೆದುಕೊಂಡಿದ್ದು, ಅವರ ಬದುಕಿನ ವಿವಿಧ ಬಣ್ಣಗಳು ತೆರೆಯಲ್ಲಿ ಮೂಡಿವೆ. ಈ ಬಗೆಗೆ ವಿವರ ಇಲ್ಲಿದೆ.

ಸಚಿನ್ ಹೊನ್ನೇಸರ
feedbacklvk@vijaykarnataka.com

ಪ್ರತಿಯೊಂದು ವೃತ್ತಿಗೆ ತನ್ನದೇ ನಡೆ ಇರುತ್ತದೆ. ಅದಕ್ಕೆ ಬೇಕಾದ ರೀತಿಯಲ್ಲಿ ನಾವು ರೂಪುಗೊಳ್ಳುತ್ತೇವೆ. ವೈದ್ಯಕೀಯ ಕ್ಷೇತ್ರ ಕೇವಲ ವೃತ್ತಿಯಲ್ಲ, ಅದು ಪವಿತ್ರ ಸೇವಾಕಾರ್ಯವೂ ಹೌದು. ಸಮಾಜದ ಸ್ವಾಸ್ಥ್ಯಕ್ಕಾಗಿ ವೈದ್ಯರು ತಮ್ಮ ಜೀವನವನ್ನು ಮುಡಿಪಾಗಿಡುವಂತೆ ವೈದ್ಯಕೀಯ ವೃತ್ತಿ ವೈದ್ಯರನ್ನು ರೂಪಿಸುತ್ತದೆ. ಈ ನಿಟ್ಟಿನಲ್ಲಿ ವೈದ್ಯರು ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ, ಒತ್ತಡ ನಿಭಾವಣೆ, ವೈಯಕ್ತಿಕ ಸಮಯ ಇಲ್ಲದಿರುವುದು... ಹೀಗೆ ಹಲವಾರು ವಿಷಯಗಳನ್ನು ನಿಭಾಯಿಸಬೇಕಾಗುತ್ತದೆ. ವೈದ್ಯರ ಜೀವನದಲ್ಲಿ ಏನೆಲ್ಲ ನಡೆಯುತ್ತದೆ? ಹಲವಾರು ವೆಬ್‌ಸಿರೀಸ್‌ಗಳು ಈ ಅಂಶಗಳನ್ನು ಪ್ರೇಕ್ಷಕರಿಗಾಗಿ ಸೆರೆಹಿಡಿಯುವ ಪ್ರಯತ್ನ ಮಾಡಿವೆ.

ವೃತ್ತಿಪರ ಸವಾಲುಗಳು

ವೈದ್ಯರು ಎದುರಿಸುವ ವೃತ್ತಿಪರ ಸವಾಲುಗಳು, ನೈತಿಕ ಸಂದಿಗ್ಧತೆಗಳ ಜತೆಗೆ ಈದೀಗ ವೃತ್ತಿ ಪ್ರಾರಂಭಿಸಿದ ವೈದ್ಯರು ಅತಿ ಒತ್ತಡದ ನಡುವೆ ತಮ್ಮನ್ನು ತಾವು ಕಂಡುಕೊಳ್ಳಲು ಹವಣಿಸುವುದನ್ನು ತಮಿಳಿನ 'ಹಾರ್ಟ್ ಬೀಟ್' ಎಂಬ ಸಿರೀಸ್ ತೋರಿಸುತ್ತದೆ.

ಇಂತಹದ್ದೇ ಮತ್ತೊಂದು ಸುಪ್ರಸಿದ್ಧ ಸಿರೀಸ್ ಇಪ್ಪತ್ತೆರಡು ಸೀಸನ್‌ಗಳನ್ನು ಬಿಡುಗಡೆ ಮಾಡಿದೆ. ಅದು ಇಂಗ್ಲಿಷ್‌ನ 'ಗ್ರೇಸ್ ಅನಾಟಮಿ'. ವೃತ್ತಿಯನ್ನು ಪ್ರಾರಂಭಿಸಿದ ವೈದ್ಯೆ ಹೇಗೆ ಸುಪ್ರಸಿದ್ಧ ಸರ್ಜನ್ ಆಗುತ್ತಾಳೆ, ಅದರ ನಡುವೆ ಆಕೆ ಎದುರಿಸುವ ಕಷ್ಟಗಳು, ಸಂಬಂಧಗಳ ಸಂಕೀರ್ಣತೆಗಳನ್ನು ತೋರಿಸಲಾಗಿದೆ.

ತುರ್ತು ಚಿಕಿತ್ಸೆ

ತುರ್ತು ಚಿಕಿತ್ಸೆಯ ವಾರ್ಡ್ ಎಂದರೆ ತುದಿಗಾಲಲ್ಲಿ ನಿಂತಿರುವ ಪರಿಸ್ಥಿತಿ. ಕಾರಣಾಂತರದಿಂದ ಒಬ್ಬ ಕಿರಿಯನನ್ನು ಮುಖ್ಯ ವೈದ್ಯನನ್ನಾಗಿಸಿ, ಆತ ಎದುರಿಸುವ ಒತ್ತಡಗಳು, ತಕ್ಷಣದ ನಿರ್ಧಾರ ತೆಗೆದುಕೊಳ್ಳಬೇಕಾದ ಪರಿಸ್ಥಿತಿಗಳನ್ನು ಇಂಗ್ಲಿಷ್‌ನ 'ಪಲ್ಸ್' ಸಿರೀಸ್ ಅನಾವರಣಗೊಳಿಸುತ್ತದೆ. ಇಂತಹದ್ದೇ ವಿಷಯವನ್ನು ಬೇರೆ ರೀತಿಯಲ್ಲಿ ವಿಸ್ತರಿಸಿರುವ ಕೊರಿಯನ್ ಡ್ರಾಮಾ ಒಂದಿದೆ. ಅದು 'ದಿ ಟ್ರಾಮ ಕೋಡ್: ಹೀರೋಸ್ ಆನ್ ಕಾಲ್'. 'ಈಆರ್' ಎಂಬ ಇಂಗ್ಲಿಷ್ ಸೀರೀಸ್ ಕೂಡ ಇದಕ್ಕೆ ಉದಾಹರಣೆಯಾಗಿದೆ.

'ಡಾಕ್ಟರ್ಸ್' ಎಂಬ ಹಿಂದಿ ಸೀರೀಸ್ ಮುಂಬೈ ಆಸ್ಪತ್ರೆಗೆ ಬರುವ ತೀವ್ರ ಪ್ರಕರಣಗಳು, ಅಲ್ಲಿನ ವೈದ್ಯರ ನಡುವಿನ ಪೈಪೋಟಿಯನ್ನು ತೋರಿಸುವ ಪ್ರಯತ್ನ ಮಾಡುತ್ತದೆ. ಸಂಬಂಧಗಳ ನಡುವಿನ ಸೂಕ್ಷ್ಮತೆಯನ್ನು ಇಲ್ಲಿ ತೆರೆದಿಡಲಾಗಿದೆ. ಹಿಂದಿಯ 'ಮುಂಬೈ ಡೈರೀಸ್' ಕೂಡ ತುರ್ತು ಪರಿಸ್ಥಿತಿಯ ಆವರಣದಲ್ಲಿ ಅನಾವರಣವಾಗಿದೆ.

ಗ್ರಾಮೀಣ ಸೌಲಭ್ಯ

ಭಾರತದ ಹಳ್ಳಿಗಳಲ್ಲಿ ವೈದ್ಯಕೀಯ ಸೌಲಭ್ಯಗಳ ಕೊರತೆ, ಪೇಟೆಯ ವೈದ್ಯ ಹಳ್ಳಿಗೆ ಒಗ್ಗುವ ಬಗೆ, ಅಲ್ಲಿನ ಸವಾಲುಗಳನ್ನು ಹಾಸ್ಯದ ಜತೆಗೆ ಬೆರೆಸಿದ ಪ್ರಸಿದ್ಧ ಹಿಂದಿ ಸಿರೀಸ್ 'ಗ್ರಾಮ್ ಚಿಕಿತ್ಸಾಲಯ್'. ಇಂಥದ್ದೆ ಇಂಗ್ಲೀಷ್ ಸಿರೀಸ್ 'ದಿ ಗುಡ್ ಕರ್ಮ ಹಾಸ್ಪಿಟಲ್'. ಇಂಗ್ಲೆಂಡಿನ ವೈದ್ಯೆಯ ಪ್ರೇಮ ವೈಫಲ್ಯ ಕೇರಳದ ಹಳ್ಳಿಗೆ ವರವಾಗುತ್ತದೆ. ಆಕೆ ಇಂಗ್ಲೆಂಡನ್ನು ಬಿಟ್ಟು ಕೇರಳದ ಆಸ್ಪತ್ರೆಯಲ್ಲಿ ಬುಡಕಟ್ಟು ಜನಾಂಗದವರಿಗಾಗಿ ಸೇವೆ ಸಲ್ಲಿಸುತ್ತಾಳೆ.

ವೈದ್ಯಕೀಯ ಶಿಕ್ಷಣ

'ಮೆಡಿಕಲ್ ಡ್ರೀಮ್ಸ್' ಎಂಬ ಹಿಂದಿ ಸಿರೀಸ್ ವೈದ್ಯಕೀಯ ಶಿಕ್ಷಣ, ಅಲ್ಲಿನ ಒತ್ತಡಗಳು, ನೀಟ್ ಪರೀಕ್ಷೆ ಇವುಗಳ ಕುರಿತು ಪ್ರೇಕ್ಷಕರಿಗೆ ಅರಿವು ಮೂಡಿಸುತ್ತದೆ. 'ಮೆಡಿಕಲಿ ಯುವರ್ಸ್' ಎಂಬುದು ಮೆಡಿಕಲ್ ಓದುತ್ತಿರುವ ವಿದ್ಯಾರ್ಥಿಗಳ ದಿನಚರಿ, ಅವರು ಅನುಭವಿಸುವ ಭಾವಗಳ ಏರಿಳಿತಗಳನ್ನು ಸಿನಿಮೀಯವಾಗಿ ದಾಖಲಿಸಿರುವ ಹಿಂದಿ ಸಿರೀಸ್.

ಪ್ರೀತಿ ಪ್ರೇಮ ಇತ್ಯಾದಿ

ವೈದ್ಯರ ಒತ್ತಡಗಳ ನಡುವೆ ಅಂಕುರಿಸುವ ಪ್ರೀತಿಯ ಭಾವವನ್ನು ಬೆಳಕಿಗೆ ತರುವ ಪ್ರಯತ್ನವನ್ನು ಹಲವಾರು ವೆಬ್ ಸರಣಿಗಳು ಮಾಡಿವೆ. ಇದು ಟಿವಿ ಸೀರಿಯಲ್‌ಗಳ ಕಾಲದಿಂದಲೂ ಮುಂದುವರಿದಿದೆ. ಇದರಲ್ಲಿ ಹೆಸರುವಾಸಿಯಾಗಿರುವುದು ಹಿಂದಿಯ 'ದಿಲ್ ಮಿಲ್ ಗಯೆ', ಕನ್ನಡದಲ್ಲಿ 'ಕರ್ಣ' ಧಾರಾವಾಹಿಯಲ್ಲಿ ನಾಯಕ-ನಾಯಕಿ ವೈದ್ಯರೇ. ಕೊರಿಯಾದ 'ಡಾಕ್ಟರ್ ಸ್ಲಂಪ್', ಇಂಗ್ಲಿಷ್‌ನ 'ದಿ ರೆಸಿಡೆಂಟ್', ಚೈನೀಸ್ ಭಾಷೆಯ 'ದಿ ಬೆಸ್ಟ್ ಥಿಂಗ್' ಸೇರಿ ಎಲ್ಲ ಭಾಷೆಗಳಲ್ಲೂ ಇಂತಹ ಸಿರೀಸ್‌ಗಳು ಸಿಗುತ್ತವೆ. ಹೀಗೆ ವೈದ್ಯರ ಸುತ್ತ ಹೆಣೆದುಕೊಂಡಿರುವ ಹಲವಾರು ಸಿರೀಸ್‌ಗಳು ವೈದ್ಯಲೋಕದ ಸಂಕೀರ್ಣತೆಯನ್ನು ಪ್ರಸ್ತುತಪಡಿಸುವ ಪ್ರಯತ್ನ ಮಾಡಿವೆ. ■

ವೈದ್ಯರ ಮಾತಿನಿಂದಲೇ ಅರ್ಧ ಕಾಯಿಲೆ ವಾಸಿ!

ವೈದ್ಯರ ಉಪಸ್ಥಿತಿಯೇ ಗುಣಮುಖವಾಗುವಿಕೆಯ ಆರಂಭ ಎನ್ನುತ್ತೇವೆ. ಏಕೆಂದರೆ ವೈದ್ಯರೆದುರು ರೋಗಿ ನಿಂತಾಗ ಅರ್ಧ ಕಾಯಿಲೆ ಗುಣವಾದ ಅನುಭವ ಆಗುತ್ತದೆ. ರೋಗಿಯು ತನಗೆ ಬೇರೇನೂ ದಾರಿಯಿಲ್ಲ ಎಂದಾದಾಗ ಅಂತಿಮವಾಗಿ ಬರುವುದು ವೈದ್ಯರಲ್ಲಿಗೆ. ಅವರ ಮುಂದೆ ರೋಗಿ ತನಗಾಗುತ್ತಿರುವ ಎಲ್ಲ ಸಮಸ್ಯೆಗಳನ್ನೂ ಮುಕ್ತವಾಗಿ ಹೇಳಿಕೊಳ್ಳುತ್ತಾನೆ ಎಂದರೆ ಅದಕ್ಕೆ ಅವರ ಮೇಲಿನ ನಂಬಿಕೆಯೇ ಕಾರಣ. ಈ ಸಂದರ್ಭದಲ್ಲಿ ಅವರಿಗೆ ವೈದ್ಯರ ಭರವಸೆಯ ಮಾತುಗಳು, ಸಹಾನುಭೂತಿಯಿಂದಲೇ ಸಾಂತ್ವನ ಸಿಗುತ್ತದೆ. ರೋಗಿ ತಮ್ಮ ಸಮಸ್ಯೆಗಳನ್ನು ವಿವರಿಸುವಾಗ ವೈದ್ಯರು ಸುಮ್ಮನೇ ಕೇಳಿಸಿಕೊಂಡರೂ ಸಾಕು, ಅದುವೇ ಅವರಿಗೆ ಸಮಾಧಾನ ನೀಡುತ್ತದೆ. ಇದಲ್ಲದೆ ವೈದ್ಯರು ನೀಡುವ ಧೈರ್ಯ, ಕರುಣೆ ಮತ್ತು ಆಶ್ವಾಸನೆ ಮಾನಸಿಕವಾಗಿ ನಿರಾಳತೆ ಮೂಡಿಸುತ್ತದೆ. ಹೀಗಾಗಿ ವೈದ್ಯರು ರೋಗಿಯನ್ನು ಧನಾತ್ಮಕವಾಗಿ ಎದುರುಗೊಳ್ಳಬೇಕು.

-ಡಾ. ಆದರ್ಶ್ ಸೋಮಶೇಖರ್ | ಅಧ್ಯಕ್ಷರು ಮತ್ತು ಸಿಇಒ, ಓವಂ ಆಸ್ಪತ್ರೆ

ಮಧುಮೇಹ ತಪಾಸಣೆಗೆ ಸೂಕ್ತ ವಿಧಾನ

ಭಾರತೀಯ ಉಪಖಂಡದಲ್ಲಿ ಟೈಪ್ 2 ಮಧುಮೇಹ ಹೊಂದಿರುವ ಜನರ ಸಂಖ್ಯೆ ಹೆಚ್ಚುತ್ತಿರುವುದರಿಂದ ಮಧುಮೇಹಕ್ಕೆ ಸಂಬಂಧಿಸಿದ ಗಂಭೀರ ಆರೋಗ್ಯ ಸಮಸ್ಯೆಗಳ ಹೊರೆಯನ್ನು ತಡೆಗಟ್ಟಲು ಉತ್ತಮ ಗ್ಲೈಸೆಮಿಕ್ ನಿಯಂತ್ರಣವನ್ನು ಕಾಯ್ದುಕೊಳ್ಳುವುದು ಅತ್ಯಗತ್ಯ. ಈ ಹೊರೆಯನ್ನು ಕಡಿಮೆ ಮಾಡಲು ಮತ್ತು ಪ್ರತಿಕೂಲ ಪರಿಣಾಮಗಳನ್ನು ತಪ್ಪಿಸಲು ಟೈಪ್ 2 ಮಧುಮೇಹವನ್ನು ಸರಿಯಾಗಿ ಪತ್ತೆಹಚ್ಚುವುದು ಮತ್ತು ಮೇಲ್ವಿಚಾರಣೆ ಮಾಡುವುದು ಅನಿವಾರ್ಯ. ಹೀಗಾಗಿ ಚಿಕಿತ್ಸಾ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಲು ಪ್ರಿ-ಡಯಾಬಿಟಿಸ್ ಮತ್ತು ಮಧುಮೇಹ ಎರಡನ್ನೂ ನಿಖರವಾಗಿ ಪತ್ತೆಹಚ್ಚುವ ಅಗತ್ಯವಿದೆ.

ಈ ನಿಟ್ಟಿನಲ್ಲಿ ಹೆಚ್ಚಿನ ವೈದ್ಯರು ಟೈಪ್ 2 ಮಧುಮೇಹದ ರೋಗನಿರ್ಣಯ ಮತ್ತು ನಿರ್ವಹಣೆಗಾಗಿ ಗ್ಲೈಕೇಟೆಡ್ ಹಿಮೋಗ್ಲೋಬಿನ್ ಅನ್ನು ಅವಲಂಬಿಸಿದ್ದಾರೆ. ಈ ಪರೀಕ್ಷೆಗೆ ಉಪವಾಸದ ಅಗತ್ಯವಿರುವುದಿಲ್ಲ, ಇದು ಹಿಂದಿನ ಎರಡು ಮೂರು ತಿಂಗಳುಗಳ ಗ್ಲೈಸೆಮಿಕ್ ಪ್ರವೃತ್ತಿಯನ್ನು ಪ್ರತಿಬಿಂಬಿಸುತ್ತದೆ ಮತ್ತು ವಿಶ್ವ ಆರೋಗ್ಯ ಸಂಸ್ಥೆ ಹಾಗೂ ಅಮೆರಿಕನ್ ಡಯಾಬಿಟಿಸ್ ಅಸೋಸಿಯೇಷನ್ ಸೇರಿದಂತೆ ಪ್ರಮುಖ ಕ್ಲಿನಿಕಲ್ ಮಾರ್ಗಸೂಚಿಗಳಲ್ಲಿ ಇದನ್ನು ವ್ಯಾಪಕವಾಗಿ ಅಳವಡಿಸಿಕೊಳ್ಳಲಾಗಿದೆ. ಮಧುಮೇಹವನ್ನು ಪತ್ತೆಹಚ್ಚುವಲ್ಲಿ ಮತ್ತು ಅದನ್ನು ಮೇಲ್ವಿಚಾರಣೆ ಮಾಡುವಲ್ಲಿ HbA1cನ ಕ್ಲಿನಿಕಲ್ ಪಾತ್ರಗಳು ವಿಭಿನ್ನವಾಗಿವೆ ಎಂಬುದನ್ನು ಗುರುತಿಸುವುದು ಮುಖ್ಯ. ಅಲ್ಲದೆ, ರೋಗಿಯ ಮತ್ತು ಪ್ರಯೋಗಾಲಯದ ಅಂಶಗಳಿಂದಾಗಿ ಪ್ರತಿಯೊಂದರ ಮೇಲೂ ವಿಭಿನ್ನವಾಗಿ ಪರಿಣಾಮ ಬೀರಬಹುದು.

ಇದಲ್ಲದೆ, ಇದರ ವ್ಯಾಪಕ ಬಳಕೆ ಮತ್ತು ವೈದ್ಯರು ಹಾಗೂ ರೋಗಿಗಳು ಇಬ್ಬರಲ್ಲೂ ಕಂಡುಬರುವ ಅತಿಯಾದ ಸರಳೀಕರಣದ ಪ್ರವೃತ್ತಿಯು ತಪ್ಪಾದ ವ್ಯಾಖ್ಯಾನಕ್ಕೆ ಕಾರಣವಾಗಬಹುದು. ವಿಶೇಷವಾಗಿ ರಕ್ತಹೀನತೆ ಅಥವಾ ಹಿಮೋಗ್ಲೋಬಿನೋಪತಿಗಳಂತಹ ಬದಲಾದ ಎರಿಥ್ರೋಸೈಟ್ ಚಲನಶೀಲತೆ ಹೊಂದಿರುವ ಜನಸಂಖ್ಯೆಯಲ್ಲಿ ಇದು ಕಂಡುಬರುತ್ತದೆ. ಜೆನೆಟಿಕ್, ಹೆಮಟೊಲಾಜಿಕಲ್ ಅಥವಾ ಮೆಟಬಾಲಿಕ್ ವ್ಯತ್ಯಾಸಗಳನ್ನು ಪರಿಗಣಿಸದೆ, HbA1c ಎಲ್ಲಾ ವ್ಯಕ್ತಿಗಳಲ್ಲಿ ಗ್ಲೈಸೆಮಿಕ್ ನಿಯಂತ್ರಣವನ್ನು ಒಂದೇ ರೀತಿಯಾಗಿ ಪ್ರತಿಬಿಂಬಿಸುತ್ತದೆ ಎಂಬ ಕಲ್ಪನೆಯನ್ನು ಏಷ್ಯನ್ ಭಾರತೀಯರಂತಹ ಕೆಲವು ಜನಸಂಖ್ಯೆಯಲ್ಲಿ ಸಮರ್ಥಿಸುವುದು ಹೆಚ್ಚು ಕಷ್ಟಕರವಾಗುತ್ತಿದೆ.

ಪ್ರಿ-ಡಯಾಬಿಟಿಸ್ ಅಥವಾ ಟೈಪ್ 2 ಮಧುಮೇಹದ ರೋಗನಿರ್ಣಯಕ್ಕಾಗಿ, ಪ್ರಮಾಣೀಕೃತ ಓರಲ್ ಗ್ಲೂಕೋಸ್ ಟಾಲರೆನ್ಸ್ ಟೆಸ್ಟ್ ಅತ್ಯುತ್ತಮ ಮಾನದಂಡವಾಗಿ ಮುಂದುವರಿಯಬೇಕು. ಈ ರೋಗನಿರ್ಣಯವನ್ನು ದೃಢೀಕರಿಸಲು HbA1c ಅನ್ನು ಬಳಸಬಹುದು. ಆದರೆ ಇದು ಏಕೈಕ ರೋಗನಿರ್ಣಯದ ಸಾಧನವಾಗಿ ಕಾರ್ಯನಿರ್ವಹಿಸಬಾರದು.

ಮೇಲ್ವಿಚಾರಣೆಗಾಗಿ, HbA1c ಅನ್ನು ನಿರಂತರ ಉಪವಾಸದ ಮತ್ತು ಊಟದ ನಂತರದ ರಕ್ತದ ಗ್ಲೂಕೋಸ್ ಮೌಲ್ಯಗಳ ಜೊತೆಗೆ ಅರ್ಥೈಸಿಕೊಳ್ಳಬೇಕು. ದೀರ್ಘಕಾಲೀನ ಗ್ಲೈಸೆಮಿಕ್ ಮೌಲ್ಯಮಾಪನದಲ್ಲಿ ಎರಡೂ ಅಳತೆಗಳು ಪರಸ್ಪರ ಪೂರಕವಾಗಿರಬೇಕು. ಲಭ್ಯವಿರುವ ಮತ್ತು ಕೈಗೆಟಕುವ ಕಡೆಗಳಲ್ಲಿ, ಕಂಟಿನ್ಯೂಯಸ್ ಗ್ಲೂಕೋಸ್ ಮಾನಿಟರಿಂಗ್ ಸಿಸ್ಟಮ್ಸ್ ಗ್ಲೈಸೆಮಿಕ್ ವ್ಯತ್ಯಾಸದ ಬಗ್ಗೆ ಹೆಚ್ಚಿನ ಒಳನೋಟಗಳನ್ನು ನೀಡಬಹುದು.

HbA1c, CGM ಅಥವಾ ಗ್ಲೂಕೋಸ್‌ನ ಸ್ವಯಂ-ಮೇಲ್ವಿಚಾರಣೆ ಮೌಲ್ಯಗಳ ನಡುವೆ ದೊಡ್ಡ ಮಟ್ಟದ ವ್ಯತ್ಯಾಸಗಳು ಕಂಡುಬಂದಲ್ಲಿ, ಹೆಮಟೊಲಾಜಿಕಲ್ ನಿಯತಾಂಕಗಳನ್ನು, ವಿಶೇಷವಾಗಿ ರೆಡ್ ಸೆಲ್ ಡಿಸ್ಟ್ರಿಬ್ಯೂಷನ್ ವಿಡ್ತ್ ಅನ್ನು ನಿಯಮಿತವಾಗಿ ಮೌಲ್ಯಮಾಪನ ಮಾಡಬೇಕು ಹೆಚ್ಚಾಗಿದ್ದಾಗ ಅಥವಾ ವ್ಯತ್ಯಾಸಗಳು ಮುಂದುವರಿದಾಗ ಕಂಪ್ಲೀಟ್ ಬ್ಲಡ್ ಕೌಂಟ್, ಪೆರಿಫೆರಲ್ ಬ್ಲಡ್ ಸ್ಮಿಯರ್, ಐರನ್ ಸ್ಟಡೀಸ್ ಮತ್ತು ಹಿಮೋಗ್ಲೋಬಿನ್ ಎಲೆಕ್ಟ್ರೋಫೋರೋಸಿಸ್ ಸೇರಿದಂತೆ ಉದ್ದೇಶಿತ ತಪಾಸಣೆಯನ್ನು ಪರಿಗಣಿಸಬೇಕು.

ಡಾ. ಶಂಕರ್ ವಿ.
ಹಿರಿಯ ವೈದ್ಯರು, ಜೀವಮಾನ ಸಾಧನೆ ಪ್ರಶಸ್ತಿ ಪುರಸ್ಕೃತ ಮಧುಮೇಹ ಮತ್ತು ಹೃದ್ರೋಗ ತಜ್ಞರು

ಸ್ಟ್ಯಾಂಡರ್ಡ್ ಲ್ಯಾಬೋರೇಟರಿ ಆ್ಯಂಡ್ ಪಾಲಿಕ್ಲಿನಿಕ್
#23, ಮೊದಲನೇ ಮಹಡಿ, 2ನೇ ಮುಖ್ಯರಸ್ತೆ,
ರಾಜೇಶ್ ಹೋಟೆಲ್ ಹತ್ತಿರ, ವೈಯಾಲಿಕಾವಲ್,
ಬೆಂಗಳೂರು-560003.
ಫೋನ್: 8197833485, 23360268
ಲ್ಯಾಬ್ ಸಮಯ: ಬೆಳಗ್ಗೆ 7 ರಿಂದ ಸಂಜೆ 6
ಕ್ಲಿನಿಕ್ ಸಮಯ: ಮಧ್ಯಾಹ್ನ 2 ರಿಂದ ಸಂಜೆ 6

ವೆಂಕಟೇಶ್ವರ ಡಯಾಬಿಟಿಕ್ ಅಂಡ್ ಮೆಟರ್ನಿಟಿ ಡೇ ಕೇರ್ ಸೆಂಟರ್
ಚೌಡೇಶ್ವರಿ ದೇವಸ್ಥಾನದ ಎದುರು, #62, 7ನೇ ಮುಖ್ಯರಸ್ತೆ, ಶ್ರೀರಾಂಪುರ, ಬೆಂಗಳೂರು -560021.
ಫೋನ್: 080-23427779/9353016956
ಸಮಯ: ಸಂಜೆ 7 ರಿಂದ ರಾತ್ರಿ 8.45.

ಪುನರ್‌ಜೀವನಕ್ಕೆ ಭರವಸೆ ಪುನರ್ವಾಸ್

ಪಾರ್ಶ್ವವಾಯು ರೋಗಿಗಳಿಗೆ ಭರವಸೆಯ ಬೆಳಕಾಗಿರುವ ಪುನರ್ವಾಸ್ ಆಸ್ಪತ್ರೆಯ ಸ್ಥಾಪಕ ಡಾ. ಶ್ರೀಕಾಂತ್ ವೆಂಕಟಕೃಷ್ಣನ್ ಅವರು ಬೆಂಗಳೂರು ಮೆಡಿಕಲ್ ಕಾಲೇಜು, ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜು ಮತ್ತು ನಿಮ್ಹಾನ್ಸ್ (NIMHANS) ಸಂಸ್ಥೆಗಳಲ್ಲಿ ತರಬೇತಿ ಪಡೆದಿದ್ದಾರೆ. ಇವರು ಆರು ವರ್ಷಗಳ ಹಿಂದೆ ನಾರಾಯಣ ಹೆಲ್ತ್‌ನಲ್ಲಿ 'ಫಿಸಿಕಲ್ ಮೆಡಿಸಿನ್ ಅಂಡ್ ರಿಹ್ಯಾಬಿಲಿಟೇಶನ್ ವಿಭಾಗ'ವನ್ನು ಸ್ಥಾಪಿಸಿದರು. ಪಾರ್ಶ್ವವಾಯು, ಬೆನ್ನುಹುರಿಯ ಗಾಯ, ಆಘಾತಕಾರಿ ಮಿದುಳಿನ ಗಾಯಗಳಿಂದ (ಟ್ರಾಮ್ಯಾಟಿಕ್ ಬ್ರೈನ್ ಇಂಜುರಿ) ಬಳಲುತ್ತಿರುವ ರೋಗಿಗಳಿಗೆ ಮುಂದುವರಿದ ಹಾಗೂ ಕೈಗೆಟಕುವ ವೆಚ್ಚದಲ್ಲಿ ಪುನರ್ವಸತಿ ಸೇವೆಗಳನ್ನು ಒದಗಿಸುವ ಉದ್ದೇಶದೊಂದಿಗೆ ಇವರು 'ಪುನರ್ವಾಸ್ ಆಸ್ಪತ್ರೆ'ಯನ್ನು ಸ್ಥಾಪಿಸಿದರು. ಪ್ರಸ್ತುತ ಇದು ಬೆಂಗಳೂರಿನಲ್ಲಿ ಮೂರು ಕೇಂದ್ರಗಳನ್ನು ಹೊಂದಿದೆ. ವೈದ್ಯರ ದಿನದ ನಿಮಿತ್ತ ಅವರು ಮಾತನಾಡಿದ್ದಾರೆ.

ನೀವು ಪುನರ್ವಸತಿ ವೈದ್ಯಕೀಯ ಕ್ಷೇತ್ರವನ್ನೇ ಆಯ್ಕೆ ಮಾಡಿಕೊಳ್ಳಲು ಕಾರಣವೇನು?

ನನಗೆ ಮೊದಲಿನಿಂದಲೂ ವೈದ್ಯಕೀಯ ಮತ್ತು ಇಂಜಿನಿಯರಿಂಗ್ ಎರಡರಲ್ಲೂ ತೀವ್ರ ಆಸಕ್ತಿಯಿತ್ತು. ಪುನರ್ವಸತಿ ವೈದ್ಯಕೀಯ(ರಿಹ್ಯಾಬಿಲಿಟೇಶನ್ ಮೆಡಿಸಿನ್) ಕ್ಷೇತ್ರವು ವೈದ್ಯಕೀಯ ವಿಜ್ಞಾನ, ಸಂಬಂಧಿತ ಆರೋಗ್ಯ ಸೇವೆಗಳು, ಎಂಜಿನಿಯರಿಂಗ್ ಮತ್ತು ಸಂಶೋಧನೆಗಳನ್ನು ಒಟ್ಟಿಗೆ ಜೋಡಿಸಲು ಅವಕಾಶ ನೀಡುತ್ತದೆ. ಇದು ರೋಗಿಗಳ ದೈಹಿಕ ಸಾಮರ್ಥ್ಯ ಹಾಗೂ ಜೀವನದ ಗುಣಮಟ್ಟವನ್ನು ಗರಿಷ್ಠ ಹೆಚ್ಚಿಸಲು, ಅವರ ಚೇತರಿಕೆಯ ಸಾಧ್ಯತೆ ವಿಸ್ತರಿಸಲು ಸಹಾಯ ಮಾಡುತ್ತದೆ.

ಪಾರ್ಶ್ವವಾಯು ಸಂಭವಿಸಿದ ನಂತರ ಭರವಸೆ ಕಳೆದುಕೊಂಡಿರುವ ಕುಟುಂಬಕ್ಕೆ ಏನು ಹೇಳುತ್ತೀರಿ?

ಸ್ಟ್ರೋಕ್ ಎಂಬುದು ರೋಗಿಗಳಿಗೆ ಮತ್ತು ಅವರ ಕುಟುಂಬಗಳಿಗೆ ತೀವ್ರ ಆಘಾತ ಉಂಟುಮಾಡಬಹುದು. ಆದರೆ ಸರಿಯಾದ ಮಾರ್ಗದರ್ಶನ, ಪುನರ್ವಸತಿ ಚಿಕಿತ್ಸೆಯ ಮೂಲಕ ಅನೇಕ ಜನರು ನಿರಂತರವಾಗಿ ಚೇತರಿಸಿಕೊಳ್ಳಬಹುದು ಹಾಗೂ ತಮ್ಮ ಸ್ವಾವಲಂಬನೆ ಮರಳಿ ಪಡೆಯಬಹುದು. ನನ್ನ ರೋಗಿಗಳಲ್ಲಿ ಒಬ್ಬರಾದ ಪ್ರಶಸ್ತಿ ವಿಜೇತ ಪತ್ರಕರ್ತರೊಬ್ಬರು, ಸ್ಟ್ರೋಕ್ ನಂತರ ಚೇತರಿಸಿ ಮರಳಿ ಕೆಲಸಕ್ಕೆ ಮರಳಿದ್ದಾರೆ.

ಅನಾರೋಗ್ಯ ಅಥವಾ ಗಾಯ ಸಂಭವಿಸಿದ ಹಲವು ತಿಂಗಳುಗಳ ನಂತರವೂ ಚೇತರಿಕೆ ಸಾಧ್ಯವೇ?

ಆರಂಭದ ಕೆಲವು ತಿಂಗಳುಗಳಲ್ಲಿ ಚೇತರಿಕೆ ಅತ್ಯಂತ ವೇಗವಾಗಿರುತ್ತದೆ. ಆದರೆ ಸೂಕ್ತವಾದ ಪುನರ್ವಸತಿ ಚಿಕಿತ್ಸೆಯೊಂದಿಗೆ ಮುಂದಿನ ಹಲವು ವರ್ಷಗಳವರೆಗೆ ಅರ್ಥಪೂರ್ಣ ಸುಧಾರಣೆಗಳನ್ನು ಕಾಣಲು ಸಾಧ್ಯವಿದೆ.

ರೋಗಿಯೊಬ್ಬರು ಚೇತರಿಸಿಕೊಳ್ಳಲು ಸಹಾಯ ಮಾಡುವುದರಲ್ಲಿ ನಿಮಗೆ ಸಿಗುವ ಅತ್ಯಂತ ತೃಪ್ತಿಕರ ವಿಷಯ ಯಾವುದು?

ರೋಗಿಗಳು ಮರಳಿ ಕೆಲಸಕ್ಕೆ ಸೇರುವುದನ್ನು, ತಮ್ಮ ಸ್ವಾವಲಂಬನೆಯನ್ನು ಪಡೆದುಕೊಳ್ಳುವುದನ್ನು ಮತ್ತು ಅವರ ಕುಟುಂಬ ಜೀವನ ಯಥಾಸ್ಥಿತಿಗೆ ಬರುವುದನ್ನು ನೋಡುವುದೇ ನನಗೆ ಸಿಗುವ ದೊಡ್ಡ ಬಹುಮಾನ. ಇದು ನಮ್ಮ ಸೇವೆಯನ್ನು ಮತ್ತಷ್ಟು ಉತ್ತಮಗೊಳಿಸಲು ನಮಗೆ ಪ್ರೇರಣೆ ನೀಡುತ್ತದೆ.

Punarvaas

ಹೊಸ ಜೀವನದ ಬೆಳಕು

ವಿಳಾಸ: #2572, 18ನೇ ಮುಖ್ಯರಸ್ತೆ,
ಕುಮಾರಸ್ವಾಮಿ ಲೇಔಟ್, ಎರಡನೇ ಹಂತ,
ಬೆಂಗಳೂರು-560078
ಇಮೇಲ್ /ವೆಬ್‌ಸೈಟ್ :
admin@punarvaas.com
ಸಂಪರ್ಕಿಸಿ: +91 8884880095

'ಪುನರ್ವಾಸ್' ಆಸ್ಪತ್ರೆಯು ಮುಂದುವರಿದ ಪುನರ್ವಸತಿ, ರೊಬೊಟಿಕ್ ಗೈಟ್ ಟ್ರೈನಿಂಗ್ (ನಡಿಗೆ ತರಬೇತಿ), ನ್ಯೂರೋಮಾಡ್ಯುಲೇಷನ್ ಹಾಗೂ ಸ್ಪಾಸ್ಟಿಸಿಟಿ ಮತ್ತು ನೋವು ನಿರ್ವಹಣೆಯ ಚಿಕಿತ್ಸೆಗಳನ್ನು ಅತ್ಯಂತ ಕಡಿಮೆ ವೆಚ್ಚದಲ್ಲಿ ಒದಗಿಸುತ್ತದೆ. ಇಲ್ಲಿ ಚಿಕಿತ್ಸೆ ಪಡೆದ ಅನೇಕ ರೋಗಿಗಳು ಗಮನಾರ್ಹವಾಗಿ ಚೇತರಿಸಿಕೊಂಡಿದ್ದಾರೆ. ತೀವ್ರವಾದ ಮಿದುಳಿನ ಗಾಯದ ನಂತರ ಕನಿಷ್ಠ ಪ್ರಜ್ಞಾವಸ್ಥೆಯಲ್ಲಿದ್ದ ಮತ್ತು ಸಂಪೂರ್ಣವಾಗಿ ವೈದ್ಯಕೀಯ ಕೊಳವೆಗಳ ಮೇಲೆಯೇ ಅವಲಂಬಿತವಾಗಿದ್ದ ರೋಗಿಯೊಬ್ಬರು, ಕೇವಲ ಮೂರು ತಿಂಗಳಲ್ಲಿ ಅದ್ಭುತವಾಗಿ ಚೇತರಿಸಿಕೊಂಡಿದ್ದಾರೆ. ಈಗ ಅವರು ತಮ್ಮ ದೈನಂದಿನ ಚಟುವಟಿಕೆಗಳನ್ನು ತಾವೇ ಮಾಡಿಕೊಳ್ಳುತ್ತಾ, ಮರಳಿ ಕೆಲಸಕ್ಕೆ ಸೇರಿಕೊಂಡಿದ್ದಾರೆ.

RNI No. KARKAN/2016/71628
Vol. 11 Issue no. 181
This newspaper/periodical is published by Lokesh K V from No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru-560011. (Ph: 080-40877666) on behalf of Metropolitan Media Company Limited, edited by Sudarshan Channangihalli and printed by (a) Sekar S at Bennett Coleman & Co Ltd., The Times of India Press, No. 9/10/11-A, 4th Main, KIADB Bommasandra Industrial Area, Anekal Taluk, Bangalore - 560 099 (Ph: 080-42200500). (b) Murthy D from Metropolitan Media Company Limited, Plot No.34/B, Hootagalli Industrial Area, Belavadi post, Mysuru - 570 018. (c) Narappa G from Metropolitan Media Company Limited., Sy. No.45/2, Savalanga Road, Navule, Kasaba Hobli, Shivamogga- 577 204. (d) Siddappa Kashibadiger from Metropolitan Media Company Limited, Plot No 33 R.S. No. 536, Honaga Industrial Estate, Honaga , Belagavi Taluk, Belagavi 591156. (e) Sanjay Kanekal from Metropolitan Media Company Limited Plot No. 15 & 16, KIADB Rayapur Industrial Area, Hubballi - 580 009. (f) R Gururaj from Metropolitan Media Co. Ltd., Plot No. 9, KSSIDC, Industrial Area, Kaladagi Road, Vidyagiri, Bagalakote- 587102 (g)Raghavendra Rao from Metropolitan Media Company Limited., Plot No. 224, in Sy. No. 41/2, 41/B & 42, Kapnoor II Stage Industrial Area, Kalaburagi- 585 104.(h) Shivakumar V Hiremath from Metropolitan Media Company Limited., Plot No. 124 (part) and Plot No. 125 (part) of Sy. No. 132/1, Oddarahatti village, Gangavathi (i) Girish K from Metropolitan Media Company Limited No. 284 (Part), 285, 286 & 287, Baikampady Industrial Area, Mangaluru – 575 011. " © All Rights Reserved. Reproduction in whole or part without permission is prohibited.

ವೈವಿಧ್ಯ

ಬಟರ್‌ಫ್ಲೈ ಐ ಮೇಕಪ್ ಗಮನ ಸೆಳೆಯುತ್ತಿದ್ದು ಹಲವು ಬಣ್ಣಗಳ ಜೊತೆಗೆ ಪಾತರಗಿತ್ತಿಯ ರೆಕ್ಕೆಯಂತಹ ವಿನ್ಯಾಸದ ಮೇಕಪ್ ಪಾರ್ಟಿ ಲುಕ್ ಅನ್ನು ಇಮ್ಮಡಿಸಲಿದೆ.

ಇತ್ತೀಚೆಗೆ ಬಿಡುಗಡೆ ಮಾಡಿರುವ ವಿಶ್ವದ ಅತ್ಯುತ್ತಮ ಫ್ರೋಜನ್ ಡೆಸರ್ಟ್‌ಗಳ ಪಟ್ಟಿಯಲ್ಲಿ ಭಾರತದ ಸಾಂಪ್ರದಾಯಿಕ ಕುಲ್ಫಿ 7ನೇ ಸ್ಥಾನವನ್ನು ಗಿಟ್ಟಿಸಿಕೊಂಡಿದೆ.

ಮಹಾನ್ ನ್ಯಾಯವಾದಿ ಶಿವಣ್ಣ

ಮಲ್ಲೀರ
feedbacklvk@vijaykarnataka.com

ನಟ ಶಿವರಾಜ್‌ಕುಮಾರ್ ಹಾಗೂ ವಿಜಯ ರಾಘವೇಂದ್ರ 2005ರಲ್ಲಿ ತೆರೆಕಂಡ 'ರಿಷಿ' ಚಿತ್ರದಲ್ಲಿ ಮೊದಲ ಬಾರಿಗೆ ತೆರೆ ಹಂಚಿಕೊಂಡಿದ್ದರು. ನಂತರ 2017ರಲ್ಲಿ ತೆರೆಕಂಡ 'ಶ್ರೀಕಂಠ' ಹಾಗೂ 'ಮಾಸ್ ಲೀಡರ್' ಸಿನಿಮಾಗಳಲ್ಲಿ ಒಟ್ಟಾಗಿ ಕಾಣಿಸಿಕೊಂಡಿದ್ದರು. ಇದಾಗಿ ಸುಮಾರು 9 ವರ್ಷಗಳ ನಂತರ ಈಗ 'ಮಹಾನ್' ಚಿತ್ರದಲ್ಲಿ ಜತೆಯಾಗಿ ತೆರೆಗೆ ಬರುತ್ತಿದ್ದಾರೆ. ಬಹುತೇಕ ಈ ಎಲ್ಲಾ ಸಿನಿಮಾಗಳಲ್ಲಿ ಶಿವಣ್ಣನೇ ಹೀರೊ ಆಗಿದ್ದು, ವಿಜಯ ರಾಘವೇಂದ್ರ ಆ ಚಿತ್ರದ ಪ್ರಮುಖ ಭಾಗವಾಗಿದ್ದರು. ಇದೇ ಮೊದಲ ಬಾರಿಗೆ ವಿಜಯ ರಾಘವೇಂದ್ರ ನಾಯಕರಾಗಿರುವ ಸಿನಿಮಾದಲ್ಲಿ ಶಿವಣ್ಣ ಒಂದು ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ.

ಪಿ.ಸಿ. ಶೇಖರ್ ನಿರ್ದೇಶನದಲ್ಲಿ ವಿಜಯ ರಾಘವೇಂದ್ರ ನಟಿಸುತ್ತಿರುವ ಮಲ್ಟಿಸ್ಟಾರರ್ 'ಮಹಾನ್' ಸಿನಿಮಾದಲ್ಲಿ ಡಾ.ಶಿವರಾಜ್ ಕುಮಾರ್ ಲಾಯರ್ ಪಾತ್ರದಲ್ಲಿ ಮಿಂಚಲಿದ್ದಾರೆ. ಅವರ ಪಾತ್ರದ ಬಗ್ಗೆ ವಿವರಿಸಿದ್ದಾರೆ ನಿರ್ದೇಶಕರು.

ಚಿತ್ರದಲ್ಲಿ ಶಿವರಾಜ್‌ಕುಮಾರ್ ಅವರ ಪಾತ್ರದ ಬಗ್ಗೆ ವಿವರಿಸುತ್ತಾ ನಿರ್ದೇಶಕ ಪಿ.ಸಿ. ಶೇಖರ್, 'ಈ ಚಿತ್ರದಲ್ಲಿ ಬರುವ ಪ್ರತಿಯೊಂದು ಪಾತ್ರಕ್ಕೂ ಪ್ರಾಮುಖ್ಯ ಇರುತ್ತದೆ. ಮನೆಯಲ್ಲಿ ನಾವೇನಾದರೂ ತಪ್ಪು ಮಾಡಿದರೆ, ನಮಗೆ ಬುದ್ಧಿ ಹೇಳಲು ತಂದೆ - ತಾಯಿ ಇರುತ್ತಾರೆ. ಅಂಥದ್ದೇ ಪರಿಸ್ಥಿತಿ ಸಮಾಜದಲ್ಲಿ ನಿರ್ಮಾಣವಾದಾಗ ಅಲ್ಲಿನ ತೊಂದರೆಗಳನ್ನು ತಿದ್ದಲು 'ಮಹಾನ್' ವ್ಯಕ್ತಿಯ ಅಗತ್ಯವಿರುತ್ತದೆ. ಅಂತಹ 'ಮಹಾನ್' ವ್ಯಕ್ತಿಯ ಪಾತ್ರದಲ್ಲಿ ಡಾ.ಶಿವರಾಜ್‌ಕುಮಾರ್ ಅಭಿನಯಿಸಿದ್ದಾರೆ. ಈ ಚಿತ್ರದಲ್ಲಿ ಹಿರಿಯ ವಕೀಲರಾಗಿ ಶಿವರಾಜ್‌ಕುಮಾರ್ ಕಾಣಿಸಿಕೊಳ್ಳಲಿದ್ದಾರೆ. ಎಲ್ಲಾ ನಿರ್ದೇಶಕರಿಗೂ ಶಿವರಾಜ್‌ಕುಮಾರ್ ಅವರ ಚಿತ್ರ ನಿರ್ದೇಶನ ಮಾಡುವ ಆಸೆ ಇರುತ್ತದೆ. ನನಗೂ ಅದು ಬಹಳ ದಿನಗಳ ಹಂಬಲ. ಆ ಆಸೆ ಈಗ ಈಡೇರಿದೆ. ಶಿವರಾಜ್‌ಕುಮಾರ್ ಅವರ ಪಾತ್ರ ಇಡೀ ಸಿನಿಮಾದ ಆರಂಭದಿಂದ ಅಂತ್ಯದವರೆಗೂ ಇರುವ ಕಾರಣ ಇದು ಕೇವಲ ಅತಿಥಿ ಪಾತ್ರವಲ್ಲ, ಅವರ ಪಾತ್ರ ತುಂಬಾ ಜನರ ಕಣ್ಣುತೆರೆಸಲಿದೆ' ಎಂದಿದ್ದಾರೆ.

ಶಿವರಾಜ್‌ಕುಮಾರ್ ಅವರನ್ನೇ ಈ ಪಾತ್ರಕ್ಕೆ ಆಯ್ಕೆ ಮಾಡಿಕೊಂಡ ಬಗ್ಗೆ ಹೇಳುತ್ತಾ, 'ಈ ಚಿತ್ರಕ್ಕೆ ಶಿವರಾಜ್‌ಕುಮಾರ್ ಅವರ ರೂಪದಲ್ಲಿ ಒಂದು ಅತ್ಯುತ್ತಮ ಟ್ರಂಪ್ ಕಾರ್ಡ್ ಸಿಕ್ಕಂತಾಗಿದೆ. ನಿಜ ಜೀವನದಲ್ಲೂ ಸಂಬಂಧಿಕರಾಗಿರುವ ಶಿವರಾಜ್ ಕುಮಾರ್ ಹಾಗೂ ವಿಜಯ್ ರಾಘವೇಂದ್ರ ಬೆಳ್ಳಿತೆರೆಯ ಮೇಲೆ ಒಟ್ಟಿಗೆ ಕಾಣಿಸಿಕೊಂಡು ಹಲವು ವರ್ಷಗಳೇ ಕಳೆದಿವೆ. ಈಗ ಅವರನ್ನು ಮತ್ತೆ ತೆರೆಮೇಲೆ ನೋಡಲು ಅವರ ಅಭಿಮಾನಿಗಳಿಗೂ ಇಷ್ಟವಾಗಲಿದೆ. ಕನ್ನಡದಲ್ಲಿ ಶಿವಣ್ಣ ಹೊರತುಪಡಿಸಿ ಮಿಕ್ಕೆಲ್ಲಾ ಸ್ಟಾರ್ ನಟರಿಗೆ ತಮ್ಮದೇ ಆದ ಪ್ರತ್ಯೇಕ ಅಭಿಮಾನಿ ಬಳಗವಿದೆ. ಆದರೆ ಶಿವರಾಜ್ ಕುಮಾರ್ ಅವರು ಎಲ್ಲರಿಂದಲೂ ಪ್ರೀತಿಸಲ್ಪಡುವ ಕನ್ನಡದ ನೆಚ್ಚಿನ ಸೂಪರ್ ಸ್ಟಾರ್. ಅವರ ಮೂಲಕ ನಾನು ಈ ಸಿನಿಮಾದಲ್ಲಿ ಹೇಳಲು ಹೊರಟಿರುವ ಸಂದೇಶ ರವಾನಿಸಿದರೆ ಸೂಕ್ತ ಎಂದು ಯೋಚಿಸಿದೆ. ಹೆಚ್ಚಾಗಿ ನಿರ್ಲಕ್ಷ್ಯಕ್ಕೆ ಒಳಗಾಗುವ ರೈತರ ಕುರಿತಾದ ಕಥೆ ಹೇಳುವಾಗ ಈ ಪಾತ್ರದ ಆಯ್ಕೆ ಹಾಗೂ ಅದಕ್ಕೆ ಶಿವಣ್ಣರಂಥ ನಟರನ್ನು ಆಯ್ಕೆ ಮಾಡುವುದು ಬಹಳ ಮುಖ್ಯವಾದ ವಿಷಯ ಎಂದು ನನಗನ್ನಿಸುತ್ತದೆ' ಎಂದಿದ್ದಾರೆ. ■

ರಾಷ್ಟ್ರಪತಿ ನೆಚ್ಚಿನ ಪ್ರೊಟೀನ್-ಫೈಬರ್‌ಭರಿತ ಒಡಿಶಾ ಖಾದ್ಯ

ಲವಲvk ಸುದ್ದಿ ಲೋಕ
feedbacklvk@vijaykarnataka.com

ತಮ್ಮ ಸರಳ ಜೀವನಶೈಲಿಗೆ ಹೆಸರವಾಸಿಯಾದವರು ರಾಷ್ಟ್ರಪತಿ ದ್ರೌಪದಿ ಮುರ್ಮು. ವರದಿಗಳ ಪ್ರಕಾರ ಅವರು ಹೆಚ್ಚಾಗಿ ಈರುಳ್ಳಿ ಮತ್ತು ಬೆಳ್ಳುಳ್ಳಿ ಇಲ್ಲದ ಸಾತ್ವಿಕ ಆಹಾರ ಹಾಗೂ ಸುಲಭವಾಗಿ ಜೀರ್ಣವಾಗುವ ಹಸಿರು ತರಕಾರಿಗಳನ್ನು ಇಷ್ಟಪಡುತ್ತಾರೆ. ರಾಷ್ಟ್ರಪತಿಗಳ ಅಡುಗೆಮನೆಯ ಮುಖ್ಯ ಬಾಣಸಿಗರು ತಿಳಿಸಿರುವಂತೆ ಅವರಿಗೆ ಒಡಿಶಾದ ಸಾಂಪ್ರದಾಯಿಕ ತರಕಾರಿ ಮತ್ತು ಬೇಳೆಯ ಮಿಶ್ರಣವಾದ ದಾಲ್ಮಾ ಎಂದರೆ ತುಂಬಾ ಇಷ್ಟವಂತೆ.

ದಾಲ್ಮಾ ವಿಶೇಷತೆ

ದಾಲ್ಮಾ ಒಡಿಶಾ ರಾಜ್ಯದ ಅತ್ಯಂತ ಜನಪ್ರಿಯ ಮತ್ತು ಪೌಷ್ಟಿಕಯುಕ್ತ ಸಾಂಪ್ರದಾಯಿಕ ಖಾದ್ಯ. ಬೇಳೆಕಾಳುಗಳು ಮತ್ತು ವಿವಿಧ ಬಗೆಯ ಕಾಲೋಚಿತ ತರಕಾರಿಗಳನ್ನು ಸೇರಿಸಿ ಇದನ್ನು

ತಯಾರಿಸಲಾಗುತ್ತದೆ. ಜಗನ್ನಾಥ ದೇವಾಲಯದಲ್ಲಿ ಮಹಾಪ್ರಸಾದದ ರೂಪದಲ್ಲೂ ಇದನ್ನು ಅರ್ಪಿಸಲಾಗುತ್ತದೆ. ಇದರಲ್ಲಿ ಈರುಳ್ಳಿ ಮತ್ತು ಬೆಳ್ಳುಳ್ಳಿಯನ್ನು ಬಳಸದ ಕಾರಣ ಇದು ಸಂಪೂರ್ಣ ಸಾತ್ವಿಕ ಹಾಗೂ ಆರೋಗ್ಯಕರವಾಗಿರುತ್ತದೆ.

ರಾಷ್ಟ್ರಪತಿಗಳ ನೆಚ್ಚಿನ ಒಡಿಶಾ ಖಾದ್ಯಗಳು

ಸಂದರ್ಶನದ ಪ್ರಕಾರ, ಒಡಿಶಾ ಖಾದ್ಯಗಳ ಮೇಲೆ ವಿಶೇಷ ಒಲವು ಬೆಳೆಸಿಕೊಂಡಿರುವ ಮುರ್ಮು ಅವರು 'ಪಖಲಾ ಭಾತ್'ನ ಅಭಿಮಾನಿಯೂ ಹೌದು. ಇದು ಬೇಯಿಸಿದ ಅನ್ನವನ್ನು ನೀರಿನಲ್ಲಿ ರಾತ್ರಿಯಿಡೀ ನೆನೆಸುವ ಮೂಲಕ ತಯಾರಿಸಲಾಗುವ ಬೇಸಿಗೆಯ ಖಾದ್ಯ. ಇದನ್ನು ಹುರಿದ ಅಥವಾ ಹಿಸುಕಿದ ತರಕಾರಿಗಳು, ಹಸಿರು ಮೆಣಸಿನಕಾಯಿಗಳು ಮತ್ತು ಉಪ್ಪಿನಕಾಯಿಗಳೊಂದಿಗೆ ಬಳಸಲಾಗುತ್ತದೆ.

ಇದು ಕೇವಲ ಉಪಾಹಾರವಲ್ಲ, ಪ್ರೋಬಯಾಟಿಕ್‌ಗಳಿಂದ ಸಮೃದ್ಧವಾಗಿರುವ ತಂಪಾದ, ಪೌಷ್ಟಿಕ ಊಟವಾಗಿದೆ. ಜತೆಗೆ ಉಪಾಹಾರಕ್ಕಾಗಿ, ಅವರು ರೈಸ್ ಚೀಲಾವನ್ನು ಇಷ್ಟಪಡುತ್ತಾರೆ, ಇದು ನೆನೆಸಿದ ಮತ್ತು ಪುಡಿಮಾಡಿದ ಅಕ್ಕಿ ಹಿಟ್ಟಿನಿಂದ ಮಾಡಿದ ಮೃದುವಾದ ದೋಸೆಯಂತಹ ಖಾದ್ಯವಾಗಿದೆ. ಸುಲಭವಾಗಿ ಜೀರ್ಣವಾಗುವ ಇದು ಬೆಳಗಿನ ಸಮಯಕ್ಕೆ ಉತ್ತಮ ಕಾರ್ಬೋಹೈಡ್ರೇಟ್ ನೀಡುತ್ತದೆ ಎನ್ನಲಾಗಿದೆ. ■

ಲವಲVK ಸೂಪರ್ ರುಚಿ

ತೀರಮೀಸೂಗಾಗಿ ತಿರುಗಾಟ

ಕ್ರೇವಿಂಗ್ಸ್ ತಣಿಸುವ ಹೊಸ ಕ್ರೇಜ್

ನೋಟ ಹಾಗೂ ರುಚಿಯಿಂದ ತನ್ನತ್ತ ಸೆಳೆಯುವ ತೀರಮೀಸೂ ಈಗ ಯುವ ಜನತೆಯ ಸೆಳೆತ.

ಶುಭಾ ವಿಕಾಸ್
shubha.hegde@timesofindia.com

ಸಿಹಿ ಕಹಿಯ ಸಮ್ಮಿಶ್ರಣದಲ್ಲಿ ಮಿಂದೆದ್ದ ತೀರಮೀಸೂ (Tiramisu) ಅಂದರೆ ಕಾಫಿ ಮತ್ತು ಕ್ರೀಮ್‌ನ ಜುಗಲ್‌ಬಂದಿ.

ಕಾಫಿ ಪುಡಿಯ ಕಂದು ನೀರಲ್ಲಿ ನೆಂದು ಮೆತ್ತಗಾದ ಬ್ರೆಡ್ ಅಥವಾ ಬಿಸ್ಕತ್ತುಗಳ ಮೇಲೆ ಬೆಳ್ಳಗಿನ ಕ್ರೀಮ್ ಸವರಿ ಅದರ ಮೇಲೆ ಕೋಕೊ ಪೌಡರ್ ಉದುರಿಸಿದರೆ ಪದರಗಳಲ್ಲಿ ಅರಳುವ ತೀರಮೀಸೂ ನೋಟದಿಂದಲೇ ಸೆಳೆಯುತ್ತದೆ. ಬಾಯಲ್ಲಿ ಬೆಣ್ಣೆಯಂತೆ ಕರಗಿ ಹೋಗುವ ರುಚಿಯಲ್ಲಿ ಇಟಾಲಿಯನ್ ಸವಿಯ ಮಾಂತ್ರಿಕ ಲೋಕವೇ ತೆರೆದುಕೊಳ್ಳುತ್ತದೆ. ಬಣ್ಣ, ರುಚಿ, ನೋಟದೊಂದಿಗೆ ಆಹ್ಲಾದ ಭಾವ ಮೂಡಿಸುವ ತೀರಮೀಸೂ ಸದ್ಯ ಯುವ ಜನತೆಯ ಕ್ರೇವಿಂಗ್ ತಣಿಸುವ ಹೊಸ ಕ್ರೇಜ್.

ಆಕರ್ಷಣೆಯ ಗುಟ್ಟು

ಕಾಫಿಯ ಗಾಢತೆ, ಕ್ರೀಮ್‌ನ ಮೃದುತ್ವ ಹದವಾಗಿ ಬೆರೆತ ತೀರಮೀಸೂ ಈಗ ಕೇವಲ ಸಿಹಿ ತಿನಿಸಿಗೆ ಸೀಮಿತವಾಗಿಲ್ಲ, ಸೋಶಿಯಲ್ ಮೀಡಿಯಾ ಸೆಳೆತವೂ ಹೌದು. ಸದ್ಯ ಆನ್‌ಲೈನ್‌ನಲ್ಲಿ ಟ್ರೆಂಡಿಂಗ್‌ನಲ್ಲಿರುವ ತೀರಮೀಸೂ ತಯಾರಿಕೆಯ ವಿಧಾನಗಳು ಗಮನ ಸೆಳೆಯುತ್ತಿವೆ. ಇದರ ವಿನ್ಯಾಸ ಮತ್ತು ಅದರ ಮೇಲೆ ಕೋಕೊ ಪೌಡರ್ ಉದುರಿಸುವ ವರ್ಣರಂಜಿತ ದೃಶ್ಯ ರೀಲ್‌ಗಳಾಗುತ್ತಿದ್ದು, ಕೆಫೆಗಳು ತೀರಮೀಸೂವನ್ನು ತಯಾರಿಸುವ ಹಾಗೂ ಸರಬರಾಜು ಮಾಡುವ ರೀತಿಗೆ ಯುವ ಪೀಳಿಗೆ ಫಿದಾ ಆಗಿದೆ. ಸಿಹಿಯೂ ಅಲ್ಲದ, ಕಹಿಯೂ ಅಲ್ಲದ ಆದರೆ ಪ್ರತಿ ಬೈಟ್‌ನಲ್ಲೂ ಕಾಫಿ ಹಾಗೂ ಕೋಕೊ ಪುಡಿಯ ಪರಿಮಳದ ಸ್ವರ್ಗೀಯ ಅನುಭವ ನೀಡುವ ಮೂಲಕ ತನ್ನತ್ತ ಸೆಳೆಯುತ್ತದೆ ತೀರಮೀಸೂ. ಗ್ಲಾಸ್ ಅಥವಾ ಪ್ಲೇಟ್‌ನಲ್ಲಿ ಅಚ್ಚುಕಟ್ಟಾಗಿ ಜೋಡಿಸಲಾದ ಇದರ ನೋಟವೇ ಆಕರ್ಷಕ. ಐಸ್‌ಕ್ರೀಮ್ ಮತ್ತು ಕೇಕ್ ಎರಡರ ಮಜಾವನ್ನು ಒಟ್ಟಿಗೆ ಕೊಡುವುದರಿಂದ ಮಕ್ಕಳು ಇದನ್ನು ಇಷ್ಟಪಡುತ್ತಾರೆ. ಮನಸ್ಸನ್ನು ಉತ್ತೇಜಿಸುವ ಕಾಫಿಯ ಘಮಕ್ಕೆ ಯುವತಿಯರು ಹೆಚ್ಚು ಆಕರ್ಷಿತರಾಗುತ್ತಿದ್ದಾರೆ.

ವಿಭಿನ್ನ ಪ್ರಯೋಗ

ಇಟಲಿ ಮೂಲದ ತೀರಮೀಸೂ ಸ್ಥಳೀಯವಾಗಿ ವಿಭಿನ್ನ ಪ್ರಯೋಗಗಳಿಗೆ ಒಳಗಾಗುತ್ತಿದೆ. ಸಾಂಪ್ರದಾಯಿಕ ಇಟಾಲಿಯನ್ ತೀರಮೀಸೂವಿನಲ್ಲಿ ಮೊಟ್ಟೆ ಮತ್ತು ಆಲ್ಕೋಹಾಲ್ ಬಳಸಲಾಗುತ್ತದೆ. ಆದರೆ ಬೆಂಗಳೂರಿನ ಕೆಲ ಕೆಫೆಗಳಲ್ಲಿ ಭಾರತೀಯ ಗ್ರಾಹಕರಿಗೆ ತಕ್ಕಂತೆ ಮೊಟ್ಟೆಯಿಲ್ಲದ ಮತ್ತು ಆಲ್ಕೋಹಾಲ್ ರಹಿತ ವೆಜಿಟೇರಿಯನ್ ತೀರಮೀಸೂಗಳನ್ನು ಸಿದ್ಧಪಡಿಸಲಾಗುತ್ತಿದೆ. ಮನೆಯಲ್ಲೇ ವಿಭಿನ್ನವಾಗಿ ತಯಾರಿಸಬಹುದಾದ ಇದು ಹಲವು ಪ್ರಯೋಗಗಳಿಗೂ ಒಳಗಾಗುತ್ತಿದೆ. ಇದನ್ನು ತಯಾರಿಸುವ ತರಗತಿಗಳು ಗಮನ ಸೆಳೆಯುತ್ತಿವೆ. ■

ವಾರಾಂತ್ಯ ಬೆಂಗಳೂರಿನಲ್ಲಿ ತೀರಮೀಸೂ ಟೂರ್ ಖ್ಯಾತವಾಗುತ್ತಿದೆ. ಅದರ ಹೊರತಾಗಿ ಹುಟ್ಟುಹಬ್ಬ, ಮದುವೆ ಸಮಾರಂಭಗಳ ಸಿಹಿಯ ಜಾಗದಲ್ಲಿ ತೀರಮೀಸೂ ಪ್ರಮುಖವಾಗಿ ಕಾಣಿಸಿಕೊಳ್ಳುತ್ತಿದೆ. ಆರೋಗ್ಯಕರ ತಯಾರಿಕೆಗೆ ಪ್ರಾಮುಖ್ಯ ನೀಡುವ ನಿಟ್ಟಿನಲ್ಲಿ ಹಾಗೂ ಗ್ರಾಹಕರನ್ನು ತಲುಪಲು ಆದ್ಯತೆ ನೀಡಬೇಕಿದೆ.

-ಪ್ರಮೋದ್ ಹಾಗೂ ರಶ್ಮಿ ದಂಪತಿ
ತೀರಮೀಸೂ ತಯಾರಕರು

ತೀರಮೀಸೂ ಟೂರು

ರುಚಿಗೆ ಮರುಳಾಗಿ ಬಡಾವಣೆ ಸುತ್ತುವ, ಕೆಫೆಗಳನ್ನು ಅರಸಿ ಹೊರಡುವ ತೀರಮೀಸೂ ಟೂರು ಯುವ ವಲಯದಲ್ಲಿ ಹವಾ ಸೃಷ್ಟಿಸಿದೆ. ಸದ್ಯ ಬೆಂಗಳೂರು ಬಡಾವಣೆಗಳಲ್ಲಿ ತೀರಮೀಸೂ ಟೂರು ಆರಂಭವಾಗಿದ್ದು ಪ್ರತಿ ವಾರಾಂತ್ಯ ಕೆಲವು ಬಡಾವಣೆಗಳ ನಿರ್ದಿಷ್ಟ ಜಾಗದಲ್ಲಿ ಹೋಮ್‌ಮೇಡ್ ತೀರಮೀಸು ಅಂಗಡಿಗಳು ಪ್ರತ್ಯಕ್ಷವಾಗುತ್ತವೆ. ಕೆಲವೇ ಸಮಯದಲ್ಲಿ ಖರ್ಚಾಗುವ ಈ ತಿನಿಸುಗಾಗಿ ತಾಸುಗಳ ಕಾಲ ಉದ್ದನೆಯ ಕ್ಯೂ ಗಮನ ಸೆಳೆಯುತ್ತದೆ. ಇಲ್ಲಿ ಮಕ್ಕಳು, ಯುವತಿಯರು ಹೆಚ್ಚಾಗಿ ಕಂಡು ಬಂದರೂ ಎಲ್ಲಾ ವಯೋಮಾನದವರನ್ನು ಸೆಳೆದಿದೆ. ಅದೇ ರೀತಿ ವಾರಾಂತ್ಯ ನಾನಾ ಬಡಾವಣೆಗಳ ಕೆಫೆಗಳತ್ತ ಪ್ರಯಾಣ ಬೆಳೆಸುತ್ತಾರೆ. ಈ ಮೂಲಕ ಇದು ಆಹಾರ ಪ್ರವಾಸೋದ್ಯಮದ ಭಾಗವಾಗಿಯೂ ಗುರುತಿಸಿಕೊಂಡಿದೆ. ದೇಶದ ಪ್ರಮುಖ ನಗರಗಳಲ್ಲಿ ಅತ್ಯುತ್ತಮ ತೀರಮೀಸೂ ಹುಡುಕಿ ಹೊರಡುವ ಆಹಾರ ಪ್ರೇಮಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಎನ್ನುತ್ತಾರೆ ತಜ್ಞರು.

ಮಳೆಗಾಲದ ಮದುವೆಗೆ ಮದುಮಗಳ ತಯಾರಿ

ಮದುಮಗಳಾಗಿ ಬದಲಾಗುವ ಅವಳ ಮುಖದಲ್ಲಿ ಹೊಸ ಕಳೆ ಮೂಡಬೇಕು ಅಂದರೆ ಮದುವೆ ಹಿಂದಿನ ದಿನದ ಸಡಗರ ವಷ್ಟೇ ಕಾರಣವಲ್ಲ, ವಿವಾಹ ಸಮಾರಂಭಕ್ಕೆ ಹಲವು ತಿಂಗಳು ಇರುವ ಮುನ್ನ ಅವಳು ನಡೆಸುವ ತಯಾರಿಯೂ ಮುಖ್ಯ.



ಇತ್ತೀಚೆಗೆ ಮದುವೆ ದಿನಕ್ಕೆ ಮದುಮಗಳನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಸೌಂದರ್ಯ, ಆರೋಗ್ಯ ಕ್ಷೇತ್ರಗಳು ವಿವಾಹಪೂರ್ವ ವಧುವಿನ ಕಾಳಜಿಯತ್ತ ಗಮನ ನೀಡುತ್ತಿವೆ. ಈ ನಿಟ್ಟಿನಲ್ಲಿ ವಧುವಾಗಿ ಸಪ್ತಪದಿ ತುಳಿಯುವ ಹೊತ್ತಲ್ಲಿ ಅರಳುವ ಅವಳ ಸೌಂದರ್ಯಕ್ಕೆ ಹಲವು ತಿಂಗಳ ಮುಂಚೆಯೇ ಪೋಷಣೆ ಸಿಗಬೇಕು.

ಸೇವಿಸುವ ಆಹಾರದಿಂದ ತ್ವಚೆ ಕಾಳಜಿ ವಿಧಾನದವರೆಗೂ ಶ್ರಮ ಅಗತ್ಯ. ಆದರೆ ಹೆಚ್ಚಿನವರು ಚರ್ಮದ ಆರೈಕೆಯನ್ನು ಕೇವಲ ಮೇಲ್ನೋಟದ ಸೌಂದರ್ಯದ ವಿಷಯವಾಗಿ ನೋಡುತ್ತಾರೆಯೇ ಹೊರತು, ಅದು ದೇಹದ ಆಂತರಿಕ ಆರೋಗ್ಯದ ಪ್ರತಿಬಿಂಬ ಎಂಬುದನ್ನು ಮರೆಯುತ್ತಾರೆ. ಕೊನೆಯ ಕ್ಷಣದಲ್ಲಿ ಚರ್ಮದ ಆರೈಕೆ, ಹೊಸ ಚಿಕಿತ್ಸೆ, ಡಯಟ್ ವಿಧಾನಗಳನ್ನು ಅನುಸರಿಸಿದರೆ ಅಪಾಯದ ಸಾಧ್ಯತೆ ಇದೆ ಎನ್ನುತ್ತಾರೆ ತಜ್ಞರು. ಚರ್ಮ ಸಂಬಂಧಿ ಸಮಸ್ಯೆಗೆ ರಾತ್ರೋರಾತ್ರಿ ಪರಿಹಾರ ಸಿಗುವುದಿಲ್ಲ. ಹೀಗಾಗಿ ಮದುವೆಗೆ ಕನಿಷ್ಠ 3ರಿಂದ 6 ತಿಂಗಳು ಮುಂಚಿತವಾಗಿ ನಿಮ್ಮ ಚರ್ಮದ ಆರೈಕೆ ಮತ್ತು ಚಿಕಿತ್ಸೆಯನ್ನು ಆರಂಭಿಸಿ.

ಮಳೆಗಾಲದ ಮದುವೆಗೆ ವಿಶೇಷ ಸಿದ್ಧತೆ

ಮಳೆಗಾಲದ ವಾತಾವರಣದಲ್ಲಿ ಆರ್ದ್ರತೆ ಹೆಚ್ಚಿರುತ್ತದೆ. ಇದರಿಂದ ತ್ವಚೆ ಜಿಡ್ಡಾಗುವುದು, ಬ್ಯಾಕ್ಟೀರಿಯಾ ಸೋಂಕು, ಉಗುರುಗಳಲ್ಲಿ ಶಿಲೀಂಧ್ರ ಸೋಂಕು ಮತ್ತು ಕೂದಲು ಉದುರುವಿಕೆ ಹೆಚ್ಚಾಗಿ ಕಂಡುಬರುತ್ತದೆ. ಆದ್ದರಿಂದ ಮಳೆಗಾಲದ ವಿವಾಹಕ್ಕೆ ವಿಶೇಷ ಮುನ್ನೆಚ್ಚರಿಕೆ ಅಗತ್ಯ. ಮದುವೆಗೆ ಮೂರು ತಿಂಗಳು ಮುಂಚಿತವಾಗಿ ತ್ವಚೆ ತಜ್ಞರ ಭೇಟಿ ಮಾಡಿ ಚರ್ಮದಲ್ಲಿ ಮೊಡವೆ ಅಥವಾ ಕಲೆಗಳಿದ್ದರೆ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಿ. ಮಳೆಗಾಲದಲ್ಲಿ ಕೂದಲು ಸಿಕ್ಕಾಗುವುದು ಮತ್ತು ಉದುರುವುದು ಹೆಚ್ಚು. ಆದ್ದರಿಂದ ಡೀಪ್ ಕಂಡೀಷನಿಂಗ್ ಅಥವಾ ಹೇರ್ ಸ್ಪಾ ಆರಂಭಿಸಿ. ಮದುವೆಗೆ 1 ತಿಂಗಳು ಮುಂಚಿತವಾಗಿ ತ್ವಚೆಗೆ ಒಪ್ಪುವ ವಾಟರ್‌ಪ್ರೂಫ್ ಮೇಕಪ್ ಟ್ರಯಲ್ ಮಾಡಿ. ಮಳೆ ನೀರು ತಾಗಿ ಉಗುರುಗಳಲ್ಲಿ ಸೋಂಕು ಆಗದಂತೆ ಸ್ವಚ್ಛತೆಗೆ ಆದ್ಯತೆ ನೀಡಿ. ಮದುವೆಗೆ 2 ವಾರ ಮುಂಚಿತವಾಗಿ ಹೊಸ ಪ್ರಯೋಗಗಳಿಗೆ ಬ್ರೇಕ್ ಹಾಕಿ. ಯಾವುದೇ ಹೊಸ ಕಾಸ್ಮೆಟಿಕ್ ಉತ್ಪನ್ನಗಳು, ಕ್ರೀಮ್‌ಗಳನ್ನು ಬಳಸಬೇಡಿ. ■

ಮಳೆಗಾಲಕ್ಕೆ ಪೂರಕವಾಗಿರಲಿ ಜೀವನಶೈಲಿ

ಮಳೆಗಾಲದಲ್ಲಿ ಜೀರ್ಣಕ್ರಿಯೆ ನಿಧಾನ ಮತ್ತು ರೋಗನಿರೋಧಕ ಶಕ್ತಿ ಕಡಿಮೆಯಿರುತ್ತದೆ. ಆಂತರಿಕ ಆರೋಗ್ಯ ಚೆನ್ನಾಗಿದ್ದರೆ ಮಾತ್ರ ತ್ವಚೆ ಹೊಳೆಯುತ್ತದೆ. ಉಗುರು ಬೆಚ್ಚಗಿನ ನೀರಿಗೆ ಸ್ವಲ್ಪ ನಿಂಬೆರಸ ಮತ್ತು ಜೇನುತುಪ್ಪ ಅಥವಾ ನೆನೆಸಿದ ಬಾದಾಮಿ ಮತ್ತು ವಾಲ್‌ನಟ್ಸ್ ಸೇವಿಸಿ. ಬಿಸಿಬಿಸಿಯಾದ ಅನ್ನ, ಬೇಳೆ ಸಾರು, ಹಸಿರು ತರಕಾರಿಗಳ ಪಲ್ಯ ಮತ್ತು ಮೊಸರು, ಗ್ರೀನ್ ಟೀ ಅಥವಾ ಶುಂಠಿ ಚಹಾ ಸೇವಿಸಿ. ಮದುವೆಗೆ ಮುನ್ನ ರಾತ್ರಿ ಊಟ ಹಗುರವಾಗಿರಬೇಕು. ತರಕಾರಿ ಸೂಪ್, ಚಪಾತಿ ಅಥವಾ ಕಿಚಡಿ ಅತ್ಯುತ್ತಮ. ಪಕೋಡಗಳಂತಹ ಎಣ್ಣೆ ಪದಾರ್ಥಗಳು ಚರ್ಮದಲ್ಲಿ ಎಣ್ಣೆ ಉತ್ಪತ್ತಿಯನ್ನು ಹೆಚ್ಚಿಸಿ ಮೊಡವೆಗಳಿಗೆ ಕಾರಣವಾಗುತ್ತವೆ. ಮಳೆಗಾಲದಲ್ಲಿ ಹಸಿ ತರಕಾರಿಗಳಲ್ಲಿ ಬ್ಯಾಕ್ಟೀರಿಯಾಗಳು ಹೆಚ್ಚಿರುತ್ತವೆ. ಆದ್ದರಿಂದ ತರಕಾರಿಗಳನ್ನು ಚೆನ್ನಾಗಿ ಬೇಯಿಸಿ ತಿನ್ನಿ. ಮದುವೆಯ ಶಾಪಿಂಗ್, ಸಿದ್ಧತೆಗಳ ಒತ್ತಡದಿಂದಾಗಿ ನಿದ್ರೆಗೆಡುವುದು ಸಾಮಾನ್ಯ. ಇದರಿಂದ ದೇಹದಲ್ಲಿ ಕಾರ್ಟಿಸೋಲ್ ಹಾರ್ಮೋನ್ ಹೆಚ್ಚಾಗಿ ಮುಖದಲ್ಲಿ ಉರಿಯೂತ, ಮೊಡವೆ ಮತ್ತು ನಿಸ್ತೇಜತೆ ಕಾಣಿಸಿಕೊಳ್ಳುತ್ತದೆ. ಎಷ್ಟೇ ಕೆಲಸವಿದ್ದರೂ ದಿನಕ್ಕೆ 7-8 ಗಂಟೆಗಳ ಕಾಲ ಚೆನ್ನಾಗಿ ನಿದ್ದೆ ಮಾಡಿ. ಒತ್ತಡದಿಂದ ದೂರವಿರಿ.

ಮದುವೆಯ ಬಟ್ಟೆಗಳಿಗೆ ಫಿಟ್ ಆಗಬೇಕೆಂದು ಅನೇಕರು ದಿಢೀರ್ ಊಟ ಬಿಡುವುದು ಅಥವಾ ಕಠಿಣ ಡಯಟ್ ಮಾಡುತ್ತಾರೆ. ಇದರಿಂದ ಪ್ರೊಟೀನ್, ಜೀವಸತ್ವಗಳು ಮತ್ತು ಆರೋಗ್ಯಕರ ಕೊಬ್ಬಿನಾಂಶ ದೇಹಕ್ಕೆ ಸಿಗದೆ, ಚರ್ಮದ ಕೊಲಾಜೆನ್ ಉತ್ಪಾದನೆ ಕಡಿಮೆಯಾಗಿ ಮುಖದ ಕಾಂತಿ ಸಂಪೂರ್ಣ ಮರೆಯಾಗುತ್ತದೆ. ಹೀಗಾಗಿ ಪೌಷ್ಟಿಕ ಆಹಾರ ಸೇವಿಸಿ.

ಲವಲVK beauty ಡೈರಿ

ಸೀರೆಯಲ್ಲಿ ಸ್ಲಿಮ್ ಆಗಿ ಕಾಣಿ

ಸೀರೆಯಲ್ಲಿ ತೆಳ್ಳಗೆ ಕಾಣಿಸಿಕೊಳ್ಳಬೇಕು ಅಂದರೆ ಅದನ್ನು ಉಡುವುದರಲ್ಲಿ ಕೆಲವು ತಂತ್ರ ಅನುಸರಿಸಿ.

ಜಾರ್ಜೆಟ್, ಶಿಫಾನ್ ಮತ್ತು ಕ್ರೇಪ್‌ನಂತಹ ಹಗುರವಾದ ಫ್ಯಾಬ್ರಿಕ್‌ಗಳು ದೇಹಕ್ಕೆ ಸುಲಭವಾಗಿ ಒಗ್ಗಿಕೊಳ್ಳುತ್ತವೆ ಮತ್ತು ಅನಗತ್ಯವಾಗಿ ದಪ್ಪ ಕಾಣಿಸುವುದನ್ನು ತಪ್ಪಿಸುತ್ತವೆ. ಕಪ್ಪು, ನೇವಿ ಬ್ಲೂ ಮತ್ತು ಡಾರ್ಕ್ ಮರೂನ್‌ನಂತಹ ಡಾರ್ಕ್ ಶೇಡ್ಸ್ ಸೀರೆಗಳು ಸ್ಲಿಮ್ ಲುಕ್ ನೀಡುತ್ತವೆ. ದೊಡ್ಡ ಪ್ರಿಂಟ್‌ಗಳಿಗಿಂತ ಸಣ್ಣ ಪ್ರಿಂಟ್ಸ್ ಅಥವಾ ಪ್ಲೇನ್ ಸೀರೆಗಳು ನಿಮ್ಮನ್ನು ಮತ್ತಷ್ಟು ಫಿಟ್ ಆಗಿ ತೋರಿಸುತ್ತವೆ.

ನೆರಿಗೆಗಳು ಕೇವಲ 3ರಿಂದ 4 ಇಂಚು ಅಗಲವಿದ್ದು, ಅಚ್ಚುಕಟ್ಟಾಗಿ ಜೋಡಿಸಿರಬೇಕು. ಸೊಂಟದ ಭಾಗದಲ್ಲಿ ಬಟ್ಟೆಯನ್ನು ಬಿಗಿಯಾಗಿ ಇಟ್ಟುಕೊಂಡು ನೆರಿಗೆಗಳನ್ನು ಸಿಕ್ಕಿಸುವುದರಿಂದ ಹೊಟ್ಟೆಯ ಭಾಗ ಸಪೂರವಾಗಿ ಕಾಣುತ್ತದೆ. ಪೆಟಿಕೋಟ್ ಸರಿಯಾದ ಫಿಟ್ಟಿಂಗ್ ಹೊಂದಿರಲಿ. ಶೇಪ್‌ವೇರ್‌ಗಳು ಸೂಕ್ತ. ವಿನೆಕ್ ಮತ್ತು ಯುನೆಕ್ ಕತ್ತಿನ ವಿನ್ಯಾಸಗಳು ಕುತ್ತಿಗೆಯನ್ನು ಉದ್ದವಾಗಿ ತೋರಿಸಿ, ಸ್ಲಿಮ್ ಲುಕ್ ನೀಡುತ್ತವೆ. ಪೆಪ್ಲಮ್ ಚೋಲಿ ಅಥವಾ ಫಿಟ್ಟೆಡ್ ಬ್ಲೌಸ್‌ಗಳು ಸೊಂಟದ ಲೈನ್‌ಗೆ ಒಪ್ಪುತ್ತವೆ. ಕುತ್ತಿಗೆಯನ್ನು ಮುಚ್ಚುವ ಹೈನೆಕ್ ಶೈಲಿಯನ್ನು ಆದಷ್ಟು ತಪ್ಪಿಸಿ. ಎಲ್ಲಕ್ಕಿಂತ ಮುಖ್ಯವಾಗಿ ದೇಹಕ್ಕೆ ಅಂಟುವಂತೆ ನೀಟಾಗಿ ಸೀರೆ ಉಡಿ. ■

ದಿನ ಭವಿಷ್ಯ

ಶ್ರೀಪತಿ ಭಟ್
ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ.

ದೂ: 9513747474

ಮೇಷ, ಮಿಥುನ, ತುಲಾ, ಸಿಂಹ, ಮಕರ-ಈ ರಾಶಿಯವರಿಗೆ ನವ ಪಂಚಮಯೋಗ

ಮೇಷ: ಗುಂಪು ಚಟುವಟಿಕೆಗಳಿಗೆ ಮುಂದಾಳತ್ವ ಅಗತ್ಯ. ಪಾಲುದಾರರ ಮಾತಿನಲ್ಲಿ ವಿಶ್ವಾಸವಿಡಬಹುದು. ಆಸ್ತಿ ಖರೀದಿಯ ವಿಚಾರದಲ್ಲಿ ಪರಿಸ್ಥಿತಿ ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇರಿಸಿ. **ಶುಭ ಸಂಖ್ಯೆ**: 4, **ಬಣ್ಣ**: ಗುಲಾಬಿ
(**ನಾಮಾಕ್ಷರ**: ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಎಂದೋ ಆಡಿದ ಮಾತಿನಿಂದಾಗಿ ಅದೇ ರೀತಿಯ ಚುಚ್ಚು ಮಾತುಗಳನ್ನು ಕೇಳಬೇಕಾಗುವುದು. ಉದ್ದಿಮೆಗಾಗಿ ಹೆಚ್ಚಿನ ಬಂಡವಾಳ ಹೂಡಲು ಪ್ರಯಾಣ ಬೆಳೆಸಬೇಕಾಗುತ್ತದೆ. **ಶುಭ ಸಂಖ್ಯೆ**: 1, **ಬಣ್ಣ**: ಬೂದು
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಕುಟುಂಬದ ಸದಸ್ಯರೊಂದಿಗೆ ಸಂತಸದಿಂದ ಕಾಲ ಕಳೆಯುವಿರಿ. ಸುಮ್ಮನೆ ಮಕ್ಕಳ ಮೇಲೆ ಸಿಟ್ಟು ಮಾಡಿಕೊಳ್ಳಬೇಡಿ. ಇತರರ ಕಷ್ಟಸುಖಗಳಿಗೆ ನೆರವಾಗುವ ಮನೋಭಾವವನ್ನು ಬೆಳೆಸಿಕೊಳ್ಳಿ. **ಶುಭ ಸಂಖ್ಯೆ**: 7, **ಬಣ್ಣ**: ಖಾಕಿ
(ಕ, ಕಿ, ಕು, ಘ, ಙ, ಚ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರ, ಪುನರ್ವಸು 1, 2, 3

ಕಟಕ: ಮನಸ್ಸಿನಲ್ಲಿ ಆಗುತ್ತಿರುವ ತಳಮಳಗಳಿಗೆ ಪರಿಹಾರ ಸಿಗಲಿದೆ. ಒಂಟಿತನ ಹೋಗಲಾಡಿಸಿಕೊಳ್ಳಲು ಕೆಲಸಗಳತ್ತ ಮನಸ್ಸು ಹರಿಸುವ ಪ್ರಯತ್ನ ಮಾಡಿ. **ಶುಭ ಸಂಖ್ಯೆ**: 2, **ಬಣ್ಣ**: ಕಿತ್ತಳೆ
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ದೀರ್ಘಕಾಲಿಕ ಅನಾರೋಗ್ಯಕ್ಕೆ ಸ್ನೇಹಿತರ ಸಲಹೆಯಂತೆ ನಾಟಿ ಔಷಧದ ಮೊರೆ ಹೋಗುವಿರಿ. ಪ್ರಾಣಿ-ಪಕ್ಷಿಗಳ ಸಾಕಣೆದಾರರಿಗೆ ಅಧಿಕ ಲಾಭ ಉಂಟಾಗಲಿದೆ. **ಶುಭ ಸಂಖ್ಯೆ**: 5, **ಬಣ್ಣ**: ಸುವರ್ಣ
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ಸದ್ಯದ ಪರಿಸ್ಥಿತಿಯಲ್ಲಿ ಮನಸ್ಸನ್ನು ಚಂಚಲಗೊಳಿಸುವ ಸಕಲ ವ್ಯವಸ್ಥೆಗಳಿದ್ದರೂ ಗುರಿಯ ಮೇಲೆ ಮಾತ್ರ ಗಮನಹರಿಸಿ. ಹಣ ಸಂಪಾದನೆಯಲ್ಲಿ ತೃಪ್ತಿ ಮುಖ್ಯ. **ಶುಭ ಸಂಖ್ಯೆ**: 6, **ಬಣ್ಣ**: ನೀಲಿ

ತುಲಾ: ಸಂಸಾರದಲ್ಲಿ ಉತ್ತಮ ಅಭಿವೃದ್ಧಿಯಿಂದ ಸಂತೋಷ ಮತ್ತು ನೆಮ್ಮದಿ ಇರಲಿದೆ. ಸಂಘ-ಸಂಸ್ಥೆಗಳಿಂದ ಮನ್ನಣೆ ಮತ್ತು ಸನ್ಮಾನ ಸಿಗಲಿದೆ. ಸಂಸ್ಥೆಗಳ ಷೇರು ಬಂಡವಾಳದಲ್ಲಿ ಲಾಭ ದೊರೆಯಲಿದೆ. **ಶುಭ ಸಂಖ್ಯೆ**: 8, **ಬಣ್ಣ**: ಹಳದಿ
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಮಿತ್ರ ವರ್ಗದ ವ್ಯಾಪ್ತಿ ಹೆಚ್ಚಿಸಿಕೊಳ್ಳಲು ಅವಕಾಶಗಳು ಸಿಗಲಿವೆ. ಇದು ದೀರ್ಘಕಾಲದ ಲಾಭ ತಂದು ಕೊಡಲಿದೆ. ವಿದ್ಯಾರ್ಥಿಗಳು ಓದಿನಲ್ಲಿ ಗಮನಹರಿಸಬೇಕಾಗುವುದು. **ಶುಭ ಸಂಖ್ಯೆ**: 9, **ಬಣ್ಣ**: ಹಸಿರು
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ಉತ್ತಮ ಆಹಾರ ಸೇವನೆಯಿಂದ ಆರೋಗ್ಯ ಸಂಪಾದಿಸಬಹುದು. ಸಾತ್ವಿಕ ನಡತೆಯಿಂದ ಜನಪ್ರಿಯತೆ ಗಳಿಸುವಿರಿ. ಪ್ರಯತ್ನ ಬಲದಿಂದ ಹಣದ ಹರಿವು ಸುಗಮವಾಗಲಿದೆ. **ಶುಭ ಸಂಖ್ಯೆ**: 3, **ಬಣ್ಣ**: ಪಾಚಿ ಹಸಿರು
(ಯೆ, ಯೊ, ಬ, ಬಿ, ಬು, ಧ, ಭ, ಢ, ಬೆ) ಮೂಲ, ಪೂರ್ವಾಷಾಢ, ಉತ್ತಾರಾಷಾಢ 1ನೇ ಪಾದ

ಮಕರ: ಮನೆ ನೋಂದಣಿಗೆ ಸಂಬಂಧಪಟ್ಟ ಕಾರ್ಯವು ಮುನ್ನಡೆ ಕಾಣಲಿದೆ. ವಸ್ತ್ರ ವಿನ್ಯಾಸ ಸಲಹೆಗಾರರಿಗೆ ಪ್ರತಿಷ್ಠಿತ ಗಾರ್ಮೆಂಟ್ಸ್ ಸಂಸ್ಥೆಯೊಂದರಲ್ಲಿ ಉದ್ಯೋಗ ಸಿಗುವ ಲಕ್ಷಣವಿದೆ. **ಶುಭ ಸಂಖ್ಯೆ**: 4, **ಬಣ್ಣ**: ಮರೂನ್
(ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಅಥವಾ ಆಸೆ-ಆಕಾಂಕ್ಷೆಯನ್ನು ಈಡೇರಿಸುವ ಸಲುವಾಗಿ ಹಣ ಹೊಂದಿಸಬೇಕಾಗುತ್ತದೆ. ಜಾಗ ಮತ್ತು ಸಮಯವನ್ನು ನೋಡಿ ವ್ಯವಹಾರ ಮಾಡುವುದು ಸೂಕ್ತ. **ಶುಭ ಸಂಖ್ಯೆ**: 5, **ಬಣ್ಣ**: ಆಕಾಶ ನೀಲಿ
(ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಹಿರಿಯರೊಂದಿಗೆ ವ್ಯವಹರಿಸುವಾಗ ಅವರ ಬಳಿ ಬೈಸಿಕೊಂಡರೂ ಬೇಸರಪಡದೆ ತಪ್ಪುಗಳನ್ನು ಸರಿಪಡಿಸಿಕೊಳ್ಳಿ. ಸತ್ಯ ಸಂಗತಿಗಳು ತಿಳಿಯುವುದರಿಂದ ದುಃಖಗಳು ದೂರಾಗಲಿವೆ. **ಶುಭ ಸಂಖ್ಯೆ**: 2, **ಬಣ್ಣ**: ಬಿಳಿ

ಲವಲVK ಅಭಿರುಚಿ

ಚಲ್ಲ ಪುನುಗುಲು

ಆಂಧ್ರಪ್ರದೇಶ, ತೆಲಂಗಾಣದ ಸಾಂಪ್ರದಾಯಿಕ ಮತ್ತು ಜನಪ್ರಿಯ ಸ್ಟ್ರೀಟ್ ಫುಡ್ ಆಗಿರುವ ಚಲ್ಲ ಪುನುಗುಲು ಸಂಜೆಯ ತಿನಿಸಾಗಿ ಶುಂಠಿ ಚಟ್ನಿ ಅಥವಾ ಶೇಂಗಾ ಚಟ್ನಿಯೊಂದಿಗೆ ತಿನ್ನಲು ರುಚಿಯಾಗಿರುತ್ತದೆ.

ಸಾಮಗ್ರಿ: ಅಕ್ಕಿ ಹಿಟ್ಟು-1 ಕಪ್, ಹುಳಿ ಮೊಸರು-1 ಕಪ್, ಈರುಳ್ಳಿ-1, ಹಸಿ ಮೆಣಸಿನಕಾಯಿ-3, ಜೀರಿಗೆ-1 ಚಮಚ, ಕಡಲೆಬೇಳೆ-2 ಚಮಚ, ಅಡುಗೆ ಸೋಡಾ-ಕಾಲು ಚಮಚ, ಕೊತ್ತಂಬರಿ ಸೊಪ್ಪು, ಕರಿಬೇವು-ಸ್ವಲ್ಪ, ರುಚಿಗೆ ತಕ್ಕಷ್ಟು ಉಪ್ಪು.

ವಿಧಾನ: ಮಿಕ್ಸಿಂಗ್ ಬೌಲ್‌ನಲ್ಲಿ ಮೊಸರಿಗೆ ಅರ್ಧ ಕಪ್ ನೀರು ಹಾಕಿ ಒಂದು ಸುತ್ತು ಕಡೆದು ತೆಳ್ಳಗಾಗಿಸಿ. ಇದಕ್ಕೆ ಅಕ್ಕಿ ಹಿಟ್ಟು, ಕಡಲೆಬೇಳೆ, ಉಪ್ಪು ಸೇರಿಸಿ ಕಲಸಿ ಮುಚ್ಚಳ ಮುಚ್ಚಿ ಆರು ಗಂಟೆ ಬದಿಗಿಡಿ. ನಂತರ ಇದಕ್ಕೆ ಸಣ್ಣಗೆ ಹೆಚ್ಚಿದ ಈರುಳ್ಳಿ, ಹಸಿ ಮೆಣಸಿನಕಾಯಿ, ಕೊತ್ತಂಬರಿ ಸೊಪ್ಪು, ಕರಿಬೇವು, ಜೀರಿಗೆ, ಅಡುಗೆ ಸೋಡಾ ಬೆರೆಸಿ ಚೆನ್ನಾಗಿ ಮಿಶ್ರ ಮಾಡಿ ಮಧ್ಯಮ ಉರಿಯಲ್ಲಿ ಕಾದ ಎಣ್ಣೆಗೆ ಸಣ್ಣ ಸಣ್ಣ ಉಂಡೆ ಬಿಟ್ಟು ಕೆಂಪಗಾಗುವವರೆಗೆ ಕರಿಯಿರಿ. ■

-ಕೆ.ವಿ. ರಾಜಲಕ್ಷ್ಮಿ

ವಿಜಯಬಂಧ - 1



ಎಡದಿಂದ ಬಲಕ್ಕೆ
2 ಈ ಜಾಗವನ್ನು ಕೊಟ್ಟವನು ವಿದ್ಯಾಪ್ರದಾಯಕ ಗಣೇಶ 4
4 ಸಂಪಾದನೆಗೆ ಗುರಿಯಾಗಿ ಖರ್ಚಿಗೆ ಕಾರಣವಾಗುವುದು 2
5 ಪಯಣದ ಗುರಿಯನ್ನು ನಿರ್ಧರಿಸುವ ಹಿಡಿತ 3
6 ಶ್ರೇಷ್ಠನಾದ ಕುದುರೆಯ ಸವಾರನೀತ 5
9 ಚಿಂತೆ-ತೊಂದರೆಗಳಿಂದ ಬುದ್ಧಿವಿಕಲ್ಪವಾಗು 4
10 ಕತ್ತಲೆಯ ರಸ್ತೆಗೆ ಬೆಳಕು ನೀಡುವ ಒಡೆಯ 4
13 ನಿಜದಲ್ಲಿ ನನಸು ಮಾಡುವ ಮುನ್ನ ಕಲ್ಪನೆಯಲ್ಲಿ ಹೊಸ ಜಗತ್ತು ಕಾಣುವವನು 5
15 ಸಿಹಿರಸದ ಫಲಗಳನ್ನು ಕೊಡುವ ವೃಕ್ಷ 3
17 ಬಿಳಿಯ ಪೌಷ್ಟಿಕ ಪಾನೀಯ ಹಾಲಾಹಲವಲ್ಲ, ಅಮೃತ 2
18 ಹೃದಯಗಳ ಬಂಧನಕ್ಕೆ ಸಾಕ್ಷಿಯಾದ ಚಾಪೆಯಂಥ ಪೀಠ 4

ಮೇಲಿನಿಂದ ಕೆಳಕ್ಕೆ
1 ಮೋಡಗಳ ನಡುವೆ ಹೊಳೆವ ಬೆಳಕು 2
2 ಭೂಮಿಯೊಳಗಿನ ಖನಿಜ ಹೊರತೆಗೆವ ಉದ್ಯಮ 5
3 ನೃತ್ಯದ ಅಧಿದೇವತೆ ಎಂದು ಪೂಜಿಸುವ ದೇವರು 4
4 ನದಿಯ ನಿರಂತರ ಚಲನೆಯ ಹೆಸರಿನಲ್ಲಿ ಹರಿ ಇದ್ದಾನೆ 3
7 ತಪವನ್ನೊಳಗೊಂಡ ಸಮತಲವಾದ ಪ್ರದೇಶ-ಬಯಲು 4
8 ಬಾಹ್ಯವಲ್ಲದ ಒಳಗಿನ ಸ್ವರೂಪವಿದು 4
11 ವಿಶೇಷ ದಿವಸದ ಮಹತ್ವ ಸಾರಲು ನಡೆಸುವ ಕಾರ್ಯಕ್ರಮ 5
12 ಕಷ್ಟದ ಸಮಯದಲ್ಲೂ ಕೈ ಬಿಡದ ಭರಪೂರ ನಂಬಿಕೆ 4
14 ಗರಿ ಬಿಚ್ಚಿ ಪ್ರಕೃತಿಯ ಚಿತ್ರ ಮೂಡಿಸುವ ನೀಲಹಸಿರು ಹಕ್ಕಿ 3
16 ಆಸರೆ ಹಿಡಿದು ಬೆಳೆಯುವ ಸಸ್ಯ 2

ವಿಜಯಬಂಧ | 7993

ಎಡದಿಂದ ಬಲಕ್ಕೆ: 1.ಅಂತಿಮಬಂಧ 4.ಸಂದೇಶ 5.ನಶ್ವರ 7.ಮಕರ 9.ತನುಮನ 11.ವಿದೂಷಕ 13.ಅವಯವ 15.ಮೋಸಗಾರ 17.ರಜನಿ 19.ರಜತ 21.ಬಾಲಕ 22.ಕವಿಕಲ್ಪನೆ.

ಮೇಲಿನಿಂದ ಕೆಳಕ್ಕೆ: 1.ಅಂಶ 2.ಮರುಕ 3.ಧನ 4.ಸಂಗೀತ 6.ರಕ್ಷಕ 7.ಮನ 8.ರವಿ 10.ಮಲಯ 12.ದೂರ್ವಾಸ 13.ಅಬ್ಬರ 14.ವರ 15.ಮೋನಿ 16.ರಜಕ 18.ಜನಕ 20.ತಕ 21.ಬಾನೆ.



ಅ.ನಾ.ಪ್ರಹ್ಲಾದರಾವ್

ಇದುವರೆಗೂ ವಿಜಯ ಕರ್ನಾಟಕದ ವಿಜಯಬಂಧವನ್ನು ರಚಿಸುತ್ತಿದ್ದವರು ಪದಬಂಧ ಪರಿಣತ, ಅತಿ ಹೆಚ್ಚು ಪದಬಂಧ ರಚಿಸುವ ಮೂಲಕ ಲಿಮ್ಕಾ ದಾಖಲೆ ಪುಸ್ತಕದಲ್ಲಿ ದಾಖಲೆ ಮಾಡಿರುವ ಅ.ನಾ.ಪ್ರಹ್ಲಾದರಾವ್. 04-10-1999ರಿಂದ 30-06-2026ರವರೆಗೆ ಸತತ 26 ವರ್ಷಗಳ ಕಾಲ ಅವರು ವಿಜಯ ಕರ್ನಾಟಕ ಪತ್ರಿಕೆಗೆ ಪದಬಂಧ ರಚಿಸಿ ಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು. ಇಂದಿನಿಂದ ಜೇವರ್ಗಿಯ ಶ್ರೀ ಷಣ್ಮುಖ ಶಿವಯೋಗಿ ರೂರಲ್ ಪಾಲಿಟೆಕ್ನಿಕ್‌ನ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿರುವ ರಾಜಾಸಂಗಮೇಶ ನೀಲಕಂಠಯ್ಯ ಹಿರೇಮಠ ಅವರು 'ವಿಜಯಬಂಧ' ರಚಿಸಿಕೊಡಲಿದ್ದಾರೆ. -ಸಂ



ರಾಜಾಸಂಗಮೇಶ ನೀಲಕಂಠಯ್ಯ ಹಿರೇಮಠ

ovum
Woman & Child Speciality Hospital
(A Unit of Neonatal Care & Research Institute Pvt Ltd)

ovum
Fertility
PATH TO PARENTHOOD

HAPPY
DOCTOR's DAY
Saluting the real heroes behind the mask
Honouring the dedication, resilience,
and well-being of the doctors who tirelessly care for us.

iOS
Download the
App Now

Android
Download the
App Now

Book Your Appointment
080-4530 9999

www.ovumhospitals.com

Dr. Adarsh Somashekar
Chairman and CEO

Banashankari | Bhattarahalli | Budigere Cross | Hennur | Hoskote | Hosur | HSR Layout | Kalyan Nagar

ಶೂಟೌಟ್‌ನಲ್ಲಿ ಜರ್ಮನಿ, ನೆದರ್ಲೆಂಡ್ಸ್‌ಗೆ ಸೋಲು

ಅಂತಿಮ 16ರ ಘಟ್ಟಕ್ಕೆ ಪರಾಗ್ವೆ, ಮೊರಾಕ್ಕೊ ಮುನ್ನಡೆ

ಬೋಸ್ಟನ್: ಫಿಫಾ ವಿಶ್ವಕಪ್ ಇತಿಹಾಸದಲ್ಲಿ ಮೊದಲ ಬಾರಿಗೆ ಪೆನಾಲ್ಟಿ ಶೂಟೌಟ್ ಅವಕಾಶವನ್ನು ಕೈಚೆಲ್ಲಿದ ಪರಿಣಾಮ ನಾಲ್ಕು ಬಾರಿಯ ಚಾಂಪಿಯನ್ ಜರ್ಮನಿ ತಂಡ ಪ್ರಸಕ್ತ ವಿಶ್ವಕಪ್‌ನಲ್ಲಿ ಅಂತಿಮ 16ರ ಘಟ್ಟಕ್ಕೇರುವಲ್ಲಿ ವಿಫಲಗೊಂಡಿತು. ಮಾಂಟೆರ್ರಿಯಲ್ಲಿ ನಡೆದ ಮತ್ತೊಂದೆಡೆ 32ನೇ ಸುತ್ತಿನ ಪಂದ್ಯದಲ್ಲಿ ಮೊರಾಕ್ಕೊ ತಂಡ ಕೂಡ ಪೆನಾಲ್ಟಿ ಶೂಟೌಟ್ ನಲ್ಲಿ 3–2 ಗೋಲ್‌ಗಳ ಅಂತರದಿಂದ ನೆದರ್ಲೆಂಡ್ಸ್ ತಂಡವನ್ನು ಮಣಿಸಿ, ಪ್ರಿಕ್ವಾರ್ಟರ್ ಫೈನಲ್ಸ್‌ಗೆ ಮುನ್ನಡೆದಿದೆ.

ಬೋಸ್ಟನ್ ಕ್ರೀಡಾಂಗಣದಲ್ಲಿ ಸೋಮವಾರ ತಡರಾತ್ರಿ ನಡೆದ 32ನೇ ಸುತ್ತಿನ ಪಂದ್ಯದಲ್ಲಿ ಜರ್ಮನಿ ತಂಡ ಶೂಟೌಟ್‌ನಲ್ಲಿ 3–4 ಗೋಲ್‌ಗಳ ಅಂತರದಿಂದ ಪರಾಗ್ವೆ ಎದುರು ಮಂಡಿಯೂರಿತು. ಪಂದ್ಯದ ನಿಗದಿತ ಸಮಯದಲ್ಲಿ ಉಭಯ ತಂಡಗಳು 1– 1 ಗೋಲ್ ಗಳಿಸಿ ಸಮಬಲದ ಹೋರಾಟ ನೀಡಿದ ನಂತರ ಫಲಿತಾಂಶಕ್ಕಾಗಿ ಶೂಟೌಟ್ ಮೊರೆ ಹೋಗಲಾಯಿತು. ಮೊದಲಾರ್ಧ ಗೋಲ್ ರಹಿತವಾಗಿ ಕೊನೆಗೊಂಡ ನಂತರ ಇತ್ತಂಡಗಳು ದ್ವಿತೀಯಾರ್ಧದಲ್ಲಿ ಆಕ್ರಮಣಕಾರಿ ಆಟಕ್ಕೆ ಒತ್ತು ನೀಡಿದವು. ಇದರ ಫಲವಾಗಿ ಪರಾಗ್ವೆ ಪರ ಜೂನಿಯೊ ಎನ್ಸಿಸೊ (42ನೇ ನಿಮಿಷ) ಮತ್ತು ಜರ್ಮನಿ ಪರ ಫ್ಲೋರಿಯನ್ ವಿರ್ಟ್ಜ್ (54ನೇ ನಿಮಿಷ) ತಲಾ ಒಂದು ಗೋಲ್ ಗಳಿಸಿ ಸಮಬಲದ ಹೋರಾಟಕ್ಕೆ ಕಾರಣರಾದರು.

ಜರ್ಮನಿ ತಂಡವು 1954, 1974, 1990 ಮತ್ತು 2014ರಲ್ಲಿ ವಿಶ್ವಕಪ್ ಚಾಂಪಿಯನ್ ಪಟ್ಟ ಗೆದ್ದಿದೆ. ಆದರೆ ಕಳೆದ ಸತತ ಮೂರು ಆವೃತ್ತಿಗಳಲ್ಲಿ ಜರ್ಮನಿ ತಂಡದ ಪ್ರದರ್ಶನ ನಿರಾಶಾದಾಯಕವಾಗಿದೆ. 2018ರ ಆವೃತ್ತಿಯಲ್ಲಿ ಮೆಕ್ಸಿಕೊ ಮತ್ತು ದಕ್ಷಿಣ ಕೊರಿಯಾ ವಿರುದ್ಧ ಸೋತು ಗುಂಪಿನಲ್ಲಿ ಕೊನೆಯ ಸ್ಥಾನ ಗಳಿಸಿದ್ದ ಜರ್ಮನಿ, 2022ರಲ್ಲೂ ಗುಂಪು ಹಂತದಲ್ಲೇ ಹೊರಬಿದ್ದಿತ್ತು. ಈಗ ಮತ್ತೆ ತನಗಿಂತ ಕಡಿಮೆ ಶ್ರೇಯಾಂಕ ಹೊಂದಿರುವ ಪರಾಗ್ವೆ ವಿರುದ್ಧ ಸೋತ ಜರ್ಮನಿ ತಂಡ, ನಿರಾಸೆಯೊಂದಿಗೆ ಅಭಿಯಾನ ಕೊನೆಗೊಳಿಸಿದೆ.

ಮೊರಾಕ್ಕೊಗೆ ಕೆನಡಾ ಸವಾಲು: ಶೂಟೌಟ್‌ನಲ್ಲಿ ನೆದರ್ಲೆಂಡ್ಸ್ ತಂಡವನ್ನು 3–2ರಲ್ಲಿ ಸೋಲಿಸಿ ಅಂತಿಮ 16ರ ಘಟ್ಟಕ್ಕೆ ಮುನ್ನಡೆದ ಮೊರಾಕ್ಕೊ ತಂಡ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸಹ ಆತಿಥೇಯ ಕೆನಡಾ ತಂಡದ ಸವಾಲು ಎದುರಿಸಲಿದೆ. ಕೆನಡಾ ಮತ್ತು ಮೊರಾಕ್ಕೊ ವಿಶ್ವಕಪ್‌ನಲ್ಲಿ ಇದುವರೆಗೂ ಎದುರಾಗಿಲ್ಲ. ಹೀಗಾಗಿ ಈ ಪಂದ್ಯ ತೀವ್ರ ಕುತೂಹಲ ಮೂಡಿಸಿದೆ.

ಶೂಟೌಟ್‌ನಲ್ಲಿ ಪರಾಗ್ವೆ ವಿರುದ್ಧ ಸೋತು ವಿಶ್ವಕಪ್‌ನಿಂದ ನಿರ್ಗಮಿಸಿದ ನಿರಾಸೆಯಲ್ಲಿ ಜರ್ಮನಿ ತಂಡದ ಆಟಗಾರರು.

ನೆದರ್ಲೆಂಡ್ಸ್ ತಂಡವನ್ನು ಶೂಟೌಟ್‌ನಲ್ಲಿ ಮಣಿಸಿದ ಮೊರಾಕ್ಕೊ ಆಟಗಾರರ ಸಂಭ್ರಮ.

ನಾಕೌಟ್ ಪಂದ್ಯಗಳು

ಫ್ರಾನ್ಸ್ vs ಸ್ವೀಡನ್
ಪಂದ್ಯ ಆರಂಭ: ನಸುಕು 2.30 (ಗುರುವಾರ)
ಸ್ಥಳ: ನ್ಯೂಜೆರ್ಸಿ

ಮೆಕ್ಸಿಕೊ vs ಈಕ್ವೆಡಾರ್
ಪಂದ್ಯ ಆರಂಭ: ಬೆಳಗ್ಗೆ 6.30 (ಗುರುವಾರ)
ಸ್ಥಳ: ಮೆಕ್ಸಿಕೊ ಸಿಟಿ

ಇಂಗ್ಲೆಂಡ್ vs ಕಾಂಗೊ ಡಿಆರ್
ಪಂದ್ಯ ಆರಂಭ: 9.30
ಸ್ಥಳ: ಅಟ್ಲಾಂಟಾ

ನೇರ ಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್

ಪ್ರಿ ಕ್ವಾರ್ಟರ್ ಫೈನಲ್‌ಗೆ ಬ್ರೆಜಿಲ್

ಹ್ಯೂಸ್ಟನ್: ಆರಂಭಿಕ ಹಿನ್ನಡೆಯ ಹೊರತಾಗಿಯೂ ಗೇಬ್ರಿಯಲ್ ಮಾರ್ಟಿನೆಲ್ಲಿ ಇಂಜುರಿ ಸಮಯದಲ್ಲಿ ಗಳಿಸಿದ ಗೋಲಿನ ಸಾಹಸದಿಂದ ಐದು ಬಾರಿಯ ಚಾಂಪಿಯನ್ ಬ್ರೆಜಿಲ್ ತಂಡ 2–1 ಗೋಲ್‌ಗಳ ಅಂತರದಿಂದ ಜಪಾನ್ ತಂಡವನ್ನು ಮಣಿಸಿ ಪ್ರಸಕ್ತ ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಅಂತಿಮ 16ರ ಘಟ್ಟಕ್ಕೆ ಮುನ್ನಡೆಯಿತು.

ಸೋಮವಾರ ತಡರಾತ್ರಿ ನಡೆದ 32ನೇ ಸುತ್ತಿನ ಹೈವೋಲ್ಟೇಜ್ ಪಂದ್ಯದ 29ನೇ ನಿಮಿಷದಲ್ಲಿ ಬ್ರೆಜಿಲ್ ತಂಡದ ರಕ್ಷಣಾ ಕೋಟೆಯನ್ನು ಬೇಧಿಸಿದ ಕೈಶು ಸಾನೊ ಜಪಾನ್ ತಂಡಕ್ಕೆ 1–0 ಅಂತರದ ಮುನ್ನಡೆ ತಂದುಕೊಟ್ಟರು. ವಿರಾಮದ ನಂತರ ಬ್ರೆಜಿಲ್ ಆಕ್ರಮಣಕಾರಿ ಆಟಕ್ಕೆ ಒತ್ತು ನೀಡಿತು. ಇದರ ಫಲವಾಗಿ ಕೆಸೆಮಿರೊ ಹೆಡರ್ ಮೂಲಕ 56ನೇ ನಿಮಿಷದಲ್ಲಿ ಗೋಲ್ ಗಳಿಸಿ ತಂಡದ ಹೋರಾಟವನ್ನು 1–1ರ ಸಮಬಲಗೊಳಿಸಿದರು.

ಇದರಿಂದ ಒತ್ತಡಕ್ಕೆ ಒಳಗಾದ ಜಪಾನ್ ಆಟಗಾರರು ದಾಳಿಗಿಂತಲೂ ಹೆಚ್ಚಾಗಿ ರಕ್ಷಣೆಗೆ ನಿಂತರು. ಚೆಂಡಿನ ಮೇಲೆ ಹೆಚ್ಚಿನ ನಿಯಂತ್ರಣ ಸಾಧಿಸಿದ ಬ್ರೆಜಿಲ್ ತಂಡ, ಹಲವು ಬಾರಿ ಗೋಲ್ ಗಳಿಕೆಯ ಅವಕಾಶಗಳನ್ನು ಸೃಷ್ಟಿಸಿಕೊಂಡಿತು. ಆದರೆ ಜಪಾನ್ ತಂಡದ ಗೋಲ್‌ಕೀಪರ್ ಬ್ರೆಜಿಲ್‌ನ ಎಲ್ಲಾ ಯತ್ನಗಳನ್ನು ಹಿಮ್ಮೆಟ್ಟಿಸಿ ತಂಡದ ಹೋರಾಟವನ್ನು ತೀವ್ರಗೊಳಿಸಿದರು. ಪಂದ್ಯದ ಕೊನೆಯ ಕ್ಷಣದ ಇಂಜುರಿ ಸಮಯದಲ್ಲಿ ಗ್ರೇಬಿಯಲ್ (90+5ನೇ ನಿ.) ಮಿಂಚಿನ ಕಾಲ್ಚಳಕ ತೋರುವುದರೊಂದಿಗೆ ಬ್ರೆಜಿಲ್ ಗೆ ರೋಚಕ ಗೆಲುವು ತಂದುಕೊಟ್ಟರು. ವೀರೋಚಿತ ಸೋಲನುಭವಿಸಿದ ಜಪಾನ್, 60 ವರ್ಷಗಳಲ್ಲಿ ಮೊದಲ ಬಾರಿಗೆ ಪ್ರಿಕ್ವಾರ್ಟರ್‌ಫೈನಲ್ ಪ್ರವೇಶಿಸುವ ಅವಕಾಶವನ್ನು ಕಳೆದುಕೊಂಡಿತು. ಬ್ರೆಜಿಲ್ ತಂಡವು ಅಂತಿಮ 16ರ ಘಟ್ಟದಲ್ಲಿ ನಾರ್ವೆ ಅಥವಾ ಐವರಿ ಕೋಸ್ಟ್ ತಂಡಗಳಲ್ಲಿ ಒಂದು ಎದುರಿಸಲಿದೆ.

USHA
Microchip+ BLDC 100% COPPER MOTOR
ONLY COPPER MOTOR ALWAYS BETTER
USHA'S PROMISE TO YOU
3 YEAR WARRANTY
www.usha.com

ಭಾರತೀಯ ಅಂಡರ್ 19 ಮಹಿಳಾ ತಂಡಕ್ಕೆ ಜಯ

ಪುದುಚೇರಿ: ಮೊದಲ ಅಂಡರ್19 ಮಹಿಳಾ ಅನ್‌ಅಫಿಷಿಯಲ್ ಏಕದಿನ ಪಂದ್ಯದಲ್ಲಿ ಭಾರತ ತಂಡ ಶ್ರೀಲಂಕಾ ವಿರುದ್ಧ 120 ರನ್‌ಗಳ ಭರ್ಜರಿ ಜಯ ಗಳಿಸಿದೆ.

ಮಂಗಳವಾರ, ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಭಾರತ, ಆರಂಭಿಕ ಆಟಗಾರ್ತಿ ಇರಾ ಜಾಧವ್ ಅವರ ಆಕರ್ಷಕ 83 ರನ್ ಹಾಗೂ ನಿಧಿ ಮಹತೊ ಅವರ ಅರ್ಧಶತಕದ (54) ನೆರವಿನಿಂದ 8 ವಿಕೆಟ್‌ಗೆ 279 ರನ್‌ಗಳ ಸವಾಲಿನ ಮೊತ್ತ ಕಲೆಹಾಕಿತು. ನಾಯಕಿ ಭಾವಿಕಾ ಅಹೀರೆ 42 ರನ್ ಕೊಡುಗೆ ನೀಡಿದರು. ಭಾರತೀಯ ವನಿತೆಯರು ನೀಡಿದ ಸವಾಲಿನ ಗುರಿ ಬೆನ್ನಟ್ಟಿದ ಶ್ರೀಲಂಕಾ, ಭಾರತೀಯ ಬೌಲರ್‌ಗಳ ಶಿಸ್ತುಬದ್ಧ ದಾಳಿಗೆ ತತ್ತರಿಸಿ 48.5 ಓವರ್‌ಗಳಲ್ಲಿ 159 ರನ್‌ಗಳಿಗೆ ಆಲೌಟ್ ಆಯಿತು. ಶ್ರೀಲಂಕಾ ಪರ ಮನುಡಿ 47 ರನ್ ಗಳಿಸಿ ಕೊಂಚ ಹೋರಾಟ ನಡೆಸಿದರು. ಈ ಗೆಲುವಿನೊಂದಿಗೆ ಭಾರತ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿದೆ.

ಟೀಮ್ ಇಂಡಿಯಾಗೆ ಪುಟಿದೇಳುವ ವಿಶ್ವಾಸ

ಇಂದಿನಿಂದ ಇಂಗ್ಲೆಂಡ್ ವಿರುದ್ಧ ಐದು ಪಂದ್ಯಗಳ ಟಿ20 ಸರಣಿ

ಚೆಸ್ಟರ್ಲಿ ಸ್ಟ್ರೀಟ್(ಲಂಡನ್): ಅನನುಭವಿ ಐರ್ಲೆಂಡ್ ವಿರುದ್ಧ ಆಘಾತಕಾರಿ ಟಿ20 ಸರಣಿ ಸೋಲಿನಿಂದ ಕಂಗೆಟ್ಟಿರುವ ವಿಶ್ವ ಚಾಂಪಿಯನ್ ಭಾರತ ತಂಡ, ಬುಧವಾರ ಇಂಗ್ಲೆಂಡ್ ವಿರುದ್ಧ ಆರಂಭವಾಗಲಿರುವ ಐದು ಪಂದ್ಯಗಳ ಟಿ20 ಸರಣಿಯಲ್ಲಿ ಪುಟಿದೇಳುವ ನಿರೀಕ್ಷೆಯಲ್ಲಿದೆ.

ಇದೇ ವೇಳೆ ಐರ್ಲೆಂಡ್ ವಿರುದ್ಧದ ಸರಣಿಗೆ ಕಡೆಗಣಿಸಲಾಗಿದ್ದ 15 ವರ್ಷದ ವೈಭವ್ ಸೂರ್ಯವಂಶಿ, ಇಂಗ್ಲೆಂಡ್ ಎದುರಿನ ಸರಣಿಯಲ್ಲಿ ಕಣಕ್ಕಿಳಿಯುವವರೇ ಎಂಬುದು ತೀವ್ರ ಕುತೂಹಲದ ಸಂಗತಿಯಾಗಿದೆ. ಲಿಸ್ಟ್ ಎ, ವಯೋಮಿತಿ ಕ್ರಿಕೆಟ್ ಮತ್ತು ಐಪಿಎಲ್‌ನಲ್ಲಿ ಮಿಂಚಿದ ಬಳಿಕ ರಾಷ್ಟ್ರೀಯ ತಂಡದಲ್ಲಿ ಸ್ಥಾನ ಗಿಟ್ಟಿಸಿರುವ ವೈಭವ್, ಐರ್ಲೆಂಡ್ ಎದುರಿನ ಸರಣಿಯಲ್ಲಿ ಆಡುವ ಸಾಧ್ಯತೆ ಹೆಚ್ಚಿತ್ತಾದರೂ ತಂಡದ ಮ್ಯಾನೇಜ್‌ಮೆಂಟ್ ಆಡುವ ಬಳಗದಲ್ಲಿ ಸ್ಥಾನ ಕಲ್ಪಿಸಲಿಲ್ಲ. ಈ ನಿಲುವಿಗೆ ಪರ ಹಾಗೂ ವಿರೋಧ ವ್ಯಕ್ತವಾಗಿದೆ. ಹೀಗಾಗಿ ಯುವ ಆಟಗಾರ ಇಂಗ್ಲೆಂಡ್ ಎದುರಿನ ಸರಣಿಯಲ್ಲಿ ಪದಾರ್ಪಣೆ ಮಾಡುವರೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ.

ಇಂಗ್ಲೆಂಡ್ VS ಭಾರತ
ಇಂದು 9:00 PM
SONY SPORTS TEN 1 | SONY SPORTS TEN 4 | SONY SPORTS TEN 5
ಕನ್ನಡ

ಐರ್ಲೆಂಡ್ ಎದುರಿನ ಸರಣಿಗೆ ಮುನ್ನ ಭಾರತ ಟಿ20 ತಂಡದ ನಾಯಕರಾಗಿ ನೇಮಕಗೊಂಡಿರುವ ಶ್ರೇಯಸ್ ಅಯ್ಯರ್, ಸೋಲಿನಿಂದಾಗಿ ಆರಂಭಿಕ ಹಿನ್ನಡೆ ಅನುಭವಿಸಿದ್ದಾರೆ. ನಾಯಕತ್ವದ ಜತೆಗೆ ವೈಯಕ್ತಿಕ ಪ್ರದರ್ಶನದಲ್ಲೂ ನಿರಾಸೆ ಕಂಡಿರುವ ಶ್ರೇಯಸ್ ಅವರಿಗೆ ಇಂಗ್ಲೆಂಡ್ ಸರಣಿ ನಾಯಕತ್ವದ ಭವಿಷ್ಯವನ್ನು ನಿರ್ಧರಿಸುವ ಅಂಶಗಳಲ್ಲಿ ಸೇರಿದೆ. ಹೀಗಾಗಿ ಅಯ್ಯರ್‌ಗೆ ಈ ಸರಣಿ ಅತ್ಯಂತ ಮಹತ್ವದ್ದಾಗಿದೆ. ವಿಶ್ವದ 2ನೇ ಶ್ರೇಯಾಂಕಿತ ಹೊಂದಿರುವ ಇಂಗ್ಲೆಂಡ್, ಚುಟುಕು ಮಾದರಿಯ ಪ್ರಮುಖ ತಂಡಗಳಲ್ಲಿ ಒಂದಾಗಿದೆ. ಹ್ಯಾರಿ ಬ್ರೂಕ್ ಸಾರಥ್ಯದ ಇಂಗ್ಲೆಂಡ್, ವಿಶ್ವಚಾಂಪಿಯನ್ ತಂಡಕ್ಕೆ ಆಘಾತ ನೀಡಲು ಯೋಜಿಸುತ್ತಿದೆ.

ಸ್ಪಿನ್ನರ್ ವರುಣ್ ಚಕ್ರವರ್ತಿ ಮರಳುವಿಕೆಯಿಂದ ಭಾರತಕ್ಕೆ ಹೊಸ ಉತ್ಸಾಹ ದೊರೆಯಲಿದೆ. ಆದರೆ ಅರ್ಷ್‌ದೀಪ್, ಹರ್ಷಿತ್ ರಾಣಾ ಮತ್ತು ಪ್ರಿನ್ಸ್ ಯಾದವ್ ಅವರಲ್ಲಿ ಒಬ್ಬರನ್ನು ಕೈಬಿಡುವ ಸಾಧ್ಯತೆ ಇದೆ. **ಸ್ಥಳ:** ಚೆಸ್ಟರ್ಲಿ ಸ್ಟ್ರೀಟ್; **ಪಂದ್ಯ ಆರಂಭ:** ರಾತ್ರಿ 10; **ನೇರಪ್ರಸಾರ:** ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್.

ಐದು ಟಿ20 ಪಂದ್ಯಗಳ ವೇಳಾಪಟ್ಟಿ

ದಿನಾಂಕ	ಸ್ಥಳ	ಸಮಯ
ಜುಲೈ 1	ಚೆಸ್ಟರ್‌ಲಿ ಸ್ಟ್ರೀಟ್	ರಾತ್ರಿ 10ಕ್ಕೆ
ಜುಲೈ 4	ಮ್ಯಾಂಚೆಸ್ಟರ್	ಸಂಜೆ 7ಕ್ಕೆ
ಜುಲೈ 7	ನಾಟಿಂಗ್ ಹ್ಯಾಮ್	ರಾತ್ರಿ 10ಕ್ಕೆ
ಜುಲೈ 9	ಬ್ರಿಸ್ಟೋಲ್	ರಾತ್ರಿ 10ಕ್ಕೆ
ಜುಲೈ 11	ಸೌತಾಂಪ್ಟನ್	ಸಂಜೆ 7ಕ್ಕೆ

ಸಂಭಾವ್ಯ ತಂಡಗಳು

ಭಾರತ: ಸಂಜು ಸ್ಯಾಮ್ಸನ್, ವೈಭವ್ ಸೂರ್ಯವಂಶಿ, ಅಭಿಷೇಕ್ ಶರ್ಮ, ಇಶಾನ್ ಕಿಶನ್, ಶ್ರೇಯಸ್ ಅಯ್ಯರ್ (ನಾಯಕ), ತಿಲಕ್ ವರ್ಮಾ, ಸುರಾಂಶ್ ಶೆಡ್ಗೆ, ಶಿವಂ ದುಬೆ, ಅಕ್ಷರ್ ಪಟೇಲ್, ಅರ್ಷ್ ದೀಪ್ ಸಿಂಗ್, ಹರ್ಷಿತ್ ರಾಣಾ, ಪ್ರಿನ್ಸ್ ಯಾದವ್, ವರುಣ್ ಚಕ್ರವರ್ತಿ.

ಇಂಗ್ಲೆಂಡ್: ಫಿಲ್ ಸಾಲ್ಟ್, ಜೋಸ್ ಬಟ್ಲರ್, ಹ್ಯಾರಿ ಬ್ರೂಕ್ (ನಾಯಕ), ಜಾಕೋಬ್ ಬೆಥಲ್, ಟಾಮ್ ಬಾಂಟನ್, ವಿಲ್ ಜಾಕ್ಸ್, ಸ್ಯಾಮ್ ಕರ್ರಾನ್, ಲಿಯಾಮ್ ಡೇವ್ಸನ್, ಸೋನಿ ಬೇಕರ್, ಲೂಕರ್‌ವುಡ್, ಸಕಿಬ್ ಮಹ್ಮೂದ್, ಆದಿಲ್ ರಶೀದ್.

ಏಷ್ಯನ್ ಗೇಮ್ಸ್‌ಗೆ ಭಾರತ ಮಹಿಳಾ ಕ್ರಿಕೆಟ್ ತಂಡ ಪ್ರಕಟ

ಹೊಸದಿಲ್ಲಿ: ಮುಂಬರುವ ಏಷ್ಯನ್ ಕ್ರೀಡಾಕೂಟಕ್ಕೆ ಹರ್ಮನ್‌ಪ್ರೀತ್ ಕೌರ್ ನಾಯಕತ್ವದ 15 ಸದಸ್ಯರ ಭಾರತ ಮಹಿಳಾ ತಂಡವನ್ನು ಘೋಷಿಸಲಾಗಿದೆ. ಹರ್ಮನ್ ಪ್ರೀತ್ ಕೌರ್ ಸಾರಥ್ಯದ ಭಾರತ ಮಹಿಳಾ ಕ್ರಿಕೆಟ್ ತಂಡವು ಇಂಗ್ಲೆಂಡ್‌ನಲ್ಲಿ ನಡೆಯುತ್ತಿರುವ ಐಸಿಸಿ ಟಿ20 ವಿಶ್ವಕಪ್‌ನಲ್ಲಿ ನಿರೀಕ್ಷಿತ ಪ್ರದರ್ಶನ ನೀಡಲು ವಿಫಲಗೊಂಡು, ಲೀಗ್ ಹಂತದಿಂದಲೇ ಹೊರಬಿದ್ದಿದೆ.

ಏಷ್ಯನ್ ಕ್ರೀಡಾಕೂಟವು ಸೆ.19ರಿಂದ ಅ.4ರವರೆಗೆ ಜಪಾನ್‌ನ ಐಚಿ–ನಗೊಯಾದಲ್ಲಿ ನಡೆಯಲಿದೆ. 2023ರಲ್ಲಿ ಚೀನಾದ ಹ್ಯಾಂಗ್‌ಜೌನಲ್ಲಿ ನಡೆದ ಏಷ್ಯನ್ ಗೇಮ್ಸ್ ಆವೃತ್ತಿಯಲ್ಲಿ ಭಾರತ ಮಹಿಳಾ ತಂಡವು ಚಿನ್ನದ ಪದಕ ಗೆದ್ದುಕೊಂಡಿತ್ತು. ಟಿ20 ಸ್ವರೂಪದಲ್ಲಿ ನಡೆಯಲಿರುವ ಈ ಕ್ರೀಡಾಕೂಟದಲ್ಲಿ ಹಾಲಿ ಚಾಂಪಿಯನ್ ಭಾರತ ತಂಡವು ಮತ್ತೊಂದು ಪ್ರಶಸ್ತಿ ಮೇಲೆ ಕಣ್ಣಿಟ್ಟಿದೆ. ತಂಡದಲ್ಲಿ ಕನ್ನಡತಿ ಶ್ರೇಯಾಂಕಾ ಪಾಟೀಲ್ ಸ್ಥಾನ ಪಡೆದಿದ್ದು, ಅವರ ಸೇರ್ಪಡೆಯು ಫಿಟ್ನೆಸ್‌ಅನ್ನು ಆಧರಿಸಿದೆ.

ಕನ್ನಡತಿ ಶ್ರೇಯಾಂಕಾ ಪಾಟೀಲ್‌ಗೆ ಸ್ಥಾನ

ತಂಡ: ಹರ್ಮನ್ ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ (ಉಪನಾಯಕಿ), ಶೆಫಾಲಿ ವರ್ಮಾ, ಜೆಮಿಮಾ ರೋಡ್ರಿಗಸ್, ದೀಪ್ತಿ ಶರ್ಮಾ, ರಿಚಾ ಘೋಷ್ (ವಿಕೆಟ್ ಕೀಪರ್), ಜಿ ಕಮಲಿನಿ (ವಿಕೆಟ್ ಕೀಪರ್), ಭಾರತಿ ಫುಲ್ಮಾಲಿ, ಶ್ರೀ ಚರಣಿ, ರೇಣುಕಾ ಠಾಕೂರ್, ಕ್ರಾಂತಿ ಗೌಡ್, ಅರುಂಧತಿ ರೆಡ್ಡಿ, ಶ್ರೇಯಾಂಕಾ ಪಾಟೀಲ್, ರಾಧಾ ಯಾದವ್, ನಂದನಿ ಶರ್ಮಾ

ಶಿವಮೊಗ್ಗ ಯೋಧಾಸ್‌ಗೆ ರೋಚಕ ಜಯ

■ ವಿಜಯಕುಮಾರ್ ಪೂಜಾರಿ ಹುಬ್ಬಳ್ಳಿ
Vijaykumarvjji@gmail.com

ಇಲ್ಲಿನ ರಾಜನಗರದಲ್ಲಿರುವ ಕೆಎಸ್‌ಸಿಎ ಮೈದಾನದಲ್ಲಿ ಮಹಾರಾಜಾ ಟ್ರೋಫಿ ಟಿ20 ಟೂರ್ನಿಯ ಮಂಗಳವಾರದ ಪಂದ್ಯದಲ್ಲಿ ಗುಲ್ಬರ್ಗಾ ಮಿಸ್ಟಿಕ್ಸ್ ವಿರುದ್ಧ ಕೇವಲ ಒಂದು ರನ್ ಅಂತರದಲ್ಲಿ ಶಿವಮೊಗ್ಗ ಯೋಧಾಸ್ ತಂಡ ರೋಚಕ ವಿಜಯ ಸಾಧಿಸಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ ಯೋಧಾಸ್ ತಂಡ, ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್‌ಗಳ ನಷ್ಟಕ್ಕೆ 180 ರನ್‌ಗಳ ಬೃಹತ್ ಮೊತ್ತ ಕಲೆ ಹಾಕಿತು. ಸುಜಯ್ ಎಸ್ (ಅಜೇಯ 47*) ರನ್‌ಗಳೊಂದಿಗೆ ತಂಡದ ಪರ ಗರಿಷ್ಠ ಮೊತ್ತ ದಾಖಲಿಸಿದರೆ, ತುಷಾರ್ ಸಿಂಗ್(35) ಹಾಗೂ ಲವ್ನಿತ್ ಸಿಸೋಡಿಯ(31) ರನ್‌ಗಳ ಕೊಡುಗೆ ನೀಡಿದರು. ಗುಲ್ಬರ್ಗಾ ಮಿಸ್ಟಿಕ್ಸ್ ಪರ ಧ್ರುವ್ ಪ್ರಭಾಕರ್ 16 ರನ್ ಗಳಿಗೆ 2 ವಿಕೆಟ್ ಪಡೆದು ಮಿಂಚಿದರು.

ಇತ್ತ 181 ರನ್‌ಗಳ ಗುರಿ ಬೆನ್ನಟ್ಟಿದ ಗುಲ್ಬರ್ಗಾ ಮಿಸ್ಟಿಕ್ಸ್ ಇನ್ನಿಂಗ್ಸ್ ವೇಳೆ ಮಳೆ ಅಡ್ಡಿಪಡಿಸಿದ್ದರಿಂದ ವಿಜೆಡಿ ನಿಯಮದಂತೆ ಪಂದ್ಯವನ್ನು 12 ಓವರ್‌ಗಳಿಗೆ ಸೀಮಿತಗೊಳಿಸಿ 128 ರನ್‌ಗಳ ಪರಿಷ್ಕೃತ ಗುರಿ ನಿಗದಿಗೊಳಿಸಲಾಯಿತು. ಕಠಿಣ ಗುರಿ ಬೆನ್ನಟ್ಟಿದ ಗುಲ್ಬರ್ಗಾ ಮಿಸ್ಟಿಕ್ಸ್ ಪರ ಮ್ಯಾಕ್‌ನೀಲ್ ನೊರೊನ್ಹಾ 20 ಎಸೆತಗಳಲ್ಲಿ 34 ರನ್ ಗಳಿಸಿ ಉತ್ತಮ ಆರಂಭ ನೀಡಿದರು. ಆದರೆ, ಮಧ್ಯಮ ಕ್ರಮಾಂಕದಲ್ಲಿ ವಿಕೆಟ್‌ಗಳು ನಿಯಮಿತವಾಗಿ ಬೀಳುತ್ತಿದ್ದ ಕಾರಣ ತಂಡವು ತೀವ್ರ ಒತ್ತಡಕ್ಕೆ ಸಿಲುಕಿತು. ಅಂತಿಮ ಓವರ್‌ನಲ್ಲಿ ಗೆಲುವಿಗೆ 26 ರನ್ ಅಗತ್ಯವಿದ್ದಾಗ ಅನುಭವಿ ಬ್ಯಾಟರ್ ಮನೀಶ್ ಪಾಂಡೆ ಅಬ್ಬರದ ಬ್ಯಾಟಿಂಗ್ ಪ್ರದರ್ಶಿಸಿ 23 ರನ್ ಸಿಡಿಸಿದರು. ಅವರು ಕೇವಲ 13 ಎಸೆತಗಳಲ್ಲಿ 36 ರನ್ (4 ಸಿಕ್ಸರ್, 1 ಬೌಂಡರಿ) ಗಳಿಸಿದರೂ ತಂಡವನ್ನು ಗೆಲುವಿನ ದಡ ಸೇರಿಸಲು ವಿಫಲರಾದರು. ಅಂತಿಮವಾಗಿ ಗುಲ್ಬರ್ಗಾ ಮಿಸ್ಟಿಕ್ಸ್ 1 ರನ್‌ನಿಂದ ಸೋಲೊಪ್ಪಿಕೊಂಡಿತು. ಶಿವಮೊಗ್ಗ ಯೋಧಾಸ್ ಪರ ಯಶವರ್ಧನ್ 24 ರನ್ ನೀಡಿ 2 ವಿಕೆಟ್ ಹಾಗೂ ಅಂಬರೀಶ್ 33 ರನ್ ನೀಡಿ 2 ವಿಕೆಟ್ ಕಬಳಿಸಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

1 ರನ್‌ನಿಂದ ಸೋತ ಗುಲ್ಬರ್ಗಾ ಮಿಸ್ಟಿಕ್ಸ್

ಸುಜಯ್ ರೋಚಕ ಬ್ಯಾಟಿಂಗ್ ಶೈಲಿ.

ಸಂಕ್ಷಿಪ್ತ ಸ್ಕೋರ್

ಶಿವಮೊಗ್ಗ ಯೋಧಾಸ್: 20 ಓವರ್‌ಗಳಲ್ಲಿ 180/7 (ಸುಜಯ್ ಸತೇರಿ 47*, ತುಷಾರ್ ಸಿಂಗ್ 35; ಧ್ರುವ್ ಪ್ರಭಾಕರ್ 2/16)
ಗುಲ್ಬರ್ಗಾ ಮಿಸ್ಟಿಕ್ಸ್: 12 ಓವರ್‌ಗಳಲ್ಲಿ 126/7 (ಪರಿಷ್ಕೃತ ಗುರಿ 128) (ಮನೀಶ್ ಪಾಂಡೆ 36*, ಮ್ಯಾಕ್‌ನೀಲ್ 34; ಯಶೋವರ್ಧನ್ ಪರಂತಾಪ್ 2/34, ಅಂಬರೀಶ್ ಕೆ. 2/33).

ಸ್ವಿಯಾಟೆಕ್ ಶುಭಾರಂಭ

2ನೇ ಸುತ್ತಿಗೆ ಮುನ್ನಡೆದ ಜೊಕೊವಿಕ್, ಮೆಡ್ವೆಡೆವ್

ಲಂಡನ್: ಕಳೆದ ಬಾರಿಯ ಚಾಂಪಿಯನ್ ಇಗಾ ಸ್ವಿಯಾಟೆಕ್ ವರ್ಷದ ಮೂರನೇ ಗ್ರ್ಯಾನ್ ಸ್ಲಾಮ್ ವಿಂಬಲ್ಡನ್ ಟೆನಿಸ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಶುಭಾರಂಭ ಮಾಡಿದ್ದಾರೆ.

ಸೆಂಟರ್‌ಕೋರ್ಟ್‌ನಲ್ಲಿ ಮಂಗಳವಾರ ನಡೆದ ಆರಂಭಿಕ ಪಂದ್ಯದಲ್ಲಿ ಮೂರನೇ ಶ್ರೇಯಾಂಕಿತೆ ಸ್ವಿಯಾಟೆಕ್, ಶ್ರೇಯಾಂಕ ರಹಿತೆ ಟೇಲರ್‌ಟೌನ್ಸೆಂಡ್ ವಿರುದ್ಧ 6–1, 2–6, 6–3 ಸೆಟ್‌ಗಳ ಪ್ರಯಾಸದ ಜಯ ಗಳಿಸಿದರು. ಸುಮಾರು ಎರಡು ತಾಸುಗಳ ಕಾಲ ನಡೆದ ಪಂದ್ಯದಲ್ಲಿ ಮೊದಲ ಸೆಟ್ಟನ್ನು ಸುಲಭವಾಗಿ ಗೆದ್ದು ಭರ್ಜರಿ ಆರಂಭ ಮಾಡಿದ ಪೋಲೆಂಡ್ ಆಟಗಾರ್ತಿ, ದ್ವಿತೀಯ ಸೆಟ್‌ನಲ್ಲಿ ಅಚ್ಚರಿ ಆಘಾತ ಅನುಭವಿಸಿದರು. ನಿರ್ಣಾಯಕ ಸೆಟ್‌ನಲ್ಲಿ ಸ್ಥಿರತೆ ಆಟ ಪ್ರದರ್ಶಿಸಿ ಮುಂದಿನ ಸುತ್ತಿಗೆ ತೇರ್ಗಡೆಹೊಂದುವಲ್ಲಿ ಯಶಸ್ವಿಯಾದರು. ಏತನ್ಮಧ್ಯೆ, 6ನೇ ಶ್ರೇಯಾಂಕದ ಅನಿಸಿಮೊವಾ ತಮ್ಮ ಎದುರಾಳಿ ಯನ್ನು ಮಣಿಸಿ ಮೊದಲ ಹರ್ಡಲ್ಸ್ ದಾಟಿದ್ದಾರೆ.

13 ಬ್ರಿಟಿಷ್ ಆಟಗಾರರು ಮೊದಲ ಸುತ್ತಿನಲ್ಲೇ ಔಟ್: ಹದಿಮೂರು ಬ್ರಿಟಿಷ್ ಆಟಗಾರರು ಮೊದಲ ಸುತ್ತಿನಲ್ಲೇ ಸೋತು ನಿರ್ಗಮಿಸಿದರೆ, ಸ್ವಾನ್ ಮತ್ತು ಫೆರಿ ಎರಡನೇ ಸುತ್ತಿಗೆ ಪ್ರಗತಿ ಸಾಧಿಸಿದರು. ಮೂರು ವರ್ಷಗಳ ನಂತರ ಮೊದಲ ಗ್ರ್ಯಾನ್ ಸ್ಲಾಮ್ ಆಡುತ್ತಿರುವ ಸ್ವಾನ್, ರೊಮೇನಿಯಾದ ಐರಿನಾ ಕ್ಯಾಮೆಲಿಯಾ ಎದುರು ಗೆದ್ದು ಮುನ್ನಡೆದರು.

2ನೇ ಸುತ್ತಿಗೆ ಜೊಕೊ, ಮೆಡ್ವೆಡೆವ್: ದಾಖಲೆಯ 25ನೇ ಗ್ರ್ಯಾನ್ ಸ್ಲಾಮ್ ಬೆನ್ನಟ್ಟಿರುವ ಸರ್ಬಿಯಾದ ನೊವಾಕ್ ಜೊಕೊವಿಕ್ ಮತ್ತು ಡೇನಿಯಲ್ ಮೆಡ್ವೆಡೆವ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಎರಡನೇ ಸುತ್ತು ಪ್ರವೇಶಿಸಿದರು. ಮಾಜಿ ನಂ.1 ಆಟಗಾರ ಜೊಕೊವಿಕ್ 6–4, 5–7, 6–4, 6–4 ಸೆಟ್ ಗಳಿಂದ ವೈ.ಬಿ. ವು ವಿರುದ್ಧ ಗೆದ್ದು ಬೀಗಿದರು. ಇದೇ ವೇಳೆ 8ನೇ ಶ್ರೇಯಾಂಕಿತ ಮೆಡ್ವೆಡೆವ್ 6–1, 6–2, 6–4 ಸೆಟ್‌ಗಳಿಂದ ಶ್ರೇಯಾಂಕ ಹಿತ ಮರಿನ್ ಸಿಲಿಸ್ ವಿರುದ್ಧ ಗೆದ್ದರು.

ಹಾರ್ಸ್ ಪವರ್

ಮೈಸೂರು ರೇಸ್ ■ ಅಶ್ವಬಂಧು

ಎಫಿಕೆಸಿ ಗೆಲ್ಲುವ ಫೇವರಿಟ್

ಸುಲೈಮಾನ್ ಅತೋಲಾಹಿ ತರಬೇತಿಯಲ್ಲಿ ಪಳಗಿರುವ ಎಫಿಕೆಸಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆ ಸ್ಟೀವರ್ಡ್ಸ್ ಟ್ರೋಫಿ ಗೆಲ್ಲುವ ಫೇವರಿಟ್ ಎನಿಸಿದೆ. ಏಳು ರೇಸ್‌ಗಳನ್ನು ಏರ್ಪಡಿಸಿದ್ದು, ಮೊದಲನೇ ರೇಸ್ ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾಗಲಿದೆ.

ನಮ್ಮ ಆಯ್ಕೆ

- 1ನೇ ರೇಸ್: ಟ್ರಂಪ್ ಬೇಬಿ 2, ಜಸ್ಟ್ ಬ್ಲೂಸ್ 1, ಪೆಟ್ಟೀಸ್ ಚಾಯ್ಸ್ 5
- 2ನೇ ರೇಸ್: ಐರನ್ ಕಿಂಗ್ 1, ವಾಲ್ಟರ್ 5, ನ್ಯಾಚುರಲ್ ಒನ್ 7
- 3ನೇ ರೇಸ್: ಸೀಕ್ರೆಟ್ ಶ್ಯಾಡೊ 3, ಐ ಲೈಕ್ ಟೂ ಹೂ ಹಾ 8, ಹೇಸ್ಟಿಂಗ್ ಸನ್‌ರೈಸ್ 2
- 4ನೇ ರೇಸ್: ಲೇಡಿ ಲಯನ್ 11, ಫಾಲ್ಕನ್ ಫ್ಯೂರಿ 5, ಫಿನಾಮಿನನ್ 1
- 5ನೇ ರೇಸ್: ಎಫಿಕೆಸಿ 9, ಸ್ಟಿಲ್ ಐ ರೈಸ್ 3, ರೈಝ್ ಎಗೈನ್ 2
- 6ನೇ ರೇಸ್: ಸ್ಟಾರ್ ಆಫ್ ಲೈಟ್ 4, ನ್ಯಾಚುರಲ್ ಕ್ವೀನ್ 8, ಇಸಾಬೆಲ್ಲೆ 3
- 7ನೇ ರೇಸ್: ಸಿಲ್ವರ್ ಕ್ವೆಸ್ಟ್ 12, ಶೆರ್ಪಾ 6, ಏಸಿಯೊ 5

ಮಲ್ಟಿ–ಲೆಗ್ ಪೂಲ್ಸ್:
- ಜಾಕ್‌ಪಾಟ್: 3, 4, 5, 6, 7; 1ನೇ ಟ್ರಿಬಲ್: 2, 3, 4; 2ನೇ ಟ್ರಿಬಲ್: 5, 6, 7

ಅತ್ಯುತ್ತಮ ಬೆಟ್: ಸ್ಟಾರ್ ಆಫ್ ಲೈಟ್

ಗುಣಮಟ್ಟ ತಪಾಸಣೆ: ಎಐ ವಿಫಲ

ಡೆಟ್ರಾಯಿಟ್: ಕೃತಕ ಬುದ್ಧಿಮತ್ತೆಯಿಂದಾಗಿ ಮನುಷ್ಯರ ಅಗತ್ಯವೇ ಇರುವುದಿಲ್ಲ ಎಂಬ ಭ್ರಮೆಯಲ್ಲಿದ್ದ ಜಗತ್ತಿನ ದೈತ್ಯ ಆಟೊಮೊಬೈಲ್ ಕಂಪನಿ ಫೋರ್ಡ್‌ಗೆ ಈಗ ಜ್ಞಾನೋದಯವಾಗಿದೆ. ಗುಣಮಟ್ಟ ಪರಿಶೀಲನೆಯಲ್ಲಿ ಕೃತಕ ಬುದ್ಧಿಮತ್ತೆ(ಎಐ) ವಿಫಲವಾಗಿದ್ದರಿಂದ ಕಾರು ತಯಾರಕ ಕಂಪನಿಯು ಮಾನವ ಎಂಜಿನಿಯರ್‌ಗಳನ್ನು ಮರು ನೇಮಕ ಮಾಡಿಕೊಂಡಿದೆ.

''ಎಐ ಸಾಮರ್ಥ್ಯವನ್ನು ಅತಿಯಾಗಿ ಅಂದಾಜಿಸಿ ನಾವು ತಪ್ಪು ಮಾಡಿದೆವು,'' ಎಂದು ಫೋರ್ಡ್ ಕಂಪನಿಯ ಉಪಾಧ್ಯಕ್ಷ ಚಾರ್ಲ್ಸ್ ಪೂನ್ ಮಾಧ್ಯಮಗಳ ಎದುರು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ''ಕೇವಲ ಎಐ ತಂತ್ರಜ್ಞಾನವನ್ನು ಅಳವಡಿಸಿ, ಅದಕ್ಕೆ ನಮ್ಮ ವಾಹನ ವಿನ್ಯಾಸದ ನಿಯಮಾವಳಿಗಳನ್ನು ಫೀಡ್ ಮಾಡಿದರೆ ಸಾಕು. ಅದು ಅತ್ಯುನ್ನತ ಗುಣಮಟ್ಟದ ಕಾರುಗಳನ್ನು ಸೃಷ್ಟಿಸಿಬಿಡುತ್ತದೆ ಎಂದು ಅಂದಾಜು ಮಾಡಿದ್ದೆವು. ಆದರೆ ನಮ್ಮ ನಿರೀಕ್ಷೆ ಸಾಕಾರಗೊಳ್ಳಲಿಲ್ಲ,'' ಎಂದಿದ್ದಾರೆ.

ವೆಚ್ಚ ಕಡಿತ ಮತ್ತು ಉತ್ಪಾದಕತೆ ಹೆಚ್ಚಳಕ್ಕಾಗಿ ಗುಣಮಟ್ಟದ ತಪಾಸಣೆ ಸೇರಿದಂತೆ ವಿವಿಧ ವಿಭಾಗಗಳಲ್ಲಿ ಕಂಪನಿ ಎಐ ಅಳವಡಿಸಿಕೊಂಡಿತ್ತು. ಸ್ವಯಂಚಾಲಿತ ವ್ಯವಸ್ಥೆಗಳ ಲೋಪಗಳನ್ನು ಸರಿಪಡಿಸಲು ಕಂಪನಿಯು 300 ಕ್ಕೂ ಹೆಚ್ಚು ಅನುಭವಿ ಗುಣಮಟ್ಟದ ಇನ್ಸ್‌ಪೆಕ್ಟರ್‌ಗಳನ್ನು ಮರುನೇಮಕ ಮಾಡಿಕೊಂಡಿದೆ ಎಂದು ಬ್ಲೂಮ್‌ಬರ್ಗ್ ವರದಿ ಮಾಡಿದೆ.

ಪ್ರಸ್ತುತ ಫೋರ್ಡ್ ಕಂಪನಿಯು ಮರಳಿ ಕರೆಸಿಕೊಳ್ಳುತ್ತಿರುವ ಈ ಹಿರಿಯ ಎಂಜಿನಿಯರ್‌ಗಳು, ಈಗ ಹಳಿ ತಪ್ಪಿರುವ ಎಐ ವ್ಯವಸ್ಥೆಯನ್ನು ಮರುರೂಪಿಸುವ ಜವಾಬ್ದಾರಿ ಹೊತ್ತಿದ್ದಾರೆ.

ಇಂದಿನಿಂದ ಹಣಕಾಸು ನಿಯಮಗಳಲ್ಲಿ ಬದಲಾವಣೆ

ಮುಂಬಯಿ: ಜುಲೈ 1ರಿಂದ ಹಲವು ಹಣಕಾಸು ಬದಲಾವಣೆಗಳಾಗಲಿವೆ. ಕ್ರೆಡಿಟ್ ಕಾರ್ಡ್ ಪ್ರಯೋಜನಗಳು ಮತ್ತು ಪಾಸ್‌ಪೋರ್ಟ್ ಶುಲ್ಕದ ಬದಲಾವಣೆಗಳಿಂದ ಹಿಡಿದು, ತಪ್ಪು ಮಾಹಿತಿಯೊಂದಿಗೆ ಹಣಕಾಸು ಉತ್ಪನ್ನಗಳನ್ನು ಮಾರಾಟ ಮಾಡುವುದನ್ನು ತಡೆಯಲು ಆರ್‌ಬಿಐ ತರುತ್ತಿರುವ ಹೊಸ ನಿಯಮಗಳವರೆಗೆ ಹೊಸದಕ್ಕೆ ಗ್ರಾಹಕರು ಹೊಂದಿಕೊಳ್ಳಬೇಕಾಗಿದೆ.

1. ಐಟಿಆರ್ ಸಲ್ಲಿಕೆಗೆ ಡೆಡ್‌ಲೈನ್

ಹಣಕಾಸು ವರ್ಷ 2025–26ರ (ಮೌಲ್ಯಮಾಪನ ವರ್ಷ 2026–27) ಐಟಿಆರ್–1 ಮತ್ತು ಐಟಿಆರ್–2 ಸಲ್ಲಿಸುವ ತೆರಿಗೆದಾರರು ತಮ್ಮ ಆದಾಯ ತೆರಿಗೆ ರಿಟರ್ನ್ಸ್ ಅನ್ನು ಜುಲೈ 31, 2026 ರೊಳಗೆ ಸಲ್ಲಿಸಬೇಕಾಗುತ್ತದೆ. ನಿಗದಿತ ದಿನಾಂಕದೊಳಗೆ ಸಲ್ಲಿಸದಿದ್ದರೆ ದಂಡ ಪಾವತಿಸಬೇಕು. ಜತೆಗೆ, ಭವಿಷ್ಯದ ವರ್ಷಗಳಿಗೆ ನಷ್ಟವನ್ನು ಮುಂದೂಡುವ ಮಾಡುವ ಅವಕಾಶ ಸೀಮಿತವಾಗಬಹುದು.

2. ಪಾಸ್‌ಪೋರ್ಟ್ ಶುಲ್ಕ ಹೆಚ್ಚಳ



ಜುಲೈ 1ರಿಂದ ಪಾಸ್‌ಪೋರ್ಟ್ ಸೇವೆಗಳು ಹೆಚ್ಚು ದುಬಾರಿಯಾಗಲಿವೆ. ಸಾಮಾನ್ಯ ಪಾಸ್‌ಪೋರ್ಟ್ ಶುಲ್ಕವನ್ನು (36 ಪುಟಗಳು) ಹಾಲಿ 1,500 ರೂ.ನಿಂದ 2,500 ರೂ.ಗೆ ಹಾಗೂ ತತ್ಕಾಲ್ ಯೋಜನೆ ಅಡಿಯಲ್ಲಿ ಶುಲ್ಕವನ್ನು 3,500 ರೂ.ನಿಂದ 5,000 ರೂ.ಗೆ ಏರಿಕೆ ಮಾಡಲಾಗಿದೆ. ಇದೇವೇಳೆ, 60 ಪುಟಗಳ ಪಾಸ್‌ಪೋರ್ಟ್ ಶುಲ್ಕವನ್ನು ಸಾಮಾನ್ಯ ವರ್ಗದ ಅಡಿಯಲ್ಲಿ 2,000 ರೂ.ನಿಂದ 3,500 ರೂ.ಗೆ, ತತ್ಕಾಲ್ ಅಡಿಯಲ್ಲಿ 6,000 ರೂ.ಗೆ ಹೆಚ್ಚಿಸಲಾಗಿದೆ. ಪೊಲೀಸ್ ಕ್ಲಿಯರೆನ್ಸ್ ಪ್ರಮಾಣಪತ್ರಗಳು (ಪಿಸಿಸಿ), ಶರಣಾಗತಿ ಪ್ರಮಾಣಪತ್ರಗಳು ಮತ್ತು ಜಾಗತಿಕ ಪ್ರವೇಶ ಕಾರ್ಯಕ್ರಮಕ್ಕೆ ಸಂಬಂಧಿಸಿದ ಸೇವಾ ಶುಲ್ಕವನ್ನು 500 ರೂ.ಗಳಿಂದ 750 ರೂ.ಗಳಿಗೆ ಹೆಚ್ಚಿಸಲಾಗಿದೆ.

3. ಉಚಿತವಾಗಿ ಆಧಾರ್ ಅಪ್ಡೇಟ್

ಆಧಾರ್ ಕಾರ್ಡ್‌ಗೆ ಇ–ಮೇಲ್ ವಿಳಾಸವನ್ನು ಅಪ್ಡೇಟ್ ಮಾಡಲು ಜುಲೈ 1ರಿಂದ ಯಾವುದೇ ಶುಲ್ಕವಿರುವುದಿಲ್ಲ. ಆಧಾರ್ ಕಾರ್ಡ್‌ಗೆ ಇ–ಮೇಲ್ ಅಪ್ಡೇಟ್ ಮಾಡಲು ಇದುವರೆಗೆ 75 ರೂ. ಶುಲ್ಕ ಪಾವತಿಸಬೇಕಿತ್ತು. ಆದರೆ, ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರವು ಅಪ್ಡೇಟ್ ಮಾಡುವ ಶುಲ್ಕವನ್ನು ಜುಲೈ 31ರಿಂದ ಡಿ.31ರವರೆಗೆ ರದ್ದು ಮಾಡಲು ತೀರ್ಮಾನಿಸಿದೆ.

4. ಎಸ್‌ಬಿಐ ಕ್ರೆಡಿಟ್ ಕಾರ್ಡ್ ರಿವಾರ್ಡ್ ಪಾಯಿಂಟ್ಸ್

ಫೋನ್‌ಪೇ ಸಹಯೋಗದಲ್ಲಿ ಎಸ್‌ಬಿಐ ಆರಂಭಿಸಿದ ಎರಡು ಕ್ರೆಡಿಟ್ ಕಾರ್ಡ್‌ಗಳ ರಿವಾರ್ಡ್ ಪಾಯಿಂಟ್‌ಗಳಲ್ಲಿ ಬದಲಾವಣೆ ಆಗಲಿವೆ. ಫೋನ್ ಪೇ ಎಸ್‌ಬಿಐ ಕಾರ್ಡ್ ಸೆಲೆಕ್ಟ್ ಬ್ಲ್ಯಾಕ್ ಕ್ರೆಡಿಟ್ ಕಾರ್ಡ್ ಹೊಂದಿರುವವರಿಗೆ ಒಂದು ತಿಂಗಳಿಗೆ ಗರಿಷ್ಠ 2,000 ರಿವಾರ್ಡ್ ಪಾಯಿಂಟ್‌ಗಳ ಬದಲು, 1,000 ಪಾಯಿಂಟ್‌ಗಳಷ್ಟೇ ಸಿಗಲಿವೆ. ಹಾಗೆಯೇ, ಫೋನ್‌ಪೇ ಎಸ್‌ಬಿಐ ಕಾರ್ಡ್ ಪರ್ಪಲ್ ಕಾರ್ಡ್ ಹೊಂದಿರುವವರಿಗೆ ಗರಿಷ್ಠ 1,000 ಪಾಯಿಂಟ್‌ಗಳ ಬದಲು 750 ಪಾಯಿಂಟ್ಸ್ ಮಾತ್ರ ಲಭಿಸಲಿವೆ. ಈ ಕಾರ್ಡ್‌ಗಳ ಮೂಲಕ ಟೋಲ್ ಪಾವತಿ, ಶಿಕ್ಷಣ ಸಂಸ್ಥೆಗಳ ಶುಲ್ಕ, ಚಿನ್ನಾಭರಣ ಖರೀದಿ, ಯುಟಿಲಿಟಿ ಬಿಲ್ ಪಾವತಿ ಮಾಡಿದರೆ ರಿವಾರ್ಡ್ ಪಾಯಿಂಟ್‌ಗಳು ಸಿಗುವುದಿಲ್ಲ ಎಂದು ಎಸ್‌ಬಿಐ ತಿಳಿಸಿದೆ.

5. ಎಚ್‌ಡಿಎಫ್‌ಸಿ ನಿಯಮ ಬದಲು

ಎಚ್‌ಡಿಎಫ್‌ಸಿ ಕ್ರೆಡಿಟ್ ಕಾರ್ಡ್ ಹೊಂದಿರುವವರು ದೇಶೀಯ ವಿಮಾನ ನಿಲ್ದಾಣಗಳಲ್ಲಿ ಉಚಿತವಾಗಿ ಲಾಂಜ್ ಪ್ರವೇಶ ಪಡೆಯಲು ಹೊಸ ನಿಯಮಗಳು ಅನ್ವಯವಾಗಲಿವೆ. ಉಚಿತವಾಗಿ ಲಾಂಜ್ ಪ್ರವೇಶ ಪಡೆಯಲು ಎಚ್‌ಡಿಎಫ್‌ಸಿ ರೆಗಾಲಿಯಾ ಗೋಲ್ಡ್ ಕ್ರೆಡಿಟ್ ಕಾರ್ಡ್ ಹೊಂದಿರುವವರು ಹಿಂದಿನ ತ್ರೈಮಾಸಿಕದಲ್ಲಿ ಕನಿಷ್ಠ 60,000 ರೂ. ವ್ಯಯಿಸಿರಬೇಕು ಎಂಬ ನಿಯಮವನ್ನು ಜುಲೈ 1ರಿಂದ ಜಾರಿಗೆ ತರಲಾಗುತ್ತದೆ. ಉದಾಹರಣೆಗೆ, ಜುಲೈನಲ್ಲಿ ಉಚಿತ ಲಾಂಜ್ ಪ್ರವೇಶಕ್ಕೆ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಕ್ರೆಡಿಟ್ ಕಾರ್ಡ್ ಮೂಲಕ 60,000 ರೂ. ಖರ್ಚು ಮಾಡಿರಬೇಕು.

ಡೆಡ್‌ಲೈನ್

- **ಜುಲೈ 7:** ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ಕಡಿತಗೊಂಡ ಟಿಡಿಎಸ್‌ಅನ್ನು ಸರಕಾರಕ್ಕೆ ಜಮೆ ಮಾಡಲು ಜುಲೈ 7 ಕೊನೆಯ ದಿನ.
- **ಜುಲೈ 14:** ಹಣಕಾಸು ಸಂಸ್ಥೆಗಳಿಗೆ ಸೆಬಿಯು ಏಕೀಕೃತ ಸಾಮಾನ್ಯ ಜಾಹೀರಾತು ಸಂಹಿತೆ (ಸಿಎಸಿ) ಜಾರಿಗೊಳಿಸುತ್ತಿದ್ದು, ಜನರ ಅಭಿಪ್ರಾಯ ಸಂಗ್ರಹಕ್ಕೆ ಜುಲೈ 14 ಕೊನೆಯ ದಿನವಾಗಿದೆ.
- **ಜುಲೈ 31:** ಸಂಬಳದಾರರು, ತೆರಿಗೆದಾರರು ಐಟಿಆರ್–1 ಹಾಗೂ ಐಟಿಆರ್–2 ಸಲ್ಲಿಸಲು ಜುಲೈ 31 ಕೊನೆಯ ದಿನ.

6. ಆರ್‌ಬಿಐ ಹೊಸ ನಿಯಮಗಳು

ಬ್ಯಾಂಕುಗಳು ಹಣಕಾಸು ಉತ್ಪನ್ನಗಳನ್ನು ತಪ್ಪು ಮಾಹಿತಿಯೊಂದಿಗೆ ಗ್ರಾಹಕರಿಗೆ ಮಾರಾಟ ಮಾಡುವುದನ್ನು ತಡೆಗಟ್ಟಲು ಆರ್‌ಬಿಐ ಜುಲೈ 1 ರಿಂದ ಹೊಸ ನಿಯಮಾವಳಿಗಳನ್ನು ಜಾರಿಗೊಳಿಸಲಿದೆ. ಇದರ ಅನ್ವಯ, ತಪ್ಪು ಮಾಹಿತಿಯಿಂದಾಗಿ ಹಣಕಾಸು ಉತ್ಪನ್ನಗಳನ್ನು ಖರೀದಿಸಿದ ಗ್ರಾಹಕರು ಸಂಪೂರ್ಣ ಮರುಪಾವತಿ ಮತ್ತು ನಷ್ಟಕ್ಕೆ ಪರಿಹಾರವನ್ನು ಪಡೆಯಲು ಅರ್ಹರಾಗಿರುತ್ತಾರೆ.

ಕಾರ್ಕಿನೋಸ್ ಹೆಲ್ತ್‌ಕೇರ್‌ನಿಂದ ಮಹಿಳೆಯರಿಗೆ ವೈದ್ಯಕೀಯ ಪರೀಕ್ಷೆ

ಮುಂಬಯಿ: ರಿಲಯನ್ಸ್ ಇಂಡಸ್ಟ್ರೀಸ್‌ನ ಅಂಗಸಂಸ್ಥೆಯಾಗಿರುವ ಕಾರ್ಕಿನೋಸ್ ಹೆಲ್ತ್‌ಕೇರ್ ದೇಶಾದ್ಯಂತ ಒಂದು ಲಕ್ಷಕ್ಕೂ ಹೆಚ್ಚು ಮಹಿಳೆಯರಿಗೆ ಎಚ್‌ಪಿವಿ ಡಿಎನ್‌ಎ ಪರೀಕ್ಷೆಯನ್ನು ನಡೆಸಿದೆ. ಇದರಿಂದ ಗುಣಮಟ್ಟದ ಸರ್ವಿಕಲ್ ಕ್ಯಾನ್ಸರ್ ತಪಾಸಣೆ ಮತ್ತು ಚಿಕಿತ್ಸಾ ಅನುಸರಣೆಯಲ್ಲಿ ದೊಡ್ಡ ಮೈಲುಗಲ್ಲು ಸ್ಥಾಪಿಸಿದೆ. ''ಎಚ್‌ಪಿವಿ ಡಿಎನ್‌ಎ ಪರೀಕ್ಷೆ ಮಾಡಿಸಿಕೊಳ್ಳಲು ವಿಶ್ವಸಂಸ್ಥೆಯೇ ಶಿಫಾರಸು ಮಾಡಿದೆ ಎಂಬುದು ಗಮನಾರ್ಹ. ಇದು ಸರ್ವಿಕಲ್ ಕ್ಯಾನ್ಸರ್ ಪತ್ತೆಗೆ ತುಂಬ ಪರಿಣಾಮಕಾರಿ,'' ಎಂದು ಕಾರ್ಕಿನೋಸ್ ಹೆಲ್ತ್‌ಕೇರ್ ಕನ್ಸಲ್ಟೆಂಟ್, ಪದ್ಮಶ್ರೀ ಪುರಸ್ಕೃತ ವೈದ್ಯೆ ಡಾ.ನೀರಜಾ ಬಾಟ್ಲಾ ಹೇಳಿದ್ದಾರೆ. ''ಈ ಪರೀಕ್ಷೆಯನ್ನು ಸಣ್ಣಪುಟ್ಟ ಗ್ರಾಮಗಳ ತನಕ ಮುಟ್ಟಿಸುವುದೇ ದೊಡ್ಡ ಸವಾಲು. ಇದನ್ನು ನಾವು ಯಶಸ್ವಿಗೊಳಿಸಿದ್ದೇವೆ,'' ಎಂದು ಕಾರ್ಕಿನೋಸ್ ಹೆಲ್ತ್‌ಕೇರ್‌ನ ಹಿರಿಯ ಅಂಕಾಲಜಿ ಸಲಹೆಗಾರ ಡಾ ಗೌರ ಕಿಶೋರ್‌ರಥ್ ತಿಳಿಸಿದ್ದಾರೆ.

''ನಾವು ಎಷ್ಟು ಮಹಿಳೆಯರಿಗೆ ಈ ವೈದ್ಯಕೀಯ ಪರೀಕ್ಷೆ ಮಾಡಿದೆವು ಎಂಬುದು ಈ ಕೆಲಸಕ್ಕೆ ಅಳತೆಗೋಲಲ್ಲ, ಈ ದಾರಿಯಲ್ಲಿ ನಾವು ಎಷ್ಟು ಜನರನ್ನು ಉಳಿಸಿಕೊಂಡೆವು ಎಂಬುದು ಮುಖ್ಯ,'' ಎಂದು ಕಾರ್ಕಿನೋಸ್ ಹೆಲ್ತ್ ಕೇರ್ ವುಮೆನ್ ವೆಲ್ ನೆಸ್, ಮತ್ತು ಹೆಡ್ ಆಫ್ ಡಿಸ್ಟ್ರಿಬ್ಯುಟೆಡ್ ಕ್ಯಾನ್ಸರ್‌ಕೇರ್ ನೆಟ್‌ವರ್ಕ್ (ಡಿಸಿಸಿಎನ್) ಚೀಫ್ ಗ್ರೋಥ್ ಆಫೀಸರ್ ಪ್ರಿಯಾರಾವ್ ಬಣ್ಣಿಸಿದ್ದಾರೆ. ''ಈ ಎಲ್ಲ ಕೆಲಸಗಳಿಗೆ ದಿವಂಗತ ಡಾ ಆರ್. ಶಂಕರ್ ನಾರಾಯಣನ್ ಅವರೇ ಸ್ಫೂರ್ತಿ,'' ಎಂದು ಬಣ್ಣಿಸಿದ್ದಾರೆ.

ಮೇಲೇಳದ ಷೇರುಪೇಟೆ

ಮುಂಬಯಿ: ಮಂಗಳವಾರ ಕೂಡ ಷೇರುಪೇಟೆ ಮೇಲೇಳಲಿಲ್ಲ. ಐಟಿ, ತೈಲ ಮತ್ತು ಅನಿಲ ವಲಯ ಹಾಗೂ ಕೆಲವು ಆಯ್ದ ಬ್ಯಾಂಕಿಂಗ್ ಷೇರುಗಳ ಮಾರಾಟ ಭರಾಟೆ ಹಾಗೂ ಅಮೆರಿಕ–ಇರಾನ್ ಬಿಕ್ಕಟ್ಟನ್ನು ಬಗೆಹರಿಸುವಲ್ಲಿ ಉಂಟಾಗಿರುವ ಅನಿಶ್ಚಿತತೆ ಇಳಿಕೆಗೆ ಕಾರಣವಾಯಿತು. ಮುಂಬಯಿ ಷೇರುಪೇಟೆ ಸೂಚ್ಯಂಕ 'ಸೆನ್ಸೆಕ್ಸ್' 249.70 ಅಂಕ ಇಳಿದು 76,478.67 ರಲ್ಲಿ ವಹಿವಾಟು ಮುಗಿಸಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ 'ನಿಫ್ಟಿ' 80.50 ಅಂಕ ಕುಸಿದು 23,865.75 ರಲ್ಲಿ ಕೊನೆಗೊಂಡಿತು.

ತೈಲ ಬೆಲೆ ಏರಿಕೆ: ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯಲ್ಲಿ ಶೇ. 0.23ರಷ್ಟು ಏರಿ, ಬ್ಯಾರೆಲ್‌ಗೆ 73.32 ಡಾಲರ್ ಆಗಿದೆ. ಪರಿಣಾಮವಾಗಿ ವಿದೇಶಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯದಲ್ಲಿ 14 ಪೈಸೆ ಇಳಿಕೆಯಾಗಿ 94.65 ರೂ. ಆಗಿದೆ.